ಅಪರಂಜಿ

ಜನವರಿ 2004

ಹಾಸ್ಯೋತ್ಸವ ವಿಶೇಷಾಂಕ



ಹಾಸ್ಯೋತ್ಸವದ ರಿಯಾಯಿತಿ ದರ: ರೂ. 40



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 21 ಜನವರಿ - 2004 ಸಂಚಿಕೆ - 4

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27

ಮೊದಲ ಮಾತು

ಹಲವು ವರ್ಷಗಳ ಹಿಂದೆ ತೀರ ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಹಾಸ್ಯೋತ್ಸವ ಸರಣಿ ಈಗ ಬೃಹತ್ತಾಗಿ ಬೆಳೆದು ನಾಡಿನ ಒಂದು ಮೈಲಿಗಲ್ಲು ಎನ್ನಿಸಿಕೊಂಡಿರುವುದಕ್ಕೆ ಮುಖ್ಯ ಕಾರಣ ಕನ್ನಡ ನಗೆ ರಸಿಕರ ಅಭಿಮಾನ ಮತ್ತು ಪ್ರೋತ್ಸಾಹ. ಈ ಬಾರಿಯ ಹಾಸ್ಯೋತ್ಸವ 2K3 ಯನ್ನು ಹೆಸರಾಂತ ಪತ್ರಕರ್ತರಾಗಿದ್ದ ಟೀಎಸ್ಸಾರ್ ಹಾಗೂ ವೈಎನ್ಕೆ ಇವರುಗಳ ಸಂಸ್ಮರಣಾರ್ಥವಾಗಿ ನಡೆಸುತ್ತಿದ್ದೇವೆ. ಹಾಸ್ಯಬ್ರಹ್ಮ ಟ್ರಸ್ಟ್ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಜೊತೆಗೂಡಿ ನಡೆಸುತ್ತಿರುವ ಈ ಕನ್ನಡ ಹಾಸ್ಯ ದಾಸೋಹದ ಸಂದರ್ಭದಲ್ಲಿ ಅಪರಂಜಿಯ ಈ ಹಾಸ್ಯೋತ್ಸವ ವಿಶೇಷಾಂಕ ಬಿಡುಗಡೆಯಾಗಲಿದೆ. ಹಲವು ವಾರಗಳ ಹಿಂದೆ ಅಪರಂಜಿಯ ಇಪ್ಪತ್ತರ ಹುಟ್ಟುಹಬ್ಬದ ಸಮಯದಲ್ಲಿ ಬಿಡುಗಡೆಯಾದ ''ಅಪರಂಜಿ-ರಸರಂಜಿ'' ನಗೆ ಲೇಖನಗಳ ಸಂಕಲನವನ್ನು ಈ ಉತ್ಸವದಲ್ಲಿ ಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೇವೆ. ಈ ಬಾರಿಯ ವಿಶೇಷ ಸಂಚಿಕೆಗೆ ಕೊರವಂಜಿಯ ದಿನಗಳಿಂದಲೂ ಬರೆಯುತ್ತಿದ್ದ ಎಸ್.ಎನ್. ಶಿವಸ್ವಾಮಿ, ಹಾ.ರಾ. (ಎಚ್.ಆರ್. ಶಂಕರನಾರಾಯಣ), ಅವರುಗಳೇ ಅಲ್ಲದೇ, ಅಪರಂಜಿಯ ಬರಹಗಾರರ ಬಳಗದ ಎಲ್ಲ ಹೆಸರಾಂತ ನಗೆಗಾರರೂ ತಮ್ಮ ಕಾಣಿಕೆಯನ್ನು ಸಲ್ಲಿಸಿ ಸಂಚಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ಇವರೆಲ್ಲರಿಗೂ ಅಪರಂಜಿ ಆಭಾರಿ.

ಕಾಗದದ ಬೆಲೆ, ಮುದ್ರಣ ವೆಚ್ಚ ಇವುಗಳೆಲ್ಲವೂ ವರ್ಷೇ ವರ್ಷೇ ಏರುತ್ತಲೇ ಬಂದಿವೆ. ಪರಿಸ್ಥಿತಿ ಹೀಗಿದ್ದರೂ ನಾವು ಪತ್ರಿಕೆಯ ವಾರ್ಷಿಕ ಚಂದಾ ಮೌಲ್ಯವನ್ನು ಕಳೆದ ಅನೇಕ ವರ್ಷಗಳಿಂದ ಬದಲಿಸದೇ ಹಾಗೆಯೇ ಇರಿಸಿದ್ದೇವೆ. ಪತ್ರಿಕೆಯ ಆರ್ಥಿಕ ಆರೋಗ್ಯದ ದೃಷ್ಟಿಯಿಂದ ಈಗ ವಾರ್ಷಿಕ ಚಂದಾ ಹಾಗೂ ಹತ್ತು ವರುಷದ ಚಂದಾಗಳನ್ನು ಬದಲಿಸಬೇಕಾದ್ದು ಅನಿವಾರ್ಯವಾಗಿದೆ. ಬದಲಾದ ಚಂದಾ ಮೌಲ್ಯಗಳನ್ನು ಇದೇ ಸಂಚಿಕೆಯಲ್ಲೇ ಬೇರೆಯಾಗಿ ನಮೂದಿಸಿದ್ದೇವೆ. ಓದುಗರು ಎಂದಿನಂತೆ ನಮ್ಮ ಯತ್ನವನ್ನು ಪ್ರೋತ್ಸಾಹಿಸುವರೆಂಬ ನಂಬಿಕೆ ನಮಗಿದೆ. ಈ ಸಂಚಿಕೆಗೆ ಜಾಹಿರಾತುಗಳನ್ನು ಒದಗಿಸಿ ಅದಕ್ಕೊಂದು ಆರ್ಥಿಕ ಸ್ಥಿರತೆಯನ್ನು ಗಳಿಸಿಕೊಟ್ಟ ಶ್ರೀಯುತರುಗಳಾದ ಸಿ.ಆರ್. ಸತ್ಯ, ರಾಜಗೋಪಾಲ್, ವಿ.ಆರ್. ನಾಥ್, ಒಮೆಗಾದ ರವಿ, ಮತ್ತಿತ್ತರ ಎಲ್ಲಾ ಸಹೃದಯರಿಗೂ ಅಪರಂಜಿಯ ಪ್ರೀತಿಪೂರ್ವಕ ನಮನಗಳು. ಡಿಟಿಪಿ ಕೆಲಸವನ್ನು ಚೊಕ್ಕಟವಾಗಿ ನಿರ್ವಹಿಸಿದ ಒಮೆಗಾದ ಶ್ರೀಮತಿ ವಸಂತಾ, ಮುದ್ರಣವನ್ನು ಸಕಾಲಕ್ಕೆ ಮಾಡಿಕೊಟ್ಟ ರವಿಗ್ರಾಫಿಕ್ಸ್‌ನ ಎಲ್ಲ ಸಿಬ್ಬಂದಿ ವರ್ಗದವರಿಗೂ ನಮ್ಮ ಕೃತಜ್ಞತೆಗಳು.

ಹೊಸ ವರ್ಷ 2004 ನಿಮಗೆಲ್ಲರಿಗೂ ಆಯುರಾರೋಗ್ಯ ಐಶ್ವರ್ಯಗಳೊಂದಿಗೆ ಶ್ರೀಮಂತ ನಗೆ ಮನೋಭಾವವನ್ನೂ ಸಹಾ ಕರುಣಿಸಲಿ ಎಂದು ಅಪರಂಜಿ ಹಾರೈಸುತ್ತಾಳೆ.

ನಗೆಗನ್ನಡಂ ಗೆಲ್ಗೆ

ಶಿವಕುಮಾರ್



○ ಪ್ರಕಾಶ್

ಸೌಹಾರ್ದ ಸಮಾವೇಶ; ಕಾರ್ಯಕರ್ತರ ಬಂಧನ

- ಸುದ್ದಿ

ಅರ್ಥವಾಯಿತು!!

★★★

ಕಾಂಗ್ರೆಸ್‌ನಿಂದ ಜೋಗಿ ಅಮಾನತು

- ಪತ್ರಿಕೆ

'ಹೋಗಿ' ಅಂದರೇನೋ?

★★★

ಜಯಲಲಿತಾ ವಿಚಾರಣೆ ಕರ್ನಾಟಕದಲ್ಲಿ

- ಸುದ್ದಿ

ಬೀದಿಲಿ ಹೋಗೋ....!!!

★★★

ಕೊಡಗಿನಲ್ಲಿ ಸೈನಿಕ ಶಾಲೆ

- ಸುದ್ದಿ

ಅಲ್ಲಿಯ ತರುಣಿಯರೆಲ್ಲ Sigh ಮಾಡಿದರಂತೆ!!

★★★

ವಿಗ್ರಹ ಚೋರರ ಬಂಧನ

- ಪತ್ರಿಕೆ

ಅವರ ಗ್ರಹಚಾರ!!

★★★

ಡಿಸೆಂಬರ್ 9 ರಂದು ಸೋನಿಯಾ ಜನ್ಮ ದಿನಾಚರಣೆ

- ಸುದ್ದಿ

ಅರೆ, ಅದು ಚುನಾವಣೆ ಆದಾಗಲೇ ಆಯಿತಲ್ಲ!!

★★★

ಸಾಮೂಹಿಕ ವಿವಾಹಗಳು ಬಡವರಿಗೆ ವರದಾನ

- ಶೀರ್ಷಿಕೆ

ವಧು-ದಾನವೂ ಹೌದು!!

★★★

ಸೋಲಿನಲ್ಲಿ ನನ್ನದೂ ಒಂದು ಪಾಲಿದೆ

- ಸೋನಿಯಾ

ಈ ಪಾಲು ಹೆಚ್ಚಲಿ ಅಂತ ಬಿ.ಜೆ.ಪಿ. ಆಶಿಸುತ್ತದೆಯಂತೆ!!


★★★

ಹೊಸ ಕೊಳವೆ ಭಾವಿಗಳ ಮೇಲೆ ನಿರ್ಬಂಧ

- ಸುದ್ದಿ

ಈಗ ಕೊಳವೇ ಗತಿ!!

★★★



ಇಲ್ಲಿ ಈ-ಮೇಯ್ಲ್ ಕಳಿಸಬೇಕಾದರೆ ಏನು ಮಾಡಬೇಕು?



ಸಿನಿಮಾಗಾಗಿ ಕಥೆ

⊙ ಎಂ.ಎಸ್. ನರಸಿಂಹ ಮೂರ್ತಿ

ಸಿನಿಮಾ ಡೈರೆಕ್ಟರ್ ಷಡಕ್ಷರಿ ಜನರ ಮೇಲೆ ಕೂಗಾಡುತ್ತಾ ಸಿನಿಮಾ ತೆಗೆದ. ಎಂಬತ್ತು ಸೀನುಗಳ ಚಿತ್ರ ಅರವತ್ತು ಸೀನುಗಳಿಗೇ ನಿಂತಿತ್ತು. ಕೈ ಖಾಲಿ ಆಗಿತ್ತು. ತೆಗೆದಷ್ಟು ದೃಶ್ಯಗಳನ್ನೇ ಅಂಟಿಸಿ ಡಬ್ಬಾಗೆ ತುಂಬಿ ಕಳಿಸಿದ. 'ಒಂದು ಡಬ್ಬಾ ಕತೆ' ಎಂದು ಅದಕ್ಕೆ ಹೆಸರಿಟ್ಟ.

ಕಥೆಯ ಓಟದಲ್ಲಿ ಕೆಲವು ದೃಶ್ಯಗಳು ಶೂಟ್ ಆಗದೆ ಇದ್ದುದರಿಂದ ಸಿನಿಮಾದಲ್ಲಿ ಜಂಪುಗಳು ತುಂಬಾ ಇದ್ದವು. ಕೃತಕ ಹಂಪುಗಳು ಇಲ್ಲದ ಈ ಜಂಪುಗಳನ್ನು ನಿರ್ದೇಶಕರು ಸೊಗಸಾಗಿ ನಿರ್ಮಿಸಿದ್ದಾರೆ ಎಂಬ ವಿಮರ್ಶೆ ಬಂತು. ಪ್ರೇಕ್ಷಕರ ಗ್ರಹಚಾರವಿರಬೇಕು, 'ಒಂಡು ಡಬ್ಬಾಕತೆ'ಗೆ ಅವಾರ್ಡು ಬಂದಿತು.

ಈಗ ಷಡಕ್ಷರಿ ಮೊದಲಿಗಿಂತ ಒರಟಾದ. ಡಬ್ಬಾ ನಿರ್ಮಾಪಕ, ನಿರ್ದೇಶಕ ಎಂಬ ಹೆಸರು ಪಡೆದ. ಕೊಟ್ಟ ಕಾಸನ್ನು ವಾಪಸ್ ಕೇಳಿದವರ ಮೆಲೆ ಕೈ ಮಾಡುವಷ್ಟು ಪ್ರಬಲನಾದ. ತನ್ನ ಮುಂದಿನ ಚಿತ್ರಕ್ಕೆ ಕಥೆ ಬೇಕೆಂದು ಪತ್ರಿಕೆಯ ಮೂಲಕ ಜಾಹೀರಾತು ಕೊಟ್ಟ. ಲೇಖಕರು ಗಾಳಕ್ಕೆ ಬಿದ್ದರು.

''ನಮಸ್ಕಾರ ಸಾರ್, ನಾನು ಲಕ್ಷ್ಮೀಶ, ಲೇಖಕ. ಕಥೆ ತಂದಿದ್ದೀನಿ''

''ಓದೋಷ್ಟು ಪುರುಸೊತ್ತು ಇಲ್ಲ, ನೀವೇ ಹೇಳಿಬಿಡಿ''

''ಒಂದು ದೊಡ್ಡ ಮನೆ ಸಾರ್'' ಲೇಖಕ. ದೃಶ್ಯರೂಪದಲ್ಲಿ ವಿವರಿಸಲು ಶುರು ಮಾಡಿದಾಗ ನಿರ್ದೇಶಕ ಷಡಕ್ಷರಿ ಅಲ್ಲಲ್ಲಿ ಬ್ರೇಕ್ ಹಾಕುತ್ತಿದ್ದ.

''ತೀರಾ ದೊಡ್ಡ ಮನೆ ಬೇಡ. ಮೀಡಿಯಂ ಸೈಜು'' ಎಂಬ ತಿದ್ದುಪಡಿ ತಂದ.

''ಹೌದು ಸಾರ್. ಆ ಮನೆ ಗೇಟಲ್ಲಿ ಒಬ್ಬ ವಾಚ್‌ಮನ್''

''ವಾಚ್‌ಮನ್ ಬೇಡ್ರೀ, ಒಂದು ನಾಯೀನ ಕಟ್ಟಿ. ಒಂದು ಕ್ಯಾರೆಕ್ಟರ್ ಉಳಿಯುತ್ತೆ. ಅಲ್ಲದೆ ವಿಶ್ಯುಯಲ್ಸ್‌ನಲ್ಲಿ ನಾಯಿ ವಾಚ್‌ಮನ್‌ಗಿಂತ ಸುಂದರವಾಗಿ ಕಾಣುತ್ತೆ'' ಎಂದ ಷಡಕ್ಷರಿ.

''ಹೌಸು ಸಾರ್! ನಾಯಿ! ಅಲ್ಲಿಗೆ ಪೋಸ್ಟ್‌ಮ್ಯಾನ್ ಬರ್ತಾನೆ ಲೆಟರ್ ಕೊಡ್ತಾನೆ. ಲೆಟರ್‌ಗೆ ಸೈನು ಮಾಡಿ ವಾಚ್‌ಮನ್ ತಗೋತಾನೆ'' ಲೇಖಕ ಹೇಳಲು ಶುರು ಮಾಡಿದ್ದ.

''ವಾಚ್‌ಮನ್ ಅಲ್ಲ, ನಾಯಿ ಲೆಟರ್ ತಗೊಳ್ಳತ್ತೆ''

''ಆದರೆ ಸೈನು ಮಾಡಬೇಕಲ್ಲ ಸಾರ್?''

''ನಮ್ಮ ಹತ್ರ ಒಂದು ಟ್ರೈನ್ಡ್ ಡಾಗ್ ಇದೆ. ಅದನ್ನ ಹೀರೋ ಪಾತ್ರಕ್ಕೇ ಬಳಸಬೇಕು ಅಂತಿದ್ವಿ. ಆದರೆ ಹೀರೋಯಿನ್ ಸಿಗದೆ ಸುಮ್ಮನಾದ್ವಿ. ಆ ನಾಯಿ ಬಾಯಲ್ಲಿ ಪೆನ್ ಕೊಟ್ರೆ ಬರೆಯುತ್ತೆ.''

''ಆಯ್ತು ಸಾರ್! ಆ ಪತ್ರದಲ್ಲಿ ಕಿಡ್‌ನ್ಯಾಪ್ ವಿಷಯ ಇರುತ್ತೆ. ಅತ್ತೆಯ ಕಿಡ್ನ್ಯಾಪ್ ಮಾಡ್ತೀವಿ ಅಂತ ಹೇಳಿರ್ತಾರೆ''

''ಅತ್ತೇನ ಕಿಡ್‌ನ್ಯಾಪ್ ಮಾಡಿದರೆ ಯಾರಿಗೂ ನಷ್ಟ ಇಲ್ಲ ಕಣ್ರೀ. ಥ್ರಿಲ್ ಇರಬೇಕು ಅಂದ್ರೆ, ಹೀರೋಯಿನ್ ತಂಗೀನ ಕಿಡ್‌ನ್ಯಾಪ್ ಮಾಡಿಸಿ.''

''ಆಗ್ಲಿ ಸಾರ್. 'ಸಂಪನ್ನೆ' ಅಂತ ಅವಳ ಹೆಸರು. ವಯಸ್ಸು 25 ವರ್ಷ.''

''ಇನ್ನೂ ಕಡಿಮೆ ಮಾಡಿಕೊಳ್ಳಿ. ಗ್ಲಾಮರ್ ಬೇಕು''

''20 ವರ್ಷ ಸಾರ್''

''18 ರಿಂದ 19 ಉ ಕಣ್ರೀ''

''ಹೌದು ಸಾರ್. ಆಕೇನ ಕಿಡ್‌ನ್ಯಾಪ್ ಮಾಡ್ತಾರೆ. ನೈನಿತಾಲ್‌ಗೆ ತಗೊಂಡ್ ಹೋಗಿ ಇಡ್ತಾರೆ''

''ಎರಡು ರೈಲು, ಮೂರು ಬಸ್ಸು ಬದಲಾಯಿಸಿ ಯಾಕ್ರೀ ಅಷ್ಟು ದೂರ ಹೋಗಬೇಕು? ಹತ್ತಿರ ಬನ್ರೀ''

''ಕಿಡ್‌ನ್ಯಾಪ್ ಮಾಡಿ ಗುಲ್ಬರ್ಗದಲ್ಲಿಡ್ತಾರೆ ಸಾರ್''

''ಇನ್ನೂ ಕೆಳಕ್ಕೆ ಬನ್ನಿ. ಯಾಕೇಂದ್ರೆ ಟ್ರಾನ್ಸ್‌ಪೋರ್ಟೇಷನ್ ಖರ್ಚು ಜಾಸ್ತಿ ಆಗಬಾರದು.''

''ಚಿತ್ರದುರ್ಗ ಸಾರ್?''

''ಇನ್ನೂ ಕೆಳಕ್ಕೆ''

''ಕ್ಯಾತಸಂದ್ರ, ಡಾಬಸ್‌ಪೇಟೆ, ಕೆಂಗೇರಿ''

''ಆಟೋ ಓಡಾಡೋ ಜಾಗಕ್ಕೆ ಬನ್ರಿ''

''8ನೇ ಮೈಲಿಕಲ್ಲು?''

''ಹಾಂ! ಕರೆಕ್ಟ್!'' ಷಡಕ್ಷರಿಗೆ ಖುಷಿಯಾಯಿತು.

''ಅಲ್ಲಿಗೆ ದುಡ್ಡು ತಂದು ಕೊಡಿ ಅಂತ ಕಿಡ್‌ನ್ಯಾಪರ್ಸ್ ಕೇಳಿದರು''

“ಹೌದು ಸಾರ್. 10 ಸಾವಿರ ರೂಪಾಯಿ ತರಲಿಲ್ಲ ಅಂದ್ರೆ, ಸಂಪನ್ನೆಗೆ ಚೂರಿ ಹಾಕ್ತೀವಿ ಅಂತಾರೆ.”

“ಏನು? ಬರೀ 10 ಸಾವಿರಾನಾ? ಥಿಯೇಟರ್‌ನಲ್ಲಿ ಇರೋ ಜನರು ತಲಾ ಹತ್ತತ್ತು ರೂಪಾಯಿ ಹಾಕಿ, 10 ಸಾವಿರ ಮಾಡಿ ಹುಡುಗೀನ ಉಳಿಸಿಕೊಳ್ತಾರಷ್ಟೆ”

“ಏನು ಮಾಡೋಣ ಸಾರ್? 20 ಸಾವಿರ?”

“ಇನ್ನೂ ಮೇಲೆ ಹೋಗ್ರೀ”

“30 ಉ, 50 ಉ? ಒಂದು ಲಕ್ಷ?”

“ಹತ್ತು ಲಕ್ಷ ಅನ್ನಿ”

“ಕಥೆ ಪ್ರಕಾರ ಹೀರೋಯಿನ್ ಮನೇಲಿ ಅಷ್ಟು ಹಣ ಇರೊಲ್ಲ ಸಾರ್”

“ಅವಳ ಹೆಣ ರೈಲ್ವೇ ಟ್ರ್ಯಾಕ್ ಮೇಲೆ ಬಿದ್ದಿರುತ್ತೆ ಹಾಗೆ ಮಾಡಿ”

ಹೌದು ಸಾರ್. ಅವಳು ಸತ್ತಿದ್ದು ಕೇಳಿ ಅವಳ ತಾಯಿ ಎದೆ ಒಡೆದು ಸಾಯ್ತಾರೆ. ತಂದೆ ನೇಣು ಹಾಕ್ಕೋತಾರೆ. ತಂಗಿ ವಿಷ ಕುಡೀತಾಳೆ.

“ಪ್ರೇಕ್ಷಕರು!”

“ಏನು ಮಾಡೋಣ ಸಾರ್?”

“ಅವರಿಗೂ ಒಂದು ತೊಟ್ಟು ವಿಷ ತಂದುಕೊಟ್ಟುಬಿಡಿ”

“ಯಾಕೆ ಸಾರ್?”

“ಮತ್ತಿನ್ನೇನ್ರೀ? ಕಥೇನ ಸುಖಾಂತ ಮಾಡಿ. ಹೋಗಿ, ಬೇರೆ ಬರ್ಕೊಂಡು ಬನ್ನಿ” ಎಂದು ಷಡಕ್ಷರಿ ಗದರಿದಾಗ ಲೇಖಕ ಸುಸ್ತಾಗಿ ಮೊರಬಿದ್ದ.

★★★

ಕಾವೇರಮ್ಮನ ತಗಾದೆ



ಕಮಲಾ ರಾಮಸ್ವಾಮಿ

''ಬಾರೋ, ನಾಗ್ರಾಜ ಗಣಪತಿ ದೇವಸ್ಥಾನಕ್ಕೆ ಹೋಗಿ ಬರೋಣ''

''ಆಗಲ್ಲ ಅಜ್ಜೀ, ನಂಗೆ ಸಿಕ್ಕಾಪಟ್ಟೆ ಹೋಂ ವರ್ಕ್ ಇದೆ.''

''ಹಾಗಲ್ಲಾ ಅನ್ನಬಾರ್ದಪ್ಪ, ಅದೂ ವಿದ್ಯಾ ಗಣಪತಿ ದೇವಸ್ಥಾನ ಛೇಛೇ!''

''ಅಯ್ಯೋ ಅಯ್ಯೋ ದೇವ್ರ ಹೆಸರಲ್ಲೇ ಬ್ಲಾಕ್ ಮೇಲ್ ಮಾಡ್ತಾರಲ್ಲಪ್ಪ. ನನ್ನ ಗ್ರಹಚಾರ. ನಡಿ ಅಜ್ಜೀ ಬೇಗ ಹೋಗಿ ಬರ್ಬೇಕು. ಅಲ್ಲಿ ಇಲ್ಲಿ ನಿಂತ್ರೆ ಸುಮ್ನಿರಲ್ಲಾ.''

''ಸರಿ ಕಣಪ್ಪ! ನಮಗೊತ್ತಿಲ್ವೇ ಓದೊ ಹುಡುಗ್ರ ಅವಾಂತ್ರ. ನಡಿ.'' ಮೊಮ್ಮಗನ ಹುಕುಂಗೆ ಹೂಂಗುಟ್ಟಿ ಹೊರಟರು. ನಾವು ಯಾವ ಗಣಪತಿಗೆ ಹೋಗ್ತಿರೊದು? ಪಾರ್ಕಿಂದೊ, ಸ್ವಿಮ್ಮಿಂಗ್ ಪೂಲ್ದೊ ಅಥ್ವಾ ಪೋಲೀಸ್ ಗಣ್ಪತೀನಾ।'' ಪೊಲೀಸ್ ಗಣಪತಿಗೇ ಹೋಗ್ಬರೋಣ. ಹತ್ರ ಇದೆ.''

ಬೆಳಗಾಂ ಮಿಲ್ಟ್ರಿ ಮಹದೇವನ ಮಗ ಈ ಪೊಲೀಸ್ ಗಣಪತಿ. ಬಡಾವಣೆಯ ಹೆಸರು ದೇವರ್ಗೆ ಬರೋದು ಸಹಜ!

ಗಣಪತಿಗೆ ಬೆಣ್ಣೆ ಅಲಂಕಾರ. ಜನರ ಕ್ಯೂ ಉದ್ದಕ್ಕಿತ್ತು. ''ಕ್ಯೂನಲ್ಲಿ ನಿಂತು ಹೋಗ್ಬೇಕಾ'' ನಾಗ್ರಾಜಂಗೆ ಬೇಜಾರು. ''ಬೇಡ ಮರಿ. ಸೊಂಟ ನೋಯತ್ತೆ. ಒಂದು ಪ್ರದಕ್ಷಿಣೆ ಬಂದು ಮನೆಗೆ ಹೋಗೋಣ. ನಿಮಗೂ ಪಾಠ ಇದೆ ಪಾಪ.'' ಅಜ್ಜಿ ಮಾತು ಕೇಳಿ ಬಲು ಖುಷಿ ಆಯ್ತು.'' ಇಲ್ಲೇ ನಿಂತರ್ತೀನಿ. ನೀನು ಸುತ್ತಾಕಿ ಬಾ.''

ಅಜ್ಜಿ ಬರ್ತಿದ್ದಾಗೆ ಮೊಮ್ಮಗ ಕೇಳ್ದ. ''ಅಜ್ಜಿ ಅಲ್ನೋಡು. ಅವರ್ಯಾಕೆ ಹಾಗೆ ಮಾಡ್ತಾ ಇದ್ದಾರೆ? ಅದ್ಯಾಕೆ ಹಾಗೆ ಅರ್ಧಂಭರ್ದ ಊಟ್ ಬೈಸ್ ಹೊಡೆದು, ಎರಡೂ ಕೈ ಮುಷ್ಟಿಕಟ್ಟಿ ಹಣೆ ಪಕ್ಕಕ್ಕೆ ಹೊಡ್ಕೊಳ್ತಾ ಇದ್ದಾರೆ?'' ನಾಗರಾಜ ಅಚ್ಚರಿಯಿಂದ ನೋಡಿದ್ದನ್ನು ಕಂಡು ಅಜ್ಜಿಗೆ ನಗು ಬಂತು. ''ಅಯ್ಯೋ ಅವರು ತಮಿಳರು ಕಣಪ್ಪಾ. ಅದಕ್ಕೆ ಹಾಗೆ ನಮಸ್ಕಾರ ಮಾಡ್ತಾರೆ.''

''ಅಲ್ಲಜ್ಜೀ, ಅವರು ಮಾತ್ರ ಯಾಕೆ ಹಾಗೆ ಮಾಡ್ತಾರೆ. ನಾವು ಮಾಡಲ್ವಲ್ಲ ಯಾಕೆ?''

ಅದೊಂದು ಕಥೆ ಪುಟ್ಟಾ, ಮನೆಗೆ ಹೋಗ್ತಾ ಹೇಳ್ತೀನಿ.''

ಅಜ್ಜಿ ಹೇಳಿದ ಕಥೆ:


''ಪುರಾಣದಲ್ಲಿ ಇದರ ವ್ಯಾಖ್ಯಾನ ಇದೆ. ಅಗಸ್ತ್ಯಮಹಾ ಮುನಿ ಹೆಸರು ಕೇಳಿಲ್ವೇ. ಅವರು ಹ್ಯಾಗೆ ''ವಾತಾಪಿ ಜೀರ್ಣೋಭವ'' ಅಂದು ಆ ರಾಕ್ಷಸನ್ನ ಸಂಹಾರ ಮಾಡಿದವರ ಕಥೆ ಇದು. ಆ ಋಷಿ ಬಹಳ ತಪಶ್ಶಕ್ತಿ ಇದ್ದ ಮಹರ್ಷಿ. ದೇವತೆಗಳೆಲ್ಲಾ ಅವರನ್ನೇ ತಮ್ಮ ಕಷ್ಟಕಾಲದಲ್ಲಿ ರಕ್ಷಿಸು ಅಂತ ಮೊರೆ ಹೋಗ್ತಾ ಇದ್ರು. ಒಂದು ಸಾರ್ತಿ ಇಂದ್ರ ಭೂಮಿಗೆ ಬಂದಿಳಿದು ಒಬ್ಬ ಅಸುರನ ಸಂಹಾರಕ್ಕಾಗಿ ಯಾಗ, ಯಜ್ಞಾದಿಗಳನ್ನು ಶುರು ಮಾಡಿದ. ಆಗ ಭೂಮಿ ಮೇಲಿದ್ದ ಎಲ್ಲಾ ನೀರು ಬತ್ತಿತು. ಆಗ ಆ ಯಜ್ಞಕ್ಕೆ ಎಲ್ಲಾ ದೇವತೆಗಳು ಭೂಮಿಗೆ ಇಳಿದು ಬಂದರು. ಸರಿ! ಆ ಹಿಮಾಲಯದ ಪ್ರದೇಶ ಭೂ ಭಾರ ಹೆಚ್ಚಾಗಿ ಕುಸಿಯಿತು. ಎಲ್ಲಾ ಅಲ್ಲೋಲ ಕಲ್ಲೋಲವಾಗುತ್ತೆಂದು ಅಗಸ್ತ್ಯರನ್ನು ಮೊರೆ ಹೋದರು. ಅಗಸ್ತ್ಯರು ಭೂ ಭಾರ ಸರಿ ಮಾಡಲು ದಕ್ಷಿಣ ದೇಶಕ್ಕೆ ಹೊರಟರು. ಹಾಗೆ ಹೊರಟಾಗ ತಮ್ಮ ಹೆಂಡತಿ ಕಾವೇರೀನ ಜೊತೆಗೆ ಕರಕೊಂಡು ಹೋಗ್ಬೇಕಾಯ್ತು.

''ಯಾ...ಕೆ?'' ಸಾಗ್ರ್ಯಾಜಂ ಕಥೇಲಿ interest ಹುಟ್ಟಿತು.

ನಿಂಗೆ ಕಾವೇರಿ ಕಥೆ ಗೊತ್ತಿಲ್ವೇ! ಬಲು ಸ್ವಾರಸ್ಯವಾಗಿದೆ ಕಣಪ್ಪ. ಕರ್ನಾಟಕದಲ್ಲಿ ತಲಕಾವೇರಿಯಲ್ಲಿ ಹುಟ್ಟಿ ಹರಿಯುವ ಈ ನದಿ ಮೊದಲಿನಿಂದಲೂ ತಗಾದೆ, ಬಿಕ್ಕಟ್ಟುಗಳಲ್ಲಿ ಸಿಕ್ಕಿದೆ. ಪೌರಾಣಿಕ, ಚಾರಿತ್ರಕ ಹಿನ್ನೆಲೆ ಮಾತ್ರವಲ್ಲ, ಈಗ ಸುಪ್ರೀಂ ಕೋರ್ಟಿನ ಬಾಗ್ಲನ್ನೂ ತಟ್ಟಿದೆ. ಬ್ರಹ್ಮನ ಮಗಳು ಲೋಪಾಮುದ್ರೆ. ಆಕೇನ ಬ್ರಹ್ಮ ಕವೇರ ಮುನಿಗೆ ಸಾಕುಮಗಳಾಗಿ ಕೊಟ್ಟ. ಅಗಸ್ತ್ಯರು ಆ ಕವೇರ ಋಷಿಗಳ ಆಶ್ರಮಕ್ಕೆ ಹೋದಾಗ ಕಾವೇರಿಯನ್ನು ಕಂಡು (love at first sight) ತನ್ನನ್ನು ಮದುವೆಯಾಗಲು ಒತ್ತಾಯಿಸಿದರು. ಕಾವೇರಿ ಒಂದು ಶರತ್ತು ಹಾಕಿದಳು. ''ನೀನು ಎಂದೂ ನನ್ನನ್ನು ಬಿಟ್ಟು ಅಗಲಬಾರದು. ಹಾಗೇನಾದರೂ ಆದರೆ ನಾನು ನದಿಯಾಗಿ ಹರಿದು ಹೋಗುವೆನು.'' ಅಗಸ್ತ್ಯರು ಖುಷಿಯಾಗಿ ಒಪ್ಪಿದರು. ಆ ಶರತ್ತಿನಂತೆ ಆಕೇನ ಜೊತೆಯಲ್ಲೇ ಕರಕೊಂಡು ಹೋಗಬೇಕಲ್ಲ! ತನ್ನ ಕಮಂಡಲುವಿನಲ್ಲಿ ನೀರಿನ ರೂಪದಲ್ಲಿ ತುಂಬಿಕೊಂಡು ಹೊರಟರು. ಅಷ್ಟೊತ್ತಿಗೆ ಯಾಗ ಮುಗಿದು ದೇವತೆಗಳು ಸ್ವರ್ಗ ಸೇರಿದ್ರು. ಆ ರಾಕ್ಷಸ ಸತ್ತೂ ಹೋದ. ಭೂಮಿ ಒಣಗಿತ್ತು. ತಕ್ಷಣ ನಮ್ಮ ಗಣಪತಿ ಒಂದು ಉಪಾಯ ಮಾಡ್ದ. ಕಾಗೆ ರೂಪ ತಾಳಿದ. ಅಗಸ್ತ್ಯರು ಸಂಜೆ ಸೂರ್ಯನಿಗೆ ನಮಸ್ಕಾರ ಮಾಡಲು ಕಮಂಡಲುವನ್ನು ಅಲ್ಲೇ ಬಂಡೆ ಮೇಲಿಟ್ಟರು. ಕಾಗೆ ಬಂದಿದ್ದೇ ಅದನ್ನು ಉರಳಿಸಿಯೇಬಿಟ್ಟಿತು. ಕಾವೇರಿ ಕಿಲಕಿಲನೆ ನದಿಯಾಗಿ ಹರಿದೇ ಬಿಟ್ಟಳು. ಅಗಸ್ತ್ಯರಿಗೆ ಮಹಾ ಕೋಪ ಬಂತು. ಕಾಗೇನ ಅಟ್ಟಿಸಿಕೊಂಡು ಹೋದರು. ಗಣಪತಿ ಪುಟ್ಟ ಹುಡುಗನಾದ. ಅವರು ಅವನನ್ನು ಹಿಡಿದು ಇನ್ನೇನು ಶಾಪ ಕೊಡ್ಬೇಕು, ಅಷ್ಟರಲ್ಲಿ

ಗಣಪತಿ ತನ್ನ ನಿಜ ರೂಪ ತೋರಿಸಿದ. ಅಗಸ್ತ್ಯರಿಗೆ ಬಹಳ ಸಂಕೋಚವಾಯ್ತು. ತಮ್ಮ ಎರಡೂ ಮುಷ್ಟಿಗಳಿಂದ ಹಣೆಯನ್ನು ಟಪಟಪ ಚಚ್ಚಿಕೊಂಡು. ಬಂಡೆ ಮೇಲೆ ನಿಂತಿದ್ರಲ್ಲಾ ಹಾಗೆ ಊಟ್-ಬೇಸ್ ಮಾಡಿದ್ರು. ತಲಕಾವೇರಿಯಿಂದ ತಮಿಳುನಾಡಿಗೆ ಹರಿದಳು ಕಾವೇರಿ. ತಮಿಳರಿಗೆ ಸಂತೋಷವಾಯ್ತು. ಗಣಪತಿಗೆ ನಮಸ್ಕಾರ ಮಾಡುವಾಗ ಇಂದಿಗೂ ಅಗಸ್ತ್ಯರು ಅಂದು ಮಾಡಿದ್ದನ್ನೇ ಮಾಡ್ತಾರೆ.''

''ಓಹೋ! ಅಜ್ಜೀ, ಅಂದು ಆದ ಈ ವಿಷಯಕ್ಕೆ ಇಂದೂ ಕೃಷ್ಣ, ಜಯಮ್ಮ ಹಣೆಹಣೆ ಚಚ್ಚಿಕೊಳ್ಳಬೇಕಾಯ್ತು. ನಮ್ಮ ಗಣಪತಿ ಆ ಕಮಂಡಲುನ ಈ ಕಡೇಗೆ ಅಂದರೆ ಕರ್ನಾಟಕದ ಕಡೆಗೇ ಉರುಳಿಸಬಾರ್ದಾಗಿತ್ತಾ!''



ಪ್ರೊಫೆಸರ್ ಎ.ಎಸ್. ಮೂರ್ತಿರಾಯರ ಒಂದು ನೆನಪು



ಮೂರ್ತಿರಾಯರ ಕೋರ್ಟ್ ಮಾರ್ಷಲ್ಲು!

⊙ ಎಚ್. ಗೋಪಾಲಕೃಷ್ಣ

1993-4ರ ಒಂದು ಮೇ ತಿಂಗಳಿನ ದಿವಸ. ನಾವು ಕೆಲಸ ಮಾಡುವ ಬಿ.ಇ.ಎಲ್. ಕಾರ್ಖಾನೆಯ ಕನ್ನಡ ಸಾಹಿತ್ಯ ಕೂಟದ ಆಶ್ರಯದಲ್ಲಿ ನಡೆಯಬೇಕಿದ್ದ ಒಂದು ಕಾರ್ಯಕ್ರಮಕ್ಕೆ ಪ್ರೊ. ಮೂರ್ತಿರಾಯರನ್ನು ಕರೆದು ಸನ್ಮಾನಿಸಬೇಕೆಂಬ ತೀರ್ಮಾನವನ್ನು ಸಾಹಿತ್ಯ ಕೂಟ ತೆಗೆದುಕೊಂಡಿತ್ತು. ಇದಕ್ಕೆ ಕಾರಣವೆಂದರೆ ನಮ್ಮಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಿಗೆ ನಮ್ಮ ವಾರ್ಷಿಕ ಸಾಹಿತ್ಯ ಮಾಲೆಯ ಬಿಡುಗಡೆ ದಿವಸದಿಂದ ಸನ್ಮಾನಿಸುವ ಒಂದು ಪದ್ಧತಿಯನ್ನು ರೂಢಿಸಿದ್ದೆವು. ಹಿಂದಿನ ವರ್ಷಗಳಲ್ಲಿ ಮೂರ್ತಿರಾಯರು ನಮ್ಮ ಸಂಚಿಕೆ ಬಿಡುಗಡೆಯ ವೇಳೆಯಲ್ಲಿ ಅಮೇರಿಕದಲ್ಲಿ ಇದ್ದದರಿಂದ ಅವರನ್ನು ಆಹ್ವಾನಿಸಲು ಆಗಿರಲಿಲ್ಲ.

ಸಹಜವಾಗಿಯೇ ಈ ಬಾರಿ ನಮ್ಮ ದೃಷ್ಟಿ ಅವರ ಮೇಲೆ ಹರಿದು ಅವರನ್ನು ಸಮಾರಂಭಕ್ಕೆ ಒಪ್ಪಿಸುವ ಮತ್ತು ಕರೆದು ತರುವ ಜವಾಬ್ದಾರಿ ಸಾಹಿತ್ಯ ಕೂಟದಲ್ಲಿ ಹೆಚ್ಚಿನ ಲಿಟರರಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ನಾನು ಮತ್ತು ಶ್ರೀ ರಾಮಮೂರ್ತಿ (ಗೌತಮ) ಯವರ ಮೇಲೆ ಬಿದ್ದಿತು. 93-94 ವರ್ಷದ ಹಿರಿಯರನ್ನು ಆಹ್ವಾನಿಸುವ ಮತ್ತು ಅವರನ್ನು ಸಭೆಗೆ ಕರೆತರುವ ಜವಾಬ್ದಾರಿಯನ್ನು ನಾವು ತುಂಬಾ ಖುಷಿಯಿಂದಲೇ ಒಪ್ಪಿಕೊಂಡೆವು ಆಗ ತಾನೇ ನಮ್ಮಗೆ ಸಾಹಿತ್ಯದ ಕಾರಣದಿಂದ ಪರಿಚಿತರಾಗಿದ್ದ ಶ್ರೀ ಶ್ರೀನಿವಾಸ ಮೂರ್ತಿ ಅದೇ ತಾನೇ ಸಸ್ಯಾಹಾರವನ್ನು ಕುರಿತಾದ ಒಂದು ಪುಸ್ತಕ ರಚಿಸಿ ಅದಕ್ಕೆ ಶ್ರೀ ಮೂರ್ತಿರಾಯರಿಂದ ಮುನ್ನುಡಿಯನ್ನೂ ಬರೆಸಿದ್ದರು ಮತ್ತು ಮೂರ್ತಿಯವರ ನೆರವನ್ನು ಇದಕ್ಕಾಗಿ ಕೋರಿದೆವು. ಮೂರ್ತಿಯವರ ಮನೆಯ ಸಮೀಪವೇ ಆಗ ಸಂಜಯನಗರದಲ್ಲಿ ಶ್ರೀ ಮೂರ್ತಿರಾಯರೂ ವಾಸವಿದ್ದರು.

ಅವರ ವಿಶ್ರಾಂತಿಯ ಸಮಯಗಳನ್ನು ತಿಳಿದುಕೊಂಡು ಮೇ ತಿಂಗಳ ಒಂದು ಸಂಜೆ ಶ್ರೀ ಮೂರ್ತಿರಾಯರ ಮನೆಗೆ ಭೇಟಿಯನ್ನಿತ್ತು ಅವರನ್ನು ಕಾರ್ಯಕ್ರಮಕ್ಕೆ ಒಪ್ಪಿಸಿ ಬಂದೆವು. ಮೂರ್ತಿರಾಯರನ್ನು ಒಪ್ಪಿಸಿ ಬಂದ ನಂತರ ಮಿಕ್ಕ ಕಾರ್ಯಕ್ರಮಗಳ ರೂಪು ರೇಷೆಗಳತ್ತ ನಮ್ಮ ಗಮನ ಹರಿಯಿತು. ಸನ್ಮಾನ ಪತ್ರದ ತಯಾರಿ. ನಮ್ಮ ಕಾಖಾನೆಯ ಹಿರಿಯ ಅಧಿಕಾರಿಗಳನ್ನು ಒಪ್ಪಿಸಿ ಸನ್ಮಾನದ ದಿವಸ ಅವರು ಬಿಡುವು ಮಾಡಿಕೊಂಡು ಈ

ಹಿರಿಯರನ್ನು ಸನ್ಮಾನಿಸುವ ಪುಣ್ಯ ಕಟ್ಟಿಕೊಳ್ಳತಕ್ಕದ್ದು ಎಂದು ಪ್ರಾರ್ಥಿಸಿ ದಿನ ನಿಷ್ಕರ್ಷೆಯನ್ನೂ ಮಾಡಿದೆವು.

ಸನ್ಮಾನ ಪತ್ರವೂ ತಯಾರಾಯಿತು. ಮತ್ತು ನಮ್ಮ ಸಾಹಿತ್ಯ ಮಾಲೆಯೂ ಸಹ ಮುದ್ರಣಗೊಂಡು ಬಿಡುಗಡೆಗೆ ಸಿದ್ಧವಾಯಿತು. ಕಾರ್ಯಕ್ರಮದ ಹರವೂ ನಡೆದು ರಿಹರ್ಸಲ್-ಪಹರ್ಸಲ್ ಎಲ್ಲವೂ ನಡೆದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಸಕಲರೂ ಸಿದ್ಧವಾಗಿದ್ದಾರೆ. ಆಗ ನಡೆದದ್ದು ತಮಾಷೆ! ರಾತ್ರಿ ಸೆಕೆಂಡ್ ಶಿಫ್ಟು ಮುಗಿಸಿ ಮನೆ ಸೇರಿದ್ದೇನೆ. ರಾತ್ರಿ ಹನ್ನೆರಡರ ಸುಮಾರಿಗೆ ಗೌತಮ ಫೋನ್ ಕರೆ ಬಂತು. ಮೂರ್ತಿರಾಯರಿಗೆ ನಾಳಿದ್ದಿನ ಕಾರ್ಯಕ್ರಮಕ್ಕೆ ಬರಲು ಆಗುವುದಿಲ್ಲವಂತೆ... ಅಂತ! ಯಾಕೇ? ಅಂದೆ ಘಾಬರಿಯಿಂದ. ನಮ್ಮ ಫಂಕ್ಷನ್ನು ಇರುವ ದಿವಸವೇ ಕಿಕ್ಕೇರಿಯಲ್ಲಿ ಡಾ.ಕೆ.ಎಸ್.ನ ಅವರಿಗೆ ಸನ್ಮಾನವಂತೆ. ಮುರ್ತಿರಾಯರು ಅಲ್ಲಿಗೆ ಹೋಗಬೇಕಂತೆ. ಅಂತ ಉತ್ತರಿಸಿದರು ಗೌತಮ!

ನಾವು ಮಾಡಿಕೊಂಡಿದ್ದ ಸಿದ್ಧತೆಗಳೆಲ್ಲಾ ಒಂದೇ ಸೆಕೆಂಡಿನಲ್ಲಿ ವೇಸ್ಟು ಆಗುತ್ತೆ ಎಂಬ ನೋವು ಮತ್ತು ಸರೀಕರ ಎದುರು ಕಾರ್ಯಕ್ರಮದ ದಿವಸ ಆಗಬಹುದಾದ ಅವಮಾನ ನೆನೆದು ಮನಸ್ಸು ಒಂದು ಕ್ಷಣ ವಿಚಲಿತವಾಯಿತು. ನಿಮಗೆ ಯಾರು ಈ ಸುದ್ದಿ ನೀಡಿದವರು? ಎಂದೆ. ಮೂರ್ತಿರಾಯರ ಮಗನ ಸ್ನೇಹಿತರು ಯಾರೋ ನಮ್ಮಲ್ಲೇ ಇದಾರಂತೆ. ಅವರು ರಾತ್ರಿ ಹತ್ತರ ಸುಮಾರಿಗೆ ಈ ಸುದ್ದಿ ಪಡೆದರಂತೆ. ಅದು ಹೇಗೋ ನನ್ನನ್ನ ಸಂಪರ್ಕಿಸಿ ಈ ಮಾಹಿತಿಯನ್ನ ರವಾನಿಸಿದಾರೆ ಅಂತ ಉತ್ತರ ಬಂತು. ಸರಿ ಬಿಡಿ ನಾಳೆ ಯೋಚನೆ ಮಾಡೋಣ ಅಂದೆ. ಇಡೀ ರಾತ್ರಿ ನನಗೂ ರಾಮ ಮೂರ್ತಿಗೂ ನಿದ್ದೆ ಇಲ್ಲ.

ಇದೊಂದೇ ಕಾರ್ಯಕ್ರಮ ಅವತ್ತು ಪ್ರಮುಖವಾಗಿ ನಡೆಯಬೇಕಾಗಿದ್ದು ಉತ್ಸವ ಮೂರ್ತಿಯೇ ಇಲ್ಲದೆ ಮೆರವಣಿಗೆ ಹೊರಡಿಸಿದಂತಾಗುತ್ತದಲ್ಲಾ ಅಂಬೋ ಚಿಂತೆ ನಮಗೆ. ಮಾರನೆ ದಿವಸ ಕಾರ್ಖಾನೆ ಸೇರಿದ ಕೂಡಲೇ ಹೀಗೆ ಹೀಗೆ ಆಗಿದೆ ಕಾರ್ಯಕ್ರಮ ಮುಂದೂಡಿ ಅಂತ ಹೇಳುವುದು ಅಂದುಕೊಂಡು ಕಾರ್ಖಾನೆ ಸೇರಿದೆ. ನಾನು ಈ ವಿಷಯ ತೆಗೆಯುವ ಮೊದಲೆ ಸಮಾರಂಭದ ಸಿದ್ದತೆ ಕುರಿತಾದ ವಿವರಣೆಯನ್ನು ನಮ್ಮ ಗೆಳೆಯ ನೀಡಿದ. ಆತನ ಮಾತು ನಿಂತ ನಂತರ ಪರಿಸ್ಥಿತಿ ವಿವರಿಸಿದೆ. ಅಯ್ಯೋ ಹೀಗಾದರೆ ಹೇಗೇ ಸಾರ್, ಅಂತ ಆತ ತಲೆಮೇಲೆ ಕೈ ಹೊತ್ತ! ಆಲ್ಟರ್ನೇಟು ವ್ಯವಸ್ಥೆ ಏನು ಮಾಡಬಹುದು ಅಂತ ತಲೆ ಓಡಿತು. ಮೂರ್ತಿರಾಯರನ್ನು ದೂರದಿಂದ ಹೋಲುವ ನಮ್ಮ ಕಲಾವಿದರೊಬ್ಬರು ನೆನಪಿಗೆ ಬಂದರು. ಬಂಡಿ ಪಾತ್ರ ಮಾಡಿ ಬಂಡಿ ವೆಂಕಟೇಶ್ ಅಂತಲೇ ಹೆಸರು ಗಳಿಸಿದ್ದ ಈತನನ್ನು ಮೂರ್ತಿ ರಾಯರಿಗೆ ಡಮ್ಮಿಯಾಗಿ ಸ್ಟೇಜಿನ ಮೇಲೆ ತಂದು ಕೂರಿಸಬಹುದು ಅನ್ನಿಸಿತು. ಮೂರ್ತಿರಾಯರನ್ನ

ಹತ್ತಿರದಿಂದ ಬಲ್ಲವರು ಯಾರೂ ಆಗ ನಮ್ಮಲ್ಲಿ ಇರಲಿಲ್ಲವಾದ್ದರಿಂದ ಈ ಟ್ರಿಕ್ಕು ಫಲಿಸುತ್ತೆ ಅನಿಸಿತು. ಆದರೆ ಈ ಬಂಡಿಗೆ ಮಾತಾಡು ಅಂತ ಬಿಟ್ಟರೆ ಅವನು ತನ್ನ ಮಾಮೂಲು ಡಯಲಾಗುಗಳನ್ನ ಹೊಡೆದು ಅವನ ಬಣ್ಣ ಮತ್ತು ನಮ್ಮ ''ವಂಚನೆ'' ಗೊತ್ತಾದರೆ ಅನ್ನುವ ಯೋಚನೇನೂ ಸಹ ತಲೆಯಲ್ಲಿ ಇಣುಕಿತು.

ಆದರೂ ತಲೆಯಲ್ಲಿ ಈ ಆಲ್ಟರ್ನೇಟು ಐಡಿಯಾವನ್ನು ತುಂಬಿಸಿಕೊಂಡೆವು. ಮತ್ತೆ ಮೂರ್ತಿರಾಯರ ಮನೆಯನ್ನು ಸಂಪರ್ಕಿಸಲು ಪ್ರತ್ನಿಸಿದೆವು. ಅವರ ಮನೇಲಿ ಫೋನ್ ಡೆಡ್ ಆಗಿರಬೇಕೆ? ಮತ್ತೆ ನಾನೂ ರಾಮಮೂರ್ತಿಯೂ ಅವರ ಮನೆಗೆ ಓಡಿದೆವು. ಮನೇಲಿ ಮೂರ್ತಿರಾಯರು ಇರಲಿಲ್ಲ. ಅವನ ಮಗ ಶ್ರೀ ಸುಬ್ರಾಮಯ್ಯ ಅವರಿಗೆ ನಮ್ಮ ಇಕ್ಕಟ್ಟಿನ ಪರಿಸ್ಥಿತಿ ವಿವರಿಸಿ ಕೊಂಚ ''ಎಲ್ಪ್'' ಮಾಡಿ ಅಂತ ಕೋರಿದೆವು. ಯಾಕೋ ಬಂದ ದಾರಿಗೆ ಸುಂಕವಿಲ್ಲ ಅಂತ ಅನಿಸಿತು.

ದೇವರ ಮೇಲೆ ಭಾರ ಹಾಕಿ ಕೂತುಕೊಳ್ಳುವ ಹಾಗಿರಲಿಲ್ಲ - ಇದಕ್ಕೆ ಕಾರಣ ಅಂದರೆ ನಾನು ಆ ನಂಬಿಕೆಗಳಿಂದ ದೂರ ಇರುವವನು. ಸರಿ ಏನು ಮಾಡೋದು? ನಾಳೆವರೆಗೂ ಸಮಯ ಇದೆ ಬಿಡಿ ಅದೇನು ಆಗುತ್ತೋ ನೋಡೋಣ ಅಂತ ತೆಪ್ಪಗಾದೆವು - ಆದರೂ ಮನಸ್ಸಿನಲ್ಲಿ ಒಂದು ರೀತಿಯ ದುಗುಡ; ಹೇಳಲಾಗದ ಹೇಳದೇ ಬಿಡಲಾರದ ಒಂದು ಥರಹದ ಬೇನೆ ಬೇರೆ! ಈ ದುಗುಡದಲ್ಲೇ ಇಡೀ ದಿನ ಕಳೀತು. ಮತ್ತೆ ಮಾರನೇ ದಿವಸವು ನಿದ್ದೆ ಇಲ್ಲ. ಬಳಿಗ್ಗೆ ಎದ್ದು ಫ್ಯಾಕ್ಟರಿಯನ್ನೂ ಸೇರಿದ್ದಾಯಿತು.

ಆರೂವರೆಗೆ ಸೆಕ್ಷನ್ನಿಗೆ ಸೇರಿದೆ. ಸೆಕ್ಯೂರಿಟಿ ಇಲಾಖೆಯಿಂದ ಒಂದು ನೋಟು ನನ್ನ ಹೆಸರಿನಲ್ಲಿ, ನನ್ನ ಟೇಬಲ್ಲಿನ ಮೇಲೆ ಕೂತಿತ್ತು. ಅವತ್ತಿನ ಕಾರ್ಯಕ್ರಮಕ್ಕೆ ಮೂರ್ತಿರಾಯರು ಬರುವರಂತೆ ರಾತ್ರಿ ಒಂದೂವರೆಗೆ ಮೆಸ್ಸೇಜು ಬಂದಿದೆ - ಅಂತ ! ಇಂಥಹ ಟೆನ್ಷನ್‌ನಲ್ಲಿ ಎರಡು ದಿವಸ ಕಳೆದವರಿಗೇ ಗೊತ್ತು ಇಂಥಹ ಟೆನ್ಷನ್ನು ರಿಲೀವು ಆದಾಗ ಉಂಟಾಗುವ ಒಂದು ರೀತಿಯ ಗಾಳಿಯಲ್ಲಿ ಹಾರಿಹೋದ ಅನುಭವ! ಅಂತ ಅನುಭವ ಆಗ ಪಡೆದೆವು.

ಸಂಜೆ ಮೂರ್ತಿರಾಯರನ್ನು ಕರೆದು ತರಲು ನಾವೇ ಹೋದೆವು. ಸೂಟ್ ಹಾಕ್ಕೊಳ್ಳಿ ಸಾರ್, ಚೆನ್ನಾಗಿರುತ್ತೆ ನಿಮಗೆ ಅಂದೆ - ಆಗ ಅವರಿಗೆ 94ರ ವಯಸ್ಸು. ಅಯ್ಯೋ ಬೇಡಪ್ಪಾ, ನನಗೆ ಮೊದಲಿಂದಲೂ ಈ ತರಹದ ಡ್ರೆಸ್ಸೇ ಅನುಕೂಲ ಅಂತ ಹೇಳಿ ಪಂಚೆ ಷರ್ಟು ತೊಟ್ಟೇ ಸಮಾರಂಭಕ್ಕೆ ಬಂದರು. ಮೂರು ನಾಲ್ಕು ಘಂಟೆಗಳ ಕಾಲ ನಮ್ಮ ಜೊತೆ ಸರಾಗವಾಗಿ ಕಳೆದರು. ಮೂರ್ತಿರಾಯರ ಎರಡರಷ್ಟು ಭಾರದ ಹಲವು ಹಾರಗಳು ಅವರ ಕೊರಳಿಗೇರಿದವು, ಎರಡೂವರೆ ಪುಟದ ದೀರ್ಘವಾದ ಸನ್ಮಾನ ಪತ್ರದ (ನಾನೇ ತಯಾರಿಸಿದ್ದು!) ವಾಚನವೂ ಆಯಿತು. ಮೂರ್ತಿರಾಯರು ಸನ್ಮಾನ ಸ್ವೀಕರಿಸಿ ಯಥೋಚಿತವಾದ ಮಾತುಗಳನ್ನೂ ಆಡಿದರು.

ಸಮಾರಂಭ ಮುಗಿಸಿಕೊಂಡು ಅವರನ್ನು ಮತ್ತೆ ಮನೆಗೆ ಬಿಡಬೇಕಾದರೆ ಹಿಂದಿನ ದಿವಸ ಅವರ ಮನೆಯಲ್ಲಿ ನಡೆದ ಒಂದು ''ಕನ್ ವಿನ್ಸಿಂಗ್'' ಸಮಾಲೋಚನೆಯ ಸಂಗತಿ ತಿಳಿಯಿತು. ಕನ್ ವಿನ್ಸಿಂಗ್‌ಗಿಂತಲೂ ಹೆಚ್ಚಾಗಿ ಇದು ಒಂದು ರೀತಿಯ ಕೋರ್ಟ್ ಮಾರ್ಷಲ್ ರೀತಿ ಇತ್ತು ಅಂತ ಮೂರ್ತಿರಾಯರು ಹೇಳಿ ನಕ್ಕರು. ಈಗ ಅದರ ಕಥೆ...!

ಹಿಂದಿನ ದಿವಸ ರಾತ್ರಿ ಊಟದ ನಂತರ ಮೂರ್ತಿರಾಯರು ಒಂದು ಖುರ್ಚಿ ಮೇಲೆ ಕೂತರು. ಅವರ ಸುತ್ತಲೂ ಅವರ ಮಗ, ಸೊಸೆ, ಮೊಮ್ಮಕ್ಕಳು ಮತ್ತು ಇತರ ಬಂಧುಗಳು ನೆರೆದರು. ಮಾರನೇ ದಿವಸದ ಕಿಕ್ಕೇರಿ ಪ್ರವಾಸದ ಮಾತು ಬಂತು. ಆಗಲೇ ನೀವು ಬಿ.ಇ.ಎಲ್. ನವರಿಗೆ ಒಪ್ಪಿಕೊಂಡಿದೀರಲ್ಲಾ ಈ ಕಿಕ್ಕೇರಿಗೆ ಹೋದರೆ ಪಾಪ ಇವರು ಮಾಡಿಕೊಂಡಿರೋ ವ್ಯವಸ್ಥೆ ಏರು ಪೇರು ಆಗುಲ್ಲವೇ? ಅಂತ ಮೂರ್ತಿರಾಯರನ್ನ ಹೊರತುಪಡಿಸಿದ ಗುಂಪು ವಾದ ಹೂಡಿದರು.

ನಮ್ಮ ನರಸಿಂಹಸ್ವಾಮೀಗೆ ಆಗುತ್ತಿರೋ ಸನ್ಮಾನ ನಾನು ಅಲ್ಲಿಲ್ಲದೇ ಇದ್ದರೆ ಹೇಗೇ? ಅಂತ ಮೂರ್ತಿರಾಯರ ವಾದ. ಕೊಟ್ಟ ಮಾತಿಗೆ ತಪ್ಪಿ ನಡೆಯಬಹುದೇ (ಕೊಟ್ಟ ಮಾತಿ ತಪ್ಪಿ ನಡೆದರೆ ದೇವರು ಮೆಚ್ಚಾನೇ?) ಎಂಬುವ ಬಗ್ಗೆ ಒಂದು ತೀಕ್ಷ್ಣವಾದ ಚರ್ಚೆ ನಡೆಯಿತು. ಅದರ ಫಲ ಅಂದರೆ ಮೂರ್ತಿರಾಯರು ನಮ್ಮ ಸಮಾರಂಭಕ್ಕೇ ಹೋಗತಕ್ಕದ್ದು ಅಂತ ಮೂರ್ತಿರಾಯರನ್ನು ಹೊರತು ಪಡಿಸಿದ ಒಮ್ಮತದ ತೀರ್ಮಾನ ಆಯಿತು!

ಮೂರ್ತಿರಾಯರು ಮತ್ತೆ ಮನಸ್ಸು ಬದಲಾಯಿಸುವ ಮೊದಲೇ ಈ ಸಂಗತಿಯನ್ನ ಮೂರ್ತಿರಾಯರ ಮಗನಿಗೆ ತಿಳಿದಿದ್ದ ನಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬರ ಮೂಲಕ ನಮ್ಮ ಸೆಕ್ಯೂರಿಟಿ ಇಲಾಖೆಗೆ ರವಾನಿಸಿದರು. ಈ ಸುದ್ದಿ ಬೆಳಿಗ್ಗೆ ನಮ್ಮನ್ನು ಕಾದು ಕೂತಿತ್ತು! ಹೀಗಾಗಿ ಮೂರ್ತಿರಾಯರು ಕಿಕ್ಕೇರಿ ಸಮಾರಂಭ ತಪ್ಪಿಸಿಕೊಂಡು ನಮ್ಮಲ್ಲಿಗೆ ದಯಮಾಡಿಸಿದರು. ನಮಗ ಖುಷಿ ನೀಡಿದ್ದು ಅವತ್ತು ಅವರು ಹಿಂದಿನ ಸಮಾರಂಭದಲ್ಲಿ ನಮ್ಮ ಸಂಸ್ಥೆಯನ್ನು ಮೆಚ್ಚಿದ್ದು, ಅಲ್ಲಿನ ಕನ್ನಡದ ಚಟುವಟಿಕೆಗಳ ಬಗ್ಗೆ ಬಾಯಿತುಂಬಾ ಹೊಗಳಿದ್ದು ಮತ್ತು ಅದರ ಅತ್ಯಂತ ಸರಳ ನಡವಳಿಕೆ! ಅವರ ಮನೇಲಿ ನಾವು ಕೇಳಿದ ಸಿಲ್ಲಿ ಪ್ರಶ್ನೆಗಳನ್ನು ನೆನೆಸಿಕೊಂಡರೆ ಈಗಲೂ ಸಹ ನಮಗೆ ಒಂದು ಥರಹಾ ನಾಚಿಕೆ ಆಗುತ್ತೆ!

ಈ ಪ್ರಕರಣದ ನಂತರ ಸುಮಾರು ಸಭೆ ಸಮಾರಂಭಗಳಲ್ಲಿ ಮೂರ್ತಿಯರಾರನ್ನು ಕಾಣುವ ಮತ್ತು ಅವರೊಡನೆ ಮಾತನಾಡುವ ಸೌಭಾಗ್ಯ ಒದಗಿದೆ. ವಯಸ್ಸಿನಲ್ಲಿ ಇವರು ಬಚ್ಚಾಗಳು ಎಂದು ಅವರೆಂದೂ ನಮ್ಮ ಬಗ್ಗೆ ತಲೆ ಕೆಡಿಸಿಕೊಳ್ಳದೇ ನಮ್ಮ ಐಲು ಪ್ರಶ್ನೆಗಳಿಗೆ ಉತ್ತರ ನೀಡಿದರು! ಪ್ರತಿ ಬಾರಿ ಅವರ ಸಂಗಡ ಮಾತು ಕಥೆಯಾಡಿದಾಗಲೂ ನನಗೆ ಎದ್ದು ಕಂಡಿದ್ದು ಅವರ ತೆರೆದ ಮನಸ್ಸು. ಅವರ ಸಾಹಿತ್ಯ ಮತ್ತು ಇತರ ಸಾಧನೆಗಳನ್ನು

ಕುರಿತು ಅಕಾಡೆಮಿಕ್ ಆಗಿ ಬಹಳ ಲೇಖನಗಳು ಬರುತ್ತವೆಯಾದರೂ ಇಂತಹ ಆತ್ಮೀಯ ನೆನಪುಗಳು ಕಡಿಮೆಯೇ ಎಂದು ನನ್ನ ಅನಿಸಿಕೆ.

ಹಾಸ್ಯ ಬ್ರಹ್ಮ ಗುಂಪಿನವರು ಲಲಿತ ಪ್ರಬಂಧ ಕುರಿತಾದ ಒಂದು ಕಮ್ಮಟವನ್ನು ಏರ್ಪಡಿಸಿದ್ದಾಗ ಮೂರ್ತಿರಾಯರ ಸಂಗಡ ಒಂದು ಸಂವಾದ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದ್ದೆವು. ಕನ್ನಡ ಭಾಷೆಯ ಪ್ರಬಂಧಗಳಿಗೆ ಲಲಿತ ಪ್ರಬಂಧಗಳು ಎಂದು ಆಗಲೇ ಯಾರೋ ಹೆಸರಿಸಿಯಾಗಿತ್ತು. ಈ ಹೆಸರು ಹೇಗೆ ಬಂತು ಎಂದು ಹಿರಿಯರೊಬ್ಬರ ಬಳಿ ವಿಚಾರಿಸಿದ್ದೆ. ನಮ್ಮ ಮೂರ್ತಿರಾಯರು ಪ್ರಬಂಧದ ಪಿತಾಮಹರು - ಕನ್ನಡ ಭಾಷೆಯಲ್ಲಿ - ಅವರ ಶ್ರೀಮತಿಯವರ ಹೆಸರು ಲಲಿತ ಅಂತ ಆದರಿಂದ ಪ್ರಬಂಧಕ್ಕೆ ಕನ್ನಡದಲ್ಲಿ ಈ ಹೆಸರು ಅಂತ ಉತ್ತರ ನೀಡಿದ್ದರು!

ನಾವು ಸಂವಾದ ಕಾರ್ಯಕ್ರಮ ನಡೆಸೊ ಹೊತ್ತಿಗೆ ಅವರ ಶ್ರೀಮತಿ ಹೆಸರು ಲಲಿತ ಅಲ್ಲ ಅಂತ ತಿಳಿದಿತ್ತು. ಮೂರ್ತಿರಾಯರಿಗೆ ಅದೇ ಪ್ರಶ್ನೆ ಅದೇ ಕನ್ನಡದಲ್ಲಿ ಪ್ರಬಂಧ ಪ್ರಾಕಾರಕ್ಕೆ ಅದ್ಯಾಕೆ ಲಲಿತ ಪ್ರಬಂಧ ಅಂತ ಹೇಳುತ್ತಾರೆ ಅಂಬೋ ಪ್ರಶ್ನೆ ಹಾಕಿದೆವು. ಪ್ರಬಂಧ ಸುಲಲಿತವಾಗಿ ಮತ್ತು ಓತಪ್ರೋತವಾಗಿ ಹರಿಯುವ ಲಕ್ಷಣಗಳನ್ನು ಹೊಂದಿರುವುದರಿಂದ ಹೀಗೆ ಹೇಳುವರೇನೋ ಎಂಬ ಉತ್ತರ ಬಂದಿತು!

ಮೂರ್ತಿರಾಯರ ಕಾಲದಲ್ಲಿ ಅವರ ಸರೀಕರೆಲ್ಲರೂ ಕಾವ್ಯ ಕೃಷಿ ನಡೆಸಿಯೇ ಹೆಸರು ಮಾಡಿದ್ದು. ಇವರೇಕೆ ಕಾವ್ಯ ಕೃಷಿ ನಡೆಸಲಿಲ್ಲ? ಉತ್ತರ ತುಂಬಾ ಸಲೀಸಾಗಿತ್ತು - ನನಗೆ ಕಾವ್ಯ ಬರೀಬೇಕು ಅಂತ ಆಗಲೂ ಅನಿಸಲೇ ಇಲ್ಲ ಈಗಲೂ ಅನಿಸುತ್ತಿಲ್ಲ!

ಬಹುಶಃ ಅವರ ತಲೆಮಾರಿನವರ ಪೈಕಿ ಕಾವ್ಯದ ಸೆಳೆತಕ್ಕೆ ಒಳಗಾಗದೇ ಉಳಿದವರಲ್ಲಿ ಮೂರ್ತಿರಾಯರದ್ದು ಮೊದಲ ಹೆಸರಿರಬೇಕು!

ಮೂರ್ತಿರಾಯರ ಹೆಸರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೀರ್ಘಕಾಲ ಉಳಿಯುವಂಥದ್ದು. ಅವರ ಸರಳ ಮತ್ತು ಸಜ್ಜನಿಕೆಗಳೂ ಸಹ ನೂರ್ಕಾಲ ಇರಬೇಕಾದದ್ದು! (ಆಗಸ್ಟ್ 23, 2003ರ ಶನಿವಾರ ರಾತ್ರಿ ಮೂರ್ತಿರಾಯರು ಇಹದ ವ್ಯಾಪಾರ ಮುಗಿಸಿದರು)

★★★

ರಾಧಾಬಾಯಿಯೂ ಅವಳ ನಾಯಿಯೂ



⊙ ಎಚ್. ಡುಂಡಿರಾಜ್

ಕ್ಯಾಟ್‌ವಾಕ್ ಮಾಡುತ ಬಂದಳು ನೋಡಿ
ನೆರೆಮನೆ ರಾಧಾಬಾಯಿ
ಆಕೆಯ ಹಿಂದೆ ಬಾಲವಾಡಿಸುತ
ಕ್ಯಾಟ್ ಅಲ್ಲಾರಿ ನಾಯಿ

ಮಿಸ್ಸೆಸ್ ಆದ್ರೂ ಮಿಸ್ಸಿನ ಹಾಗೆ
ಮಿಡುಕುವಳು ಮಾತಾಯಿ
ಆಂಟಿ ಅಂದ್ರೆ ಸಿಟ್ಟಾಗ್ತಾಳೆ
Ms. ರಾಧಾಬಾಯಿ!

ನೀಲಿ ಕಂಗಳು, ರೇಶ್ಮೆ ಕೂದಲು
ತುಟಿಯೊ ತೊಂಡೆ ಕಾಯಿ
ಆಂಟಿಗಿಂತಲೂ ಚಾರ್ಮಿಂಗ್ ಆಗಿದೆ
ಆಕೆ ಸಾಕಿರೊ ನಾಯಿ

ನಾಯಿ ಅನ್ಬಾರ್ದಂತೆ ನಾಯಿಗೆ
ಪಮ್ಮಿ ಡಾರ್ಲಿಂಗ್ ಅನ್ನಿ
ಆನೆಗಿಂತಲೂ ದುಬಾರಿಯಂತೆ
ಕುಂಯ್ ಕುಂಯ್ ಅನ್ನುವ ಕುನ್ನಿ

ಕೂತ್ಕೊಳ್ಳೋದು ಸೋಫಾ ಮೇಲೆ
ಮಲಗೋಕೆ ಟೀಪಾಯಿ
ಆಂಟಿಯ ಹಾಗೆ ನಾಯಿ ಕೂಡಾ
ಮುಚ್ಚೋದಿಲ್ಲ ಬಾಯಿ

ಹಗಲೂ ಇರುಳೂ ಕೂಗಾಡುತ್ತೆ
ಒಂದೇ ಸಮನೆ ನಾಯಿ
ರಾಧಾಬಾಯಿಗೆ ಬೇಜಾರಿಲ್ಲ
ಅವಳಿಗೆ ಅದು ಶಹನಾಯಿ!

ಇದ್ಕೆ ಲೀಸ್ಟ್ ಕೌಂಟೇ ಇಲ್ಲ ಸಾ!



⊙ ಎಚ್.ಎಲ್. ಕೇಶವಮೂರ್ತಿ

(ಪ್ರಾಯೋಗಿಕ ಪರೀಕ್ಷೆಗಳು ನಡೆಯುತ್ತಿರುವ ಕೊಠಡಿಯಲ್ಲಿ ಕೆಲವು ವಿದ್ಯಾರ್ಥಿಗಳು ತಮ್ಮ ತಮ್ಮ ಸ್ಥಳದಲ್ಲಿ ಕುಳಿತಿದ್ದಾರೆ. ಪರೀಕ್ಷಕ ಅವರ ಮುಂದೆ ಇನ್ನಿಲ್ಲದ ಠೀವಿಯಿಂದ ಶತಪಥ ಮಾಡುತ್ತಿದ್ದಾನೆ.)

ಪರೀಕ್ಷಕ: Half hour write procedure. More than half hour fail. under stand

(ಒಬ್ಬ ವಿದ್ಯಾರ್ಥಿಯ ಪ್ರವೇಶ)

ವಿದ್ಯಾರ್ಥಿ: ಗೆಟಿನ್ ಸಾ

ಪರೀಕ್ಷಕ: ವಾಟ್ ಟೈಂ?

ವಿದ್ಯಾರ್ಥಿ: ಸಾರಿಸಾ, ಲೇಟ್ ಸಾ

ಪರೀಕ್ಷಕ: ವೈ ಲೇಟ್?

ವಿದ್ಯಾರ್ಥಿ: ಕುಕರ್ ಸಾ

ಪರೀಕ್ಷಕ: ವಾಟ್ ಕುಕರ್?

ವಿದ್ಯಾರ್ಥಿ: ಹಾಸ್ಟಲ್ ಕುಕರ್ ಸಾ. ಆಬ್ಸೆಂಟ್, ನೋ ಮೀಲ್ಸ್

ಪರೀಕ್ಷಕ: ಹೂಂ ಬನ್ನಿ ಬನ್ನಿ. ಅರ್ಧ ಘಂಟೆ ಒಳಗೆ ಪ್ರೊಸೀಜರ್ ಬರೀಬೇಕು. ಬರೀ ಪ್ರೊಸೀಜರ್ ಬರೀರಿ, ಪುರಾಣ ಒದುರ್ತಾ ಕುಂತ್ಕೋಬೇಡಿ. ಗಣಪತಿ ಮಾಡು ಅಂದ್ರೆ ಅವರಪ್ಪನ್ನ ಮಾಡೋ ಜನ ನೀವು. ಗೊತ್ತಾಯ್ತ?

ವಿದ್ಯಾರ್ಥಿ: ಹೂ ಸಾ

ಪರೀಕ್ಷ: ನಿಂ ಹಾಲ್ ಟಿಕೀಟ್ ಕೊಡಿ

(ಹಾಲ್ ಟಿಕೆಟ್ ತೆಗೆದುಕೊಂಡು ಪರೀಕ್ಷಕ ತನ್ನ ಮೇಜಿನ ಬಳಿ ಹೋಗುತ್ತಾನೆ)

ವಿದ್ಯಾರ್ಥಿ: (ಪಕ್ಕದ ವಿದ್ಯಾರ್ಥಿ ಕುರಿತು) ಈ ಬಡ್ಡಿ ಐದ ಬಂದವ್ನೆ, ಇವತ್ತು ನಂ ಕತೆ ಮುಗ್ದಂಗೇಯ

ಪ.ವಿ: ನನ್ಮಗ ದುಡ್ಡೊಂದ್ರೆ ಸಾಯ್ತಾನೆ. ಹೇಲ್ನಲಿ ಮೂರ್ಕಾಸು ಬಿದ್ದಿದ್ರೂ ನಾಲ್ಗೆಲಿ ತಗಾಳ ಬಡ್ಡೆತ್ತುದ್ದು

ವಿದ್ಯಾರ್ಥಿ: ಈ ಪರೀಕ್ಷೆ ಮಾಡುದ್ರೆ ಯೂನಿವರ್ಸಿಟೋರು ಎಷ್ಟು ಕೊಡ್ತಾರೆ ಕೇಳ್ಬಿ್ರ ಅತ್ಲಾಗಿ ಬಿಸಾಕ್ಬುಡೂದು. ಮಲ್ಲಿ ತೆಪ್ಗ ಬಿದ್ಕಳ್ಳಿ.

ಪ.ವಿ.: ಬಡ್ಡಿ ಐದ ಚೋ ಸ್ಟ್ರಿಕ್ಟೂ ಅನ್ನಂಗಾಡ್ತಾನೆ. ದುಡ್ ತಗಂಡ್ ಪಾಸ್ ಮಾಡಾದ ಯಾರೂ ಕಾಣರೂ ಅಂತ ತಿಳ್ಕಂಡವ್ನೆ.

ವಿದ್ಯಾರ್ಥಿ: ಇನ್ನೊಬ್ಬೆಲ್ಲಿಯೋನು?

ಪ.ವಿ.: ಎಲ್ಲಿದ್ದೋ ಬಡ್ಡೆತ್ತುದು, ಅದೂ ಇವ್ನಂತದೆಯೋ ಏನೋ (ಇವರು ಮಾತನಾಡುತ್ತಿರುವುದು ಪರೀಕ್ಷಕನ ಗಮನಕ್ಕೆ ಬರುತ್ತದೆ)

ಪರೀಕ್ಷಕ: yes, you what taking?

ವಿದ್ಯಾರ್ಥಿ: ನತಿಂಗ್ ಸಾ

ಪರೀಕ್ಷಕ: Why sitting together? You husband and wife? Sit distance.

(ಈರ್ವರೂ ದೂರ ಸರಿಯುವಂತೆ ನಟಿಸುತ್ತಾರೆ)

Half hour finished. Give sheets

(ಉತ್ತರ ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಾನೆ)

Take tabular column. Do experiment

(ವಿದ್ಯಾರ್ಥಿಗಳು ತಾವು ಮಾಡಬೇಕಾಗಿದ್ದ ಪ್ರಯೋಗದ ಬಳಿ ತೆರಳುತ್ತಾರೆ. ಡೀಸಲ್ ಎಂಜಿನ್ನಿನ ಸ್ವಿಚ್ ಬೋರ್ಡ್ ಬಳಿ ನಿಂತಿದ್ದ ವಿದ್ಯಾರ್ಥಿ ಕುರಿತು)

You there, that big voltage, careful ಡೋಂಟ್ ಟಚ್ It touch you murdered. ಹುಂ do do.

(ಸಹ ಪರೀಕ್ಷಕನ ಪ್ರವೇಶ)

ಸಹ ಪರೀಕ್ಷಕ: ಸಾರಿ ಬಸ್ ಲೇಟಾಗೋಯ್ತು

ಪರೀಕ್ಷಕ: ಆಗ್ಲಿಬಿಡಿ, ಏನ್ ಗಂಟೋದದ್ದು. ನಾನೇ ಕೊಶ್ಚೆನ್ ಸೆಟ್ ಮಾಡಿ ಪ್ರೊಸೀಜರ್ ಬರ್ಸಿದೀನಿ

ಸಹ ಪರೀಕ್ಷಕ: Thank you

ಪರೀಕ್ಷಕ: ಇದೊಂದೇ ಬ್ಯಾಚೋ ಇನ್ನೂ ಇದ್ಯೊ?

ಸಹ ಪರೀಕ್ಷಕ: ಇದೊಂದೇನೆ. ಮೈಸೂರಿಗೆ ಬಸ್ ಎಷ್ಟು ಹೊತ್ತಿಗಿದೆ?

ಪರೀಕ್ಷಕ: ಬಸ್ಸಿಗೇನು ಬೇಕಾದಷ್ಟಿದೆ.

ಸಹ ಪರೀಕ್ಷಕ: ಮೈಸೂರಿನಿಂದ ಐದೂವರೆಗೆ ಲಾಸ್ಟ್ ಬಸ್ಸು, ಅಷ್ಟರಲ್ಲಿ ಅಲ್ಲಿರಬೇಕು. ಇಲ್ಲಿಂದ ನಾಲ್ಕು ಘಂಟೆಗಾದರೂ ಹೊರಡಬೇಕು. ಐದು ಘಂಟೆವರ್ಗೂ ಪರೀಕ್ಷೆ. ಇದೆಯಲ್ಲ ಏನ್ಮಾಡೋದು?

ಪರೀಕ್ಷಕ: ಅದಕ್ಯಾಕೆ ಯೋಚನೆ ಮಾಡ್ತೀರಿ? ನೀವು ಆನ್ಸರ್ ಬುಕ್‌ಗೆ ಮಾರ್ಕ್ಸ್ ಲಿಸ್ಟ್‌ಗೆ ಸೈನ್ ಹಾಕಿ ಹೋಗ್ಬಿಡಿ. ನಾನೆಲ್ಲ ಮಾಡ್ಕೊತೀನಿ.

ಸಹ ಪರೀಕ್ಷಕ: ಹಂಗಾದ್ರೆ ವೈವಾ ಮುಗಿಸಿಬಿಡ್ಲಿ?

ಪರೀಕ್ಷಕ: ಹೂಂ

ಸಹ ಪರೀಕ್ಷಕ: (ಅಡ್ಮಿಷನ್ ಟಿಕೆಟ್ ನೋಡುತ್ತ)

ಟ್ವೆಂಟಿಸಿಕ್ಸ್ ನೈಂಟಿಟೂ

(ವಿದ್ಯಾರ್ಥಿ ಬರುತ್ತಾನೆ)

Take your seat

(ಆತ ಕುಳಿತ ಬಳಿಕ)

What experiment you are conducting?

ವಿದ್ಯಾರ್ಥಿ: ಇಂಜಿನ್ಸಾ

ಸಹ ಪರೀಕ್ಷಕ: Fuel consumption ಅಂತ ಕೇಳಿದಿರಾ?

ವಿದ್ಯಾರ್ಥಿ: ಹೂ ಸಾ

ಸಹ ಪರೀಕ್ಷಕ: Specific fuel consumption?

ವಿದ್ಯಾರ್ಥಿ: ಕೇಳಿದೀನಿ ಸಾ

ಸಹ ಪರೀಕ್ಷಕ: ಅವೆರಡಕ್ಕೂ ಏನು ವ್ಯತ್ಯಾಸ?

ವಿದ್ಯಾರ್ಥಿ: Fuel consumption ಅಂದ್ರೆ ಎಂಜಿನ್ನು ಎಷ್ಟು Fuel ಕುಡೀತು ಅಂತಾವ ಸಾ

ಸಹ ಪರೀಕ್ಷಕ: Specific fuel consumption ಅಂದ್ರೆ?

ವಿದ್ಯಾರ್ಥಿ: ಅದೂ ಅದೇಯ ಸಾ

ಸಹ ಪರೀಕ್ಷಕ: ಇವೆರಡಕ್ಕೂ ವ್ಯಾತ್ಯಾಸ ಇಲ್ವೆ?

ವಿದ್ಯಾರ್ಥಿ: ಇಲ್ದೆ ಏನ್ಸಾ ಐತಿ. ordinary purpose ಗೆ ಎಂಜಿನ್ ರನ್ ಮಾಡ್ದಾಗ ಅದು ಕುಡಿಯೋ fuel ಗೆ Fuel consumption ಅಂತೀವಿ. Specific purpose ಗೆ ಅದ ರನ್ ಮಾಡ್ದಾಗ ಅದು ಕುಡಿಯೋ fuel ಗೆ specific fuel consumption ಅಂತೀವಿ.

ಸಹ ಪರೀಕ್ಷಕ: Good, very good. you are quite interesting fast and loose pulley ಅಂದ್ರೇನು?

ವಿದ್ಯಾರ್ಥಿ: Fast pulley ಅಂದ್ರೆ ಜರ್‌ರ್‌ರ್ ಅಂತ ಜೋರಾಗಿ ಓಡೋದು Loose pulley ಅಂದ್ರೆ ಲಡ್ಕ ಬಡ್ಕ, ಲಡ್ಡ ಬಡ್ಡ ಅಂತ ಓಡೋದು ಸಾ.

ಸಹ ಪರೀಕ್ಷಕ: ಸರಿಯಪ್ಪ Send the next man

(ಈ ವಿದ್ಯಾರ್ಥಿ ಹೋದ ನಂತರ ಮತ್ತೊಬ್ಬ ಬರುತ್ತಾನೆ)

ಯಾವ ಸಬ್ಜೆಕ್ಟ್ ಚೆನ್ನಾಗಿ ಓದಿದ್ದೀರಿ?

ವಿದ್ಯಾರ್ಥಿ: ಎಲ್ಲಾ ಒಸೂಸಿ ಓದಿವ್ನಿ ಸಾ

ಸಹ ಪರೀಕ್ಷಕ: BHP ಅಂತ ಯಾಕ್ರಿ ಕರೀತಾರೆ ಈ ಹಾರ್ಸ್ ಪವರ್‍ನ?

ವಿದ್ಯಾರ್ಥಿ: ಅದ ಬ್ರೇಕ್ ಹಾಕಕ್ಕೆ ಉಪಯೋಗಿಸ್ತಾರೆ ಸಾ ಅದ್ಕೆ.

ಸಹ ಪರೀಕ್ಷಕ: (ನಿಟ್ಟುಸಿರು ಬಿಡುತ್ತಾ) ಹೂಂ. Fluid mechanics ನಲ್ಲಿ Friction in pipes experiment ಮಾಡಿರಬೇಕಲ್ವ?

ವಿದ್ಯಾರ್ಥಿ: ಮಾಡಿವ್ನಿ ಸಾ

ಸಹ ಪರೀಕ್ಷಕ: ಪೈಪಲಿ ಫ್ರಿಕ್ಷನ್ ಇದೆ ಅಂತ ಹೇಗೇಳ್ತೀರ?

ವಿದ್ಯಾರ್ಥಿ: ಪೈಪ್ ಒಳೀಕೆ ಕೈ ತುರುಕೋದು. ಕೈ ತುರುಚ್ಕಂಡ್ರೆ ಫ್ರಿಕ್ಷನ್ ಐತಿ ಅಂತಾವ, ಇಲ್ದಿದ್ರೆ ಇಲ್ಲ ಅಂತಾವ ಸಾ

ಸಹ ಪರೀಕ್ಷಕ: ಹೋಗ್ಲಿರೀ ಎಂಜಿನ್ನಿನ ಮೇಲೇ ಪ್ರಶ್ನೆ ಕೇಳ್ತೀನಿ. Governor ಯಾಕೆ ಉಪಯೋಗಿಸ್ತಾರೆ?

ವಿದ್ಯಾರ್ಥಿ: ಸ್ಪೀಡ್ ಕಂಟ್ರೋಲ್ ಮಾಡಕೆ ಸಾ

ಸಹ ಪರೀಕ್ಷಕ: ಸರಿ, Fly wheel ಉ?

ವಿದ್ಯಾರ್ಥಿ: ಅದ್ಕೂ ಅದ್ಕೇಯ ಸಾ.

ಸಹ ಪರೀಕ್ಷಕ: ಎಂಜಿನ್ನಿನಲ್ಲಿ ಎರಡನ್ನೂ ಯಾಕಿಟ್ಟಿದಾರೆ ಹಾಗಾದ್ರೆ?

ವಿದ್ಯಾರ್ಥಿ: ಒಂದು ಕೈ ಕೊಟ್ಟರೆ ಇನ್ನೊಂದಿರ್ಲಿ ಅಂತಾವ ಸಾ

ಸಹ ಪರೀಕ್ಷಕ: ಹಾಳಾಗ್ಲಿರಿ. ಒಂದು ಸಿಂಪಲ್ ಕೊಶ್ಚನ್ ಕೇಳ್ತೀನಿ. ಅದಕ್ಕಾದ್ರೂ ಉತ್ತರ ಹೇಳ್ರಿ.

(ಮೇಜಿನ ಮೇಲಿದ್ದ ಸ್ಟೀಲ್‌ರೂಲ್ ತೋರಿಸಿ)

ಇದೇನ್ರಿ ಇದು?

ವಿದ್ಯಾರ್ಥಿ: ಸ್ಕೇಲು ಸಾ

ಸಹ ಪರೀಕ್ಷಕ: ಇದರ Least count ಎಷ್ಟ್ರಿ?

ವಿದ್ಯಾರ್ಥಿ: Least count equals one over....

ಸಹ ಪರೀಕ್ಷಕ: Formula ಬೇಡರಿ. ಇದರ ಲೀಸ್ಟ್ ಕೌಂಟ್ ನಾನು ಕೇಳಿದ್ದು.

ವಿದ್ಯಾರ್ಥಿ: ಇದ್ದು ಸಾ...

(ಸ್ಟೀಲ್ ರೂಲ್ ಅನ್ನು ತಿರುಗಿಸಿ ಮುರುಗಿಸಿ ನೋಡಿ)

ಇದ್ಕೆ ಲೀಸ್ಟ್ ಕೌಂಟೇ ಇಲ್ಲ ಸಾ

ಸಹ ಪರೀಕ್ಷಕ: ಹೋಗ್ರಿ, ಬೇರೆಯವರನ್ನ ಕಳ್ಸಿ

(ವಿದ್ಯಾರ್ಥಿ ಹೋಗಿ ಶಿಸ್ತುಗಾರ ಪುಟ್ಟಸ್ವಾಮಿಯಂತಹ ಹುಡುಗ ಹಾಜರು)

Take your seat. what is your number?

ವಿದ್ಯಾರ್ಥಿ: Twenty forty five ಸಾ

ಸಹ ಪರೀಕ್ಷಕ: ಹುಂ, ನೀಟಾಗಿ ಡ್ರೆಸ್ ಮಾಡಿಕೊಂಡಿದ್ದೀರಿ. what is local attraction?

(ಶಿಸ್ತುಗಾರನ ಮುಖದ ಮೇಲೆ ನಾಚಿಕೆ)

ಯಾಕ್ರಿ, ಗೊತ್ತಿಲ್ವ?

ವಿದ್ಯಾರ್ಥಿ: ಗೊತ್ತು ಸಾ

ಸಹ ಪರೀಕ್ಷಕ: ಮತ್ತೆ ನಾಚಿಕೆ ಯಾಕೆ? ಹೇಳಿ ಪರವಾಗಿಲ್ಲ

ವಿದ್ಯಾರ್ಥಿ: ಹುಡ್ಗೀರು ಸಾ

ಸಹ ಪರೀಕ್ಷ: ಭೇಷ್. ಈ ಎಂಜಿನ್ನಿದೆಯಲ್ಲ ಇದ್ರಲ್ಲಿಲ್ಲ Inlet ಯಾವ್ದು, Outlet ಯಾವ್ದು ಅಂತ ಹೆಂಗೇಳ್ತೀರ?

ವಿದ್ಯಾರ್ಥಿ: ಬಣ್ಣ ನೋಡಿ ಸಾ

ಸಹ ಪರೀಕ್ಷಕ: ಏನ್ರಿ ಹಾಗಂದ್ರೆ?

ವಿದ್ಯಾರ್ಥಿ: ಅದೇ ಸಾ ಬಣ್ಣ ನೋಡಿ ಅಂದೆ. ಕಪ್ಪಗೆ ಮಸಿಯಾಗಿರಾದು ಔಟ್‌ಲೆಟ್ಟು, ಆಗ್ದೆ ಇರಾದು ಇನ್ಲೆಟ್ಟು

ಸಹ ಪರೀಕ್ಷಕ: ಹೂಂ ಸರಿ... ನೀವು ಹೋಗಿ


ಪರೀಕ್ಷಕ: ಹೆಂಗೆ ನಮ್ಮ ಹುಡುಗ್ರು?

ಸಹ ಪರೀಕ್ಷಕ: ಎಲ್ಲಾ ಇದೇ standardಉ ಏನ್ಮಾಡ್ಲಿ?

ಪರೀಕ್ಷಕ: ಪಾಸ್ ಮಾಡಿ, ಫೇಲ್ ಮಾಡಿ ನಾವ್ಯಾಕೆ ಉಗಿಸಿಕೋಬೇಕು

ಸಹ ಪರೀಕ್ಷಕ: ಇಂಥೋರ್ನೆಲ್ಲ ಪಾಸ್ ಮಾಡ್ಬೋದೆ?

ಪರೀಕ್ಷಕ: ದಯವಿಟ್ಟು ಮಾಡ್ಬಿಸ್ವಾಮಿ. ನಿಮ್ಗೇನೋ ಪರ್ವಾಗಿಲ್ಲ, ಪರೀಕ್ಷೆ ಮುಗಿಸಿಕೊಂಡು ಹೊರಟು ಹೋಗ್ತೀರಿ. ನಾನು ಇಲ್ಲೇ ಇರಬೇಕಾದೋನು. ಮರ್ಯಾದೇಲಿ ಬೀದೀಲಿ ಓಡಾಡೋ ಹಂಗಿಲ್ಲ. ಹೋದ್ಸಲ ಫೇಲ್ಮಾಡಿ ಅನುಭವಿಸಿದ್ದೀನಿ. ಫೇಲಾಗೋನು ಹೆಂಗಿದ್ರೂ ಥಿಯರೀಲಿ ಗೋತಾ ಹೊಡ್ದೇ ಹೊಡೀತಾನೆ. ತಳ್ಬಿಡಿ ಸುಮ್ನೆ, ಗುಂಪ್ನಲ್ಲಿ ಗೋವಿಂದ.



ಚಂದಾದಾರರಲ್ಲಿ ಒಂದು ಮನವಿ

ಕಳೆದ ಒಂದು ದಶಕದಿಂದ ಅಪರಂಜಿಯ ಚಂದಾದರಗಳನ್ನು ಬದಲಿಸದೇ ಸಂಚಿಕೆಯನ್ನು ನಡೆಸಿಕೊಂಡು ಬಂದಿದ್ದೇವೆ. ಹಾಸ್ಯೋತ್ಸವದ ಸಮಯದಲ್ಲಿ ಬಿಡುಗಡೆಯಾಗುವ 144 ಪುಟಗಳ ವಿಶೇಷ ಸಂಚಿಕೆಯನ್ನೂ ಸಹ ಚಂದಾದಾರರಿಗೆ ಉಚಿತವಾಗಿ ಕೊಡುತ್ತಾ ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿ. ಕಾಗದ ಹಾಗೂ ಮುದ್ರಣ ವೆಚ್ಚ ಈ ಕಳೆದ ದಶಕದಲ್ಲಿ ಮೂರು ಪಟ್ಟು ಹೆಚ್ಚಿದೆ. ಹಾಗಾಗಿ ವಾರ್ಷಿಕ ಮತ್ತು ಹತ್ತು ವರುಷಗಳ ಚಂದಾದರಗಳನ್ನು ಏರಿಸಬೇಕಾದ್ದು ಅನಿವಾರ್ಯವಾಗಿದೆ. ಎಲ್ಲ ಅಭಿಮಾನಿಗಳೂ ಈ ನಿಟ್ಟಿನಲ್ಲಿ ನಮ್ಮೊಂದಿಗೆ ಸಹಕರಿಸುವರೆಂಬ ನಂಬಿಕೆ ನಮ್ಮದು.

ಇಂದಿನಿಂದ ನಮ್ಮ ಚಂದಾ ದರಗಳು ಇಂತಿವೆ.

ವಾರ್ಷಿಕ ಚಂದಾ: ರೂ. 100/-

(ಜನವರಿ ತಿಂಗಳ ವಿಶೇಷ ಷಂಚಿಕೆ ಸೇರಿ)

ಹತ್ತು ವರುಷದ ಚಂದಾ: ರೂ. 750/-

ತಮ್ಮ ವಿಶ್ವಾಸಿ

ಶಿವಕುಮಾರ್

(ಸಂಪಾದಕ)



ತಾರೆಗಳು ಆಳುತ್ತಿರುವಲ್ಲಿ

⊙ ಬಾಗೂರು ಚಂದ್ರು

ನಮ್ಮ ಮನೆಗೆ ಪ್ರತಿದಿನ ಬೆಳಿಗ್ಗೆ ಬರುವುದು ಈಚೆಗೆ ತನ್ನ 125ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಇಂಗ್ಲೀಷ್ ದಿನಪತ್ರಿಕೆ. ಇದರಲ್ಲಿನ ಐವತ್ತು ವರ್ಷಗಳ ಹಿಂದೆ ಇಂದಿನ ತಾರೀಖಿನಂದು ಎನ್ನುವ ಅಂಕಣ ಈಚೀಚೆಗೆ ನನ್ನ ಫೇವರಿಟ್ ಕಾಲಂ ಆಗುತ್ತಿದೆ. ಉಗ್ರವಾದಿಗಳ ಅತ್ಯುಗ್ರ ದಾಳಿ, ದರೋಡೆಕಾರರಿಂದ ಹಿರಿಯ ದಂಪತಿಗಳ ಭೀಕರ ಕೊಲೆ, ಪೋಲೀಸರಿಂದ ಗುಂಡು, ರೈತರ ಆತ್ಮಹತ್ಯೆ, ಭಾರತಕ್ಕೆ ಸೋಲು, ನಾಳೆ ನೀರಿಲ್ಲ, ಇವತ್ತು ಕರೆಂಟಿಲ್ಲ ಎನ್ನುವ ಅನಿಷ್ಟದ ಸುದ್ದಿಗಳೇ ಪತ್ರಿಕೆ ತುಂಬಿರುವ ದಿನಗಳಂದು (ಅಂದರೆ ವಾರಕ್ಕೆ ಕೇವಲ ಏಳು ದಿನ) ಕೆಲವು ಕ್ಷಣಗಳಾದರೂ ಐವತ್ತು ವರ್ಷಗಳ ಹಿಂದಿನ ಬದುಕಿಗೆ ಪಲಾಯನ ಮಾಡಲು ಈ ಅಂಕಣ ಓದುತ್ತೇನೆ.

ಐವತ್ತು ವರ್ಷಗಳ ಹಿಂದೆ ಅಂದರೆ ಆಗ ಮದ್ರಾಸ್ ನಗರ ಇನ್ನೂ ಚೆನ್ನೈ ಆಗಿರಲಿಲ್ಲ. ಮದ್ರಾಸ್ ರಾಜ್ಯ ತಮಿಳುನಾಡೂ ಆಗಿರಲಿಲ್ಲ. ಆಗ ಎಂಜಿಆರ್ ಮಲ್ಲೈಕಳ್ಳನ್ ಷೂಟಿಂಗ್‌ನಲ್ಲಿ, ಕಲೈಂಗರ್ ಇನ್ನು ಯಾವುದೋ ಸಿನಿಮಾದ ಡೈಲಾಗ್ ಬರೆಯುವದರಲ್ಲಿ ಬ್ಯುಸಿ ಆಗಿರಬೇಕು. ಪುರಟ್ಚಿ ತಲೈವಿ ಇವರೆಲ್ಲರಿಂದ ದೂರ ಎಲ್‌ಕೆಜಿಯಲ್ಲಿ ಪುಟ್ಟ ಜಡೆಯಲ್ಲಿ ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಹೇಳುವ ಹುಡುಗಿಯಾಗಿದ್ದರೂ ಆಗಲೇ ತನ್ನ ತರತರಹದ tantrumಗಳಿಂದ - ತಾನು ಹೇಳಿದ್ದೇ ಆಗಬೇಕು ಎನ್ನುವ ಜಗಮೊಂಡತನದಿಂದ ಅಲ್ಲಿನ ಮೇಡಂಗಳನ್ನು ನಡುಗಿಸುತ್ತಿರಬೇಕು. ಒಟ್ಟಿನಲ್ಲಿ ಅದು ಸಿನಿಮಾ ತಾರೆಗಳು ಆಡಳಿತದಿಂದ ದೂರವಿದ್ದು ಜನ ನೆಮ್ಮದಿಯಿಂದಿದ್ದ ದಿನಗಳು.

ಸಿನಿಮಾ ತಾರೆಯರು ದೇಶವನ್ನು ಆಳುತ್ತಿರಲಿಲ್ಲ. ಆದರೆ ಆಗ ಇನ್ನೊಂದು ರೀತಿಯ ತಾರೆಗಳು ಜನರನ್ನು ನಿಯಂತ್ರಿಸುತ್ತಿದ್ದವು ಎನ್ನುವುದು ಮೊನ್ನಿನ ಪೇಪರ್‌ನಲ್ಲಿ ಈ ಕಾಲಂ ಓದುತ್ತಿದ್ದಾಗ ತಿಳಿಯಿತು. ಐವತ್ತು ವರ್ಷಗಳ ಹಿಂದಿನ ಅಂದಿನ ಪತ್ರಿಕೆಯ ಸಂಪಾದಕೀಯ ವಿಷಯ - ಶೂಲಂ ದೋಷ ನಿಯಮ. ಕಾಂತಿ ಎಂದು ಬರೆದು ಗಾಂಧಿ ಎಂದು ಓದುವ ಭಾಷೆಯ ಪದ ಶೂಲಂ. ನಾನು ಬರೆದಿರುವ ಕಾಗುಣಿತ ಚೂರು ತಪ್ಪಿರಬಹುದು. ನಿಮಗೆ ಗೊತ್ತಿದ್ದರೆ ನೀವೇ ಸರಿ ಮಾಡಿಕೊಳ್ಳಿ. ವಿಷಯದ ಹಿನ್ನೆಲೆ ಹೀಗಿದೆ: ಗುರುವಾರ ಮಧ್ಯಾಹ್ನ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಕೂಡದು ಎನ್ನುವುದು ಒಂದು ಷೂಲಂ ದೋಷ ನಿಯಮವಂತೆ. ಮದ್ರಾಸ್‌ನ ಒಂದು ಪ್ರಮುಖ ರೈಲ್ವೇ

ನಿಲ್ದಾಣ - ಎಗ್ಮೋರಿನಿಂದ ಹೊರಡುವ ಎಲ್ಲಾ ರೈಲುಗಳು ದಕ್ಷಿಣದತ್ತಲೇ ಹೋಗಬೇಕು. ಶೂಲಂ ದೋಷದಿಂದಾಗಿ ಪ್ರಯಾಣಿಕರಿಲ್ಲದೆ ಗುರುವಾಗ ಮಧ್ಯಾಹ್ನ ಇಲ್ಲಿಂದ ಹೊರಡುವ ಎಲ್ಲಾ ರೈಲುಗಳೂ ಖಾಲಿ ಹೋಗುತ್ತವಂತೆ. ಇದರಿಂದ ಈ ಸ್ಟೇಷನ್‌ನಲ್ಲಿನ ಟಿಕೆಟ್ ಮಾಡುವವರಿಂದ ಹಿಡಿದು ಸಾಮಾನು ಹೊರುವವರಿಗೂ ಎಲ್ಲರೂ ನೊಣ ಹೊಡೆಯುತ್ತ ಕುಳಿತಿರಬೇಕಾಗುತ್ತದಂತೆ. ಇವರೆಲ್ಲರಿಗೂ ಸಾಕಾಗುವಷ್ಟು ನೊಣಗಳನ್ನು ಒದಗಿಸುವುದು ದಕ್ಷಿಣ ರೈಲ್ವೆಗೆ ಸಮಸ್ಯೆಯಾಗಿಲ್ಲ. ಆದರೆ ಇಂತಹ ದಿನಗಳಲ್ಲಿ ಕಲೆಕ್ಷನ್ ಕಡಿಮೆಯಾಗಿ ಇಲಾಖೆಗೆ ನಷ್ಟವಾಗುತ್ತಿರುವುದನ್ನು ತಪ್ಪಿಸಲು ಇಲಾಖೆ ಜನರ ಸಲಹೆ ಸಹಕಾರ ಬಯಸಿತ್ತಂತೆ.

ಈ ಪತ್ರಿಕೆಯಲ್ಲಿರುವ ಬುದ್ಧಿವಂತ ಜನ ಅಂದಿನ ಸಂಪಾದಕೀಯದಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸಿದ್ದಾರೆ. ರೈಲು ದಕ್ಷಿಣ ದಿಕ್ಕಿಗೆ ಹೊರಟಿದ್ದರೂ ಅದು ಬಾಣದಂತೆ ನೇರವಾಗಿ ದಕ್ಷಿಣಕ್ಕೆ ಹೋಗುವುದಿಲ್ಲ - ಒಂದು ಕಡೆ ಚೂರು ಪಶ್ಚಿಮಕ್ಕೆ ಇನ್ನೊಂದು ಕಡೆ ಪೂರ್ವಕ್ಕೆ ತಿರುಗುತ್ತಲೇ ಇರುತ್ತದೆ. ನೇರವಾಗಿ ಹೋಗುವುದಿಲ್ಲವಾದ್ದರಿಂದ ರೈಲು ಪ್ರಯಾಣಕ್ಕೆ ಶೂಲಂ ದೋಷ ಅನ್ವಯಿಸುವುದಿಲ್ಲ ಎನ್ನುವುದನ್ನು ಇಲಾಖೆ ಜನರಿಗೆ ಮನದಟ್ಟು ಮಾಡಿಕೊಡಬೇಕು ಎನ್ನುವುದೇ ಸಂಪಾದಕರು ಕೊಟ್ಟಿರುವ ಅಮೂಲ್ಯ ಸಲಹೆ.

ಸಂಪಾದಕರ ಈ ಪರಿಹಾರದ ಬಗೆಗೆ ನನ್ನದೇನು ತಕರಾರಿಲ್ಲ. ಆದರೆ ಅವರು ರೈಲು ಮಾತ್ರ ಬಾಣದಂತೆ ನೇರವಾಗಿ ಹೋಗುವುದಿಲ್ಲ ಎಂದು ಯಾಕೆ ಹೇಳಿದರೋ ನನಗೆ ಗೊತ್ತಾಗುತ್ತಿಲ್ಲ. ಎಲ್ಲಾ ಪ್ರಯಾಣವೂ ಇದೇ ರೀತಿಯದಲ್ಲವೇ? ಉದಾಹರಣೆಗೆ ನಮ್ಮಜ್ಜಿಯನ್ನು ತೆಗೆದುಕೊಳ್ಳಿ. ಅವರು ಪ್ರತಿ ಸಂಜೆ ನಮ್ಮನೆಯಿಂದ ದಕ್ಷಿಣದಲ್ಲಿ ನೂರು ಮೀಟರ್ ದೂರವಿರುವ ದೇವಸ್ಥಾನಕ್ಕೆ ಎಂದು ಹೊರಡುತ್ತಾರೆ. ಮನೆಯಿಂದ ಹೊರಬಂದಾಗ ಅವರಿಗೆ ಪೂರ್ವದಲ್ಲಿನ ಆರನೆಯ ಮನೆಯ ಮುಂದೆ ನರಸಮ್ಮನವರು ಕಾಣಿಸುತ್ತಾರೆ. ಅವರ ಯೋಗಕ್ಷೇಮ ವಿಚಾರಿಸುವುದರಲ್ಲಿ ಅಲ್ಲಿಂದ ಉತ್ತರ ದಿಕ್ಕಿನ ಮನೆಯಲ್ಲಿ ಇನ್ನೊಬ್ಬರು ಕಾಣಿಸುತ್ತಾರೆ. ಅವರೊಡನೆ ಮಾತು ಮುಗಿಸುವುದರಲ್ಲಿ ಗುಡಿಯಿಂದ ರಾತ್ರಿ ಬರುವಾಗ ಚಳಿಯಾಗಿ ಶಾಲು ಬೇಕಾಗಬಹುದು ಎನ್ನುವುದು ಜ್ಞಾಪಕಕ್ಕೆ ಬಂದು ಮನೆಗೆ ವಾಪಸ್ ಬರುತ್ತಾರೆ. ಮನೆಯಿಂದ ಮತ್ತೆ ಹೊರಟಾಗ ಬೇರೆ ಯಾರಾದರೂ ಕಾಣಿಸುತ್ತಾರೆ. ಹೀಗೆ ದಕ್ಷಿಣ ದಿಕ್ಕಿನ ನೂರು ಮೀಟರ್ ಪ್ರಯಾಣ ನಾಲ್ಕೂ ದಿಕ್ಕುಗಳ ಅರ್ಧ ಕಿಲೋಮೀಟರ್ ಆಗಿರುತ್ತದೆ. ಅಷ್ಟೇಕೆ as the crow flies ಎನ್ನುವ ಆ ಕಾಗೆ ಇಲ್ಲಿಯ ಅನ್ನದಗಳು ಅಲ್ಲಿಯ ಸತ್ತ ಇಲಿ ಮಧ್ಯೆ ಇನ್ನೊಂದು ಜೀವಂತ ಹುಳು ಹುಡುಕದೇ, ಹೊಟ್ಟೆ ತುಂಬಿದ ಮೇಲೆ ದಾರಿಯಲ್ಲಿ ಸಿಕ್ಕ opposite sexನ

ಇನ್ನೊಂದು ಕಾಗೆಯತ್ತ ಕಣ್ಣು ಹೊಡೆಯದೇ ನೇರವಾಗಿ ಹೋದದ್ದನ್ನು ನೀವೆಂದಾದರೂ ನೋಡಿದ್ದೀರಾ?

ಕ್ಷಮಿಸಿ. ನಾನೂ ನಮ್ಮಜ್ಜಿಯ ಹಾಗೆ ಎಲ್ಲಿಗೋ ಹೊರಟು ಇನ್ನೆಲ್ಲಿಗೋ ಹೋಗುತ್ತಿದ್ದೇನೆ. ಮದ್ರಾಸ್ ನಗರ ಶೂಲಂ ದೋಷದ ಸಮಸ್ಯೆ ಎದುರಿಸುತ್ತಿದ್ದಾಗ ನಾನು ಅಲ್ಲಿರಲಿಲ್ಲ. ಆದರೆ ಈ ಸಂಪಾದಕೀಯ ಇಪ್ಪತ್ತೈದು ವರ್ಷಗಳ ನಂತರ ನಾನೂ ಮದ್ರಾಸು ನಗರದ ನಿವಾಸಿಯಾಗಬೇಕಾಯಿತು. ಅಷ್ಟರಲ್ಲಿ ಅಣ್ಣ ಅವರ ನಂತರ ಕಲೈಂಗಾರ್ ಅಧಿಕಾರ ಮುಗಿದು ಮಕ್ಕಳ್ ತಿಲಕಂ ಆಡಳಿತ ನಡೆದಿತ್ತು. ಪುರಟ್ಚಿ ತಲೈವಿ ಇನ್ನೂ ಪುರಟ್ಚಿ ಸೆಲ್ವಿಯಾಗಿ ಮಧ್ಯಾಹ್ನದ ಊಟದ ಉಸ್ತುವಾರಿ ನೋಡುಕೊಳ್ಳುತ್ತಿದ್ದರು. ಕಾವೇರಿಯಲ್ಲಿ ಕನ್ನಂಬಾಡಿಯಿಂದ ಮೆಟ್ಟೂರಿಗೆ ಸಾಕಷ್ಟು ನೀರು ಹರಿದಿರಬೇಕು. ಆದರೆ ಮದ್ರಾಸ್ ನಗರದಲ್ಲೇ ಇರುವ ಅಡ್ಯಾರ್ ನದಿಯಲ್ಲಿ ಹೆಚ್ಚು ನೀರು ಹರಿದಿದ್ದಂತೆ ಕಾಣಲಿಲ್ಲ.


ಎಗ್ಮೋರ್ ರೈಲು ನಿಲ್ದಾಣದ ಗುರುವಾರದ ಶೂಲಂ ದೋಷದ ಸಮಸ್ಯೆಯ ವಿಷಯ ಆಗ ನನಗೆ ಗೊತ್ತಿರಲಿಲ್ಲ. ಆ ನಿಲ್ದಾಣಕ್ಕೆ ಖುದ್ದು ಹೋಗಿ ಇಪ್ಪತ್ತೈದು ವರ್ಷಗಳಲ್ಲಿ ಏನಾದರೂ ಬದಲಾಗಿದೆಯೇ ನೋಡಲಿಲ್ಲ. ಆದರೆ ನಾನು ಕೆಲಸ ಮಾಡಬೇಕಾಗಿದ್ದ ವಿಭಾಗದ ಜನರು ಕೆಲವು ವಿಷಯಗಳಲ್ಲಿ ನನ್ನೊಂದಿಗೆ ಬೆಂಗಳೂರಿನಲ್ಲಿದ್ದವರಿಗಿಂತ ಭಿನ್ನ ಎನ್ನುವುದು ಬೇಗ ತಿಳಿಯಿತು. ವಿಭಾಗದ ಒಬ್ಬ ಸಹಾಯಕ ಶಿವಸುಬ್ರಮಣ್ಯಂ ವಿಭೂತಿ ಕುಂಕುಮ ಧರಿಸಿ ದಟ್ಟಿ ಪಂಚೆಯುಟ್ಟು ಬರುತ್ತಿದ್ದ. ಸ್ಟಾಟಿಸ್ಟಿಕಲ್ ಅಸಿಸ್ಟೆಂಟ್ ರಾಜಲಕ್ಷ್ಮಿ ಹತ್ತಾರು ಪುಟಗಳನ್ನು ತುಂಬಿಸುವ ಗುಣಾಕಾರ ಭಾಗಾಕಾರ ಮಾಡಿದ್ದರೂ ಪ್ರತಿ ಪುಟದ ಮೇಲೂ ಪುಳ್ಳೆಯಾರ್ ಶುಲಿ (ಗಣಪತಿ ಚಿಹ್ನೆ) ಬರೆಯುವುದನ್ನು ಮರೆಯುತ್ತಿರಲಿಲ್ಲ. ಇವುಗಳಿಂದ ಅಷ್ಟೇನೂ ಆಶ್ಚರ್ಯವಾಗಲಿಲ್ಲ. ಪಳನಿ ವಿಭೂತಿಯ ಘಮಘಮದೊಂದಿಗೆ ಆಫೀಸಿಗೆ ಬರುತ್ತಿದ್ದ ಮುರುಗನ್ ಪ್ರತಿ ಅಮಾವಾಸ್ಯೆ ಮಧ್ಯಾಹ್ನ ಮನೆಗೆ ಬಾಳೆ ಎಲೆ ಮೇಲೆ ವೆಜಿಟೇರಿಯನ್ ವಡೆ ಪಾಯಿಸದ ಊಟ ಮಾಡಿ ಬರಲು ಹೋಗಲು ಪರ್ಮಿಷನ್ ಕೇಳಿದಾಗ ಚೂರು ಹುಬ್ಬು ಏರಿಸುವ ಹಾಗಾಯಿತು.

ಮುಂದೆ ಗೊತ್ತಾಯಿತು. ಇಂತಹ ನಂಬಿಕೆ ಆಚರಣೆಗಳು ಶಿವಸುಬ್ರಮಣ್ಯಂಗಳಿಂದ ಪಿಚ್ಚಾಂಡಿ ಮುರುಗನ್‌ಗಳಿಗೆ, ರಾಜಲಕ್ಷ್ಮಿಯರಿಂದ ಪುಂಕೊದೈಗಿಗೆ ತಲುಪಿದ್ದವು. ಅಷ್ಟೇ ಅಲ್ಲ ಇವುಗಳು ಜಾತ್ಯತೀತ ಸಹ ಆಗಿದ್ದವು. ಯಾವ ದಿನ ಎಷ್ಟು ಹೊತ್ತಿಗೆ ರಾಹುಕಾಲ ಎಂದು ತಿಳಿಸುವ ಫಾರ್ಮುಲಾ Mother saw father wearing a turban slowly ಎಂಬ ನೆನಪುವಾಕ್ಯವನ್ನು ನನಗೆ ಹೇಳಿ ಕೊಟ್ಟವಳು ರಂಜಾನ್ ತಿಂಗಳಿನಲ್ಲಿ ನಿಟ್ಟುಪವಾಸ

ಮಾಡುವ ಪತೀಜಾ. ಅವಳ ಚಿಕ್ಕಪ್ಪ ಇಂಜಿನಿಯರ್ ಕಾಸೀಮ ಸಾಹೇಬರು ವಾಸ್ತು ಸರಿಯಾಗಿಲ್ಲ ಎಂದು ನಾಲ್ಕು ವರ್ಷದಲ್ಲಿ ಮೂರು ಬಾರಿ ತಮ್ಮ ಮನೆಯನ್ನು ಕೆಡವಿ ಕಟ್ಟಿದ್ದರಂತೆ. ನಮ್ಮ ವಿಭಾಗದ ಪ್ಯೂನ್ ಡೇನಿಯಲ್ ಹೆಂಡತಿ ಲಿಲ್ಲಿ ತನ್ನ ಮಗನ ಮುಡಿಯನ್ನು ಮಾತೆ ವೇಲಾಂಕಿನಿಗೆ ಕೊಡುವುದಾಗಿ ಹರಸಿಕೊಂಡಿದ್ದಳಂತೆ. ಅಲ್ಲಿಗೆ ಹೋಗಲು ಅವನು ನನ್ನ ಹತ್ತಿರ ಸಾಲ ತೆಗೆದುಕೊಂಡಿದ್ದ. ಮುಂದೆ ಉತ್ತರದ ವೇಲಾಂಕಿನಿ ಚರ್ಚ್‌ನ ಒಂದು ಬ್ರಾಂಚ್ ನಾನಿದ್ದ ಬೆಸೆಂಟ್ ನಗರದ ಮನೆಯ ಹತ್ತಿರಕ್ಕೇ ಬಂದಿತು. ಅದರ ವಾರ್ಷಿಕ ಜಾತ್ರೆಯ ಸಮಯದಲ್ಲಿ ತಿರುಪತಿಯ ಕಲ್ಯಾಣಕಟ್ಟೆಯ ಮಿನಿ ಮಾದರಿ ಭರದಿಂದ 'ಕಾರ್ಯ' ನಿರ್ವಹಿಸುತ್ತಿತ್ತು.

ಶಿವಸುಬ್ರಹಮಣ್ಯಂ, ಮುರುಗನ್, ಹತೀಜಾ, ಡೇನಿಯಲ್ ಎಲ್ಲರೂ ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡಿಕೊಂಡು ಹೋಗುತ್ತಿದ್ದರು. ನನ್ನ ಬಗೆಗೆ ವಿಶ್ವಾಸ ತೋರಿಸುತ್ತಿದ್ದರು. ಅವರ ಅವರಂತಹ ಇತರರ ನಂಬಿಕೆಗಳನ್ನು ನಾನು ಎಂದೂ ಟೀಕೆ. ಮಾಡಿಲ್ಲ, ಈಗಲೂ ಮಾಡುತ್ತಿಲ್ಲ. ಮೊನ್ನಿನ ಪತ್ರಿಕೆಯ ಆ ಕಾಲಂ ಅವರನ್ನೆಲ್ಲ ಜ್ಞಾಪಕಕ್ಕೆ ತಂದಿತು ಎಂದಷ್ಟೇ ಹೇಳುತ್ತಿದ್ದೇನೆ.

★★★



ಸಂಚಾರೀ ಸಾಹಿತ್ಯ



⊙ ಶ್ರೀನಿವಾಸ ವೈದ್ಯ

ಸಾಹಿತ್ಯದ ಅನೇಕ ಪ್ರಕಾರಗಳಾದ ಕತೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ ಸಾಹಿತ್ಯ ಪ್ರಮಾದ ಸಾಹಿತ್ಯ, ಖಾಸಾ ಸಾಹಿತ್ಯ ಭೂಸಾ ಸಾಹಿತ್ಯ, ಇವುಗಳ ಜತೆ ಜತೆಗೇನೇ ನಮಗೆಲ್ಲ ಸುಪರಿಚಿತವಾದ ಆದರೆ ಅದೇಕೋ ಅಷ್ಟೊಂದು ಬೆಳಕಿಗೆ ಬಾರದ ಇನ್ನೊಂದು ಸಾಹಿತ್ಯ ಪ್ರಕಾರವಿದೆ. ಅದುವೇ ಸಂಚಾರೀ ಸಾಹಿತ್ಯ.

ಆಟೋ ರಿಕ್ಷಾಗಳ ಹಾಗೂ ಟ್ರಕ್ಕುಗಳ ಹಿಂಭಾಗಕ್ಕೆ ಬರೆದಿರುವ ''ಚಿ ತುಂಟಿ'' ''ಥೇ ಕಳ್ಳ'' ''ಜೈ ಕರ್ನಾಟಕ'' ''ಬಡವರ ಬಂಧು'' ''ಎಡೆಯೂರು ಸಿದ್ಧಲಿಂಗೇಶ್ವರ'' ಗಳಂತಹ ಲೇಖನಗಳಾಲೀ ಅಥವಾ ''ಉಮ-ಸುಮ-ಸುರೇಶ'' ''ಭಲೆಜೋಡಿ'' ''ಎಲೆ ಹುಡುಗಿ''ಗಳಂತಹ ಉಕ್ತಿಗಳಾಗಲೀ ನಿತ್ಯ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಆಗೀಗ ''ದೋಣಿ ಸಾಗಲಿ'' ''ಹಕ್ಕಿ ಹಾರುತಿದೆ'' ''ಎದೆ ತುಂಬಿ ಹಾಡಿದೆನು'' ಗಳಂತಹ ಕವಿತೆಯ ತುಣುಕುಗಳೂ ನಿಮ್ಮ ಕಣ್ಣಿಗೆ ಬೀಳಬಹುದು. ಈ ಬರಹಗಳನ್ನೇ ನಾವು ''ಸಂಚಾರಿ ಸಾಹಿತ್ಯ'' ಎಂಬ ಬೇರೊಂದು ಪ್ರಕಾರದಲ್ಲಿ ವಿಂಗಡಿಸಬಹುದು.

ಮಡಿವಂತರು ವಾಹನಗಳ ಹಿಂಬರಹಗಳಾದ ''ಚಿ ತುಂಟ'' ''ಥೇ ಕಳ್ಳ'' ಗಳಂತಹ ಸಂಚಾರೀ ಸಾಹಿತ್ಯದ ಸೃಜನಶೀಲತೆಯ ಮಟ್ಟವನ್ನಾಗಲೀ; ''ದೋಣಿಸಾಗಲಿ'' ''ಹಕ್ಕಿ ಹಾರುತಿದೆ'' ಗಳಂತಹ ಕಾವ್ಯೋಕ್ತಿಗಳ ಸ್ವಂತಿಕೆಯನ್ನಾಗಲೀ ಪ್ರಶ್ನಿಸಿ ಮೂಗು ಮುರಿಯಬಹುದು. ಅವರವರ ಮೂಗು ಅವರೇನಾದರೂ ಮಾಡಿಕೊಳ್ಳಲಿ. ಅಲ್ಲದೇ ಕೆಲ ಕೆಲವು ಮಡಿವಂತ ಮೂಗುಗಳನ್ನು ಕಂಡಾಗ ಇವನ್ನು ಮುರಿದು ಹಾಕಲೇಬೇಕೆಂಬ ಸಹಜ ಬಯಕೆ ಮಡಿವಂತರಲ್ಲದ ಸಾಮಾನ್ಯರಲ್ಲಿ ಹುಟ್ಟುವದಿಲ್ಲವೇ? ಆದ್ದರಿಂದ ಮುರಿಯಲರ್ಹವಾದ ಮಡಿ ಮೂಗಿಗರನ್ನು ಅವರ ಪಾಡಿಗೆ ಬಿಟ್ಟು, ಈಗ ನಾವೆಲ್ಲ ಸಂಚಾರೀ ಸಾಹಿತ್ಯದಲ್ಲಿ ನಮ್ಮ ನಮ್ಮ ಮೂಗು ತೂರೋಣವೇ? ಇಷ್ಟಕ್ಕೂ ಒಂದು ಮಾತು 'ಸೃಜನಶೀಲತೆಯ ಮಟ್ಟ' 'ಸ್ವಂತಿಕೆ' ಇತ್ಯಾದಿ ಕಠಿಣ ಮಾನದಂಡಗಳನ್ನು ಸಂಚಾರೀ ಸಾಹಿತ್ಯಕ್ಕೆ ಮಾತ್ರ ಯಾಕೆ ಅನ್ವಯಿಸಬೇಕು? ಈಚೆಗೆ ಧಂಡಿ ಧಂಡಿಯಾಗಿ ಬರುತ್ತಿರುವ ಇತರೇ ಸಾಹಿತ್ಯ ಪ್ರಕಾರಗಳಿಗೂ ಈ ಕಠಿಣ ಮಾನದಂಡಗಳನ್ನು ಅನ್ವಯಿಸಿ ನೋಡಿ. ಆಗ ಸಾಹಿತ್ಯ ಪ್ರಪಂಚದಲ್ಲಿ ಹಾಹಾಕಾರವೆದ್ದೀತು. ಮುರಿದ ಮೂಗಿಗರ ಶೂರ್ಪಣಖೀ ಸಂತಾನ ವಿಪುಲವಾಗಿ ಬೆಳೆದೀತು!

ಇರಲಿ. ಮಿತಿಯಾಗಿ ಬರೆದು ಅತಿಯಾಗಿ ಬಿಂಬಿಸುವದು, ಶ್ರೇಷ್ಠ ಸಾಹಿತ್ಯದ ಲಕ್ಷಣಗಳಲ್ಲಿ ಒಂದೆಂದು ಬಲ್ಲವರು ಹೇಳುತ್ತಾರೆ. ಈ ಮಾತಿಗೆ ಉದಾಹರಣೆಯಾಗಿ ಈ 'ಆಟೋ ಬರಹ'ಗಳನ್ನು ನೋಡಿ. ''ದಗಲ್ ಬಾಜಿ ಹೆಣ್ಣು'' ''ಕೈ ಕೊಟ್ಟ ಹುಡುಗಿ'' ಇಲ್ಲವೇ ''ನಂಬಿಸಿ ದ್ರೋಹ ಬಗೆಯಬೇಡ'' ''ಪ್ರೀತಿಸಿ ಕೈ ಕೊಡಬೇಡ'' ''ಈ ಬಾಳು ನಿನಗಾಗಿ'' ಅಥವಾ ''ನಿನಗಾಗಿ ಓಡೋಡಿ ಬಂದೆ'' ಇತ್ಯಾದಿಯಾಗಿ ಬರೆದುಕೊಂಡು, ಚಳಿ ಮಳೆ ಗಾಳಿಗಳಿಗೆ ತಮ್ಮ ಹೃದಯಗಳನ್ನು ತೆರೆದಿಟ್ಟುಕೊಂಡಿರುವ ಎಷ್ಟೋ ವಿರಹೀ ಆಟೋಗಳನ್ನು ನೀವು ನೋಡಿರುತ್ತೀರಿ. ಏನಿಲ್ಲೆಂದರೂ ಒಂದು ಸಾವಿರ ಪುಟಗಳಷ್ಟಾದರೂ ಆಗಬಲ್ಲ ಈ ಹೃದಯ ಸಂಬಂಧೀ ಕಥಾನಕಗಳನ್ನು ಒಂದೋ ಎರಡೋ ಹರಕು ಮುರುಕು ವಾಕ್ಯಗಳಲ್ಲಿ ಹೇಳಿ ಮುಗಿಸುವ ಈ ಆಟೋ ಜಾಣ್ಮೆಗೆ ಏನು ಹೇಳುತ್ತೀರಿ? ಒಂದು ವೇಳೆ ''ಈ ಬಾಳು ನಿನಗಾಗಿ'' ಎಂಬಂತಹ ಅಮೂಲ್ಯ ಕಥಾವಸ್ತು ನಮ್ಮ ಯಾರಾದರೂ ಹೃದಯ ತಜ್ಞೆ ಲೇಖಕಿಯ ಕೈಗೆ ಸಿಕ್ಕಿದ್ದರೆ ಏನೇನು ಅನಾಹುತಗಳಾಗುತ್ತಿದ್ದವೆಂದು ಸ್ವಲ್ಪ ಯೋಚಿಸಿ......

''.... ಸುಧಾಕರ ಅವಿನ್ಯೂ ರೋಡಿನಲ್ಲಿ ಕೈಗಾಡಿಯಲ್ಲಿ ಇಡ್ಲಿ ಮಾರುವ ಸುಬ್ಬಮ್ಮನ ಮಗ. ಅವನು ಆರು ತಿಂಗಳ ಮಗುವಿದ್ದಾಗ ತಾಯಿ ಸುಬ್ಬಮ್ಮ ಮೈಮೇಲೆ ಸಾಂಬಾರು ಸುರಿದುಕೊಂಡು ಸಾಯುತ್ತಾಳೆ. ಮುಂದೆ ಮೂರು ತಿಂಗಳಿಗೆ ಅಪ್ಪ ಕುಪ್ಪಣ್ಣ ಕುಡಿದು ಸಾಯುತ್ತಾನೆ. ಸುಧಾಕರ ಬೀದೀ ಪಾಲಾಗಿ ಚಂದ್ರಹಾಸನಂತೆ ಅವರಿವರ ಕೈಗೂಸಾಗಿ ಬೆಳೆಯುತ್ತಾನೆ. (ಇಷ್ಟಾಗುವಾಗ ನೀವು ಸುಮಾರು ನೂರೈವತ್ತು ಪುಟಗಳನ್ನಾದರೂ ಕಣ್ಣೀರಿನಿಂದ ಒದ್ದೆ ಮಾಡಿರುತ್ತೀರಿ) ಹೀಗೆ ಮಗು ಸುಧಾಕರ ಇತ್ತ ಚಿಕ್ಕ ಪೇಟೆಯಲ್ಲಿ ಅವರಿವರ ಪಾಕೆಟ್ಟುಗಳನ್ನು ಪಿಕ್ ಮಾಡುತ್ತ, ಕೈಗಾಡಿಯಲ್ಲಿನ ರುಚಿ ರುಚಿಯಾದ ಇಡ್ಲಿ, ದೋಸೆ, ಚಿತ್ರಾನ್ನಗಳನ್ನು ಹೊಡೆಯುತ್ತ ಸೊಂಪಾಗಿ ಬೆಳೆಯುತ್ತಿರುವಾಗ, ಅತ್ತ ಸುಧಾಮಣಿ ಎಂಬ ಕಡಲೇಕಾಯಿ ಮಾರುವ ಅನಾಥ ಹುಡುಗಿಗೂ ಇವನಿಗೂ ಪರಿಚಯ ಬೆಳೆದು ಸ್ನೇಹಕ್ಕೆ ತಿರುಗಿ ಹೃದಯಕ್ಕೆ ಹೃದಯ ಬೆಸೆದುಕೊಳ್ಳುವದೊಂದೇ ಬಾಕಿ ಇರುತ್ತದೆ. ಆದರೆ ಬೆಸುಗೆ ಹಾಕುವ ಕಲಾಯಿ ಸಾಬಿಯ ಚಿಮ್ಮಟ ಮುರಿದಿರುತ್ತದೆ. ಹಾಗಾಗಿ ಅವ ನಾಲ್ಕು ದಿನ ಬಿಟ್ಟು ಬನ್ನಿ ಎಂದು ಹೇಳಿರುತ್ತಾನೆ. ಈಗ ಸುಧಾಕರ ''ಬೆಸುಗೆ... ಬೆಸುಗೆ... ಜೀವನವೆಲ್ಲ ಸಾಬಿಯ ಬೆಸುಗೆ'' ಎಂದು ಹಾಡಿಕೊಳ್ಳುತ್ತ ಇಡ್ಲಿ ದೋಸೆ ಚಿತ್ರಾನ್ನಗಳ ಜತೆಗೆ ಸುಧಾಮಣಿಯ ಕಡಲೇಕಾಯಿಗಳನ್ನೂ ಮುಕ್ಕತೊಡಗುತ್ತಾನೆ. (ಇಲ್ಲಿ ಒಂದು ಮಾತು ಕಥಾನಾಯಕಿ ಸುಧಾಮಣಿ, ಕನ್ನಡ ಸಾಹಿತ್ಯಕ್ಕೆ ಪರಂಪರಾಗತವಾಗಿ ಬಂದ ಕಡಲೇ ಕಾಯಿಗಳನ್ನೇ ಮಾರಬೇಕು. ಅದು ಬಿಟ್ಟು ಅವಳೇನಾದರೂ ಐಸ್ ಕ್ರೀಮನ್ನೋ, ಬಾಂಬೆ ಮಿಠಾಯಿಯನ್ನೋ ಮಾರಿದರೆ ಕಥೆಯ ಮೂಲ ದ್ರವಕ್ಕೇ ಅಪಚಾರವೆಸಗಿದಂತಾಗುತ್ತದೆ) ಆಮೇಲೆ ಇನ್ನೇನು ಕಲಾಯಿ ಸಾಬನ

ಬೆಸುಗೆಗೆ ನಾಳೆ ಮಧ್ಯಾಹ್ನಕ್ಕೆ ಡೇಟ್ ಫಿಕ್ಸ್ ಆಗಿದೆ ಎನ್ನುವಾಗ ಅಂದು ಬೆಳಿಗ್ಗೆ ಸುಧಾಮಣಿ ''ಕ...ಡ...ಲೇ...ಕ್ಯಾ...'' ಎನ್ನುತ್ತ ತನ್ನ ಮಧುರ ಕಂಠದಲ್ಲಿ ಸಾವೇರಿ ರಾಗದ ಝಂಪೆ ತಾಳದಲ್ಲಿ ಕಿರುಚುತ್ತ ಕಡಲೇಕಾಯಿ ಮಾರುತ್ತ ನಡೆದಿದ್ದಾಗ, ಗಾಂಧೀನಗರದ ಒಬ್ಬ ಚಿತ್ರ ನಿರ್ಮಾಪಕನ ಕಣ್ಣಿಗೆ ಬಿದ್ದು, ಅವನು ಅವಳ ಚಲುವಿಕೆಗೂ ಮಧುರ ಕಂಠಕ್ಕೂ ಮಾರುಹೋಗಿ, ತನ್ನ ಮುಂದಿನ ಚಿತ್ರದಲ್ಲಿ ಅವಳಿಗೆ ಅವಕಾಶ ಕೊಡುತ್ತಾನೆ. (ಕತೆಗೆ ಈ (ಅ) ನಿರೀಕ್ಷಿತ ತಿರುವು ಬರುವಾಗ ಆರುನೂರು ಪುಟಗಳಾಗಿರುತ್ತವೆ) ಮುಂದೆ ಮೂರು ತಿಂಗಳಲ್ಲಿ ಸುಧಾಮಣಿ ಯಶಸ್ಸಿನ ಮೆಟ್ಟಲುಗಳನ್ನೇರುತ್ತ, ಏರುತ್ತ, ಏಳುಕೋಟಿ ಎಂಬತ್ತನಾಲ್ಕು ಲಕ್ಷ ನಲವತ್ತೈದು ಸಾವಿರದ ಮುನ್ನೂರ ಹದಿನೇಳು ರೂಪಾಯಿ ಅರವತ್ತು ನಾಲ್ಕು ಪೈಸೆ ಗಳಿಸಿ ಸದಾಶಿವನಗರದಲ್ಲಿ ಮೂರು ಬಂಗ್ಲೆಗಳಲ್ಲಿ ವಾಸ ಮಾಡುತ್ತ ನಾಲ್ಕು ಕಾರುಗಳಲ್ಲಿ ಓಡಾಡಿಕೊಂಡು ಸುಖವಾಗಿ ಇರುತ್ತಾಳೆ.

ಇತ್ತ ಕಾಲಾಂತರದಲ್ಲಿ ಸುಧಾಕರ ಜೇಬುಗಳ್ಳತನದಲ್ಲೇನಿದೆ ಮಣ್ಣು, ನಾಲ್ಕು ಕಾಸು ಸಂಪಾದಿಸಬೇಕಾದರೆ ಮಿನಿಷ್ಟ್ರೇ ಆಗಬೇಕು ಎಂದುಕೊಂಡು ಸದಾಶಿವನಗರದಲ್ಲಿನ ಮಿನಿಷ್ಟ್ರುಗಳು ರಾಜಕಾರಣಿಗಳು ಇವರ ಬಂಗ್ಲೆಗಳಿಗೆ ಪ್ರದಕ್ಷಿಣೆ ಸುತ್ತತೊಡಗಿರುತ್ತಾನೆ (ಒಂಬೈನೂರು ಪುಟಗಳು) ಹೀಗೇ ಒಂದು ದಿನ ಸುತ್ತುತ್ತಾ ಇರುವಾಗ ಪಕ್ಕದ ಮಹಡಿಯಿಂದ ಹೆಣ್ಣಿನ ಚೀತ್ಕಾರದ ದನಿ ಕೇಳಿ ಅತ್ತ ಧಾವಿಸುತ್ತಾನೆ (ಗಂಡು ಶಂಖಾ ಹೊಡೆದರೂ ಯಾರು ಕೇಳುತ್ತಾರೆ!) ಮಹಡಿಯ ಮೇಲೆ ಒಬ್ಬ ಟೊಣಪ ಅಟ್ಟಹಾಸದ ನಗು, ನಗುತ್ತ ಒಬ್ಬ ತರುಣಿಯ ಮೇಲೆ ಬಲಾತ್ಕಾರ ಮಾಡಲುದ್ಯುಕ್ತನಾಗಿರುತ್ತಾನೆ. ಆ ತರುಣಿ ಆ ರೇಪಿಷ್ಟನನ್ನು ಒದ್ದು, ಚಚ್ಚಿ, ಕಚ್ಚಿ, ಚುಚ್ಚಿ, ಕಡಿದು, ಕೊಚ್ಚಿ, ಹಿಂಡಿ ಹಿಪ್ಪೆ ಮಾಡಿ ಹಿಂಸಿಸುತ್ತಿರುತ್ತಾಳೆ. ಆಗ ಆ ಟೊಣಪನ ಉತ್ಸಾಹವೆಲ್ಲ ಉಡುಗಿ ''ಹೇಗಪ್ಪಾ ಇವಳಿಂದ ಬಚಾವಾಗುವದು'' ಎಂದು ಕಸಿವಿಸಿ ಬಡುತ್ತಿರುತ್ತಾನೆ.

ಆಗ ಸುಧಾಕರ ಧಾವಿಸಿ ಬಂದು ಆ ತರುಣಿಯಿಂದ ಆ ಟೊಣಪನನ್ನು ಬಚಾವ ಮಾಡಿ ಒದ್ದು ಓಡಿಸುತ್ತಾನೆ (ಟೊಣಪನನ್ನು) ಒದ್ದು ಓಡಿಸಿ ''ಯಾರಪ್ಪಾ ಈ ತರುಣಿ'' ಎಂದು ಹೊರಳಿ ನೋಡಿದರೆ, ಅವಳು ಅವನ ಬಾಲ್ಯ ಸ್ನೇಹಿತೆ ಸುಧಾಮಣಿಯೇ ಆಗಿರುತ್ತಾಳೆ. ಸರಿ ಆಮೇಲೆ ಅವರಿಬ್ಬರೂ ಏಕಕಾಲಕ್ಕೆ ಆಶ್ಚರ್ಯಚಕಿತರೂ, ಆನಂದ ತುಂದಿಲರೂ ಆಗುತ್ತ ''ಈ ಬಾಳು ನಿನಗಾಗಿ ... ಈ ಗೋಳು ನನಗಾಗಿ'' ಎಂದು ಕೈ ಕೈ ಹಿಡಿದು ಹಾಡುತ್ತ ಕುಣಿಯುತ್ತ ಕಲಾಯಿ ಸಾಬಿಯ ಬಳಿ ಧಾವಿಸುತ್ತಾರೆ.... ಶುಭಮಸ್ತು (ಹನ್ನೆರಡುನೂರ ಮೂವತ್ತೆರಡು ಪುಟಗಳು)

ಈ ರೀತಿ ಏನಿಲ್ಲೆಂದರೂ ಸುಮಾರು ಹನ್ನೆರಡು ನೂರು ಪುಟಗಳಿಗಾಗುವಷ್ಟು ಕಾದಂಬರಿಯ ಹೃದಯ ವಿದ್ರಾವಕ ಕಥಾವಸ್ತುವನ್ನು, ''ಈ ಬಾಳು ನಿನಗಾಗಿ''... ಅಥವಾ ''ಕೈಕೊಟ್ಟ ಹುಡುಗಿ'... ಇಲ್ಲವೇ ''ಕಾಲ್ಕಿತ್ತ ಹುಡುಗ'' ಎಂದು ಬರೆದು

ಬಿಂಬಿಸುವ ತೀರ ಚುಟುಕಾದ ''ಆಟೋ ಸಾಹಿತ್ಯ'' ಯಾನೆ ''ಸಂಚಾರೀ ಸಾಹಿತ್ಯ''ದ ಮಹತ್ವ ಈಗಲಾದರೂ ತಿಳಿಯಿತೇ?

ಸಾಮಾನ್ಯವಾಗಿ ಆಟೋ ಚಾಲಕರು ರಸಿಕರು, ಮಾತುಗಾರರು ಅಪವಾದಕ್ಕೆ ಒಬ್ಬಿಬ್ಬರು ಕಗ್ಗಂಟು ಮುಖಿ ಚಾಲಕರಿರಬಹುದು, ಆದರೆ ಹೆಚ್ಚಾಗಿ ಆಟೋ ಹುಡುಗರು ಜಾಲಿಯಾಗಿ ಹರಟೆ ಹೊಡೆಯಬಲ್ಲವರಾಗಿರುತ್ತಾರೆ. ಇವರು ಯಾವಾಗಲೂ ಹಿಂದೆ, ಕುಳಿತ ಪ್ರಯಾಣಿಕರ ಜತೆ ರಾಜಕಾರಣ, ಸಿನೇಮಾ ಜಗತ್ತು, ಪೆಟ್ರೋಲ್ ಬೆಲೆ, ಭ್ರಷ್ಟಾಚಾರ, ಕ್ರಿಕೆಟ್ ಹಗರಣ ಮಾತನಾಡುತ್ತ ಮಧ್ಯೆ ಮಧ್ಯೆ ''ಸಾರ್ ... ಎಲ್ಲಾರೂ ಹಲ್ಕಾ ಬಡ್ಡೀ ಮಕ್ಕಳೇ.. ನೀವೇನಂತೀರಿ ಸಾರ್...'' ಎನ್ನುತ್ತ ನಿಮ್ಮನ್ನೂ ಮಾತಿಗೆಳೆಯುತ್ತಿರುತ್ತಾರೆ. ಆಟೋದಲ್ಲಿ ಪ್ರಯಾಣಿಸುವಾಗ ನನಗೂ ಈ ಚಾಲಕರೊಡನೆ ಮಾತಿಗಿಳಿಯುವ ಚಪಲ.

ಒಮ್ಮೆ ''ನಲಿವೆಲ್ಲ ನಿನಗಿರಲಿ ಜಾಣೆ; ನೋವೆಲ್ಲ ನನಗಿರಲಿ ನಿನ್ನಾಣೆ'' ಎಂದು ಬರೆದುಕೊಂಡ ಭಗ್ನ ಪ್ರೇಮಿಯೊಬ್ಬನ ಆಟೋದಲ್ಲಿ ಕುಳಿತಿದ್ದೆ. ಆದರೆ ಚಾಲಕ ದಿಲೀಪ ಕುಮಾರನಂತೆ ದೇವದಾಸನಾಗಿರದೇ, ಗೆಲುವಿನ ಗೋವಿಂದನಾಗಿದ್ದ. ಉತ್ಸಾಹದಲ್ಲಿ ಅರಳು ಹುರಿದಂತೆ ಏನೇನೋ ಮಾತನಾಡುತ್ತ, ನಗಾಡುತ್ತ ನಡೆದಿದ್ದ. ನನಗೆ ಆಶ್ಚರ್ಯ. ಇದೇನು ಈ ಹುಡುಗ ಇಷ್ಟು ಬೇಗ ತನ್ನ ಜಾಣೆಯನ್ನು ಮರೆತುಬಿಟ್ಟನೇ ಎಂದುಕೊಂಡು, ಕೊನೆಗೂ ಕುತೂಹಲ ತಾಳದೇ

''ಯಾರಪ್ಪಾ ಆಕೆ?'' ಎಂದು ಕೇಳಿದೆ.

''ಯಾರು ಸಾರ್'' ಎಂದ ಹುಡುಗ

''ಅದೇ ಹಿಂದುಗಡೆ ನೋವೆಲ್ಲ ನನಗಿರಲಿ ಜಾಣೆ ಎಂದು ಬರೆದುಕೊಂಡು ಹಲುಬುತ್ತಿದ್ದೀಯಲ್ಲ... ಅವಳು ಯಾರು?... ಅವಳಿಗೇನಾದರೂ ಬೇರೆ ಕಡೆ ಮದುವೆಯಾಯಿತೇ? ಎಂದು ಕೇಳಿದೆ ದುಃಖಾಂತ್ಯ ಸಿನೇಮಾಗಳನ್ನು ನೆನೆಯುತ್ತ. ಹುಡುಗ ಚಾಲಕ ''ಅಯ್ಯೋ ಬಿಡಿ ಸ್ವಾಮಿ.... ಆ ಪೇಂಟರ ನನಮಗ ಏನೇನೋ ಬರೀತಾನೆ... ಕಂಡ ಕಂಡ ಹುಡುಗೀರ ಹಿಂದೆಲ್ಲ ಓಡತಾನೆ, ಆಮೇಲೆ ಅವರಿಂದ ಚಪ್ಪಲಿ ಏಟು ತಿಂದು ಹೀಗೆಲ್ಲ ಬರೀತಾನೆ....'' ಎಂದ.

ಇನ್ನೊಮ್ಮೆ ''ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು'' ಎಂದು ಬರೆದುಕೊಂಡಿದ್ದ ಆಟೋದಲ್ಲಿ ಕುಳಿತೆ. ಚಾಲಕ ಗಂಭೀರ ಮುಖದ ಮಧ್ಯ ವಯಸ್ಕ, ಉರಿಗಣ್ಣ ಖಲ್ವಾಟ. ಮೇಲೆ ಧಾಂಡಿಗ. ನನ್ನೆಡೆಗೆ ಒಂದು ತುಚ್ಛ ಮೌನದ ಉಗ್ರ ದೃಷ್ಟಿ ಬೀರಿ ಸಮಸ್ತ ವಿಶ್ವದ ಮೇಲೆಯೇ ಉಪಕಾರ ಮಾಡಿದವನ ಭಾವ ಹೊತ್ತು ಗಾಡಿ ಓಡಿಸತೊಡಗಿದ. ನನಗೆ ಇಂತಹ ದುರ್ಮುಖೀ ಚಾಲಕರ ವಾಹನಗಳಲ್ಲಿ

ಪ್ರಯಾಣಿಸುವಾಗ ಏನೋ ಒಂದು ಅಮೂರ್ತ ಹೆದರಿಕೆ ಕಾಡತೊಡಗುತ್ತದೆ. ಎಂತಹದೋ ಒಂದು ವಿಚಿತ್ರ, ಹೆಸರಿಸಲಾರದ ಭಯ ಮಿಶ್ರಿತ ಕೀಳರಿಮೆ ಕಾಡ ತೊಡಗುತ್ತದೆ. ಆಗ ವಾತಾವರಣವನ್ನು ತಿಳಿಗೊಳಿಸಲೆಂದು ಇಂತಹ ದುರ್ಮುಖಿಗಳನ್ನು ಮಾತಿಗೆಳೆಯಲೇಬೇಕೆಂಬ ಚಪಲ ಶುರುವಾಗುತ್ತದೆ. ಅವತ್ತೂ ಹಾಗೇ ಆಯಿತು. ಆ ಖಲ್ವಾಟ ಧಾಂಡಿಗ ಮಹಿಷಾಸುರನನ್ನು ಮಾತಾಡಿಸಲೇಬೇಕೆಂಬ ತುಡಿತ ಮಿಡಿಯತೊಡಗಿತು. (ಅಥವಾ ಮಿಡಿತ ತುಡಿಯತೊಡಗಿತು. ಯಾವದು ಸರಿಯೊ ಅದನ್ನು ಆಯ್ದುಕೊಳ್ಳಿ) ಅಂತೂ ಅವತ್ತು ನಾನು ಅಂಜುತ್ತ ಅಳುಕುತ್ತ ''ವ್ಹಾ! ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು'' ಎಂತಹ ದೊಡ್ಡ ಮಾತಲ್ಲವೇ'' ಎಂದು ಅಂಜುತ್ತ ಅಳುಕುತ್ತ ಸಾಧ್ಯವಾದಷ್ಟೂ ಅನುನಯದಲ್ಲಿ ಚಾಲಕನನ್ನು ಕೇಳಿದೆ. ಆಗ ಆ ಉರುಮುಖೀ ಖಲ್ವಾಟ ಇದ್ದಕ್ಕಿದ್ದಂತೆ ಸ್ಫೋಟಗೊಂಡು ''....ಥೋ... ಹಲ್ಕಾಬಡ್ಡೀ ಮಗನೇ ಮುಸುಡಿಗೆರಡು ಇಕ್ಕರಸತೀನಿ ನೋಡು'' ಎಂದು ಖ್ಯಾಕರಿಸಿ ಉಗಿದು ಗೇರ್ ಬದಲಿಸಿದ. ನಾನು ಬೆಚ್ಚಿಬಿದ್ದು ಹಿಂದಿನ ಸೀಟಿನ ಮೂಲೆಗೆ ಸರಿದು, ಪಟ್ಟೀ ಹಿಡಿದುಕೊಂಡು ಬಾಯಿ ಮುಚ್ಚಿ ಕುಕ್ಕರಿಸಿದೆ ಆಮೇಲೆ ಬಹುಶಃ ಈ ಮುಕ್ತಾಫಲಗಳು ತೀರ ಪಕ್ಕದಲ್ಲಿ ರಭಸದಿಂದ ಹಾಯ್ದು ಹೋದ ಇನ್ನೊಬ್ಬ ಆಟೋದವನಿಗಿರಬೇಕೆಂದುಕೊಂಡು, ನನ್ನನ್ನು ನಾನೇ ಸಾಂತ್ವನ ಪಡಿಸಿಕೊಂಡೆ. ''ಪಾಪ ಅವನಾದರೂ ಏನು ಮಾಡಬೇಕು ಆಟೋ ನಡೆಸುವಾಗ ಏಕಾಗ್ರತೆ ಬೇಕಲ್ಲವೇ... ಅವನನ್ನು ಮಾತಿಗೆಳೆದದ್ದು ನನ್ನದೇ ತಪ್ಪು'' ಎಂದುಕೊಂಡು ಎದುರಿಗಿನ ಪಟ್ಟಿಯಲ್ಲಿ ನನ್ನ ಮುಖಕ್ಕೆ ರಾಚುತ್ತಿದ್ದ "Give Respect Take Respect" ಎಂಬ ನಾಣ್ನುಡಿಯನ್ನು ಮತ್ತೆ ಮತ್ತೆ ಓದುತ್ತ ನಡುಗುತ್ತ ಕುಳಿತೆ.

''ತಾಯಿಯ ಆಶೀರ್ವಾದ'', ''ಗುರುವಿನ ಕೃಪೆ'', ''ದೇವರ ದಯೆ'' ಗಳಂತಹ ಸಂಚಾರೀ ಸಾಹಿತ್ಯದ ಹಿಂದಿನ ಭಾವನೆಗಳನ್ನು ಸುಲಭವಾಗಿ ಅರ್ಥೈಸಬಹುದು. ಆದರೆ ''ಮುತ್ತು ಕೊಟ್ಟವಳು ಬಂದಾಗ, ತುತ್ತು ಕೊಟ್ಟವಳನ್ನು ಮರೆಯಬೇಡ'' ಎಂಬ ಆಟೋಬರಹ ನನ್ನನ್ನು ಗೊಂದಲಕ್ಕೆಳೆದಿದೆ. ಯಾಕೆಂದರೆ ''ಮುತ್ತು ಕೊಟ್ಟವಳನ್ನೂ, ತುತ್ತು ಕೊಟ್ಟವಳನ್ನೂ ಒತ್ತೊಟ್ಟಿಗೇ ನೆನದರೆ, ಅವರಿಬ್ಬರೂ ನಿನಗೆ ಲತ್ತೆ ಕೊಡಲಾರರೇ ಕತ್ತೇ?'' ಎಂಬ ಸಂಶಯ ಕಾಡುತ್ತದೆ.

ಒಮ್ಮೊಮ್ಮೆ ಈ ಸಂಚಾರೀ ಸಾಹಿತ್ಯದಲ್ಲಿ ನನಗೆ ಅದ್ಭುತ ಆಣಿ ಮುತ್ತುಗಳು ಸಿಕ್ಕಿವೆ. ಒಮ್ಮೆ ಒಬ್ಬ ಆಟೋ ಹುಡುಗ ''ಚಿನ್ನಕ್ಕಿಂತ ಅನ್ನ ಲೇಸು. ಅನ್ನಕ್ಕಿಂತ ಅಕ್ಷರ ಲೇಸು'' ಎಂದು ಬರೆದುಕೊಂಡಿದ್ದ. ಹುಡುಗನಿಗೆ ಓದಬೇಕೆಂದು ತುಂಬ ಆಶೆಯಂತೆ, ಆದರೆ ತಂದೆ ತಾಯಿಗಳು ಅವನ ತೀರ ಎಳೆ ವಯಸ್ಸಿನಲ್ಲಿಯೇ ತೀರಿ ಹೋಗಿ, ಹುಡುಗ

ಒಂಭತ್ತನೆಯ ವರ್ಗಕ್ಕೇ ಓದು ನಿಲ್ಲಿಸಿ ಆಟೋದ ಚಿತ್ರ ಹಿಡಿಯಬೇಕಾಯಿತಂತೆ' ಅವತ್ತು ಆ ಹುಡುಗ ಕಣ್ಣೀರು ಹಾಕಿದ ಚಿತ್ರ ಇಂದಿಗೂ ಕಣ್ಣಿಗೆ ಕಟ್ಟಿದೆ.

ಇನ್ನೊಮ್ಮೆ ಮುಂಬಯಿಯಲ್ಲಿ ಮರೀನ ಡ್ರ್ಯಾವ್ವನಲ್ಲಿ ಒಂದು ಟ್ಯಾಕ್ಸಿಯಲ್ಲಿ ಎಲ್ಲಿಗೋ ಹೊರಟಿದ್ದಾಗ, ಆ ಪಂಜಾಬೀ ಚಾಲಕನ ಟ್ಯಾಕ್ಸಿಯ ಹಿಂದೆ, ''ಕ್ರಿಸ್ಮತ್ ಅಪನೀ, ಮೆಹರಬಾನೀ ಖುದಾಕೀ ದುವಾಯೇ ಮಾಬಾಪಕೀ'' (ದೈವ ನಮ್ಮದು, ಕೃಪೆ ಭಗವಂತನದು, ಹರಕೆ ಹೆತ್ತವರದು) ಎಂದು ಓದಿ, ಈ ಆದ್ಯತೆಗಳು (priorities) ಸರಿಯಾಗಿವೆಯೇ ಎಂದು ಇಂದಿಗೂ ಯೋಚಿಸುತ್ತಿರುತ್ತೇನೆ.

ಒಂದೆರಡು ದಶಕಗಳ ಹಿಂದೆ ನನಗೆ ಮುಂಬಯಿಯಿಂದ ಬೆಂಗಳೂರಿಗೂ ಇಲ್ಲಿಂದ ಅಲ್ಲಿಗೂ ಆಫೀಸು ಕೆಲಸಕ್ಕಾಗಿ ಕಾರಿನಲ್ಲಿ ಪದೇ ಪದೇ ಅಡ್ಡಾಡಬೇಕಾಗುತ್ತಿತ್ತು. ಎರಡೂ ದಿಕ್ಕಿನ ಓಡಾಟಗಳಲ್ಲಿ ಮಧ್ಯೆ ಹುಬ್ಬಳ್ಳಿಯಲ್ಲಿ ಒಂದು ರಾತ್ರಿ ವಿಶ್ರಮಿಸಿ ಮುಂದೊರೆಯುತ್ತಿದ್ದೆ. ಆಗೆಲ್ಲ ನನಗೆ ಹೈವೇದ ಟ್ರಕ್ಕುಗಳ ಹಿಂದಿನ ಈ ಸಂಚಾರೀ ಸಾಹಿತ್ಯ ವಿಪುಲವಾಗಿಯೇ ಓದಲು ಸಿಗುತ್ತಿತ್ತು. ರಾಷ್ಟ್ರೀಯ ಹೆದ್ದಾರಿಯ ಮೇಲಿನ ಓಡಾಟ ನವೆಂಬರಿನಿಂದ ಫೆಬ್ರುವರಿಯವರೆಗೆ ಚಳಿಗಾಲದಲ್ಲಿ ತೀರ ಮೋಹಕವಾಗಿರುತ್ತಿತ್ತು. ಆಗ ಈಗಿನಷ್ಟು ವಾಹನಗಳ ದಟ್ಟಣೆ ಇರಲಿಲ್ಲ ಹಾಗಾಗಿ ಈ ದೂರಿನ ಪ್ರಯಾಣದಲ್ಲಿ ನಮ್ಮ ಜತೆ ಜತೆಯಾಗಿ ಸಮ ಸಮವಾಗಿ ತುಸು ಹಿಂದೆ ತುಸು ಮುಂದೆ ಓಡುತ್ತಿದ್ದ ಚಿಕ್ಕ ದೊಡ್ಡ ವಾಹನಗಳ ಜತೆಗೆ ಅದೇನೋ ಒಂದು ನಸು ಬೆಚ್ಚನೆಯ ದೋಸ್ತಿ ಏರ್ಪಟ್ಟಿರುತ್ತಿತ್ತು. ಹೆದ್ದಾರಿಯ ಮೇಲಿನ ಬಹುಭಾಷಾ ಸಂಚಾರೀ ಸಾಹಿತ್ಯವನ್ನು ತಿಳಿಯಲಿ ಬಿಡಲಿ ನೋಡುತ್ತ ಕುಳಿತುಕೊಳ್ಳುವುದೇ ಒಂದು ಸುಖ. ಭಾಷೆ ತಿಳಿಯದಿದ್ದರೇನು ಅಲ್ಲಲ್ಲಿಯ ಲೋಕಲ್ ಪೇಂಟರುಗಳ ಕಲಾ ವೈಭವವನ್ನು ಮೆಚ್ಚದೇ ಇರಲಿಕ್ಕಾದೀತೇ? ತುಟಿಗೆ ತುಟಿ ಕೊಂಕಿಸಿರುವ ಉದ್ದಾನುದ್ದ ಪುಚ್ಛಗಳ ಹಸಿರು ಗಿಳಿಗಳು, ತನ್ನ ದೇಹಗಾತ್ರಕ್ಕೆ ಹತ್ತುಪಟ್ಟು ಹೆಚ್ಚಿನ ಗರಿಗಳನ್ನು ಹೊತ್ತು ಕುಣಿಯುತ್ತಿರುವ ನವಿಲುಗಳು; ಎಡಗೈಯಲ್ಲಿ ಗದೆಯನ್ನೂ ಬಲಗೈಯಲ್ಲಿ ಸಂಜೀವಿನೀ ಪರ್ವತವನ್ನೂ ಹೊತ್ತು ಸಾಗರೋಲ್ಲಂಘನ ಮಾಡುತ್ತಿದ್ದ ಅಮಿತಾಬ್ ಬಚ್ಚನ್ ಮುಖದ ಮಾರುತಿ, ಕುಲು ಕುಲು ನಗುತ್ತ ಹೆಡೆಯಾಡಿಸುತ್ತಿರುವ, ಸ್ನೇಹಮಯೀ ಸರ್ಪಗಳು; ವಿವಿಧ ಗಾತ್ರದ ನಂದಿಗಳು, ಕುಮಾರ ಸ್ವಾಮಿಗಳು, ತುದಿಗಾಲಿನಲ್ಲಿ ಕುಳಿತ ಅಯ್ಯಪ್ಪ, ಹುತ್ತದ ಮೇಲೆ ಹಾಲು ಸುರಿಸುತ್ತಿರುವ ಪ್ರಮಾಣ ಮೀರಿದ ಬೃಹದ್ ಕೆಚ್ಚಲಿನ ಎಳೆ ಹಸು, ಒಂದೇ ಎರಡೇ!

ಹೆದ್ದಾರಿಯ ಮೇಲಿನ ಓಡಾಟವೆಂತಲೋ ಏನೋ ಇಲ್ಲಿನ ಸಂಚಾರೀ ಸಾಹಿತ್ಯದಲ್ಲಿ ಹೆಚ್ಚಾಗಿ ಹಿಂದೀ ಪಂಜಾಬೀ ಗುರುಮುಖೀ ಬರಹಗಳೇ ಕಣ್ಣಿಗೆ ಬೀಳುತ್ತಿದ್ದವು. ಒಂದರ ಹಿಂದೊಂದು ''ವಾಹೆಗುರು''ಗಳೂ ''ಸತ್ ಶ್ರೀ ಅಕಾಲ''ಗಳೂ ಭರದಿಂದ ಓಡುತ್ತಿದ್ದವು. ಈ ಸಂಚಾರಗಳಲ್ಲಿ ಪದೇ ಪದೇ ಕಣ್ಣಿಗೆ ಬೀಳುತ್ತಿದ್ದ ''ಬುರೀ ನಜರವಾಲೇ

ತೇರಾ ಮುಹ ಕಾಲಾ'' (ಕೆಟ್ಟ ಕಣ್ಣಿನವನೇ ನಿನ್ನ ಮುಖ ಸುಟ್ಟು ಕರಕಾಗಲಿ) ದಂತಹ ಸಾಹಿತ್ಯ ಹೊತ್ತು ಓಡುತ್ತಿದ್ದ ಚಿಕ್ಕ ದೊಡ್ಡ ಟ್ರಕ್ಕುಗಳನ್ನು ಮರೆಯಲಾದೀತೇ?

ಮುಂಬಯಿಯಿಂದ ಪುಣೆಯವರೆಗೆ, ಖಂಡಾಲಾ ಲೋಣಾವಳಾ ಘಟ್ಟಗಳನ್ನು ಕುಯ್ಯೋ ಮರ್ರೋ ಎನ್ನುತ್ತ, ಏದುಸಿರು ಬಿಡುತ್ತ, ತಿಣುಕುತ್ತ ಕೆಣಕುತ್ತ ಏರಿದ ವಾಹನಗಳು ಪುಣೆಯಿಂದ ವೇಗ ಹೆಚ್ಚಿಸಿಕೊಂಡು ಭರ್ರೆಂದು ಹಾರತೊಡಗುತ್ತಿದ್ದವು. ಪುಣೆಯಿಂದ ಕೊಲ್ಲಾಪುರದ ವರೆಗೆ ''ಆಮಚೀ ಮಹಾರಾಷ್ಟ್ರ'ದಲ್ಲಿ ಟ್ರಕ್ಕುಗಳ ಹಿಂಬದಿಗೆ ಆಗೀಗ ''ಗಡ ಆಲಾ ಪಣ ಸಿಂಹಗೇಲಾ'' (ಕೋಟೆ ದಕ್ಕಿತು ಆದರೆ ಸಿಂಹ ಸತ್ತಿತು) ಎಂಬಂತಹ ಐತಿಹಾಸಿಕ ಬರಹಗಳೂ ತಾಯಿ ಭವಾನಿ ಶಿವಾಜಿಗೆ ಖಡ್ಗ ಕೊಟ್ಟ, ಕೌಪೀನ ಧಾರಿ ಸಂತ ರಾಮದಾಸರು ಶಿವಾಜಿಗೆ ಆಶೀರ್ವದಿಸುತ್ತಿರುವ ಚಿತ್ರಗಳೂ ಮತ್ತೆ ಮತ್ತೆ ಕಣ್ಣಿಗೆ ಬೀಳುತ್ತಿದ್ದವು. ಆಗೀಗ ''ಜಾ ಮುಲೀಜಾ ದಿಲ್ಯಾಘರೀ'' (ನಮ್ಮ ಮನೆಯಂಗಳದಿ ಬೆಳೆದೊಂದ ಹೂವನ್ನು) ಎಂಬಂತಹ ಮದುವೆಯಲ್ಲಿ ಮಗಳನ್ನು ಕಳುಹಿಸುವ ಬರಹಗಳೂ; ಏನಿಲ್ಲೆಂದರೂ ಕನಿಷ್ಟ ''ರಾಮ ರಾಮ ಪಾಹುಣೇ'' (ಶುಭಸ್ತೇ ಪಂಥಾನಃ) ದಂತಹ ಸಾದಾ ಬರಹಗಳೂ ಸಾಕಷ್ಟು ನೋಡಲು ಸಿಗುತ್ತಿದ್ದವು. ಈ ಮರ್ದ ಮರಾಠಾ ಪ್ರದೇಶಗಳು ಹಿಂದೆ ಹಿಂದೆ ಸರಿಯುತ್ತ, ನಮ್ಮ ಗಂಡು ಮಟ್ಟಿನ ಕನ್ನಡದ ಬೆಳಗಾವಿ ಹತ್ತಿರ ಹತ್ತಿರ ಬರುತ್ತಿದ್ದಂತೆ. ''ಜೈ ಭುವನೇಶ್ವರಿ'', ''ಕಾಯಕವೇ ಕೈಲಾಸ'', ''ಕೈ ಕೆಸರಾದರೆ ಬಾಯಿ ಮೊಸರು'' ''ಕಿತ್ತೂರ ಕಲಿ ಸಂಗೊಳ್ಳಿ ರಾಯಣ್ಣ'' ದಂತಹ ಸಾಹಿತ್ಯ ಪ್ರದರ್ಶನೀ ಟ್ರಕ್ಕುಗಳು ಸಾಲುಗಟ್ಟಿರುತ್ತಿದ್ದವು. ಧಾರವಾಡ ಹತ್ತಿರ ಹತ್ತಿರವಾದಂತೆ ''ಉಳವಿ ಬಸವೇಶ್ವರ ಪ್ರಸನ್ನ'' ''ಇನ್ನೂ ಯಾಕೆ ಬರಲಿಲ್ಲವಾ ಹುಬ್ಬಳ್ಳಿಯಾಂವಾ'' ''ಮಂತ್ರಾಲಯ ಮಹಾತ್ಮೆ''ಗಳ ಭರಾಟೆ ನೋಡಸಿಗುತ್ತಿತ್ತು.

ಒಮ್ಮೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬೆಳಗಿನ ಹೊತ್ತು ಬರುತ್ತಿದ್ದಾಗ ಹರಿಹರದ ಬಳಿ ಒಂದು ಹೊಸ ಹೊಸ ಟ್ರಕ್ಕು, ತಿಕ್ಕಿ ತೊಳೆದು ಸಿಂಗಾರಗೊಂಡದ್ದು ''ಬೀದಿ ಬಸವಣ್ಣ'' ಎಂದು ಬರೆದುಕೊಂಡು ಒಳ್ಳೇ ಗತ್ತಿನಲ್ಲಿ 'ಭಳಿರೇ ಎನ್ನಯ ಸಮಾನರಾರೈ' ಎಂದು ಕುಣಿ ಕುಣಿಯುತ್ತ ಓಡುತ್ತಿತ್ತು. ಈ ಬೀದಿ ಬಸವಣ್ಣನ ಹಿಂದೆ ತುಸುವೇ ಅಂತರದಲ್ಲಿ ಒಂದು ಚಿಕ್ಕ ಹೆಣ್ಣು ಟ್ರಕ್ಕು ಯೌವನಸ್ಥೆ, ರೂಪಶಿ ''ಹೊಸಲು ದಾಟಿದ ಹೆಣ್ಣು'' ಎಂದು ನಾಮಫಲಕ ಹೊತ್ತು ಬಾಗುತ್ತ ಬೆದರುತ್ತ, ಬೀಗುತ್ತ ಬಳುಕುತ್ತ, ತನ್ನದೇ ವೇಗದಲ್ಲಿ ಓಡುತ್ತಿತ್ತು. ನಮ್ಮ ಕಾರು ಪಕ್ಕಕ್ಕೆ ಸರಿದು ಈ ಹುಡುಗರಿಗೆ ದಾರಿ ಮಾಡಿಕೊಟ್ಟಿತು. ಹೊಸಿಲು ದಾಟಿದ ಹೆಣ್ಣಿನ ಈ ಬಿಂಕದ, ಬಳಕು ನಡೆಯನ್ನು ಕುತೂಹಲದಿಂದ ನೋಡುತ್ತಿದ್ದೆ. ಅದರ ಹಿಂದೆ ಎಡಗಡೆಯ ಗಾಲಿ ಪಂಕ್ಚರ ಆಗಿತ್ತು, ಮುಂದಿನ ಬಲಗಡೆಯ ಮಡ್ಡಗಾರ್ಡು ಸಡಿಲಾಗಿ, ಹೊಸಿಲು ದಾಟದ ಹೆಣ್ಣು ತೂಗುತ್ತ

ತೊನೆಯುತ್ತ ನಡೆದಿತ್ತು. ಕ್ಷಣ ಬಿಟ್ಟು ಇವೆರಡರ ಮಧ್ಯ ತೂರಿಕೊಂಡು ಒಂದು ಬೃಹದಾಕಾರದ ಟ್ರಕ್ಕು ''ರೌಡಿ ರಂಗಣ್ಣ'' 'ಹೋ' ಎಂದು ಸಿಂಹ ಗರ್ಜನೆ ಮಾಡುತ್ತ ಹಾರಿ ಹೋಯಿತು. ಹೀಗೆ ಹಾರಿ ಹೋಗುವಾಗ ಈ ರೌಡಿ ರಂಗಣ್ಣ ಹೊಸಿಲು ದಾಟಿದ ಹೆಣ್ಣನ್ನು ನೋಡಿ, ಮುಂದೆ ಹೋದವನು ದಾವಣಗೆರೆಯ ಬಳಿ ವೇಗ ತಗ್ಗಿಸಿ, ಇನ್ನೊಮ್ಮೆ ಜಂಭದಿಂದ ಈ ಹೆಣ್ಣು ಟ್ರಕ್ಕಿನ ಬಳಿ ಸಾರಿ ಕುಣಿದು ಕುಪ್ಪಳಿಸುತ್ತ ಅವಳೆಡೆ ವಾರೆ ನೋಟ ಬೀರುತ್ತ ನಡೆದ. ಈಗ ಇವರಿಬ್ಬರ ಹಿಂದೆ ಇದ್ದ ಬೀದೀ ಬಸವಣ್ಣನನಿಗೆ ಕೋಪ ಬಂತೋ, ಅಥವಾ ನಾನೇನು ಕಡಿಮೆ ಎಂದುಕೊಂಡೋ, ಅವ ''ಹುಯ್ಯೋ....'' ಎಂದು ಬೊಬ್ಬಿರಿಯುತ್ತ ಮುಂದೆ ಓಟ ಕಿತ್ತ ಹೀಗೆ ಚಿತ್ರದುರ್ಗದವರೆಗೆ ಬೀದಿ ಬಸವಣ್ಣನಿಗೂ ರೌಡಿ ರಂಗಣ್ಣನಿಗೂ ವಿಪರೀತ ಪೈಪೋಟಿ. ಒಮ್ಮೆ ಬಸವಣ್ಣ ಹೆಣ್ಣಿಗೆ ಕಣ್ಣು ಮಿಟುಕಿಸಿ ಮುಂದೆ ಓಡಿದರೆ, ರಂಗಣ್ಣ ಮೆಲ್ಲನೇ ಅವಳ ಜತೆ ಸಲ್ಲಾಪಗೈಯುತ್ತ ಕುಚೇಷ್ಟೆ ಮಾಡುತ್ತ ನಡೆದಿರುತ್ತಿದ್ದ. ಇನ್ನೊಮ್ಮೆ ಬಸವಣ್ಣ ಅವಳ ಬಳಿ ಸಾರಿ, ''ಆಕಾಶವೇ ಬೀಳಲಿ ಮೇಲೆSSS ನಾನೆಂದು ನಿನ್ನವನು'' ಎಂದು ಹಾರ್ನು ಬಾರಿಸುತ್ತ ಪ್ರಣಯ ಭಿಕ್ಷೆ ಬೇಡುತ್ತ ನಡೆದಿರುತ್ತಿದ್ದರೆ, ರಂಗಣ್ಣ ಹೆಣ್ಣಿನ ಮೆಚ್ಚುಗೆ ಗಳಿಸಲು, ಶೌರ್ಯ ಪ್ರದರ್ಶನ ಮಾಡುತ್ತ ಭರ್‍ರೆಂದು ಶರವೇಗದಿಂದ ಓಡುತ್ತಿದ್ದ. ಒಮ್ಮೆ ಬಸವಣ್ಣ ಮುಂದೆ ರಂಗಣ್ಣ ಹಿಂದೆ; ಇನ್ನೊಮ್ಮೆ ರಂಗಣ್ಣ ಮುಂದೆ ಬಸವಣ್ಣ ಹಿಂದೆ. ಹೆಣ್ಣು ಮಾತ್ರ ಈ ಇಬ್ಬರು ಸಾಹಸೀ ಯುವಕರ ಪ್ರಣಯಾರಾಧನೆಯನ್ನು ಮೆಚ್ಚಿ ಸ್ವೀಕರಿಸುತ್ತ ಅವರಿಬ್ಬರನ್ನು ಕೀಟಲೆ ಮಾಡುತ್ತ ನಡೆದಿತ್ತು.

ನಾನು ಹಿರಿಯೂರಿನಲ್ಲಿ ಎಳೆ ನೀರು ಕುಡಿದು ವಿಶ್ರಾಂತಿಗೆಂದು ನಿಂತೆ. ಪ್ರಣಯಿಗಳು ಎತ್ತ ಹೋದರೋ ಹೋದರು. ಅರ್ಧಗಂಟೆ ಬಿಟ್ಟು ನಾನು ಮತ್ತೆ ಬೆಂಗಳೂರು ಮುಖವಾಗಿ ಪ್ರಯಾಣ ಬೆಳೆಸಿದೆ. ಬಿಸಿಲು ಬಲಿಯುತ್ತಿತ್ತು. ನನ್ನ ಕಣ್ಣು ಎಳೆಯುತ್ತಿತ್ತು. ಹಿಂದಿನ ಸೀಟಿನಲ್ಲಿ ಹಗೂರಾಗಿ ಒಂದು ಸಣ್ಣ ನಿದ್ದೆ ತೆಗೆಯುತ್ತಿದ್ದ ನಾನು ಶಿರಾದ ಬಳಿ ಏನೋ ಗದ್ದಲಕ್ಕೆ ಡ್ರಾಯವ್ಹರ ಕಾರನ್ನು ಪಕ್ಕಕ್ಕೆ ಜರುಗಿಸಿದಾಗ ನಿಚ್ಚಳವಾಗಿ ಎಚ್ಚರವಾಯಿತು. ಕಾರಿನ ಕಿಟಕಿಯಿಂದ ಹೊರಗೆ ಹಣಕಿ ನೋಡಿದೆ, ರೌಡಿ ರಂಗಣ್ಣನೂ ಹೊಸಲು ದಾಟಿದ ಹೆಣ್ಣೂ ರಸ್ತೆ ಬದಿಯ ಆಳವಾದ ಹೊಂಡಕ್ಕೆ ಧುಮುಕಿ ಒಂದನ್ನೊಂದು ಗಟ್ಟಿಯಾಗಿ ತಬ್ಬಿಕೊಂಡು ಪ್ರಾಣ ತ್ಯಾಗ ಮಾಡಿದ್ದವು. 'ಅಯ್ಯೋ ಪಾಪ' ಎಂದುಕೊಂಡು ಮುಂದೆ ನಡೆದೆ. ಹತ್ತು ಮಾರು ದೂರದಲ್ಲಿ ಬೀದಿ ಬಸವಣ್ಣ ಒಂದು ಬೃಹತ್ ಬೇವಿನ ಮರಕ್ಕೆ ತಲೆ ಘಟ್ಟಿಸಿ ಪೆಟ್ರೋಲ್ ಕಕ್ಕಿ ಸುಟ್ಟುಕೊಂಡು ಸತ್ತು ಬಿದ್ದಿತ್ತು.

ಈ ಪ್ರಣಯ ದುರಂತಕ್ಕೆ ಹನಿ ಕಂಬನಿ ಮಿಡಿದು ನಾನು ಮುಂದೆ ನಡೆದೆ.


ಒಮ್ಮೆ ಧಾರವಾಡದಲ್ಲಿ ಆಟೋದಲ್ಲಿ ಪ್ರಯಾಣಿಸುತ್ತಿದ್ದೆ. ಮೊದಲೇ ಧಾರವಾಡದ ಏರು ತಗ್ಗುಗಳ ಹೊಂಡ ತಿಟ್ಟುಗಳ ದಾರಿ, ಅದರಲ್ಲಿ ಉತ್ಸಾಹಿ ಯುವ ಚಾಲಕ. ಕೇಳಬೇಕೆ ಆಟೋ ಕುಣಿ ಕುಣಿದು ಕುಪ್ಪಳಿಸಿ ನನ್ನನ್ನು ಎತ್ತಿತ್ತಿ ಕುಕ್ಕಿ, ತಿಕ್ಕಿ ಮುಕ್ಕಿ ಅಂತೂ ಗುರಿ ಮುಟ್ಟಿಸಿತು. ನಾನು ಮೈ ಕೈ ಹಿಸುಕಿಕೊಳ್ಳುತ್ತ ಆಟೋದವನಿಗೆ ದುಡ್ಡು ಕೊಟ್ಟೆ. ಆಟೋ ಭರ್ರೆಂದು ಓಡಿತು. ಹಿಂದೆ ''ಕುಣಿಯೋಣು ಬಾರಽಽ ಕುಣಿಯೋಣು ಬಾ'' ಎಂದು ಬರೆದುಕೊಂಡಿದ್ದ.

ಇನ್ನೊಮ್ಮೆ ಧಾರವಾಡದ್ದೇ ಒಂದು ಆಟೋ ನನ್ನನ್ನು ಎತ್ತಿ ಕುಕ್ಕಿ, ತೀಡಿ ತಿವಿದು ಒಂದು ಹೊಂಡದಲ್ಲಿ ಒಗೆದೇ ಬಿಟ್ಟಿತ್ತು. ನಾನು ಮೈ ಕೈಗಳಿಗಾದ ತರಚಿದ ಗಾಯಗಳನ್ನು ನೀವಿಕೊಳ್ಳುತ್ತ ಬಟ್ಟೆಯ ಧೂಳು ಕೊಡಹುತ್ತ ಆಟೋಟ ಕಡೆಗೆ ಕೋಪದಿಂದ ದುರುಗುಟ್ಟಿ ನೋಡಿದೆ.

''ನೀ ಹೀಂಗಽ ನೋಡಬ್ಯಾಡಽ ನನ್ನಽಽ'' ಎಂದು ಬರಕೊಂಡಿತ್ತು.

ಅಂತೂ ಸಂಚಾರೀ ಸಾಹಿತ್ಯವನ್ನು ಓದಿ, ನೋಡಿ, ತಿಳಿದು ಅನುಭವಿಸಲು ಒಳಗಣ್ಣು ಬೇಕು (ಅಂದರ ಸ್ವಲ್ಪ ತಲೆ ಕೆಟ್ಟಿರಬೇಕು) ಅಷ್ಟೇ!

- ಆಕಾಶವಾಣಿ ಕೃಪೆಯಿಂದ





ಶರಲೇಖನ ಸಾಹಸ



⊙ ಓಂ ಪ್ರಕಾಶ್

ಆಹಾ! ಆ ಭಾನುವಾರ ಬೆಳಗ್ಗೆ; ನಾನು ಜೀವನದಲ್ಲೇ ಮರೆಯಲಾರೆ! ಯಾವಾಗಲೂ ನಿಧಾನವಾಗಿ ಏಳುತ್ತೀಯ ಎಂದು ನನ್ನನ್ನು, ಪ್ರಖ್ಯಾತ ಪತ್ತೇದಾರನನ್ನು ಸದಾ ಹೀಯಾಳಿಸುತ್ತಿದ್ದ ವತ್ಸನ, ಈಗ (ಏಳು ಗಂಟೆಗೆ) ಇನ್ನೂ ಹಸು ಗೂಸಿನಂತೆ ನಿದ್ರಾವಶನಾಗಿದ್ದಾನೆ. ನಾನು ಆರು ಗಂಟೆಗೇ ಎದ್ದು, ಜಾಗಿಂಗ್ ಮುಗಿಸಿ ಹುಸೇನ ಕೊಟ್ಟ ಕಾಫಿ ಹೀರುತ್ತಿದ್ದೇನೆ. ಅಂದ ಹಾಗೆ ಈ ವತ್ಸನ ನನ್ನ ಪರಮ ಮಿತ್ರ! ನನ್ನ ಪರಾಕ್ರಮಗಳನ್ನೆಲ್ಲ, ಉಪ್ಪು ಖಾರ ಬೆರಸಿ ನಿಮಗೆಲ್ಲ ಔತಣ ಮಾಡಿಸುತ್ತಿದ್ದ ಸೈಡ್ ಕಿಕ್! ಪಾಪ! ನನ್ನ ಚತುರತೆ, ಬುದ್ಧಿ ಶಕ್ತಿಗಳನ್ನು ನೋಡಿಯೂ ತನ್ನ ಲೇಖಣಿಯನ್ನ ಮತ್ಸರವಿಲ್ಲದೆ ಓಡಿಸುತ್ತಿದ್ದ ಪ್ರಾಣಿ! ಈ ನನ್ನ ಕೇಸ್ ಬುಕ್‌ನಲ್ಲಿ ಮುಂದೆ ಯಾವ ಸಾಹಸ ಬರುತ್ತೆ ಎಂದು ಚಾತಕ (ಕೆಲವರು ಹುಂಬರು ಜಾತಕ ಅಂತ ಬರೀತಾರೆ!) ಪಕ್ಷಿಯಂತೆ ಕಾಯುತ್ತಿರುವ ಜನತೆಗೆ ನನ್ನ ಪ್ರಣಾಮಗಳು!

ಅರೆ, ಇದೇನು! 'ಯಾರದು ಹುಸೇನ?' ಹುಸೇನ ಬಂದ. 'ಯಾರೋ ಇಬ್ಬರು ತಮ್ಮನ್ನ ಅರ್ಜೆಂಟಾಗಿ ನೋಡಬೇಕಂತೆ' ಅಂದ. ಒಬ್ಬ ಉದ್ದನೆಯ ವ್ಯಕ್ತಿ, ಅವನ ಹಿಂದೆಯೇ ಅವನ ಅನುನಾಯಿ (Hutch ಜಾಹೀರಾತಿನಂತೆ) ನಡೆದು ಬಂದರು. ವತ್ಸನ ಎದ್ದು ಕಾಫೀ ಕುಡೀತಿದ್ದ. ನಾನು, 'ಬನ್ನಿ' ನಿಮ್ಮ ಸಮಸ್ಯೆ? ಅಂತ ಹುಚ್ಚೇರಿಸಿದೆ. ಉದ್ದನೆ ಆಸಾಮಿ, 'ಸ್ವಾಮಿ, ನಾನು ಶಿವಣ್ಣ, ಪಬ್ಲಿಷರ್! ಇವರು ವಿಕಟ ಕವಿ - ನಂಜುಂಡ ಅಂತ! ಪ್ರಖ್ಯಾತ ಹಾಸ್ಯ ಲೇಖಕರು. ಇವರು ಈಚೆಗೆ ಒಂದು ಹಾಸ್ಯಲೇಖನಗಳ ಸಂಕಲನವನ್ನ ಬರೆದರು. ಆಹಾ, ಅದನ್ನ ಯೋಚನೆ ಮಾಡಿದರೇ ನಗು ಬರುತ್ತೆ! ನಾನು ಅದನ್ನ ಓದಿ ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಗಿ ಹತ್ತು ದಿನ ಆಸ್ಪತ್ರೇಲಿ ಇದ್ದೆ ಸ್ವಾಮಿ! ಆ ಪುಸ್ತಕದ ಕರಡು ಪ್ರತೀನ ಯಾರೋ ದುರಾತ್ಮ ಕದ್ದು ಬಿಟ್ಟಿದಾನೆ. ಇವರೋ ಪಾಪ Xerox copy ಇಟ್ಟಿಲ್ಲ! ನೀವು ಕೇಳುಕ್ಕೆ ಮುಂಚೇನೇ ಹೇಳ್ತೀನಿ! ಇವರು ಕಂಪ್ಯೂಟರ್ ನಿರಕ್ಷರಕುಕ್ಷಿ, ಪಾಪ!''

ನಮಗೆ ತೋಚಿದ ಕಡೆ ಎಲ್ಲ ವಿಚಾರಿಸಿ ನೋಡಿದ್ದಾಯಿತು! ಏನೂ ಫಲವಿಲ್ಲ. ಯಾರೋ ಹೇಳಿದರು, ಶರಲೇಖರ ಹತ್ರ ಹೋಗಿ! ಆತನಿಗೆ solving a case is its own reward ಅಂತ! ಅದಕ್ಕೇ ಇಲ್ಲಿ ಧಾವಿಸಿ ಬಂದೆವು.

ಸುಮಾರು ಎರಡು ವರ್ಷದಿಂದ ಬೆವರು ಹರಿಸಿ ಸಿದ್ಧ ಮಾಡಿದ ಪುಸ್ತಕ ಕಳವಾಗಿದೆ! ಪೋಲೀಸರಿಗೆ ಹೇಳುಕ್ಕೆ ನಮಗೆ ಇಷ್ಟವಿಲ್ಲ! ನೀವೇ, ಶರಲೇಖರೇ ದಾರಿ ತೋರಿಸಬೇಕು!''

ನಾನು ಗಂಭೀರನಾದೆ. ವತ್ಸನ ನಸುನಗುತ್ತ, ''ಕುಂಬಾರನಿಗೆ ಒಂದು ವರ್ಷ, ಕಳ್ಳನಿಗೆ ಒಂದು ನಿಮಿಷ!'' ಅಂದ. ನನಗೆ ಆಶ್ಚರ್ಯ ಆಯಿತು. ಇಷ್ಟು ವರ್ಷ ನನ್ನ ಜತೆ ಇದ್ದು ಹಾಸ್ಯ ಪ್ರಜ್ಞೆಯನ್ನು ಎಳ್ಳಷ್ಟೂ ತೋರದ ವತ್ಸನ ಕಿಡಿ ಹಾರಿಸುತ್ತಾನಲ್ಲ! ಇರಲಿ; ''ನೋಡಿ, ಒಂದು ವಾರ ಟೈಂ ಕೊಡಿ. ಅಷ್ಟರಲ್ಲಿ ಈ ಕೇಸನ್ನ ಸಾಲ್ವ ದಿದ್ದರೆ ನನ್ನ ಹೆಸರು ಶರಲೇಖ ಅಲ್ಲ'' ಅಂತ ಕೂಗಿದೆ. ವತ್ಸನ ಹೇಳಿದ: ''ಆ ಕಳ್ಳ ಈ ಪುಸ್ತಕಾನ ಪಬ್ಲಿಷ್ ಮಾಡದೇ ತನ್ನ ಹತ್ರ ಇಟ್ಟುಕೊಂಡಿದ್ರೆ ನಿಮಗೇನೂ ನಷ್ಟವಿಲ್ಲ ಅಲ್ಲವೇ?'' ಶಿವಣ್ಣನಿಗೆ ಕೋಪ ಬಂತು. ''ನನ್ನ ಜನತೆಗೇ ನಷ್ಟ ಸ್ವಾಮಿ! ನಭೂತೋ ನ ಭವಿಷ್ಯತಿ ಅನ್ನೋ ತರಹ ಪುಸ್ತಕ ಕಳಕೊಂಡು ಸುಮ್ಮನೆ ಕೂರುಕ್ಕೆ ಆಗುತ್ತದೆಯೇ? ಎಷ್ಟು ಜನ ಅದನ್ನು ಓದಿ ನಕ್ಕು ಸಂತಸ ಪಡಬೇಕು!!

ಶರಲೇಖ ಅವರೇ, ನೀವೆಂದಂತೆ ಒಂದು ವಾರ ಆದಮೇಲೆ ಬರ್ತೀವಿ! ನಮಸ್ತೇ! ದುಡ್ಡಿನ ಬಗ್ಗೆ ಯೋಚಿಸಬೇಡಿ!'' ಎಂದು ಶಿವಣ್ಣ, ವಿಕಟಕವಿ ಹೊರಟರು.

ನಾನು 'ವತ್ಸನ, ನಿನಗೇನು ಅನ್ನಿಸುತ್ತೆ?' ಎಂದೆ. ವತ್ಸನ 'ಶರಲೇಖ, ಇದು Impossible Task! ಈ ಮಹಾನಗರದಲ್ಲಿ ಎಲ್ಲಿ ಹುಡುಕೋದು? ಎಂದ. ಹುಲ್ಲಿನ ಮೆದೆಯಲ್ಲಿ ಸೂಜಿ ಹುಡುಕಿದಂತೆ, ಅಲ್ಪಜ್ಞ!' ಎಂದು ನಕ್ಕ. ನಾನು, ವತ್ಸನ, ಇದು ನಗೋ ಮಾತಲ್ಲ, ಬಾ!' ಎಂದು ಹೊರಟೆ. ನೇರವಾಗಿ ಅಪರಂಜಿ ಸಂಪಾದಕರ ಮನೆಗೆ ಹೋದೆವು. ಅವರ ಮನೆಯಲ್ಲೋ, ರೂಮಿಗೊಂದು ಕಸದ ಬುಟ್ಟಿ! ಒಂದು ಕಡೆ ಮೂಲೇಲಿ ಒಂದು ದೊಡ್ಡ ಡ್ರಂ! ಅದರ ಮೇಲೆ "Recycle Bin" ಅಂತ ಲೇಬಲ್! ನಾನು ಸಂಪಾದಕರಿಗೆ ವಿಷಯ ತಿಳಿಸಿದೆ. 'ನೋಡಿ, ಈ ಕಳ್ಳ ದುಡ್ಡಿಗೋಸ್ಕರ ಈ ಕೆಲಸ ಮಾಡಿಲ್ಲ! ತಾನೂ ಹಾಸ್ಯ ಲೇಖಕ ಅನ್ನಿಸಿಕೊಳ್ಳುಕ್ಕೆ ಕದ್ದಿದಾನೆ. ನಂ ಅಪರಂಜೀಗೆ ಯಾವುದಾದರೂ ತೀರ ಒಳ್ಳೆ ಆರ್ಟಿಕಲ್ ಬಂದರೆ ಕಳಿಸಿದವರ ವಿಳಾಸ ನಿಮಗೆ ತಿಳಿಸ್ತೀನಿ!' ಅಂದರು ಸಂಪಾದಕರು. ನಾನು ವತ್ಸನನ ಕಡೆ ನೋಡಿದೆ. ಅವನು ''ಅಲ್ಲ ಸ್ವಾಮಿ, ಕುಂಬಳಕಾಯಿ ಕದ್ದೋನು ಅದನ್ನ ಹೆಗಲ ಮೇಲೆ ಇಟ್ಟುಕೊಂಡು ಓಡಾಡುತ್ತಾನೇನು?'' ಎಂದು ನಕ್ಕ. ಸಂಪಾದಕರು ಪಾಪ, ತಾವೂ ನಕ್ಕರು. ನಗರದ ಪ್ರಸಿದ್ಧ ಪತ್ರಿಕೆಗಳಿಗೂ ಸುದ್ದಿ ಮುಟ್ಟಿಸಿದ್ದಾಯಿತು. ಎರಡು ದಿನ ಆದಮೇಲೆ ಶಿವಣ್ಣ ಫೋನ್ ಮಾಡಿದರು. ನಾನು ''ಒಂದು ವಾರ ಆದಮೇಲೆ ಬನ್ನಿ'' ಎಂದು ತಪ್ಪಿಸಿಕೊಂಡೆ. ಸಂಜೆ ವತ್ಸನ ವಾಕಿಂಗ್ ಮುಗಿಸಿ ಬಂದ. "Any progress?" ಅಂದ. ನಾನು ಗಂಭೀರವಾಗಿ "oh yes!" ಅಂದೆ. ಅಪರಂಜಿ ಸಂಪಾದಕರ ಮನೆಯಿಂದ ಫೋನ್

ಬಂತು. 'ಒಂದು ಹಾಸ್ಯ ಲೇಖನ ಬಂದಿದೆ! The best I have read! ನಕ್ಕೂ ನಕ್ಕೂ ....'' ನಾನು 'ಬೇಡ, ಹೊಟ್ಟೆ ಹುಣ್ಣಾಗುತ್ತೆ!' ಎಂದೆ ಸಂಪಾದಕರು, 'ಆದರೆ ಕಳಿಸಿದವರ ವಿಳಾಸ ಇಲ್ಲ. author ಹೆಸರು ಮಾತ್ರ ಇದೆ. ಶರಲೇಖ - ಅಂತ! ನಾನು ಒಂದು ಕ್ಷಣ ತಬ್ಬಿಬ್ಬಾದೆ. ನಂತರ ನಕ್ಕೆ ಪರವಾಗಿಲ್ಲ! I have met my match in crime ಅಂತ ಅಂದುಕೊಂಡೆ. ಸಂಪಾದಕರು 'ಆ ಲೇಖನದ ಪ್ರತಿ ಕಳಿಸ್ತೀನಿ! ನಿಮಗೇನಾದರೂ ಕ್ಲೂ ಸಿಕ್ಕಬಹುದು' ಅಂದರು.

ಲೇಖನ ಓದಿದೆ. ಎರಡೇ ನಿಮಿಷದಲ್ಲಿ ಜೆಲುಸಿಲ್ ಕುಡಿದೆ!! ಆಹಾ, ಎಂತಹ ಹಾಸ್ಯಭರಿತ ಬರಹ Brilliant! ಅಂತ ಮೆಚ್ಚಿದೆ. ಲೇಖನದ ಕೊನೆಗೆ, ಒಂದು ಭಾರೀ ಕ್ಲೂ ಸಿಕ್ಕಿತು! ಕಳ್ಳ ಯಾರು ಅಂತ ಗೊತ್ತಾಗಿ ಹೋಯ್ತು! ನನಗೋ ಈಗ mixed emotions! ಸಂಧಿಗ್ಧ ಪರಿಸ್ಥಿತಿ!!

ಸಂಜೆ ಶಿವಣ್ಣ, ವಿಕಟಕವಿ ಬಂದರು. ಹುಸೇನ ಎಲ್ಲರಿಗೂ ಟೀ ತಂದ, ಎಲ್ಲರೂ ನನ್ನ ಕಡೆ ನೋಡಿ ಹುಬ್ಬೇರಿಸಿದರು. ನಾನು ''ವತ್ಸನ, ಇವರ ಪುಸ್ತಕದ ಕರಡು ಪ್ರತೀನ ಸೇಫ್‌ನಲ್ಲಿ ಇಟ್ಟಿದೀನಲ್ಲ, ದಯವಿಟ್ಟು ತಾ!'' ಎಂದೆ. ವತ್ಸನನ ಹಣೆಯ ಮೇಲೆ ಬೆವರಿನ ಹನಿಗಳು! ನಿಧಾನವಾಗಿ ಎದ್ದು, ನಾನು ಹೇಳಿದಂತೆ ಮಾಡಿದ. ಪುಸ್ತಕ ನೋಡಿ ಶಿವಣ್ಣ, ವಿಕಟಕವಿ ಕುಣಿದು ಕುಪ್ಪಳಿಸಿದರು. ನಾನು, ''ಪರ್ಷಿಯಾದ ಕಾರ್ಪೆಟ್ ಹಾಳಾಗುತ್ತೆ! ದಯವಿಟ್ಟು ಕುಣಿಯಬೇಡಿ! ಎಂದೆ. ಶಿವಣ್ಣ 'ಕಳ್ಳ ಯಾರು?' ಎಂದ. ನಾನು, ''ಋಷಿ ಮೂಲ, ನದೀ ಮೂಲ ಹುಡುಕಬಾರದು ಅಂತಾರೆ ಹಿರಿಯರು'' ಅಂದೆ. ಪಿಟೀಲು ಕೈಗೆ ತೆಗೆದುಕೊಂಡು ''ಕಂಗಳಿದ್ಯಾತಕೋ'' ಶುರುಮಾಡಿದೆ! ವತ್ಸನ ಬೆಚ್ಚಿ ''ಶರಲೇಖ, ನೀನೂ ಕ್ಲಾಸಿಕಲ್....'' ಅಂತ ತಡವರಿಸಿದ. ನಾನು ಗಂಭೀರವಾಗಿ, 'ವತ್ಸನ, ಯಾವುದೇ ಕೇಸ್ ಸಾಲ್ವ್ ಮಾಡುವಾಗ ನನಗೆ, ಹೊಸ ಹುರುಪು ಬರುತ್ತೆ! ಹಳೇ ಹಾಡೊಂದಕ್ಕೆ, ನನ್ನದೇ ಲಿರಿಕ್ಸ್ ಸೇರಿಸಿ ಹಾಡ್ತೀನಿ! ಈಗ ನೋಡು, ಕಂಗಳಿದ್ಯಾತಕೋ, ಕ್ಲೂಗಳ ಚಂದವ ನೋಡದಾ!' ಅಂದೆ.

ಸಂಜೆ ವತ್ಸನ ಕೇಳೇ ಬಿಟ್ಟ. ನಾನೇ ಕಳ್ಳ ಅಂತ ನಿನಗೆ ಹೇಗೆ ಅನುಮಾನ ಬಂತು ಅಂತ.

ನಾನೆಂದೆ 'ವತ್ಸನ, ಆ ವಿಕಟಕವಿ, ಲೇಖನ ಒಂದರಲ್ಲಿ ಕುಂಬಳಕಾಯಿ ಕದ್ದೋನು ಅದನ್ನ ಹೆಗಲ ಮೇಲೆ ಇಟ್ಟುಕೊಂಡು ಓಡಾಡುತ್ತಾನೇನು ಅಂತ ಇನ್ಸ್‌ಪೆಕ್ಟರ್ ಕೇಳ್ತಾನೆ. ನೀನು ಅದನ್ನೇ ಕೊಟ್ಟಿದ್ದು, plus, ನಿನಗೆ ಹಾಸ್ಯಪ್ರಜ್ಞೆ ಇಲ್ಲ ಅಂತ ಇರೋ ಡೀಪ್ ಸೀಟೆಡ್ ಕಾಂಪ್ಲೆಕ್ಸ್, ಎರಡೂ ಸೇರಿ ಕೇಸ್ ಯಾವಾಗಲೋ ಸಾಲ್ವಾಗಿತ್ತು!''

ವತ್ಸನ ಚಂಗನೆ ಎಗರಿದ. ಅವನು ನನ್ನ ಫೇವರೆಟ್ ಪರ್ಷಿಯನ್ ಕಾರ್ಪೆಟ್ ಮೇಲೆ ಬೀಳುತ್ತಿರುವ ಭೀಭತ್ಸ ದೃಶ್ಯ ನೋಡಲಾರದೆ, ಕಣ್ಣು ಮುಚ್ಚಿಕೊಂಡೆ!!

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ।
ನಗುವ ಕೇಳುತ ನಗುವದತಿಶಯದ ಧರ್ಮ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ।
ಮಿಗೆ ನೀನು ಬೇಡಿಕೊಳೊ - ಮಂಕುತಿಮ್ಮ॥
(ಡಿ.ವಿ.ಜಿ. - ಮಂಕುತಿಮ್ಮನ ಕಗ್ಗ)

Laughter is an inherent trait; to induce laughter is of utmost merit Hearing peals of laughter, laughing explosovely is an excellent gift to live happliy in mirth bringing laughter to others and laughing with them is a great boon

Invoke the Almightly for that blessing

(D. Seshagiri Rao - The Ramblings of Thimma, the Dull)



ಥ್ಯಾಂಕ್ಯೂ ಅಪರಂಜಿ,
ನೀನು ಮಾಡುತ್ತಿರುವುದೂ ಅದೇ!

- ಶ್ಯಾಮಲಾ ಸತ್ಯ, ತಮ್ಮ ತಂದೆಯವರ ನೆನಪಿನಲ್ಲಿ.....



BATA

⊙ ಸಿ.ಆರ್. ಸತ್ಯ

ಒಸ್ನಿ ಎಲ್ಲರೂ BATA ಗೇ! ಎಲ್ಲರೂ ಸೇರಿ, BATA ಎಕ್ಕಡ ಬೂಟು ಖರೀದಿ ಮಾಡೋಕ್ಕಲ್ಲಾರೀ. ಇದು ಆ BATA ಅಲ್ಲ! ಇದು ಈಗ ತಾನೇ ಬೆಂಗಳೂರಿನಲ್ಲಿ ಉದ್ಭವ ಆಗಿರುವ ಒಂದು ಹೊಸಾ ಸಂಸ್ಥೆ. ನಾನೇ ಉಪಾಧ್ಯಕ್ಷ. ನನ್ನ ಹೆಂಡತಿಯೇ ಅಧ್ಯಕ್ಷೆ. ಅದೇನು ಸ್ವಲ್ಪ ಬಿಡಿಸಿ ಹೇಳಿ ಅಂತಾ ಕೇಳಿದ್ರಾ, ಇಗೋ, ತೊಗೊಳ್ಳಿ expansionಉ! ಬೆಂಗಳೂರ್ ಅಜ್ಜಿ ತಾತ ಅಸೋಸಿಯೇಷನ್ (BATA ಫಾರ್ short!). ಸರಿ, ಇನ್ನೊಬ್ಬ ನಕ್ಷತ್ರಿಕ ನಮ್ಮ ಹತ್ತಿರ ಚಂದಾ ವಸೂಲಿ ಮಾಡೋದಕ್ಕೆ ಹುಟ್ಟಿಕೊಂಡ ಅಂತ ಬೇಸರ ಮಾಡಿಕೋಬೇಡಿ. BATA ಗೆ ಸದಸ್ಯರಾಗೋದಿಕ್ಕೆ ನಿಮಗೆ ಯಾವ ರೀತಿಯ ಚಂದವೂ ಇಲ್ಲ. ನೀವು ಅಜ್ಜಿ ಅಥವಾ ತಾತ ಆಗಿರಬೇಕು ಅಷ್ಟೆ. (ನೀವು ಆ ಘಟ್ಟವನ್ನು ತಲುಪೋದಿಕ್ಕೆ ಜೀವನದಲ್ಲಿ ಸಾಕಷ್ಟು ಹೆಣಗಿರ್ತೀರಲ್ಲಾ, ಅದಕ್ಕೆ ಈ ರಿಯಾಯಿತಿ).

ನಮ್ಮನ್ನ ಚಂದನ, ಉದಯ, ಈ-ಟೀವಿ ಆಹ್ವಾನಿಸಿ BATA ಬಗ್ಗೆ ಪ್ರಶ್ನಾವಳಿ ಕೇಳೋದಕ್ಕೆ ಮುಂಚೆ, ನಮ್ಮ ಅಪರಂಜಿ ಓದುಗರಿಗೆ ಮುಂಚಿತವಾಗಿಯೇ BATA ಸಂಸ್ಥೆಯ ಧ್ಯೇಯಗಳನ್ನು ಪರಿಚಯ ಮಾಡ್ತೀನಿ.

ಅಜ್ಜಿ ತಾತ ಆಗೋದು ಕಡಲೆಪುರಿ ಮುಕ್ಕಿದ ಹಾಗಲ್ಲ. ಜೀವನದಲ್ಲಿ ನಾನಾ ರೀತಿ ಏರುಪೇರುಗಳನ್ನು ದಾಟಿ, ದುಡಿದು, ಸುಸ್ತಾಗಿ, ಕೊನೆಯಲ್ಲಿ ನಿಮಗೇ second childhood ಬಂತು ಅಂತ ಅನ್ನಿಸಿದಾಗ, ಮೊದಲನೇ ಮೊಮ್ಮಗು ನಿಮ್ಮ ಕೈಗಳಿಗೆ ದಕ್ಕುತ್ತೆ. ಮೊಮ್ಮಗು ಹುಟ್ಟುವ ತನಕ ಏನೋ ಒಂದು ಬಗೆಯ suspenseಉ. ಹುಟ್ಟಿದ ಮೇಲೆ ಅದು ಬೆಳೆದು ಸ್ವಲ್ಪ ದೊಡ್ಡದಾಗೋತನಕ ಮನೆಯಲ್ಲಿ ಬುಸು! ಬುಸು!! ಹೀಗಾಗಿ, ಅಜ್ಜಿ ತಾತ ಅಂತ ಅನ್ನಿಸಿಕೊಂಡವರಿಗೆ, ಜೀವನದಲ್ಲಿ, ಒಬ್ಬರಿಗೊಬ್ಬರು ಹೇಳಿಕೊಂಡು ಹಂಚಿಕೊಳ್ಳುವ ಅನಿಸಿಕೆಗಳು ಬಹಳವಾಗೇ ಇರುತ್ತವೆ. ನಮ್ಮ BATA ಇದಕ್ಕೊಂದು ವೇದಿಕೆ ಅಷ್ಟೆ.

BATA ಧ್ಯೇಯಗಳ ಬಗ್ಗೆ ಸ್ವಲ್ಪ ಸಮಾಲೋಚನೆ ನಡೆಸೋಣ ಅಂತ ಕೆಲವು ಅಜ್ಜಿ ತಾತಂದರನ್ನ ಬೆಂಗಳೂರಿನಲ್ಲಿ ಹುಡುಕಾಡಿದೆವು. ಏಪ್ರಿಲ್-ಮೇ ತಿಂಗಳಿಂದ ಡಿಸೆಂಬರ್ ತನಕ ಯಾರೂ ಕಣ್ಣಿಗೇ ಬೀಳಲಿಲ್ಲ! ಎಲ್ಲರೂ Uncle Sam ದೇಶದಲ್ಲೇ ಠಿಕಾಣಿ.

ಕಾರಣ: ಮಗನ ಮನೆಯಲ್ಲಿ ಇಲ್ಲಾ ಮಗಳ ಮನೆಯಲ್ಲಿ ಮೊದಲನೆಯದೋ ಇಲ್ಲಾ ಎರಡನೆಯದೋ ಡೆಲಿವರಿ ಕೇಸು! ಇವರೆಲ್ಲಾ ಬೆಂಗಳೂರಿಗೆ ವಾಪಸ್ಸಾಗೋದು ಡಿಸೆಂಬರ್‌ನಲ್ಲೇ (ಈ ಸಮಯದಲ್ಲಿ US ನಲ್ಲಿ ನಾನಾ ಕಷ್ಟಗಳೂ ಕಾಣಿಬರುತ್ತವೆ. ಬೆಂಗಳೂರಿಗಿಂತ ಚಳಿ, ವೀಸಾ ಎಕ್ಸ್‌ಪೈರಿ, ಅಳಿಯ ಮಗಳಿಂದ ಸಾಕು, ಇನ್ನು ಹೊರಡಿ ಅಂತ indirect warnings etc.)

ಸರಿ, ಕಣ್ಣಿಗೆ ಬಿದ್ದ ಅಜ್ಜಿ ತಾತಂದಿರನ್ನ ನಾವು ಭೆಟ್ಟಿಮಾಡಿ ಅವರ Ideasನ ಕೇಳಿದ್ವಿ. ನಾವೆಲ್ಲರೂ ಖಂಡಿತ ಒಟ್ಟಿಗೆ ಸೇರಬೇಕು ಅಂತ ಎಲ್ಲರೂ ತಲೆಯಾಡಿಸಿದರು. ಹೀಗಾಗಿ BATA ಹುಟ್ಟಿತು. ಉದ್ಘಾಟನಾ ಸಮಾರಂಭದಲ್ಲೇ ಅನೇಕ ಜನ ವೇದಿಕೆ ಮೇಲೆ ಹತ್ತಿ ತಮ್ಮ ಅನುಭವಗಳನ್ನ ಅನಿಸಿಕೆಗಳನ್ನು ಹೇಳಿಕೊಂಡರು.

ನಮ್ಮ BATA ದಲ್ಲಿ ಎರಡು ಕ್ಯಾಟಗೋರಿ ಸದಸ್ಯರುಗಳಿದ್ದಾರೆ. ಮೊದಲನೇ ಗುಂಪು - ಬೆಂಗಳೂರಿನಲ್ಲೇ ಇದ್ದುಕೊಂಡು e-mail ಮೂಲಕ ಅಜ್ಜಿ, ತಾತ ಆದ್ವಿ ಅಂತ ತಿಳ್ಕೊಂಡು ಪಕ್ಕದಲ್ಲೇ ಇರೋ ಗುಡಿಗೆ ಹೋಗಿ ಹಣ್ಣು, ಹೂವು ಕೊಟ್ಟು ಅರ್ಚನೆ ಮಾಡೋರು. ಸಾಮಾನ್ಯವಾಗಿ ಈ ಸನ್ನಿವೇಶ ಬರೋದು ಮಗನಿಗೋ ಮಗಳಿಗೋ ಎರಡನೇ ಮಗು ಆದಾಗ.

ಆದರೆ ಎರಡನೇ ಕ್ಯಾಟಗೋರಿ ಅಜ್ಜಿ ತಾತಂದಿರಿದ್ದಾರೆ ನೋಡಿ, ಅವರು ತೀರಾ ಬೇರೇ ತರಹ. ಅವರಲ್ಲಿ ಅನೇಕರು ಮೊದಲ ಬಾರಿಗೆ ಅಜ್ಜಿ ತಾತ ಆಗಿರೋರು. ಅಷ್ಟೇ ಅಲ್ಲ Centre of the actionನಲ್ಲೂ ಇದ್ದು ಪಳಗಿರೋರು. ಅಜ್ಜಿಗಾದರೂ ಸ್ವಲ್ಪ ಮಗಳ ಅಥವಾ ಸೊಸೆಯ ಶುಶ್ರೂಷೆ, ಆರತಿ, ಪಾರತಿ, ನಾಮಕರಣ ಅಂತ ಕೆಲಸ ಇರುತ್ತೆ. ಆದರೆ newly evolved ತಾತ ಇರ್ತಾನೇ ನೋಡಿ, ಅವನಿಗೆ pre-delivery ಕೆಲಸಾನೂ ಇಲ್ಲ, post-delivery ಕೆಲಸಾನೂ ಇಲ್ಲ. ಅವನ ಕೆಲಸ ಸುಮ್ಮನೇ ಮಾತಾಡ್ತಿರೋದು. ಅಳಿಯನಿಗೆ ಅಥವಾ ಮಗನಿಗೆ ಅವನೊಬ್ಬ ಭಾರ. No actionಊ. ಮೊದಲನೇ ಡೆಲಿವರಿ - ಅದರಲ್ಲೂ ಅಮೇರಿಕಾದಲ್ಲೇ ಆಗಿ would be ಅಜ್ಜಿ ತಾತ ಅಲ್ಲೇ ಕ್ಯಾಂಪ್ ಮಾಡಿದ್ರೆ - ಫಸ್ಟ್‌ಟೈಮ್ ತಾತಾನ್ನ ನೋಡೋವರೇ ಇಲ್ಲ, ಮಾತಾಡಿಸುವವರೇ ಇಲ್ಲ. ಇಂತಹ ತಾತಂದಿರೆಲ್ಲಾ ನಮ್ಮ BATA ವೇದಿಕೆ ಮೇಲೆ ಬಂದು ನಿಂತಾಗ, ಆ ಕಷ್ಟಗಳನ್ನೆಲ್ಲಾ ಮರುಕಳಿಸಿಕೊಂಡು, ಬಿಕ್ಕಿಬಿಕ್ಕಿ ಅತ್ತು, ಆಮೇಲೆ ಅದೆಷ್ಟೋ ಚೆನ್ನಾಗಿ ನಗ್ತಾರೆ ಅಂತೀರಿ.

ಜನರಲ್ ಆಗಿ ನಾವು ಒಂದು ಸ್ಟೇಟ್‌ಮೆಂಟ್ ಮಾಡಬಹುದು. ಅದು ಏನಪ್ಪಾ ಅಂದರೆ: ''ಮೊಮ್ಮಗು ಒಂದು ಅಥವಾ ಎರಡು ವರ್ಷ ವಯಸ್ಸಾಗುವವರೆಗೂ ಅಜ್ಜೀದೇ upper handಉ! ಆದರೆ, ಎರಡು ವರ್ಷ ಕಳೆದ ಮೇಲೆ (ಅದರಲ್ಲೂ

ಮೊಮ್ಮಗು ಗಂಡು ಮಗು ಆಗಿದ್ರಂತೂ), ತಾತಂದೇ upper handಉ! ಆಟ ಪಾಟ, ಕೂಗಾಟದಲ್ಲಿ ತಾತನಿಗೆ ಸ್ವಲ್ಪ ಜಾಸ್ತಿ ಉತ್ಸಾಹ. ''ನಾನೇ ನರ್ಸರಿಗೆ ಮಗೂನ ಬಿಟ್ಟು ಬರ್ತೀನಮ್ಮಾ'' ಅಂತ ಜವಾಬ್ದಾರಿ ವಹಿಸಿಕೊಂಡು, ಸ್ಕೂಲಿನ ಗೇಟಿನ ಮುಂದೆ ಮಿಕ್ಕ ಅಮ್ಮಂದಿರ ಜೊತೆಗೆ ಸ್ವಲ್ಪ ಹರಟೆ ಕೊಚ್ಚಿ, ವಾಪಸ್ಸಾಗುತ್ತಾ ಅಲ್ಲೇ ಎಲ್ಲಾದರೂ ಕಾಫಿ ಸೇವಿಸಿ ಮನೇಗೆ ಬರ್ತಾರೆ. ಅಕಸ್ಮಾತ್ ಮಗುವಿಗೆ ಜ್ವರವೋ, ಶೀತವೋ ತಗಲಿದರೆ, ಆಗ ಮಾತ್ರ ಅದನ್ನ ಮಗಳ ಕೈಗೋ, ಸೊಸೆಯ ಕೈಗೋ ದೂಪ್ಪಂತ ಹಾಕಿ ಕ್ಲಬ್ ಕಡೆಗೋ, ಲಾಲ್‌ಬಾಗ್ ಕಡೆಗೋ ಕಣ್ಮರೆಯಾಗುತ್ತಾರೆ.

"But, life is enjoyable now" ಅಂತ ನಮ್ಮ ಸದಸ್ಯರೆಲ್ಲಾ ಒಪ್ಪಿಕೊಂಡಿದ್ದಾರೆ. But, exceptionsಊ ಇವೆ. ಇನ್ನೊಬ್ಬ ಸದಸ್ಯರು BATA ಸಭೆಯಲ್ಲಿ ಮಾತಾಡುತ್ತಾ ''ಅಯ್ಯೋ, ನಾನು ಇನ್ನು ಇಪ್ಪತ್ತು ವರ್ಷಗಳ ಹಿಂದೇನೇ ತಾತ ಆಗಬೇಕಿತ್ತು'' ಅಂತ ಹಂಬಲಿಸಿಕೊಂಡರು. ನಾವೆಲ್ಲಾ ''ಯಾಕೆ ಸಾರ್?'' ಅಂತ ಕೇಳಿದ್ವಿ. ''ಅಲ್ಲರೀ, ನನಗೆ Arthritis ಬಂದ ಮೇಲೇ ಈ ಮೊಮ್ಮಗೂ ಬರಬೇಕೇನ್ರಿ? ತಾತಾ ಎತ್ಕೋ ಅಂತಾನೆ. ಎತ್ಕೊಂಡ್ರೆ, ತಾತ ಇಳಿಸೂ ಅಂತಾನೆ. ಇಳಿಸಿದ್ರೆ, ತಾತಾ ಓಡೋಣ ಬಾ ಅಂತಾನೆ, ಮಂಚದ ಕೆಳಗೆ ಬಚ್ಚಿಟ್ಕೊಂಡು ಗುಮ್ಮ ಮಾಡು ಅಂತಾನೆ. ಹೀಗೆಲ್ಲಾ ನಾನು ಮಾಡಿದ್ರೆ ನನ್ನ joints ಗತಿ ಏನ್ರೀ?'' ಅಂತ ಜೋರಾಗೇ ಅತ್ಕೊಂಡ್ರು. ಅದೇ ಇನ್ನೊಬ್ಬ ತಾತ, ಹಲ್ಲು ಕಿರೀತಾ, ''ನನಗೆ ಹೊಟ್ಟೆ ಬಂದಿರೋದು ಎಷ್ಟು ಒಳ್ಳೆದಾಯ್ತು ಅಂತೀರಿ. ನನ್ನ ಮೊಮ್ಮಗಳು ಅದರ ಮೇಲೆ ಹತ್ತಿ ಎಷ್ಟು ಹಾಯಾಗಿ ಆಡಿಕೊಳ್ತಾಳೆ!'' ಅಂತ ಜಂಬಾನೇ ಪಟ್ಟುಕೊಂಡರು.

ಇನ್ನೊಂದು ಅಜ್ಜೀದು ಬೇರೆ ತರಹ ಪ್ರಾಬ್ಲಮ್ಮು. ಮಗಳು ಮಗುವನ್ನ ಇವರ ಜವಾಬ್ದಾರೀಲಿ ಬಿಟ್ಟು ಹೋದ ಸಮಯದಲ್ಲಿ ಅದಕ್ಕೆ ವಿಶೇಷವಾದ feeds ಮಾಡೋದು - ಒಂದು feedಗೆ ಬಿಸಿ ನೀರು ಆದರೆ ಇನ್ನೊಂದು feedಗೆ ತಣ್ಣೀರು - ಮಗುವಿನ ಕೈಕಾಲಿಗೆ ಒಂದು powder ಆದ್ರೆ, ತಲೆಗೇ ಬೇರೆ powerಊ, ಹೊಟ್ಟೆ ಬೆನ್ನಿಗೆ ಇನ್ನೊಂದು - ಡ್ರಾಪ್ಸು ಸಿರಪ್ಪು, ಸಿರಪ್ಪು ಡ್ರಾಪ್ಸು - ಬಾಟಲ್ಡ್ ಮಿಲ್ಕ್ ಇರ್ಲಿ, ಬಾಟಲ್ಡ್ ಫುಡ್ಡು! ''ಎಲ್ಲಾ ಹೊಸಾ ಟೆಕ್ನಾಲಜೀನೇ ಆಗಿ ಹೋಗಿದೇರೀ. ಕೈಯೇ ಓಡೋದಿಲ್ಲಾ'' ಅಂತಾರೆ. ಇದೆಲ್ಲಾ growing up problemsಉ ಅನ್ನಿ - ಮಗುವಿಗಲ್ಲ, ಅಜ್ಜಿ ತಾತಂಗೆ! ನಂತರ ಸ್ಕೂಲುಪಾಲೂ ಅನ್ನೋ stage ಬಂದಾಗ, ಅದರ ಅಪ್ಪಅಮ್ಮ full charge ವಹಿಸ್ಕೋತಾರೆ. ಆಗ ತಾತ ಅಜ್ಜಿ ಪಾತ್ರ ಸ್ವಲ್ಪ ಹಿನ್ನೆಲೆಗೆ ಹೋಗುತ್ತೆ. ಮೊಮ್ಮಕ್ಕಳ ಬರ್ತ್‌ಡೇ ದಿವಸ ಅಲಂಕಾರ ಮಾಡಿಕೊಂಡು, ಮೂಲೇನಲ್ಲಿ ಕುರ್ಚಿಮೇಲೆ ಕೂತ್ಕೊಂಡು, ಕ್ಯಾಂಡಲ್ಸ್‌ಗಳನ್ನ ಉಫ್ ಮಾಡೋದು, ಕಟ್ ಮಾಡಿದ cake piece


ನ ಬಾಯಲ್ಲಿ ತುರುಕಿಕೊಂಡು ಶುಗರ್ ಮನೆ ಹಾಳಾಯ್ತು ಅಂತ ನುಂಗಿಕೊಳ್ಳೋದು - ಇಂತಹ ಹೊಸ ಅನುಭವಗಳಾಗುತ್ತವೆ.

ನಮ್ಮ BATA ಕಾರ್ಯದರ್ಶಿಣಿ ಆಗಿರೋ Mrs. ಕೋಕಿಲಾ ಅವರಿಗೆ ಬೇರೆ ರೀತಿಯ ಕಷ್ಟವೊಂದಿದೆ. ಅವರು ಇತ್ತೀಚೆಗೆ ಅಜ್ಜಿ ಪಟ್ಟ ಪಡೆದಿದ್ದರೂ ಅವರನ್ನ ಮಾತ್ರ ಯಾರೂ ''ಅಜ್ಜೀ'' ಅಂತ ಸಂಬೋಧಿಸಬಾರದಂತೆ. ''ಆಂಟೀ'' ಅಂತ ಕರೆದರೇನೇ ಗುರ್! ಅಂತಾ ಕೋಪಿಸ್ಕೋತಾ ಇದ್ದ ವೆರೈಟಿ ಆಕೆ. BATA ಇದರ ಬಗ್ಗೆ ಏನಾದರೂ ಮಾಡೋದಕ್ಕೆ ಸಾಧ್ಯವೇ? ಅಂತ ಮೊನ್ನೆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಪ್ರಶ್ನಿಸಿದರು. ಆದಕ್ಕೆ ನಾವೆಲ್ಲಾ, ''ಅಲ್ರೀ, ನಮ್ಮ BATA ಇರೋದೇ ನಿಮ್ಮಂತಹ ಅಜ್ಜೀಗಳಿಗೆ. ನೀವೇ ಅಜ್ಜಿ ಅನ್ನಿಸಿಕೊಳ್ಳೋಕೆ ನಾಚಿಕೊಂಡರೆ ಹೇಗೆ? ಅದೂ, BATA ಕಾರ್ಯದರ್ಶಿಣಿಯಾಗಿ...?'' ಅಂತ ಕೇಳಿದ್ವಿ. ಯಾಕೋ ಈ ಪ್ರಶ್ನೆಗೆ ಆಕೆ ಸಮಂಜಸವಾಗಿ ಉತ್ತರಾನೇ ಕೊಡಲಿಲ್ಲ. ಪಾಪ ತಾತಂದರಿಗೆ ಈ ರೀತಿ ego problems ಏನೇನೂ ಇಲ್ಲ. At its worst, ಇರೋ ತಲೇ ಕೂದಲಿಗೆ ಸ್ವಲ್ಪ dye ಮಾಡ್ಕೋತಾರೆ ಹೊರತು, ತಾವುಗಳು ತಾತಂದಿರಾಗಿದ್ದೇವೆ ಅಂತ ಜಂಬದಿಂದಲೇ ಓಡಾಡ್ತಿರ್ತಾರೆ.

ಕೆಲವು ತಾತಂದಿರು ಎಷ್ಟು ಮುಂದುವರೆದಿದ್ದಾರೆ ಅಂದರೆ, ಮೊಮ್ಮಕ್ಕಳಿಂದ ಚಿಕ್ಕಪುಟ್ಟ ಕೆಲಸಗಳನ್ನು ಮಾಡಿಸ್ಕೋತಾರೆ! ಟೀವೀ ಆಫ್ ಮಾಡ್ಸೋದು, ವಾಕಿಂಗ್ ಸ್ಟಿಕ್ ತರಿಸ್ಕೋಳ್ಳೋದೂ, ಸ್ವಲ್ಪ ಆ ಕನ್ನಡಕ ತೆಕ್ಕೊಡು ಮರೀ... ಅನ್ನೋದೂ, ತುಂಟಾ, ಆಡೆಂಚರ್ಸ್ ಇಟ್ಟಿರೋ ಕಪ್‌ನಾ ಎಲ್ಲಿ ಬಚ್ಚಿಟ್ಟಿದ್ದೀ..., ನಂಗೆ ಕೊಟ್ಬಿಡು ಪುಟ್ಟಾ.... ಥ್ಯಾಂಕ್ಯೂ ಊಊಊ ಅಂತ ಹಾಡೋದೂ ಇತ್ಯಾದಿ. ಈ stage ನಲ್ಲಿ ಅಜ್ಜಿಗಳು ಮೊಮ್ಮಕ್ಕಳನ್ನ ಇನ್ನೊಂದು ತರಹ ಕಾಡ್ತಾರೆ. ಮನೆಗೆ ಬಂದವರ ಮುಂದೆ ಬಾಬಾ ಬ್ಲಾಕ್ ಶೀಪ್, ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಹೇಳೂ ಅಂತ. ಅದು ಹೇಳಲ್ಲ, ಇವರು ಬಿಡೋವಲ್ಲರು. ಕೊನೆಗೇ ಇವೆರಡು universal songsಉ ಅಜ್ಜಿ ಬಾಯಲ್ಲೇ ಬಂದವರು ಕೇಳಬೇಕು.

ಆದರೆ ನಮ್ಮ BATA ದಲ್ಲಿ ಅಜ್ಜಿ ತಾತಂದಿರು ಒಂದು ವಿಷಯವನ್ನು ಸರ್ವಾನುಮತದಿಂದ ಅಂಗೀಕರಿಸಿದ್ದಾರೆ. To put it in proper wordsಉ: ''ಮೊಮ್ಮಕ್ಕಳ ಕೈಲಿ, ನಾಲ್ಕು ವರ್ಷ ವಯಸ್ಸಾಗುವುದರೊಳಗೆ, ಎಲ್ಲಾ ಕೆಲಸಾನೂ ಮಾಡಿಸಿಕೊಂಡು ಬಿಡಿ. ಎಲ್ಲಾ ಮಾತನ್ನೂ ಆಡಿಬಿಡಿ. ಯಾಕೇಂದ್ರೆ, ಆಮೇಲೆ ಅವುಗಳು ಕೆಲಸ ಮಾಡೋದು ದೊಡ್ಡವರಾಗಿ ಕೆಲಸಕ್ಕೆ ಸೇರಿದ ಮೇಲೆ! ಮಾತಾಡೋದು, ಅವರ ಮದುವೆ ಆದ್ಮೇಲೆ!''

ಒಟ್ಟಿನಲ್ಲಿ BATA ಇಂಥಹವರಿಗೆಲ್ಲಾ ಒಂದು ಒಳ್ಳೇ ವೇದಿಕೆಯಾಗಿ ಮಾರ್ಪಾಡಾಗ್ತಿದೆ. ಬೆಂಗಳೂರಿನ ಅಜ್ಜಿ ತಾತಂದಿರೆಲ್ಲಾ ನಮ್ಮೊಂದಿಗೆ ಸೇರಿ ಈ ಸಂಸ್ಥೆಯನ್ನು ದೊಡ್ಡದಾಗಿ ಬೆಳೆಸಿ ಅಂತ ನಮ್ಮ ಕೋರಿಕೆ. ನಮ್ಮ ವಿಳಾಸ: ಕ್ಷಮಿಸಿ, ನಾನಿಲ್ಲೇ ನಿಲ್ಲಿಸ್ತೀನಿ. ಯಾವುದೋ e-mail ಬಂದಿದೆ. ಓಹೋ, ಯಾವುದೋ ಏನು? ನನ್ನ ಮಗಂದೇ! ಇವತ್ತು ಬೆಳಿಗ್ಗೆ ನನ್ನ ಸೊಸೆ· ಎರಡನೇ ಮಗೂನ ಸೇಫ್ ಆಗಿ ಡೆಲಿವರಿ ಮಾಡಿದಳಂತೆ! ಇನ್ನೆಲ್ಲಿ..? ಏನು, ಗೋಮಾತಾ ಮೆಟರ್‌ನಿಟಿ ಹೋಮ್‌ನಲ್ಲಿ ಅಂತ ಅಂದ್ಕೊಂಡ್ರಾ? ಇಲ್ಲಾರೀ, ನ್ಯೂಜರ್ಸೀಲೀ! .. ನಾನು ಬರ್‍ಲಾ? ನನ್ನ ಹೆಂಡ್ತಿ ಜೊತೆಗೆ ಪಕ್ಕದಲ್ಲಿರೋ ಗುಡಿಗೆ ಹೋಗಿ ಅರ್ಚನೆಗೆ ಕೊಡಬೇಕು!



With Best Compliments From

A

Well Wisher

ಹೀಗೊಂದು ವಿರೋಧಾಭಾಸ ಪ್ರಸಂಗ



⊙ ಕಮಲ

ಆಳು ಗುಜ್ಜನ ತಂದು

ಕಾಲೊಳು ಮಲಗಿಸಿ

'ಬಾಲ'ನೆಂದು ಗೌರಿ ಉಣಿಸಿದಳು

ಈ ಹಾಡಿನ ಸಾಲುಗಳನ್ನು ಅಮ್ಮ ಹೇಳುತ್ತಿದ್ದಾಗ ನಾನು ಕೇಳಿಸಿಕೊಂಡಿದ್ದೆ. ಏನೋ ವಿಶೇಷತೆ ಇದೆ ಅನ್ನಿಸಿತ್ತು. ಆ ಹಾಡಿನ ಕಥೆ ಹೇಳಲು ಅಮ್ಮನನ್ನು ಒತ್ತಾಯಿಸಿದಾಗ, ಅವಳು ಹೇಳಿದ ಕಥೆ ಇದು.

ತುಂಬ ವರ್ಷಗಳ ಹಿಂದೆ ಅಂದರೆ ಶತಮಾನವೇ ಆಗಿರಬಹುದು. ಕಥೆ ಕೇಳಿದಾಗ ನನಗೆ 11-12 ವರ್ಷ. ಈಗ ನನಗೇ 66 ಅಂದಮೇಲೆ ಈ ಕಥೆ ತುಂಬ ಹಿಂದಿನದು ಎನ್ನುವುದರಲ್ಲಿ ಸಂಶಯ ಬೇಡ. ಆಗ ಹಳ್ಳಿಗಳಲ್ಲಿ (ದಕ್ಷಿಣ ಕನ್ನಡ ಜಿಲ್ಲೆ) ಮನರಂಜನೆ ಎಂದರೆ ಬಯಲಾಟ (ಯಕ್ಷಗಾನ) ಒಂದೇ. ಅದೂ ಮಳೆಗಾಲ ಕಳೆದು ದೀಪಾವಳಿ ಹಬ್ಬಕ್ಕೆ ಕಾಲಿಗೆ ಗೆಜ್ಜೆ ಕಟ್ಟಿದರೆ, ಅಂದರೆ ಮೇಳ ಸುರುವಾದರೆ ಮುಂದಿನ ವಿಷು ಸಂಕ್ರಮಣ ಕಳೆದು 10 ದಿನದಲ್ಲಿ ಗೆಜ್ಜೆ ಬಿಚ್ಚಿಡುತ್ತಿದ್ದರು. ಬಯಲಾಟ ಅಂದರೆ ಈಗಿನಂತೆ ಟೆಂಟ್ ಹಾಕಿ ಟಿಕೆಟಿನ ಗಲಾಟೆ ಇರುತ್ತಿರಲಿಲ್ಲ. ಬತ್ತ ಕ್ಯೊಲಾದ ಗದ್ದೆಯ ಒಂದು ಪಾರ್ಶ್ವದಲ್ಲಿ ನೆಲ ಸರಿಮಾಡಿ ನಾಲ್ಕು ಅಡಿಕೆ ಮರದ ಕಂಬ ನೆಟ್ಟು ಮೇಲಕ್ಕೆ ತೆಂಗಿನ ಗರಿ ಹೊದೆಸುತ್ತಿದ್ದರು. ಹಿಂದುಗಡೆ ಸಣ್ಣ ಚಪ್ಪರದ ಚೌಕಿ. ಮಾವಿನ ಸೊಪ್ಪು ಮತ್ತು ನೀರಿನ ತೇವವಿರುವಲ್ಲಿ ಬೆಳೆಯುವ ಒಂದು ನಮೂನೆಯ ಹುಲ್ಲನ್ನು ಸೇರಿಸಿ ಕಟ್ಟಿ ಕಂಬವನ್ನು ಅಲಂಕರಿಸುತ್ತಿದ್ದರು. ಕಂಬದಿಂದ ಕಂಬಕ್ಕೆ, ಮುಂದಿನ 3 ಭಾಗಕ್ಕೆ ತೆಂಗಿನ ಗರಿ ಹೆಣೆದು 1 ಅಡಿ ಎತ್ತರದ ತಟ್ಟಿ ಕಟ್ಟುತ್ತಿದ್ದರು. ಪೆಟ್ರೋಮ್ಯಾಕ್ಸ್ ದೀಪಗಳನ್ನು ಕಂಬಕ್ಕೆ ಕಟ್ಟುತ್ತಿದ್ದರು. (ಈ ಕಥೆ ನಡೆದಾಗ ಪೆಟ್ರೋಮ್ಯಾಕ್ಸ್ ದೀಪ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆ ಮೊದಲು ಎತ್ತರದ ಕಾಲು ದೀಪಗಳಿಗೆ ದಪ್ಪ ಬತ್ತಿಗಳನ್ನು ಹಾಕಿ ಹರಳೆಣ್ಣೆ ಸುರಿದು ಉರಿಸುತ್ತಿದ್ದರಂತೆ.) ಊರಿನಲ್ಲಿ ಆಢ್ಯರೆನಿಸಿಕೊಂಡವರು ಮೇಳದ ಮುಖ್ಯಸ್ಥರನ್ನು ಕರೆಸಿ ವೀಳ್ಯ ಕೊಡುವುದು


ಸಂಪ್ರದಾಯ. ವೀಳ್ಯವೆಂದರೆ ಹರಿವಾಣದಲ್ಲಿ ಎಲೆ ಅಡಿಗೆ ಜೊತೆಗೆ ರೂ. 75-100 ಸಂಭಾವನೆ ಇಟ್ಟು ಬಯಲಾಟ ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದರು. ಮೇಳದವರ ಊಟ ವಸತಿಗೆ ಅವರೇ ಏರ್ಪಾಡು ಮಾಡುತ್ತಿದ್ದರು. ಬಯಲಾಟದ ಆಮಂತ್ರಣ ಎಂದು ಕಾಗದ ಪತ್ರ ಹಂಚುವ ಕ್ರಮ ಏನೂ ಇಲ್ಲ. ಆಟ ಸುರುವಾಗುವ ಮೊದಲೇ ಅರ್ಧ ಗಂಟೆ ಸಮಯ ಜೋರಾಗಿ ಚೆಂಡೆ ಬಡಿಯುತ್ತಿದ್ದರು. ಅದಕ್ಕೆ ಕೇಳಿ ಬಡಿಯುವುದು ಎನ್ನುತ್ತಾರೆ. ಚೆಂಡೆಯ ಸದ್ದು ಕಿವಿಗೆ ಬಿದ್ದು ಎಲ್ಲಿ ಆಟ ನಡೆಯುತ್ತದೆ ಎಂದು ಜನರಿಗೆ ಗೊತ್ತಾಗುತ್ತಿತ್ತು. ಹಾಗೆ ಅಲ್ಲಿಗೆ ಧಾವಿಸುತ್ತಿದ್ದರು.

ಆಗೆಲ್ಲ ಬಾಲ್ಯ ವಿವಾಹದ ಕಾಲ. 6-8 ವರ್ಷದ ಹುಡುಗಿಗೆ 10-12ರ ಪ್ರಾಯದ ಹುಡುಗನೊಂದಿಗೆ ವಿವಾಹ ಮಾಡುತ್ತಿದ್ದರು. ಆ ಮಕ್ಕಳ ಬೆಳವಣಿಗೆ ಮದುವೆಯಾದ ನಂತರ ಆಗುತ್ತಿದ್ದುದರಿಂದ ಗಂಡ ಹೆಂಡತಿಯರ ಎತ್ತರದ ಬಗ್ಗೆ ಮಾತಾಡುವಂತಿರಲಿಲ್ಲ.

ಆಳು ಗುಜ್ಜನ ಹೆಸರೇ ಯಾರಿಗೂ ಗೊತ್ತಿಲ್ಲ. ಅವನು ಕುಳ್ಳಗೆ, ಸಣ್ಣಗೆ ಇದ್ದ. ಅವನನ್ನು ಎಲ್ಲರೂ ಗುಜ್ಜ ಎಂದೇ ಕರೆಯುತ್ತಿದ್ದರು. ಗುಜ್ಜನ ಹೆಂಡತಿ ಗೌರಿ ಎತ್ತರದ ದಡೂತಿ ಹೆಂಗಸು. ಅವರಿಗೆ ಒಬ್ಬ ಮಗ. ಅವನಿಗೆ 2 ವರ್ಷ. ಗೌರಿಗೆ ಬಯಲಾಟ ಎಂದರೆ ಬಹಳ ಪ್ರೀತಿ. ಆ ದಿನ ಬಯಲಾಟ ನೋಡಬೇಕೆಂದು ಬೇಗನೆ ಮನೆ ಕೆಲಸ ಮುಗಿಸಿದಳು. ತಲೆ ಬಾಚಿ ಹೂ ಮುಡಿದು, ಇದ್ದ 3 ಸೀರೆಗಳಲ್ಲಿ ಒಳ್ಳೆಯ ಸೀರೆ ಉಟ್ಟು ತಯಾರಾದಳು. ಅವಳಿಗೂ ಗಂಡನಿಗೂ ಮಣ್ಣಿನ ತಾಟಿನಲ್ಲಿ ಅನ್ನ ಬಡಿಸಿದ್ದಳು. ಗದ್ದೆಯಲ್ಲಿ ಕೂತು ಆಟ ನೋಡಲು ಒಂದು ಚಾಪೆ ಸುತ್ತಿ ಇಟ್ಟಳು. ಆಟದ ಬಯಲಲ್ಲಿ ಕೂರಲು ಎಲ್ಲರೂ ಅವರವರಿಗೆ ಬೇಕಾದ ಚಾಪೆಯನ್ನು ಅವರವರೇ ತರಬೇಕಿತ್ತು. (ದ.ಕ. ಜಿಲ್ಲೆಯಲ್ಲಿ ತೋಡು, ಹೊಳೆ ಇತ್ಯಾದಿಗಳ ಬದಿಯಲ್ಲಿ ಒಂದು ನಮೂನೆಯ ಜೊಂಡು ಹುಲ್ಲು ಬೆಳೆಯುತ್ತದೆ. ಅದರ ಗರಿಯನ್ನು ಸೀಳಿ ಚಾಪೆ ಹೆಣೆಯುತ್ತಿದ್ದರು. ಹಳ್ಳಿಗಳಲ್ಲಿ ಆ ಚಾಪೆಯನ್ನೇ ಎಲ್ಲರೂ ಉಪಯೋಗಿಸುತ್ತಿದ್ದರು.) ಈ ರೀತಿ ಕಟ್ಟಿದ ಸೂಟೆ ಉರಿಸಿದರೆ ಕತ್ತಲೆಯಲ್ಲಿ 2 ಮೈಲಿಗಳಷ್ಟು ದೂರ ನಡೆಯಲು ಬೆಳಕಿನ ತೊಂದರೆ ಇಲ್ಲ.

ಅಷ್ಟು ಹೊತ್ತಿಗಾಗಲೇ ಆಟದ ಬಯಲಿನಿಂದ ಕೇಳಿ ಬಡಿಯುವ ಸದ್ದು ಕೇಳಿಸಿತು. ಗೌರಿಗೆ ಗಡಿಬಿಡಿ. ತಡವಾಗಿ ಹೋದರೆ ಮುಂದೆ ಕೂರಲು ಜಾಗ ಸಿಗುವುದಿಲ್ಲ. ಹಿಂದೆ ಕುಳಿತರೆ ಕುಣಿತ ಸರಿಯಾಗಿ ಕಾಣುವುದಿಲ್ಲ. ಗುಡಿಸಲಿನಲ್ಲಿ ಮಣ್ಣಿನ ಹಣೆಯ ಮನುಕು ಬೆಳಕು ಬಿಟ್ಟರೆ ಬೇರೆ ಬೆಳಕಿಲ್ಲ. ಗೌರಿ ಮಗನಿಗೆ ಅನ್ನ ಕಲಸಿ, ಅವನನ್ನು ಊಟಕ್ಕೆ ಕರೆದಳು. ಮಗ ಬರುವ ಸದ್ದಿಲ್ಲದಾಗ ಅವನನ್ನು ಎತ್ತಿಕೊಂಡು ಬರಲು ತಾನೇ ಎದ್ದು ಹೋದಳು.

ಗುಜ್ಜ ಕೈಕಾಲು ತೊಳೆದು ಕಾಲು ಒರೆಸಿ ಮನೆ ಒಳಗೆ ಅಡಿ ಇಡುವಷ್ಟರಲ್ಲಿ, "ನೀನು ಇಲ್ಲಿಯೇ ಇದ್ದೀಯಲ್ಲ. ಕಳ್ಳ ಎಷ್ಟು ಕರೆದೆ ಗೊತ್ತ ನಿನ್ಗ" ಎಂದು ಅರ್ಧ ಕೋಪ ಪ್ರೀತಿ ಬೆರೆಸಿ ನುಡಿದು ಅವನನ್ನೆತ್ತಿಕೊಂಡು ಒಳಗೆ ಹೋಗಿ ಕುಳಿತು ಕಾಲಲ್ಲಿ ಮಲಗಿಸಿ ಅನ್ನ ತಿನ್ನಿಸಲು ತೊಡಗಿದಳು! ಇದೆ ಆ ಕವಿತೆಯ ಸಾರಾಂಶ ಎಂದು ಹೇಳಿ ಅಮ್ಮ ನಕ್ಕರು. ನಾನೂ ಜೋರಾಗಿ ನಕ್ಕೆ. ಇದನ್ನು ಓದಿದ ನೀವೂ ನಕ್ಕುಬಿಡಿ.



Seeing people's abnormalities laugh
Within your mind
Also when you labour with tightened
Lips, when you suffer anguish
Enter the inner recesses of universal life
Live laughing and depart

(D. Seshagiri Rao-Ramblings of
Thimma, the Dull)

ನಗು, ಮನದಿ ಲೋಗರ ವಿಕಾರಂಗಗಳನು ನೋಡಿ।
ಬಿಗಿ ತುಟಿಯು, ದುಡಿವಂದು ನೋವಪಡುವಂದು॥
ಪೊಗು, ವಿಶ್ವಜೀವನದ ಜೀವಾಂತರಂಗದಲಿ।
ನಗುನಗುತ ಬಾಳ್, ತೆರಳು - ಮಂಕುತಿಮ್ಮ॥

(ಡಿ.ವಿ.ಜಿ. - ಮಂಕುತಿಮ್ಮನ ಕಗ್ಗ)

With grateful thanks to APARANJI from some tightlipped and frown faced readers, who otherwise do not smile!



ಗೌಸಿಯಾ ಗೆರಾಜ್, ಗೌರೀ ಕಲ್ಯಾಣ ಮತ್ತು ಆಲ್ಜೀಬ್ರಾ



⊙ ಎಸ್.ಎನ್. ಶಿವಸ್ವಾಮಿ

ನನ್ನ ಗೆಳೆಯ, ಒಡ್ರಪಾಳ್ಯದ ಗಿರಿಯಣ್ಣ ಎಲ್ಸೆಸ್ ಪರೀಕ್ಷೆಯಲ್ಲಿ ಮೂರು ಸಲ ಡುಂಕಿ ಹೊಡೆದ ಮೇಲೆ, ಅವನ ತಂದೆಯ ಹಿಕ್ಮತ್ತಿನಿಂದ ಕೊನೆಗೊಮ್ಮೆ ಎಲ್ಸೆಸ್ ಗಡಿ ದಾಟಿದ್ದನಂತೆ. ಆಮೇಲೆ ಅವನು ಎಸ್ಸೆಸ್ಸೆಲ್ಸಿ ಪಾಸು ಮಾಡಿ ಆಗಬೇಕಾದದ್ದು ಅಷ್ಟರಲ್ಲೇ ಇತ್ತು. ತಂದೆ ಹೊನ್ನಪ್ಪನವರು ಪಂಚಾಯಿತಿ ಮೆಂಬರು. ನೂರಾರು ಎಕರೆಗಳ ಹಸುರು ಹೊನ್ನಿನ ಪಿತ್ರಾರ್ಜಿತ ಆಸ್ತಿಯ ಒಡೆಯರು. ಒಡ್ರಪಾಳ್ಯದ ಸುತ್ತಮುತ್ತಲ ಪ್ರದೇಶದಲ್ಲೆಲ್ಲ ತಮ್ಮ ಶ್ರೀಮಂತಿಕೆಗೆ ಹೆಸರಾದ ವ್ಯಕ್ತಿ. ಅವರು ಒಂದಲ್ಲ ಒಂದು ದಿನ ಡಿಸ್ಟ್ರಿಕ್ಟ್ ಪಂಚಾಯಿತಿ ಚೇರ್ಮನ್ನಾಗಿ, ಕಾಲಕ್ರಮೇಣ ಎಮ್ಮೆಲ್ಯೆ ಆಗಿ ಮಂತ್ರಿಯೂ ಆಗಬಹುದಾದಷ್ಟು ಗೌರವಾನ್ವಿತ ಲೀಡರು. ಅಂಥ ಪ್ರಭಾವಶಾಲಿಯ ಪುತ್ರ, ಗಿರಿಯಣ್ಣ. ಹಳ್ಳಿಯ ಹುಡುಗರು ಸ್ಕೂಲು ಮುಖ ಕಾಣುವುದೇ ಅಪರೂಪವಾಗಿದ್ದ ಆ ಕಾಲದಲ್ಲಿ ಗಿರಿಯಣ್ಣ ಎಸ್ಸೆಸ್ಸೆಲ್ಸಿ ಪಾಸು ಮಾಡದಿದ್ದರೆ ಯಾವ ಸಾಮ್ರಾಜ್ಯವೂ ಮುಳುಗಿ ಹೋಗುತ್ತಿರಲಿಲ್ಲ. ಆದರೂ ಗಿರಿಯಣ್ಣ ಹೈಸ್ಕೂಲು ಸೇರಲು ಬೆಂಗಳೂರಿಗೆ ಬಂದ. ಅವನು ಬೆಂಗಳೂರಿಗೆ ಬಂದು ಸ್ಕೂಲು ಸೇರಿದ ಸಂದರ್ಭವೇ ಸ್ವಾರಸ್ಯವಾದ ಸಂಗತಿ.

ಗಿರಿಯಣ್ಣ ಓಟ, ಈಜುಗಾರಿಕೆ, ವಾಲೀಬಾಲ್, ಇನ್ನು ಹಲವಾರು ಶಾಲೆಯ ಹೊರಗಿನ ಚಟುವಟಿಕೆಗಳಲ್ಲಿ ಪ್ರವೀಣ. ಅವರ ಖ್ಯಾತಿ ಅಕ್ಕಪಕ್ಕದ ಹಳ್ಳಿಗಳಿಗೂ ಹಬ್ಬಿತ್ತು. ಎಲ್ಲರೂ ಅವನ ದೇಹದಾರ್ಢ್ಯ, ಕ್ರೀಡಾ ಪಟುತ್ವ, ಲವಲವಿಕೆಯ ಸ್ವಭಾವಗಳನ್ನು ನೋಡಿ ಮೆಚ್ಚುವವರೇ ಹೊರತು ಯಾರೂ ಅವನ ವಿದ್ಯಾಭ್ಯಾಸದ ಕಡೆ ಲಕ್ಷ್ಯವಿಟ್ಟಿರಲಿಲ್ಲ. ಊರಿನ ಹಿರಿಯರು ಅವನಿಗೆ ಶಾಲಾ ವಿದ್ಯಾಭ್ಯಾಸದ ಅವಶ್ಯಕತೆಯೇ ಇಲ್ಲವೆಂದು ತೀರ್ಮಾನಿಸಿದ್ದರು. ಆಗಲೇ ಹೊನ್ನಪ್ಪನವರ ಧನಿಕ ಸಂಬಂಧಿಯೊಬ್ಬರ ಮಗಳು ಗೌರಿಯ ಜತೆಗೆ ಗಿರಿಯಣ್ಣನ ಮದುವೆಯ ಮಾತುಕತೆಯೂ ನಡೆದು ಕೊನೆಯ ಹಂತ ತಲುಪಿತ್ತು. ಇಲ್ಲೆ ಬಂದಿದ್ದು ಪೀಕಲಾಟ ನೋಡಿ.

ಗೌರಿ ಕೂಡ ಎಲ್ಸೆಸ್ ಪದವೀಧರೆಯಾಗಿದ್ದಳು. ಅವಳಿಗೆ ತನಗಿಂತ ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ್ದ ಹುಡುಗನನ್ನೇ ಲಗ್ನವಾಗಬೇಕೆಂಬ ಛಲ. ಅವಳು ಒಂದು ಸಲ ತನ್ನ ಭಾವೀ ಅತ್ತೆ ಮಾವಂದಿರನ್ನು ಕೇಳೇ ಬಿಟ್ಟಿದ್ದಳು. ಗಿರಿಯಣ್ಣನ್ನ ಮೆಟ್ರಿಕ್ ಓದಿಸೋಕೆ ಯಾವ ಊರಿಗೆ ಕಳಿಸ್ತೀರಿ, ಅಂತ. ಹೊನ್ನಪ್ಪನವರಿಗೂ ಗೌರಿಯಲ್ಲದೆ ಬೇರೆ ಯಾವ

ಹುಡುಗಿಯನ್ನೂ ಸೊಸೆಯಾಗಿ ಸ್ವೀಕರಿಸುವ ಮನಸ್ಸಿರಲಿಲ್ಲ. ಅಂತೂ ಗೌರಿಯ ಒತ್ತಾಯದಿಂದ ಅವರು ಗಿರಿಯಣ್ಣನನ್ನು ಹತ್ತಿರದ ಬೆಂಗಳೂರಿಗೆ ಓದಲು ಕಳಿಸುವ ದೃಢ ನಿರ್ಧಾರ ಮಾಡಿಯೇಬಿಟ್ಟರು. ಬೆಂಗಳೂರಿನಲ್ಲಿ ಅವರ ಭಾವಮೈದ ಗುರಪ್ಪನವರು ಇದ್ದದ್ದರಿಂದ ಗಿರಿಯಣ್ಣ ಅವರ ಮನೆಯಲ್ಲೇ ಇದ್ದುಕೊಂಡು ಹೈಸ್ಕೂಲಿಗೆ ಹೋಗುವುದೆಂದು ನಿಶ್ಚಯವಾಯಿತು. ಹೀಗೆ ಒಡ್ರಪಾಳ್ಯದ ಗಿರಿಯಣ್ಣ ಗೌರಿಯ ಕೈ ಹಿಡಿಯುವ ಆಕಾಂಕ್ಷೆಯಿಂದ ಬೆಂಗಳೂರಿನ ಕೋಟೆ ಹೈಸ್ಕೂಲಿಗೆ ಬಂದು ಸೇರಿದ. ಕ್ಲಾಸಿಗೆ ಸೇರಿದ ದಿನವೇ ಅವನು ಮಾಮೂಲಿನಂತೆ ಕೊನೆಯ ಬೆಂಚಿನಲ್ಲಿ ಒಂದು ಸ್ಥಳ ಕಾದಿರಿಸಿಕೊಂಡ. ಆ ಬೆಂಚಿನಲ್ಲಿ ಆಗಲೇ ನಾನು ಇನ್ನೊಂದು ಜಾಗವನ್ನು ಗುತ್ತಿಗೆಗೆ ತೆಗೆದುಕೊಂಡಿದ್ದೆ. ಇಬ್ಬರ ಅಭಿರುಚಿಗಳೂ ಒಂದೇ. ಸಾಲದ್ದಕ್ಕೆ ನಾವಿಬ್ಬರೂ ಒಂದೇ ಬೀದಿಯ ನಿವಾಸಿಗಳಾಗಿದ್ದೆವು. ಕೊನೆಯ ಬೆಂಚಿನ ಸಹವಾಸ ಹಾಗೂ ಆಟದ ಮೈದಾನದ ಗುಂಪುಗಾರಿಕೆ, ಇವುಗಳಿಂದ ನಮ್ಮ ಮೈತ್ರಿ ಬೆಳೆಯಿತು.

ನಮ್ಮ ಮಾಧ್ಯಮಿಕ ಶಾಲೆಯ ದಿನಗಳು ಒಂದೇ ರೀತಿಯದಾಗಿದ್ದವು. ನಾವು ಸ್ಪೆಷಲ್ ಕ್ಲಾಸು, ಹೋಂವರ್ಕ್, ಟ್ಯೂಷನ್ ಇಂಥ ಪಿಡುಗುಗಳನ್ನು ಅನುಭವಿಸಿದವರೇ ಅಲ್ಲ. ಒಂದೋ ಎರಡೋ ಪುಸ್ತಕಗಳನ್ನು ಚೀಲಕ್ಕೆ ತುರುಕಿಕೊಂಡು ಹೊತ್ತಿಗೆ ಸರಿಯಾಗಿ ಸ್ಕೂಲಿಗೆ ಹೊರಡುತ್ತಿದ್ದೆವು. ಆಮೇಲೆ ನಾವು ಸ್ಕೂಲಿನಲ್ಲಿ ಕಳೆದ ವೇಳೆ ಆಟದಲ್ಲಿ ಕಳೆದ ವೇಳೆಗಳ ಮೇಲೆ ಯಾರು ನಿಗಾ ಇಟ್ಟಿರುತ್ತಿರಲಿಲ್ಲ. ಹೈಸ್ಕೂಲಿನ ದಿನಗಳನ್ನು ನಾವು ಈ ಧಾಟಿಯಲ್ಲಿ ಕಳೆದೆವು.

ಆಗ ನಮ್ಮ ಮನೆಯಲ್ಲಿ ಒಂದು ಮಾವಿನ ಮರ ಇತ್ತು. ತೋರಣಗಳಿಗೆ ಎಲೆ, ನಮಗೆ ಮೇಯುವುದಕ್ಕೆ ದೋರುಗಾಯಿ, ಉಪ್ಪಿನಕಾಯಿಗೆ ಮಿಡಿ, ಕಳಿತ ಮೇಲೆ ಹಣ್ಣು, ಹೀಗೆ ಎಲ್ಲಾ ಘಟ್ಟಗಳಲ್ಲೂ ಅದು ಧಂಡಿಯಾಗಿ ಫಲ ಕೊಡುತ್ತಿತ್ತು. ನಾನೂ ಗಿರಿಯಣ್ಣನೂ ದಿನದ ಅರ್ಧ ಭಾಗವನ್ನು ಆಟದ ಮೈದಾನದಲ್ಲಿ, ಇನ್ನರ್ಧವನ್ನು ಮಾವಿನ ಮರದ ಮೇಲೆ ಕಳೆಯುತ್ತಿದ್ದೆವು. ಇಬ್ಬರ ಕೈಯಲ್ಲೂ ಪುಸ್ತಕವೇನೋ ಇರುತ್ತಿದ್ದವಾದರೂ ಅವು ಪಠ್ಯ ಪುಸ್ತಕಗಳಲ್ಲ, ಯಾವುದಾದರೂ ಅಗ್ಗದ ಪತ್ತೇದಾರಿ ಕತೆ, ಸಿನಿಮಾ ಹಾಡುಗಳ ಸಂಕಲನ, ಇಂಥ ಕ್ಷುದ್ರ ಸಾಹಿತ್ಯ. ಇವನ್ನು ಓದುವಾಗ ನಮ್ಮ ಕೈಯಲ್ಲಿ ಮಾವಿನಕಾಯಿ, ಜೇಬಿನಲ್ಲಿ ಉಪ್ಪು, ಮೆಣಸಿನ ಪುಡಿ ಇದ್ದೇ ಇರುತ್ತಿದ್ದವು. ಆಗಾಗ ಬೇರೇನಾದರೂ, ಸೀಬೆಕಾಯಿ, ನೆಲ್ಲಿಕಾಯಿ, ಇರುತ್ತಿದ್ದವು. ಅನಿವಾರ್ಯವೆನಿಸಿದಾಗ ಮಾತ್ರ ಅಲ್ಲೇ ಒಂದು ಪೊಟರೆಯಲ್ಲಿ ಇಟ್ಟಿರುತ್ತಿದ್ದ ಒಂದಲ್ಲ ಒಂದು ಪಠ್ಯ ಪುಸ್ತಕವನ್ನು ಮಗುಚಿ ಹಾಕುತ್ತಿದ್ದೆವು. ನೋಡಿದವರು, ಅಯ್ಯೋ ಪಾಪ ಹುಡುಗರು ಎಷ್ಟು ಶ್ರದ್ಧೆಯಿಂದ ಓದಿಕೋತಿದ್ದಾರೆ ಅಂದುಕೊಳ್ಳುತ್ತಿದ್ದರು. ನಾವು ಅಲ್ಲಿ ಕೂತು ಕಲಿತ ಪಾಠಗಳೆಂದರೆ, ಜನಪ್ರಿಯ ಸಿನಿಮಾ

ಸಂಗೀತ, ಆಕಾಶದಲ್ಲಿ ಮೋಡಗಳ ಚಲನೆ, ಮಳೆ ಬೀಳುವ ಅಂದಾಜು, ಅಲ್ಲದೆ ಮರದ ಮೇಲೆ ಸಾಲುಗಟ್ಟಿದ ಇರುವೆಗಳ ಸಮೂಹ ಪ್ರಜ್ಞೆ, ಇವೇ. ಇಷ್ಟೇ ಅಲ್ಲದೆ ಇನ್ನೂ ಒಂದು ವಿಷಯದಲ್ಲಿ ಪರಿಣತಿ ಪಡೆಯುವ ಅವಕಾಶ ನಮಗೆ ಒದಗಿತ್ತು. ನಮ್ಮ ಮನೆಯೆದುರಿಗೆ ಷಮಿಮ್ ಅಹ್ಮದ್ ಎಂಬುವವರ 'ಗೌಸಿಯಾ ಗೆರಾಜ್' ಅನ್ನುವ ಚಿಕ್ಕ ಕಾರ್ ರಿಪೇರಿ ವರ್ಕ್‌ಷಾಪ್ ಇತ್ತು. ಕ್ಲಾಸಿಗೆ ಚಕ್ಕರ್ ಹಾಕಿ ನಾವು ಆ ಗೆರಾಜಿನ ಕಡೆಗೆ ಲಕ್ಷ್ಯ ಹರಿಯಿಸಿ ಕಾರು ರಿಪೇರಿಯ ಮರ್ಮಗಳನ್ನು ತಿಳಿದುಕೊಳ್ಳಬಯಸಿದೆವು. 'ಗೌಸಿಯಾ ಗೆರಾಜಿ'ನ ದೊಗಳೆ ಷರಾಯಿಯ ಸಿಬ್ಬಂದಿ ಹುಡುಗರಿಗೆ ಮಾವಿನಕಾಯಿ ರುಚಿ ತೋರಿಸಿ ಅವರಿಂದ ಇಂಜಿನ್, ರೇಡಿಯೇಟರ್, ಗೇರ್, ಬ್ರೇಕ್, ಡೈನಮೋ, ಸ್ಟೀರಿಂಗ್ ವಿಭಾಗಗಳನ್ನು ರಿಪೇರಿ ಮಾಡಲು ಬೇಕಾದ ಕೈಚಳಕದ ಬಗ್ಗೆ ಮಾಹಿತಿ ಪಡೆದೆವು. ನಾವು ಹಾಗೇ ಕಾರು ವ್ಯಾಸಂಗವನ್ನು ಮುಂದುವರೆಸಿ ಬೀದಿಯಲ್ಲಿ ಓಡಾಡುತ್ತಿದ್ದ ಆಗಿನ ಏಳೆಂಟು ಮಾಡೆಲುಗಳ ಅಶ್ವಶಕ್ತಿ, ಮೈಲೇಜ್, ಇವುಗಳ ಬಗ್ಗೆ ತಿಳಿದುಕೊಂಡೆವು. ಕಾರು ರಿಪೇರಿಯ ಪಾರಿಭಾಷಿಕ ಶಬ್ದಗಳೆಲ್ಲಾ ಸಲೀಸಾಗಿ ನಮ್ಮ ಬಳಕೆಗೆ ಬಂದವು. ನಮ್ಮ ಮನಸ್ಸುಗಳು ಬರುಬರುತ್ತ ಪಠ್ಯ ಪುಸ್ತಕಗಳನ್ನು ಮರೆತು ಕಾರುಗಳ ಗುಂಗಿನಲ್ಲೇ ಇದ್ದವು. ಗುರಪ್ಪನವರ ಮನೆಯಲ್ಲಿ ಯಾವ ಕೆಲಸಕ್ಕೂ ಬರದೆ ಅನಾಥವಾಗಿ ಬಿದ್ದಿದ್ದ ಒಂದು ಪ್ರಾಚೀನ ಕಾಲದ ಕಾರನ್ನು ಎಂದಾದರೂ ಬಿಡಿ ಬಿಡಿ ಮಾಡಿ ಆಮೇಲೆ ಜೋಡಿಸುವ ಕೆಲಸ ಮಾಡಲು ನಾವು ಹವಣಿಸುತ್ತಿದ್ದೆವು. ನಮ್ಮ ಅಭಿಲಾಷೆಯನ್ನು ಕಾರ್ಯಗತ ಮಾಡಲು ಸಹಾಯ ಮಾಡುವುದಾಗಿ ಗೆರಾಜಿಗೆ ದೊಗಳೆ ಷರಾಯಿ ಹುಡುಗರು ಹರ್ಷದಿಂದ ಒಪ್ಪಿದ್ದರು. ಒಂದು ಶುಭದಿನ ಹಳೆಯ ಕಾರಿನ ಮೇಲೆ ಹಲ್ಲೆ ಪ್ರಾರಂಭಿಸಿಯೇ ಬಿಟ್ಟೆವು. ಗುರಪ್ಪನವರ ಷೆಡ್ಡಿನಲ್ಲೊಂದು ಮಿನಿ ಕಾರ್ಖಾನೆಯೇ ಸ್ಥಾಪಿತವಾಯ್ತು.

ಹೊನ್ನಪ್ಪನವರು ತಿಂಗಳಿಗೊಮ್ಮೆಯಾದರೂ ಒಡ್ರಪಾಳ್ಯದಿಂದ ಬೆಂಗಳೂರಿಗೆ ಜೀಪಿನಲ್ಲಿ ಬರುತ್ತಿದ್ದರು. ಗುರಪ್ಪನವರು ಷಮೀಮ್ ಸಾಹೇಬರ ಜತೆಗೆ ಗೌಸಿಯಾ ಗೆರಾಜಿನ ಸಮಪಾಲುದಾರರೆಂದು ಗಿರಿಯಣ್ಣ ನನಗೆ ತಿಳಿಸಿದ್ದ. ಆದ್ದರಿಂದ ಒಡ್ರಪಾಳ್ಯದ ಜೀಪು ಓವರ್ ಹಾಲಿಗೆ, ಅಭ್ಯಂಜನಕ್ಕೆ, ನಾನಾ ಚೆಕ್-ಅಪ್‌ಗಳಿಗೆ 'ಗೌಸಿಯಾ ಗೆರಾಜಿ'ಗೆ ಬರುತ್ತಿದ್ದುದ್ದು ನನಗೆ ಆಶ್ಚರ್ಯವೆನಿಸಿರಲಿಲ್ಲ.

ಹೊನ್ನಪ್ಪನವರಾಗಲಿ ಗುರಪ್ಪನವರಾಗಲಿ ಗಿರಿಯಣ್ಣನ ಓದಿನ ಬಗ್ಗೆ ಅಷ್ಟೇನೂ ಕುತೂಹಲ ತೋರಿಸಿರಲಿಲ್ಲ. ಸ್ಕೂಲಿನ ಬಗ್ಗೆ ಅಷ್ಟಿಷ್ಟು ಔಪಚಾರಿಕ ಪ್ರಶ್ನೆಗಳನ್ನು ಕೇಳಿ ತೃಪ್ತರಾಗುತ್ತಿದ್ದರು. ನಮ್ಮ ಮಾವಿನ ಮರದ ಪೀಠದ ಸುಳಿವು ಅವರಿಗೆ ಸಿಗದಂತೆ ನಾವು ಜಾಗರೂಕರಾಗಿರುತ್ತಿದ್ದೆವು. ಷಮೀಮ್ ಸಾಹೇಬರಿಗೂ ನಾವು ಕಾಲಕಾಲಕ್ಕೆ ಮಾವಿನ ಹಣ್ಣು ಒದಗಿಸುತ್ತಾ, ರಿಪೇರಿ ಕೆಲಸದಲ್ಲಿ ಅಳಿಲು ಸೇವೆ ಮಾಡುತ್ತಾ ಬಂದಿದ್ದೆವಾದ್ದರಿಂದ ಅವರೂ ನಮ್ಮ ಗುಟ್ಟುಗಳನ್ನು ರಟ್ಟು ಮಾಡಿರಲಿಲ್ಲ.

ಎಸ್ಸೆಸ್ಸೆಲ್ಸಿ ಕ್ಲಾಸಿಗೆ ಮುಂಚಿನ ಎರಡು ವರ್ಷಗಳನ್ನು ನಾವು ಮಾವಿನ ಮರದ ಮೇಲೆಯೇ ಕಳೆದಿದ್ದೆವು. ಆ ಎರಡು ಪರೀಕ್ಷೆಗಳಲ್ಲಿ ಉಪಾಧ್ಯಾಯರು ಮುಂಚಿತವಾಗಿ ದಯಪಾಲಿಸುತ್ತಿದ್ದ ಉತ್ತರಗಳನ್ನು ಉರುಹೊಡೆದು ಒಪ್ಪಿಸಿ, ಅವರು ಧಾರಾಳವಾಗಿ ನೀಡುತ್ತಿದ್ದ ಕೃಪಾಂಕಗಳ ನೆರವಿನಿಂದ ಪಾಸಾದೆವು. ನಾವು ಆಟಪಾಠಗಳಲ್ಲಿ ಮುಂದಾಳುಗಳಾಗಿದ್ದು ಸ್ಪರ್ಧೆಗಳಲ್ಲಿ ಜಯಿಸಿ ಸ್ಕೂಲಿಗೆ ಕೀರ್ತಿ ತರುತ್ತಿದ್ದೇವಾದ್ದರಿಂದ ನಮ್ಮನ್ನು ಫೇಲು ಮಾಡಿಸುವ ಧೈರ್ಯ ಅವರಿಗೆಲ್ಲಿ!

ಆದರೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಕರಾಮತ್ತು ಫಲಿಸುವುದು ಸಾಧ್ಯವಿರಲಿಲ್ಲ. ಅದು ಪಬ್ಲಿಕ್ ಪರೀಕ್ಷೆ, ಅದರ ಪ್ರಶ್ನೆ ಪತ್ರಿಕೆಗಳು ಎಲ್ಲೋ ರಹಸ್ಯ ಸ್ಥಾನದಿಂದ ಹೊರಬೀಳುತ್ತವೆ, ಅಲ್ಲಿ ಯಾರ ಕೈವಾಡವೂ ನಡೆಯುವುದಿಲ್ಲ, ಎಂದೆಲ್ಲ ನಮ್ಮ ಸಹಪಾಠಿಗಳು ನಮ್ಮನ್ನು ಎಚ್ಚರಿಸುತ್ತಲೇ ಇದ್ದರು. ಪರ್ಯಾಯವಾಗಿ ಅವರು ಈ ಸಲದ ಪರೀಕ್ಷೆಯಲ್ಲಿ ನಮ್ಮ ಬೇಳೆ ಬೇಯುವುದಿಲ್ಲವೆಂದು ಸೂಚಿಸುತ್ತಿದ್ದರು. ಇದೇ ಅಭಿಪ್ರಾಯವನ್ನು ಒಳ್ಳೆಯ ಮಾತುಗಳಿಂದಲೇ ನಿವೃತ್ತ ಗಣಿತದ ಮೇಷ್ಟರು ರಂಗಸ್ವಾಮಿಯವರು ನಮ್ಮಲ್ಲಿ ವ್ಯಕ್ತಪಡಿಸಿದರು. ರಂಗಸ್ವಾಮಿಯವರು ಗುರಪ್ಪನವರ ಬಾಲ್ಯ ಸ್ನೇಹಿತರು. ಅವರು 'ಗೌಸಿಯಾ ಗೆರಾಜ್'ನ ಹಾಗೂ ಷಮೀಮ್ ಸಾಹೇಬರ ಉಪ ವ್ಯಾಪಾರವಾಗಿದ್ದ ಮಿನಿಬಸ್ ಸರ್ವಿಸ್ಸಿನ ಆಡಳಿತವನ್ನೂ ಲೆಕ್ಕ ಪತ್ರಗಳನ್ನೂ ನೋಡಿಕೊಳ್ಳುತ್ತಿದ್ದರು. ಅವರಿಗೆ ಗೆರಾಜಿನ ಹಿಂಭಾಗದಲ್ಲಿ ಸುಸಜ್ಜಿತ ಕೋಣೆಯೊಂದರ ವ್ಯವಸ್ಥೆ ಇತ್ತು. ಅವರಿಗೂ ಮಾವಿನ ಕಾಯಿ ಇಷ್ಟವೆಂದು ತಿಳಿದ ಮೇಲೆ ನಾವು ಅವರಿಗೂ ಆಗಾಗ ಮಾವಿನ ಕಾಯಿ ತೆಗೆದುಕೊಂಡು ಹೋಗುತ್ತಿದ್ದೆವು. ನಮ್ಮ ಅಲೆಮಾರಿತನವನ್ನು ನೋಡಿದ್ದ ಅವರು ಒಂದು ದಿನ ನಮ್ಮನ್ನು ತಮ್ಮ ಕೋಣೆಯೊಳಗೆ ಕರೆದು ''ನೀವಿಬ್ಬರೂ ಈ ಸಲದ ಮೆಟ್ರಿಕ್ ಪರೀಕ್ಷೇಲಿ ಪಾಸು ಮಾಡಬೇಕೋ ಇಲ್ಲವೋ?'' ಅಂತ ಒಂದು ಮೂಲಭೂತ ಪ್ರಶ್ನೆ ಕೇಳಿದರು.

ಗಿರಿಯಣ್ಣನಿಗೇನೋ ಗೌರಿಯ ಕೈ ಹಿಡಿಯಬೇಕಾದರೆ ಮೆಟ್ರಿಕ್ ಪಾಸೊಂದೇ ಮಾರ್ಗವೆಂದು ಖಚಿತವಾಗಿ ತಿಳಿದುಹೋಗಿತ್ತು. ನನ್ನೆದುರಿಗೆ ಬೇರೊಂದು ರೀತಿಯ ಆಮಿಷವಿತ್ತು, ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸಾದ ಕೂಡಲೆ ನಮ್ಮ ತಂದೆಯವರು ನನ್ನನ್ನು ತಮ್ಮ ಹೋಲ್‌ಸೇಲ್ ಮಳಿಗೆಯಲ್ಲಿ ಕೂರಿಸಿ ಆ ವ್ಯಾಪಾರವನ್ನೆಲ್ಲ ನನಗೇ ವಹಿಸಿಕೊಟ್ಟು ತಾವು ಭೂಮಿಕಾಣಿ ವ್ಯವಹಾರವನ್ನು ಗಮನಿಸಿಕೊಳ್ಳಲು ನಮ್ಮ ಗ್ರಾಮಕ್ಕೆ ಹೋಗುವ ಯೋಜನೆ ಹಾಕಿದ್ದರು. ಮಳಿಗೆ ಮಾಲೀಕರಾಗಿ ಧಿಮಾಕಿನಿಂದ ಮೆರೆಯುವ ಕನಸು ನನಗೆ ಇದ್ದೇ ಇತ್ತು. ನನಗೂ ಗಿರಿಯಣ್ಣನಿಗೂ ಈಗ ಬೇಕಾಗಿದ್ದದ್ದು ನಮ್ಮನ್ನು ದಿಢೀರ್ ಎಂದು ಪರೀಕ್ಷೆಗೆ ಸಜ್ಜುಗೊಳಿಸಬಲ್ಲ ಒಬ್ಬ ಸಮರ್ಥ ಮಾರ್ಗದರ್ಶಕ. ನಮ್ಮ ಇಂಗಿತಗಳನ್ನು ಮುಚ್ಚು ಮರೆಯಿಲ್ಲದೆ ಸವಿಸ್ತಾರವಾಗಿ ರಂಗಸ್ವಾಮಿಯವರ ಮುಂದೆ

ನಾವಿಬ್ಬರೂ ಸರದಿಯಾಗಿ ಅರಿಕೆ ಮಾಡಿಕೊಂಡೆವು. ರಂಗಸ್ವಾಮಿಯವರೇ ನಮಗೀಗ ಸ್ಕೂಲಿನಿಂದ ಮುಕ್ತರಾಗುವ ದಾರಿ ತೋರಿಸಬೇಕೆಂದು ಕೋರಿದೆವು. ನಮ್ಮ ಪರಿಸ್ಥಿತಿಯನ್ನು ಗ್ರಹಿಸಿದ ರಂಗಸ್ವಾಮಿಯವರು ''ಲೆಕ್ಕದ ಪೇಪರಿನ ಹೊರತು ಉಳಿದೆಲ್ಲ ಪೇಪರುಗಳಲ್ಲೂ ನಿಮ್ಮ ಉರುಹೊಡೆದು ಒಪ್ಪಿಸುವ ಪದ್ಧತಿ ಸಲ್ಲಬಹುದು. ಅವುಗಳಲ್ಲಿ ಮೂವತ್ತು ಮಾರ್ಕ್ಸ್ ಸಂಪಾದಿಸೋದಕ್ಕೆ ನನ್ನ ಗೈಡ್ ಪುಸ್ತಕವೂ ಸಹಾಯಕವಾಗುತ್ತೆ. ಅದನ್ನ ಓದಿ ಗಟ್ಟಿ ಮಾಡಿಕೊಳ್ಳಿ, ಸಾಕು'' ಅನ್ನುತ್ತ ನಮಗೆ ಧೈರ್ಯ ಹೇಳಿದರು.

ಆಮೇಲೆ ರಂಗಸ್ವಾಮಿಯವರು ಒಂದು ಎಚ್ಚರಿಕೆ ಕೊಟ್ಟರು. ''ಗಣಿತದ ಪೇಪರಿನಲ್ಲಿ ನೀವು ಮೂವತ್ತು ಅಂಕಗಳನ್ನಾದರೂ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪಾಸಾಗುವುದು ಸಾಧ್ಯವೇ ಇಲ್ಲ'' ನಾವಿಬ್ಬರೂ ಗಣಿತದಲ್ಲಿ ಮಾರ್ಕ್ಸ್ ತೆಗೆಯುವುದು ಸಂದೇಹಾಸ್ಪದವೆಂದು ತಿಳಿದಿದ್ದ ಅವರು ನಮ್ಮನ್ನು ಕಸಿವಿಸಿಗೊಳಿಸುವ ಒಂದು ಪ್ರಶ್ನೆ ಕೇಳಿದರು. ''ಈ ಸಲದ ಮಧ್ಯಂತರ ಪರೀಕ್ಷೆಯಲ್ಲಿ ಗಣಿತದಲ್ಲಿ ನಿಮಗೆ ಎಷ್ಟೆಷ್ಟು ನಂಬರುಗಳು ಬಂದವು?''

ನಾವು ತಗ್ಗಿಸಿದ್ದ ತಲೆ ಎತ್ತದೆ ''ಗಣಿತದ ಪೇಪರನ್ನು ನೋಡಿದ ಮೇಲೆ ನಾವು ಯಾವ ಪ್ರಶ್ನೆಗೂ ಉತ್ತರ ತಿಳೀದೆ ಎದ್ದು ಬಂದೆವು'' ಅಂತ ಸತ್ಯಸಂಗತಿ ತಿಳಿಸಿದೆವು.

ಯಾರನ್ನಾದರೂ ದಂಗು ಬಡಿಸಬಲ್ಲ ಈ ಉತ್ತರದಿಂದ ವಿಚಲಿತರಾಗದೆ ರಂಗಸ್ವಾಮಿಯವರು ನಸುನಕ್ಕು ''ನನಗೆ ಗೊತ್ತಿತ್ತು. ಸುಮ್ಮನೆ ಕೇಳಿದೆ. ಚಿಂತೆಯಿಲ್ಲ. ಈಗ ನಿಮಗೆ ಆಲ್ಜೀಬ್ರಾ ಉಪಯೋಗಕ್ಕೆ ಬರುತ್ತೆ. ಆಲ್ಜೀಬ್ರಾದ ಸುಲಭ ಪಾಠಗಳನ್ನು ನಿಮಗೆ ಕಲಿಸಿಕೊಡ್ತೀನಿ. ಆಲ್ಜೀಬ್ರಾ ಸಮಸ್ಯೆಗಳನ್ನು ಪರಿಹರಿಸೋದು ಹ್ಯಾಗೆ ಅಂತಲೂ ಹೇಳಿಕೊಡ್ತೀನಿ. ಆ ಸಮಸ್ಯೆಗಳನ್ನು ಬಗೆಹರಿಸೋದೇ ಒಂದು ತಮಾಷೆ. ಈಗಲೇ ಪಾಠ ಷುರು ಮಾಡಿ'' ಅಂತ ಭರವಸೆ ತುಂಬುವಂಥ ಮಾತುಗಳನ್ನಾಡಿ ನಮಗೆ ಆಲ್ಜೀಬ್ರಾ ಸ್ವಯಂ ಬೋಧಿನಿ ಪುಸ್ತಕವನ್ನು ಕೊಟ್ಟರು. ಅದನ್ನು ಅಭ್ಯಾಸ ಮಾಡುವುದು ನಮಗೆ ಸುಲಭವಾಗಿದ್ದಷ್ಟೇ ಅಲ್ಲ, ಸ್ವಾರಸ್ಯವಾಗಿಯೂ ಇತ್ತು. ಷಮೀಮ್ ಸಾಹೇಬರ ಗೆರಾಜಿನಲ್ಲಿ ಕೂತು ರಂಗಸ್ವಾಮಿಯವರ ನೇತೃತ್ವದಲ್ಲಿ ಸಾಂಗೋಪಾಂಗವಾಗಿ ನಾವು ಆಲ್ಜೀಬ್ರಾ ಕಲಿತೆವು. ನಮ್ಮ ಉತ್ಸಾಹವೂ ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತಾ ಬಂದು ಸಮಸ್ಯೆಗಳನ್ನು ಬಿಡಿಸುವುದರಲ್ಲೇ ನಾವು ಪೈಪೋಟಿಗೆ ಪ್ರಾರಂಭಿಸಿದೆವು. ಪರೀಕ್ಷೆಯಲ್ಲಿ ಆಲ್ಜೀಬ್ರ ಪ್ರಶ್ನೆಗಳನ್ನೆದುರಿಸಿ ಲೀಲಾಜಾಲವಾಗಿ ಸಮಸ್ಯೆಗಳಿಗೆ ಉತ್ತರಗಳನ್ನು ಬರೆದೆವು.

ನಮ್ಮಿಬ್ಬರಿಗೂ ಆ ವರ್ಷದ ಮೆಟ್ರಿಕ್ ಪರೀಕ್ಷೆಯಲ್ಲಿ ಮೂರನೆಯ ದರ್ಜೆಯಲ್ಲಿ ಪಾಸಾಯಿತು. ಗಣಿತದಲ್ಲಿ ಅರವತ್ತರವತ್ತು ಅಂಕಗಳು! ಆಲ್ಜೀಬ್ರಾದ ಕೃಪೆಯಿಂದ ನಾನು ನಮ್ಮ ವಂಶದ ಮೊದಲನೆಯ ಮೆಟ್ರಿಕ್ ಪದವೀಧರನಾದೆ. ಗಿರಿಯಣ್ಣ ಇಡೀ ತಾಲ್ಲೂಕಿನ

ಪ್ರಥಮ ಎಸ್ಸೆಸ್ಸೆಲ್ಲಿ ಪಟ್ಟಧಾರಿಯಾದ. ನನ್ನ ಸಾಹಸವನ್ನು ಮೆಚ್ಚಿ ನಮ್ಮ ತಂದೆ ನನ್ನನ್ನು ಭಾವೀ ಮಳಿಗೆ ಮಾಲೀಕನನ್ನಾಗಿ ಆರಿಸಿದ್ದಲ್ಲದೆ ನನ್ನ ಇನ್ನೊಂದು ಆಸೆಯನ್ನೂ ಪೂರಯಿಸಿದರು. ಷಮೀಮ್ ಸಾಹೇಬರು ತಮ್ಮ ಗೆರಾಜನ್ನು ಮುಚ್ಚಿ ಮಗನ ಜತೆಗಿರಲು ಕೆನಡಾಗೆ ಹೊರಡುವರೆಂದು ತಿಳಿದು ನಾನು 'ಗೌಸಿಯಾ ಗೆರಾಜ'ನ್ನು ನಾವೇ ಕೊಂಡುಕೊಳ್ಳುವ ಇಚ್ಛೆ ಪ್ರಕಟಿಸಿದ್ದೆ. ತಂದೆಯವರು ಒಪ್ಪಿ ಧನಸಹಾಯ ಮಾಡಿದರು. ನಾನು ಗೆರಾಜ್‌ಗೆ ಒಡೆಯನಾದೆ. ಅದೇ ಸಿಬ್ಬಂದಿಯನ್ನುಳಿಸಿಕೊಂಡೆ. ರಂಗಸ್ವಾಮಿಯವರ ಮೇಲ್ವಿಚಾರಣೆಯಲ್ಲಿ ನಮ್ಮ ವರ್ಕ್‌ಶಾಪ್ ಬೆಳೆಯುತ್ತಲೇ ಹೋಗುವ ಸೂಚನೆ ತೋರಿಸುತ್ತ ಬಂದಿದೆ.

ಗಿರಿಯಣ್ಣನ ವಿವಾಹ ಮಹೋತ್ಸವಕ್ಕೆ ಗುರಪ್ಪನವರ ಕುಟುಂಬ, ಅಳಿಯನ ಹಿಂದೆ ಗಿಳಿಯ ನಾನು, ನಮ್ಮ ತಂದೆ ತಾಯಿಯರು ರಂಗಸ್ವಾಮಿ, ಷಮೀಮ್ ಸಾಹೇಬರು ಎಲ್ಲರೂ ಸೇರಿ ಮಿನಿ ಬಸ್ಸಿನಲ್ಲಿ ಹೋಗಿದ್ದೆವು. ಅಷ್ಟರಲ್ಲಿ ಕುಣಿಗಲ್ಲಿನಿಂದ ಒಡ್ರಹಳ್ಳಿಗೆ ಒಂದು ಪ್ರಖ್ಯಾತ ಜೋಡಿ ವಾಲಗ ಮೇಳ ಮದುವೆಯ ಸಮಾರಂಭಕ್ಕಾಗಿ ಬಂದಿತ್ತು. ನಾವು ಗಿರಿಯಣ್ಣನನ್ನು ಇಳಿಸಿಕೊಂಡು ಬಸ್ಸಿನಿಂದಿಳಿಯುತ್ತಿರುವಾಗಲೇ ಕುಣಿಗಲ್ ಮೇಳ ''ರಾರಾ ಮಾಯಿಂಟಿದಾರಾ'' ಹಾಡನ್ನು ಬಾರಿಸುತ್ತ ನಮ್ಮನ್ನೆದುರುಗೊಂಡಿತು. ಬಸ್ಸಿನಿಂದ ಜತೆ ಜತೆಯಾಗಿ ಇಳಿದ ಗಿರಿಯಣ್ಣನಿಗೂ ನನಗೂ ರೋಜಾ ಹೂವಿನ ಮಾಲೆಗಳು ಬೆಂಗಳೂರಿನ ಅತಿಥಿಗಳೆಲ್ಲರಿಗೂ ಸುವಾಸನೆಯ ಪುಷ್ಪ ಗುಚ್ಛಗಳು, ಆರತಿಯೆತ್ತುತ್ತ ಒಂದು ಹೆಣ್ಣು ಮಕ್ಕಳ ಗುಂಪು,

ಮಾರಸುಂ । ದರಸುಕು । ಮಾರಶಾ । ರೀರಗೆ।

ಆರತೀ । ಎತ್ತಿರೇ । ನರಿಯಾರೂ।

ನರಿಯಾರು ಸುಕು। ಮಾರಿಯಾರೂ।

ಎಂದು ಹಾಡಿದ್ದು ವಾಲಗದ ಸದ್ದನ್ನೂ ಮೀರಿಸಿತ್ತು. ಅವತ್ತೆಲ್ಲ ಆ ಆರತಿ ಹಾಡು ನನ್ನ ಕಿವಿಗಳಲ್ಲಿ ಮೊಳಗುತ್ತಲೇ ಇತ್ತು.

ಮೆರವಣಿಗೆಯ ದಾರಿಯುದ್ದಕ್ಕೂ ಎಲ್ಲರ ಮನೆಗಳಲ್ಲೂ ದೀಪಗಳು, ಬಣ್ಣ ಬಣ್ಣದ ರಂಗೋಲಿ, ಹೂಗಳ ಶೃಂಗಾರ ಕಂಗೊಳಿಸುತ್ತಾ ಅದೊಂದು ಊರ ಹಬ್ಬವೋ ಎಂಬ ಭ್ರಮೆ ಹುಟ್ಟಿಸಿತ್ತು, ಗಿರಿಯಣ್ಣನ ಪಕ್ಕದಲ್ಲಿ ಹಾರ ಹಾಕಿಸಿಕೊಂಡು ಬೀಗಿ ನಡೆಯುತ್ತಿದ್ದ ನಾನು ಭಾವೋದ್ರೇಕದಿಂದ ಅವನ ಕಿವಿಯಲ್ಲಿ ಉಸುರಿದ, ''ನಿನ್ನ ಮೊದಲ ಮಗನಿಗೆ ಹೊನ್ನಪ್ಪ ಅಂತಲೇ ಹೆಸರಿಡ್ತಾರೆ, ಸಂದೇಹವಿಲ್ಲ, ಆ ಹೆಸರು ಹಿಡಿದು ನೀವ್ಯಾರೂ ಅವನನ್ನ ಕರೆಯೋ ಹಾಗಿರೊಲ್ವಲ್ಲ. ಕರೆಯೋದಕ್ಕೆ ಅವನಿಗೆ 'ಆಲ್ಜೀಬ್ರಾ' ಅಂತ ಹೆಸರಿಟ್ಟಿಡು!''

ಅಹಲ್ಯಾ ಪರಿಣಯ



⊙ ಶಿವು

ದೃಶ್ಯ 1

(ಶರಣಪ್ಪನ ಮನೆಯ ಹಜಾರ, ಶರಣಪ್ಪ ಮತ್ತು ಅವನ ಹೆಂಡತಿ ಉಷಾ ಪರಸ್ಪರ ಮಾತನಾಡುತ್ತಿದ್ದಾರೆ)

ಉಷಾ: ತಗೊಳ್ಳಿ, ಕಾಫಿ - ಬಿಸಿ ಬಿಸಿಯಾಗಿದೆ. ಪಾಪ, ದಿನವೆಲ್ಲಾ ದುಡಿದು ಸುಸ್ತಾಗಿ ಬಂದಿದೀರ.

ಶರಣಪ್ಪ: (ಸ್ವಲ್ಪ ಕಾಫಿ ಹೀಗೆ) ಅಹ, ದಿವಿನಾಗಿದೆ ಕಾಫಿ. ಇದೇನೇ ಇದೂ, ಖಾರದ ಅವಲಕ್ಕೀ ಬೇರೆ ಕಾಫಿ ಜೊತೆಗೆ. ಲೇ ಉಷಾ, ಡಾಕ್ಟರು ನಿನಗೇ ಹೇಳಿದ್ದರಲ್ಲೇ. ನಿಮ್ಮ ಗಂಡನಿಗೆ ರಕ್ತದ ಒತ್ತಡ. ಸ್ವಲ್ಪಾನೂ ಉಪ್ಪು ಸೋಕಿಸಬಾರ್ದ್ದೂ ಅಂತ. ಅಲ್ದೇ ನನಗೋ ಇಂಥಾ ಕುರುಕಲು ತಿಂಡೀ ಕಂಡ್ರೆ ಪಂಚಪ್ರಾಣ ಬಾಯಿಕಟ್ಟೋದು ತೀರ ಕಷ್ಟ. ಗೊತ್ತಿದ್ದೂ ಗೊತ್ತಿದ್ದೂ ಹೀಗೆ ಅಪಥ್ಯ ಮಾಡಿದ್ರೆ.....

ಉ: ಡಾಕ್ಟರು ಹೇಳಿದ್ರೂ ಅಂತ ಒಂದ್ ತಿಂಗ್ಳಿಂದ ಗೋಧಿ ಅನ್ನ, ಬೇಯಿಸಿದ ತಬ್ಬಲೀ ತರಕಾರೀನೇ ತಿನ್ನಿಸ್ತಾ ಇದೀನಲ್ಲಾ. ಆದ್ರೆ ಇವತ್ಯಾಕೋ ಮನಸ್ಸಿಗೆ ಬೇಜಾರಾಯ್ತೂರೀ. ಅಲ್ಲಾ ನೀವು ಒಂದ್ ವರ್ಷದಿಂದ ಒಂದೇ ಸಮನೆ ನಮ್ ಅಹಲ್ಯೇಗೆ ಗಂಡು ಹುಡುಕೋದಕ್ಕೆ ಊರೆಲ್ಲಾ ಅಲೆದ್ರೂ ಸ್ವಲ್ಪಾನೂ ರಿಸಲ್ಟೇ ಬೇಡ್ವೇ. ತಿಂಗಳುಗಟ್ಲೆ ಕಂಡ ಕಂಡೋರ ಮನೆಗೆಲ್ಲಾ ಅಲೆದು ಬರಿಗೈಲಿ ಸಪ್ಪೆ ಮುಖ ಹಾಕ್ಕೊಂಡು ನೀವು ಬರೋದನ್ನ ನೋಡಿ ನನಗಂತೂ ಹೊಟ್ಟೆ ಕಿವಿಚಿದ ಹಾಗೆ ಆಗತ್ತೆ ರೀ. ಅದಕ್ಕೆ ಇವತ್ತು ಆದದ್ದು ಆಗಿ ಹೋಗ್ಲೀ ಸಾಹೇಬರ್ನ ಸ್ವಲ್ಪ ಖುಷಿ ಪಡಿಸೋಣ ಅಂತ ಯೋಚ್ಸೀ....

ಶ: ಥ್ಯಾಂಕ್ಯೂ ನನ್ ರಾಣೀ. ಅಂದ್ ಹಾಗೇ ಇವತ್ತೂ ಸಹಾ ಆಫೀಸಿಂದ ಬರ್‍ತಾ ಆ twenty nine, Five Eleven, ten thousand ಮನೇಗೇ ಹೋಗಿ ಬಂದೆ.

ಉ: (ಆಸಕ್ತಿಯಿಂದ) ಹೌದೇ, ಏನಂದ್ರೂ ಅವರು?

ಶ: ಸಾಫ್ಟ್‌ವೇರೇ ಬೇಕಂತೆ ಅವರ್ಗೆ. ನಿಮ್ ಹುಡುಗೀ ಡಾಕ್ಟರು. ವೀಸಾ ಯಾರ್ರೀ ಕೊಡ್ತಾರೇ ಅವಳ್ಗೇ ಅಂತ ಹಂಗಿಸಿ ಉಪ್ಪಿಟ್ಟೂ ಕೂಡ ಕೊಡದೇ ಕಳಿಸಿಬಿಟ್ರೂ ಕಣೇ.

(ಟೆಲಿಫೋನಿನ ಕರೆಗಂಟೆಯ ಟ್ರೀನ್ ಟ್ರೀನ್ ಶಬ್ದ. ಉಷಾ ಓಡಿಹೋಗಿ ರಿಸಿವರ್ ಎತ್ತಿ ಉತ್ತರಿಸುವಳು)

ಉ: ಹಲೋ, ಯಾರು?,..... ಓ ನೀನಾ, ಏನ್ಮಗೂ ಚೆನ್ನಾಗಿದ್ದೀಯಾ... ಅಹಲ್ಯೆ ಇನ್ನೂ ಹಾಸ್ಪಿಟಲ್ ಇಂದ ಮನೆಗೆ ಬಂದಿಲ್ಲ.... ಆಯ್ತು ತಿಳಿಸ್ತೇನೆ... ಬೈ.

(ರಿಸೀವರ್ ಕೆಳಗಿಟ್ಟು ಗಂಡನ ಬಳಿ ಬಂದು)

ಆಚೆ ಬೀದಿ ಶ್ರೀರಾಮ್ ಲೈನಲ್ಲಿದ್ದ. ಎಂಥ ಒಳ್ಳೇ ಹುಡುಗ ಅವನು. ನಮ್ಮನ್ನ ಕಂಡ್ರೆ ಎಷ್ಟು ವಿಶ್ವಾಸ ಮರ್ಯಾದೆ ಅಂತೀರಿ...

ಶ: ಅವನೂ ಕೂಡ ಸಾಫ್ಟ್‌ವೇರ್ ಅಲ್ವೇ. ಚಿಕ್ಕಂದಿನಿಂದ ಅಹಲ್ಯೇ ಸ್ನೇಹಿತ ಬೇರೇ. ಅವನ್ನೇ ಯಾಕೆ ಕೇಳ್ಬಾರ್ದು ಅಂತೀನಿ.

ಉ: ನನಗೇನು ಆ ವಿಷಯ ಹೊಳೆದೇ ಇಲ್ಲ ಅಂದ್ಕೊಂಡ್ರಾ. ಯಾವತ್ತೋ ಕೇಳಾಯ್ತು ಅಹಲ್ಯೇನ ಶ್ರೀರಾಮ್‌ನ ಕೇಳೋಣ್ವೇನೇ ಅಂತ.

ಶ: (ಉತ್ತೇಜಿತನಾಗಿ) ಏನಂದ್ಳು, ಅವಳೂ?

ಉ: ಇನ್ನೇನಂತಾಳೆ. ಗೊತ್ತೇ ಇದೆಯಲ್ಲಾ ಅವಳ ಮಾತಿನ ಧಾಟಿ. ಅವನು ಕುಳ್ಳಂತೇ, ತೀರ ಸಿಸ್ಸೀ ಅಂತೇ, ಗಂಡಸ್ತನಾನೇ ಇಲ್ಲವಂತೇ. ಸ್ನೇಹಿತನಾಗುಕ್ಕೆ ಲಾಯಕ್ಕು ಆದ್ರೆ certainly not Husband Material ಅಂತೆಲ್ಲಾ ಭಾಷಣ ಬಿಗಿದ್ಲೂ.

ಶ: (ನಿಟ್ಟುಸಿರು ಬಿಡುತ್ತಾ) ಸ್ಸರಿ, ಈ ರಂಭೇಗೆ ಯಾವ ಮನ್ಮಥ ಸಿಗ್ತಾನೋ ನಾನು ಬೇರೇ ಕಾಣೆ.

(ಬಾಗಿಲು ತೆರೆದು ನಂತರ ಹಾಕಿದ ಶಬ್ದ. ಅಹಲ್ಯೆ Sails in)

ಅಹಲ್ಯೆ: ಅಯ್ಯೋ ಏನಮ್ಮಾ ಇದೂ. ಅಪ್ಪಂಗೆ ಬೀಪೀ ಇದೇ ಅಂತ ಗೊತ್ತಿದ್ದೂ ಹೀಗೆ ಖಾರದ ಅವಲಕ್ಕಿ ಕೊಟ್ಟಿದೀಯಲ್ಲಾ. (ಅವಲಕ್ಕಿ ತಟ್ಟೆಯನ್ನು ತಾನೇ ತೆಗೆದುಕೊಂಡು) ಹೋಗ್ಲೀ. ಅದ್ಯಾಕೆ ವೇಸ್ಟ್ ಆಗ್ಬೇಕು ನಾನೇ ತಿಂತೀನಿ.

ಶ: ಏನ್ಮಗೂ ಹೇಗಿತ್ತಮ್ಮಾ ಇವತ್ತಿನ ಕೆಲಸ?

ಅ: ಓಪೀಡೀಗೆ post ಮಾಡಿದಾರಪ್ಪಾ. ಬರೀ ರೊಟೀನ್ ಕೆಲಸ. ಅಲ್ದೆ ಅಲ್ಲೊಬ್ಬ ಮೇಟ್ರನ್ ಬೇರೆ ಹಾಕಿದಾರೆ. ಶತ ಬೋರು ಅವಳು. ನಾವೆಲ್ಲಾ ಅವಳ್ನ

ಶೂರ್ಪನಖಿ ಅಂತ ಕರೀತೇವೆ. ತುಂಬಾ ಮುಂಗೋಪ ಆವಳಿಗೆ. ಅವಳ ಕರಾಳ ರೂಪ ನೋಡಿದ್ರೆ, ಸರಿಯಾಗಿರೋರೂ ಮೂರ್ಛೆ ಹೋಗಬೇಕು (ಹಾಸ್ಯದ ದನಿಯಲ್ಲಿ) ಅಂದ್ಹಾಗೆ ಏನಾಯ್ತು ನಿನ್ನ twenty nine, Five Eleven, ten thousand ಮಿಷನ್ನೂ?

ಶ: ಇವತ್ತು ಅಲ್ಲಿಗೆ ಹೋಗುಕ್ಕೇ ಆಗ್ಲಿಲ್ಲ ಮಗೂ. ಆದ್ರೂ, ಅದೆಲ್ಲಾ ಹಾಸ್ಯ ಮಾಡೋ ವಿಷಯ ಅಲ್ಲಮ್ಮ.

ಅ: ಹಾಸ್ಯ ಅಲ್ದೇ ಇನ್ನೇನಪ್ಪಾ. ನಿನಗೆ ಮಾಡುಕ್ಕೆ ಕೆಲಸ ಇಲ್ಲ ಅಷ್ಟೇ ''ನನ್ನ ಮಗಳಿಗೆ ಗಂಡು ಕೊಡೀ'' ಅಂತ ಕಂಡ ಕಂಡೋರ್ನೆಲ್ಲಾ ಕೇಳ್ಕೊಂಡು ಊರೆಲ್ಲಾ ಸುತ್ತೀಯ. ನನಗಂತೂ ಮದುವೇನೇ ಬೇಡ. ಯಾವ್ದಾದರೂ ದೇವತೆ ಪ್ರತ್ಯಕ್ಷ ಆಗಿ ''ವತ್ಸೆ, ನಿನಗೇನು ವರವನ್ನು ದಯಪಾಲಿಸಲಿ. ಕೇಳುವಂಥವಳಾಗು'' ಅಂದ್ರೆ, ನಾನು ಎಚ್-ಒನ್ ವೀಸಾ ಕೇಳಿ ಪಡೆದು ಅಮೆರಿಕಾಕ್ಕೆ ಹಾರಿ ಹೋಗೋದಕ್ಕೆ ಈ ಕ್ಷಣ ಸಿದ್ಧ. ಅದ್ಸರಿ ಸಂಜೆಗೆ ನಾನು ಬೆಂಗಳೂರು ಹಬ್ಬ ನೋಡುಕ್ಕೆ ಹೋಗ್ತಿದೀನಿ. ಬೇಗ ರೆಡಿಯಾಗಬೇಕು.

(ಒಳಕ್ಕೆ ತೆರಳುವಳು. ಬಾಗಿಲು ತೆರೆದು ಹಾಕಿದ ಶಬ್ದ)

ಉ: ಏನ್ರೀ ಇದು. ಇವಳಿಗೆ ಒಂದು ಚೂರೂ ಜವಾಬ್ದಾರೀನೇ ಇಲ್ಲವಲ್ಲಾ ಅಂತೀನಿ. ನಾನಂತೂ ಕಂಡ ಕಂಡ ದೇವರಿಗೆಲ್ಲಾ ಹರಸಿಕೊಂಡಿದ್ದಾಯಿತು. ಯಾವ ದೇವರಿಗೂ ನಮ್ಮನ್ನ ಕಂಡು ಕರುಣೆ ಬರಲಿಲ್ಲ. ಒಟ್ಟಿನಲ್ಲಿ ಎಲ್ಲಾ ನಾವು ಪಡಕೊಂಡು ಬಂದಿದ್ದು.

ಶ: ಉಷಾ, ಎಲ್ಲಾ ವಿಧಿ ಬರಹಾ ಕಣೇ. ವಿಧಿ ಬರೆದದ್ದನ್ನ ಯಾರು ತಪ್ಪಿಸುಕ್ಕಾಗುತ್ತೆ?

ಉ: ರೀ, ಒಂದು ಐಡಿಯಾ ಹೊಳೀತಿದೆ. ವಿಧಿ ಬರೆದದ್ದನ್ನ ಇನ್ಯಾರು ಬದಲಿಸುಕ್ಕೆ ಆಗದೇ ಇದ್ರೂ, ಆ ಬರಹಾನ ವಿಧೀನೇ ಬದಲಿಸಬಹುದಲ್ಲಾ. ವಿಧೀನೇ ಯಾಕ್ರೀ ನಾವು ಪ್ರಾರ್ಥಿಸಿಕೋಬಾರ್ದು. ವಿಧಿ ನಮ್ಮ ಮೇಲೆ ಕೃಪಾಕಟಾಕ್ಷಬೀರಿದರೆ ನಮ್ಮ ಸಮಸ್ಯೆಗಳೆಲ್ಲಾ ಒಂದೇ ಕ್ಷಣದಲ್ಲಿ ಮಾಯ ಆಗಬಹುದು ಅಲ್ವೇನ್ರೀ.

ಶ: ಪ್ರಾರ್ಥನೆ ಮಾಡೋದ್ರಲ್ಲಿ ನಷ್ಟ ಅಂತೂ ಇಲ್ಲವಲ್ಲಾ. ಬಾ ಉಷಾ, ಕೈಕಾಲು ತೊಳೆದುಕೊಂಡು ದೇವರ ಮನೆಗೆ ಹೋಗಿ ನಮ್ ಅಪಲ್ಕೆಗೆ ಮದುವೆ ನಿಶ್ಚಯ ಆಗಲೀ ಅಂತ ವಿಧಿಯನ್ನ ಪ್ರಾರ್ಥಿಸಿಕೊಳ್ಳೋಣ.

ದೃಶ್ಯ 2

(ಇಂದ್ರಲೋಕದಲ್ಲಿ ವಿಧಿಯ ಆಸ್ಥಾನ. ಅದಕ್ಕೆ ತಕ್ಕಂತಹ ಯಾವುದಾದರೊಂದು ಓಸ್ನೆಲೆ ವಾದ್ಯಗೋಷ್ಠಿ)

ವಿಧಿಯ ಆಸ್ಥಾನದ ವಂದಿಮಾಗದರು: ಬಿರುದಂತೆಂಬ

ಗಂಡ.... ಶ್ರೀಮತ್ಸಕಲಗುಣಶೀಲ.... ಸೌಂದರ್ಯ ಸಂಪನ್ನ.... ಚಂಡಪ್ರಚಂಡ .... ಶ್ರೀ ಶ್ರೀ ಶ್ರೀ ವಿಧಿ ಮಹಾರಾಜ.... ಪರಾಕ್

ವಿಧಿ: (ತನ್ನ ಸಿಂಹಾಸನವನ್ನಲಂಕರಿಸಿ) ಮಂತ್ರಿವರ್ಯ, ಭೂಲೋಕದಲ್ಲಿ ಸಕಲ ಚರಾಚರವಸ್ತುಗಳೂ ವಿಧಿನಿಯಾಮಕವನ್ನು ಪಾಲಿಸುತ್ತಿವೆಯಷ್ಟೇ.

ಮಂತ್ರಿ: ಪಾಲಿಸುತ್ತಿವೆ ಮಹಾಸ್ವಾಮಿ. ಅಷ್ಟೇ ಅಲ್ಲ ಚರಾಚರವಸ್ತುಗಳಲ್ಲದ ಮಿಕ್ಕ ಪದಾರ್ಥಗಳೂ ಸಹಾ ತಮ್ಮ ನಿಯಾಮಕವನ್ನು ಚಾಚೂ ತಪ್ಪಿಲ್ಲದೇ ನಡೆಸಿಕೊಂಡು ಬರುತ್ತಿವೆ.

ವಿ: ಸ್ವಲ್ಪ ವಿವರಿಸಿ ಹೇಳುವಂಥವನಾಗುವೆಯಾ?

ಮಂ: ಜಂಬೂ ದ್ವೀಪದಲ್ಲಿನ ಭರತಖಂಡದಲ್ಲಿ ಭ್ರಷ್ಟಾಚಾರವೆಂಬ ಒಂದು ಹೊಸ ಪದಾರ್ಥ ಶುಕ್ಲಪಕ್ಷದ ಚಂದಿರನಂತೆ ವೃದ್ಧಿ ಹೊಂದುತ್ತಾ ಈಗ ಜನಸ್ತೋಮದಲ್ಲೆಲ್ಲಾ ವಿಪುಲವಾಗಿ ಹರಡಿದೆ ಮಹಾಸ್ವಾಮಿ.

ವಿ: ಸಂತೋಷ, ಸಂತೋಷ. ಇನ್ನು ನಾವೇ ಸ್ವತಃ ನೀರೆರೆದು ಪೋಷಿಸಿದ ದಾರಿದ್ರ್ಯ ರೇಖೆಯ ಪಾಡೇನಾಗಿದೆ? ಅದೇನು ಸೊರಗಿ ಹೋಗಿಲ್ಲವಷ್ಟೇ.

ಮಂ: ಖಂಡಿತ ಇಲ್ಲ ಮಹಾರಾಜ ಮೇರಿಯ ಕುರಿಮರಿಯಂತೆ ಅದು ಪುಟಿ ಪುಟಿಯುತ್ತಾ ಆಗಾಗ ಮೇಲೆ ನೆಗೆಯುತ್ತಾ ಮುಂದೆ ಸಾಗುವುದನ್ನು ನೋಡಲು ಎರಡು ಕಣ್ಣುಗಳು ಸಾಲವು. ಕಾಲಪ್ರವಾಹ ಮುಂದೆ ಹರಿದಂತೆ ಅದು ಹೆಚ್ಚು ಹೆಚ್ಚು ಜನಗಳನ್ನು ತನ್ನ ಬಾಹುಲತೆಗಳಲ್ಲಿ ಬಂಧಿಸಿ ನಿಮ್ಮ ಅಭೀಪ್ಸೆಯನ್ನು ಆಗಗೊಳಿಸುತ್ತಿರುವ ರಾಜವರ್ಯಾ.

(ನೇಪಥ್ಯದ ಆಚೆ ಬದಿಯಿಂದ 'ಈ ಮೇಯ್ಲ್, ಈ ಮೇಯ್ಲ್' ಎಂಬ ಕೂಗು ಕೇಳಿ ಬರುವುದು)

ವಿ: ಅದೇನದು ವಿಚಿತ್ರ ಕೂಗು?

ಮಂ: ಅದು ಇಂದ್ರದೇವರ ಹೊಸ ಆಜ್ಞೆ ಮಹಾಸ್ವಾಮಿ. ಈಚೆಗೆ ಭೂಲೋಕದ ಜನ ತಮ್ಮ ಪತ್ರ ವ್ಯವಹಾರಕ್ಕೆ ಈ ಮೇಯ್ಲ್ ಎಂಬ ಸಾಧನವನ್ನು ಬಳಸಲು ಪ್ರಾರಂಭಿಸಿದಾಗಿನಿಂದ ಇಂದ್ರದೇವ, ಭೂಲೋಕದಿಂದ ನಮ್ಮ ಭಕ್ತರು

ಕಳುಹಿಸುವ ಪ್ರಾರ್ಥನೆಗಳನ್ನು ವಿವಿಧ ದೇವತೆಗಳಿಗೆ ತಲುಪಿಸಲು ''ಈಪ್ಸಿತಾರ್ಥಮೇಯ್ಲ್'' ಅನ್ನು ಚಾಲನೆ ಗೊಳಿಸಿರುವರು. ಅದರ ಸಂಕ್ಷಿಪ್ತನಾಮ ಈ ಮೇಯ್ಲ್. ಮಹಾರಾಜರಿಗೆ ಭಕ್ತರಿಂದ ಪ್ರಾರ್ಥನೆಯೊಂದು ಬಂದಿರಬಹುದು. ನಾನು ನೋಡಿ ಬರುತ್ತೇನೆ.

ವಿ: (ಸ್ವಗತ) ನನ್ನ ಕುರಿತು ಭಕ್ತರಿಂದ ಪ್ರಾರ್ಥನೆಯೇ? ಅಂದರೆ ನನಗೂ ಭಕ್ತರಿದ್ದಾರೆ ಅಂತಾಯಿತು. ವಿಚಿತ್ರ. ಇರಲಿ ವಿಚಾರಮಾಡುವಾ..

ಮಂ: ಮಹಾಸ್ವಾಮಿ, ನನ್ನ ಊಹೆ ಸರಿ. ಭೂಲೋಕದಿಂದ ಶರಣಪ್ಪ ಮತ್ತು ಉಷಾ ಎಂಬ ಸಾತ್ವಿಕ ದಂಪತಿಗಳಿಂದ ಬಂದಿರುವ ಅಹವಾಲು ಇದು. ಸದರೀ ದಂಪತಿಗಳಿಗೆ ಅಹಲ್ಯೆ ಎಂಬ ಪುತ್ರಿಯಿದ್ದು ಹರಿದ್ರಾ ಕುಂಕುಮ ಶೋಭಿತಳಾದ ಆ ಕನ್ಯೆಗೆ ಇನ್ನೂ ಮದುವೆಯಾಗಿಲ್ಲವಂತೆ. ಆಕೆಗೆ ಮಾಂಗಲ್ಯ ಭಾಗ್ಯವನ್ನು ಕನ್ಯಾಪಿತೃಗಳು ಕೋರುತ್ತಿದ್ದಾರೆ. ಈ ಪವಿತ್ರ ಕಾರ್ಯಕ್ಕೆ ತಮ್ಮ ನೆರವು ಬೇಕಂತೆ ಅವರಿಗೆ.

ವಿ: ನನ್ನ ನೆರವೇ? ಆಶ್ಚರ್ಯ. ಇಂಥಹ ಜುಜುಬಿ ವಿಷಯಗಳಲ್ಲಿ ತಲೆಹಾಕುವುದನ್ನು ನಾವು ದ್ವಾಪರ ಯುಗದಲ್ಲಿಯೇ ನಿಲ್ಲಿಸಿಯಾಗಿತಲ್ಲವೇ ವಾಸ್ತವವಾಗಿ ದಾರಿದ್ರ್ಯ ರೇಖೆಯೊಂದನ್ನುಳಿದು ಮಿಕ್ಕೆಲ್ಲ ವಿಷಯಗಳಲ್ಲಿ ಮಾನವರಿಗೆ ಸಂಪೂರ್ಣ ಸ್ವಾಂತ್ರ್ಯವನ್ನು ನೀಡಿರುವುದರಿಂದಲೇ ಅವರುಗಳು ತಮ್ಮ ವ್ಯವಹಾರಗಳಲ್ಲೇ ತೀವ್ರವಾಗಿ ಮಗ್ನರಾಗಿ, ಇಂದ್ರನ ಸ್ಥಾನವನ್ನಾಕ್ರಮಿಸುವ ಧಾರ್ಷ್ಟ್ಯವನ್ನು ತೋರದಿರುವುದು.

ಮಂ: ಹಾಗಾದರೆ, ನಮ್ಮಿಂದ ಏನೂ ಸಾಧ್ಯವಿಲ್ಲ ಎಂಬ ಸಂದೇಶವನ್ನು ಕಳಿಸಿಬಿಡಲೇ ಮಹಾಸ್ವಾಮಿ?

ವಿ: ಛೀ ಹುಚ್ಚ, ಮಾನವರ ಪ್ರಾರ್ಥನೆಗೆ ದೇವತೆಗಳು ಎಂದಾದರೂ ಉತ್ತರಿಸಿದ್ದನ್ನು ಕಂಡಿರುವೆಯೇನು? ಆದರೂ, ಈ ದಂಪತಿಗಳ ವಿಷಯದಲ್ಲಿ ಸುಮ್ಮನಿರಲು ಮನ ಒಪ್ಪುತ್ತಿಲ್ಲ. (ಸ್ವಲ್ಪ ಯೋಚಿಸಿ) ಮನ್ಮಥನನ್ನು ಸ್ವಲ್ಪ ಬರಹೇಳು.

(ಹಲವು ಸೆಕೆಂಡುಗಳ ಕಾಲ ವಾದ್ಯ ಸಂಗೀತ)

ಮನ್ಮಥ: ವಿಧಿ ಮಹಾರಾಜರಿಗೆ ಜಯವಾಗಲಿ. ನನ್ನನ್ನು ಬರಹೇಳಿದ ಕಾರಣನ್ನು ಅರುಹಲಾದೀತೇ?

ವಿ: ಸಾವಧಾನ, ಸಾವಧಾನ, ಅನಂಗರಾಜ. ಗೃಹಕ್ಷೇತ್ರದಲ್ಲಿ ಸಕಲವೂ ಕ್ಷೇಮವಷ್ಟೇ. ರತಿ ದೇವಿ ಸಕಲ ಸೌಭಾಗ್ಯಗಳನ್ನೂ ಅನುಭವಿಸುತ್ತ ಸೌಖ್ಯದಿಂದುರುವಳೆಂದು ಭಾವಿಸುವೆ.

ಮ: ಮಹಾಸ್ವಾಮಿಯವರ ಕೃಪೆಯಿಂದ ಸಕಲವೂ ಕ್ಷೇಮದಿಂದಿರುವುದು ರಾಜವರ್ಯಾ.

ವಿ: ಮದನ, ಬಹು ಯುಗಗಳ ನಂತರ ನನಗೆ ಭಕ್ತರಿಂದ ಬೇಡಿಕೆಯೊಂದು ಬಂದಿದೆ. ನೀನು ಭೂಲೋಕಕ್ಕೆ ಯಾತ್ರೆಯನ್ನು ಕೈಗೊಂಡು ಆ ಬೇಡಿಕೆಯನ್ನು ನಡೆಸಿಕೊಟ್ಟು ಬರಬೇಕೆಂದು ನಮ್ಮ ಅಪೇಕ್ಷೆ.

ಮ: ಏನದು ಆ ಬೇಡಿಕೆ ಮಹಾಸ್ವಾಮಿ?

ವಿ: ಭೂಲೋಕದಲ್ಲಿ ಶರಣಪ್ಪ ಮತ್ತು ಉಷಾ ದಂಪತಿಗಳ ಮಗಳಿಗೆ ಇನ್ನೂ ಮದುವೆಯಾಗಿಲ್ಲವೆಂದು ಕನ್ಯಾಪಿತೃಗಳು ಹತಾಸರಾಗಿದ್ದಾರೆ. ನೀನು ಅಲ್ಲಿಗೆ ತೆರಳಿ ಆಕೆ ಸೂಕ್ತ ವರನೊಬ್ಬನನ್ನು ವರಿಸುವಂತೆ ವ್ಯವಸ್ಥೆ ಮಾಡಬೇಕು ಕಾಮದೇವ.

ಮ: ಆಗದು ವಿಧಿ ಮಹಾರಾಜ, ಖಂಡಿತ ಆಗದು. ಇಂದಿನ ಭೂಲೋಕದಲ್ಲಿ ಟಿ.ವಿ., ಸಿನಿಮಾಗಳ ಕೃತ್ರಿಕ ಪ್ರಣಯಗಳಿಂದ ಪ್ರಭಾವಿತರಾದ ತರುಣ ತರುಣಿಯರಿಗೆ ನಿಜವಾದ ಪ್ರೇಮದ ಅರಿವು ಲವಲೇಶವೂ ಇಲ್ಲ. ನನ್ನ ಪುಷ್ಪ ಬಾಣಗಳು ಹೃದಯಾಂತರಾಳದಲ್ಲಿರುವ ಪ್ರೇಮದ ಚಿಲುಮೆಯನ್ನು ಭೇದಿಸಿ ಪ್ರೇಮದ ಸೆಲೆ ಚಿಮ್ಮುವಂತೆ ಮಾಡಬಲ್ಲವೇ ಹೊರತು, ಇಂದಿನ ತರುಣಿಯರ ಕಗ್ಗಲ್ಲಿನಂತಹ ಹೃದಯಗಳನ್ನು ಬದಲಿಸಲಾರವು ಸ್ವಾಮಿನ್.

ವಿ: ಹಾಗೆಂದರೆ ಹೇಗಾದೀತು ಮನ್ಮಥ? ಇಂದಿನ ಭರತಖಂಡದಲ್ಲಿ ವಿವಾಹಗಳು ವಿಪುಲ ಸಂಖ್ಯೆಯಲ್ಲಿ ನಡೆಯುತ್ತಿದ್ದು, ನಮ್ಮ ದಾರಿದ್ರ್ಯ ರೇಖೆಗೆ ಪೂರಕವಾಗುವಂತೆ ಜನಸಂಖ್ಯಾ ಸ್ಫೋಟವನ್ನು ಉಂಟು ಮಾಡಿರುವುದು ನಿಜವಲ್ಲವೆನ್ನುತ್ತೀಯಾ. ಅದ್ದೇಗೇ ಇರಲಿ ನೀನು ನನ್ನ ಆಣತಿಯನ್ನು ಮೀರಲಾಗದು. ಬೇಕೆಂದರೆ ಊರ್ವಶಿಯನ್ನು ನಿನ್ನೊಂದಿಗೆ ಭೂಲೋಕಕ್ಕೆ ಬಂದು ನಿನಗೆ ನೆರವು ನೀಡಲು ಒಪ್ಪಿಸುತ್ತೇನೆ.

ಮ: ಊರ್ವಶಿ! ನನ್ನೊಂದಿಗೆ! ಭೂಲೋಕಕ್ಕೆ! ಆಯಿತು ಮಹಾಸ್ವಾಮಿ. ನಿಮ್ಮ ಇಚ್ಛೆಯೇ ನನ್ನ ಆಜ್ಞೆ.

ವಿ: ಮಂತ್ರಿವರ್ಯಾ, ಅಪ್ಸರೆ ಊರ್ವಶಿಯನ್ನು ಸ್ವಲ್ಪ ನನ್ನ ಆಸ್ಥಾನಕ್ಕೆ ಆಗಮಿಸಲು ಹೇಳಿಕಳಿಸು.

(ಹಲವು ಸೆಕೆಂಡುಗಳ ಕಾಲ ವಾದ್ಯ ಸಂಗೀತ)

ಊರ್ವಶಿ: ಜಯತು, ಜಯತು ಹೇ ವಿಧಿ ಮಹಾನ್. ತಮ್ಮ ಆಜ್ಞೆಯನ್ನು ಈ ಸೇವಕಿಗೆ ತಿಳಿಸೋಣವಾಗಲಿ.

ವಿ: ಹೇ, ಕೋಮಲೇ, ನೀನು ಇದೀಗಲೇ ಮನ್ಮಥನೊಂದಿಗೆ ಭೂಲೋಕಕ್ಕೆ ತೆರಳಿ, ನಿಮ್ಮಿಬ್ಬರ ದೇವತಾ ಸಹಜವಾದ ಬುದ್ಧಿ, ಚಾತುರ್ಯ, ಸಮಯ ಸ್ಫೂರ್ತಿ ಇವುಗಳನ್ನೆಲ್ಲಾ ಬಳಸಿ ನನ್ನ ಭಕ್ತರ ಕನ್ಯೆಯೊಬ್ಬಳಿಗೆ ಮಾಂಗಲ್ಯಭಾಗ್ಯವನ್ನು ದೊರಕಿಸಿ ಕೊಡಬೇಕೆಂದು ನನ್ನ ಆಶಯ. ನಡೆಸಿಕೊಡುವೆಯಷ್ಟೇ?

ಊ: ಮನ್ಮಥನೊಂದಿಗೆ ವಿಹಾರ ನನಗೆ ಎಂದಿಗೂ ಪ್ರಿಯವಾದ ಕೆಲಸ ಮಹಾನ್. ಅಲ್ಲದೇ ಬಿನ್ನಾಣದಲ್ಲಿ, ವೈಯ್ಯಾರದಲ್ಲಿ, ಅಪ್ಸರೆಯನ್ನು ಮೀರಿಸಿರುವ ತಾರೆಯರು ಇಂದಿನ ಭೂಲೋಕದಲ್ಲಿ ಕಾಣಸಿಗುರಂತೆ. ಮೇನಕೆಯ ಹೆಸರನ್ನು ಹೋಲುವ ಒಬ್ಬ ಭೂ ಅಪ್ಸರೆ ಈಗಿನ ದಿನಗಳಲ್ಲಿ ಜಗತ್ಪ್ರಸಿದ್ಧಳಾಗಿರುವಳಂತೆ. ಮದನನೊಂದಿಗೆ ಈ ಭೂಯಾತ್ರೆಯನ್ನು ಕೈಗೊಳ್ಳಲು ನನಗೆ ಹರ್ಷವೆನಿಸುತ್ತದೆ, ಮಹಾಸ್ವಾಮಿನ್.

ಮಂತ್ರಿ: ಮಹಾರಾಜ, ನನ್ನದೊಂದು ಸಣ್ಣ ಸಲಹೆ.

ವಿ: ಏನದು ಮಂತ್ರಿವರ್ಯಾ?

ಮಂ: ಇವರೀರ್ವರ ಭೂಲೋಕ ಯಾತ್ರೆ ಸಫಲವಾಗಬೇಕಾದರೆ ಇವರು ಅಲ್ಲಿನ ಜನಸ್ತೋಮದಲ್ಲಿ ಬೆರೆತು ಕಾರ್ಯ ಸಾಧಿಸಬೇಕಾಗುತ್ತದೆ. ಶುದ್ಧ ಉಚ್ಚಾರದಿಂದ ಕಂಗೊಳಿಸುವ ವ್ಯಾಕರಣಬದ್ಧ ದೇವಭಾಷೆ, ಇವರನ್ನು ಪರಕೀಯರೆಂದು ಬಹುಬೇಗ ತೋರಿಬಿಡುತ್ತದೆ.

ಮನ್ಮಥ: ಹಾಗಾದರೆ ನಾವು ಹೇಗೆ ಮಾತನಾಡಬೇಕೆನ್ನುತ್ತೀರಿ ಮಂತ್ರಿವರ್ಯಾ?

ಮಂ: ಮೊದಲಿಗೆ ನಿಮ್ಮ ಪರಸ್ಪರ ಸಂಭಾಷಣೆಯಲ್ಲಿ, ''ಹೇ, ಮೋಹನಾಂಗಿ, ನೀಳಕುಂತಳೆ, ಅನಂಗರಾಜ, ಮನ್ಮನಚಕೊರ'' ಅವುಗಳನ್ನೆಲ್ಲಾ ಬಿಟ್ಟು ಊರ್ವಿ, ಮದನ್ ಅಂತ ಮಾತನಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಮಾತುಕತೆಗಳ ಮಧ್ಯೆ ಆಗಾಗ್ಗೆ ಏನ್ ಗುರೂ, ಹಾಯ್ ಕ್ಯೂಟಿ ಅಂತ ಸೇರಿಸಿ. ಇಂಗ್ಲೀಷಿನಲ್ಲಿ ಮಾತನಾಡುವಾಗ ಸಹಾ I love kannada ಅಂತ ಬಾರಿ ಬಾರಿಗೆ ಹೇಳುತ್ತಿರಿ. ಸ್ಥಳೀಯಜನಕ್ಕೆ ಆ ಮಾತು ಬಹು ಅಪ್ಯಾಯಮಾನ. ಯಾರನ್ನಾದರೂ ಬೀಳ್ಕೊಡುವಾಗ 'ಬಾಯ್'' ಅಂತ ಬಾಯಿ ಬಾಯಿ ತೆರೆದು ಕೂಗುವುದು ಸಭ್ಯತೆ ಲಕ್ಷಣ. ಏನೇ ಆಗಲೀ ನಾಲ್ಕು ವಾಕ್ಯಗಳ ನಡುವೆ ಒಂದು ಇಂಗ್ಲೀಷ್ ಪದ ಸೇರಿಸದಿದ್ದರೆ ನಿಮ್ಮ ಗುಟ್ಟು ರಟ್ಟಾದಂತೆಯೇ. ಹೋಗಿಬನ್ನಿ. ಜಯ ನಿಮ್ಮದಾಗಲಿ.

ಊ: ಬಾಯ್ ವಿಧಿ, ಬಾಯ್ ಮಂತ್ರಿ.

ಮನ್ಮಥ: ಊರ್ವಿ ನನ್ನ ಜೊತೆಗೆ ಬರ್ತಿರೋದು ರತೀಗೆ ಹೇಳ್ಬೇಡಿ. ಬಾಯ್ both of you!

ದೃಶ್ಯ 3

(ಭೂಲೋಕವನ್ನು ಸೂಚಿಸುವ ಒಂದು ವಿಶೇಷ ವಾದ್ಯವೃಂದದ ಹಿನ್ನೆಲೆ - ಭರ್ರೆಂದು ಆಟೋ ಬಂದು ನಿಂತ ಸದ್ದು. ಆಟೋದಿಂದ ಊರ್ವಿ ಮತ್ತು ಮದನ್ ಇಳಿಯುತ್ತಾರೆ)

ಊ: ಅಬ್ಬ, ಎಷ್ಟು ಚೆನ್ನಾಗಿತ್ತಲ್ಲ ಆಟೋ ಪಯಣ! ಒಮ್ಮೆ ಶಚಿಗೆ ಗೊತ್ತಿಲ್ಲದೇ ಇಂದ್ರನೊಂದಿಗೆ ಕಳ್ಳತನದಲ್ಲಿ ಐರಾವತದ ಮೇಲೆ ಸವಾರಿ ಮಾಡುತ್ತಿದ್ದಾಗ ಇಂದ್ರನ ತನ್ನ ವಜ್ರಾಯುಧ ಝಳಪಿಸಿದ್ದನ್ನು ನೋಡಿ ಗಾಬರಿಗೊಂಡ ಐರಾವತ ದಿಕ್ಕೆಟ್ಟು ಓಡಿದಾಗ ನನಗೆ ಇದೇ ಅನುಭವ ಆಗಿತ್ತು. ಗುರೂ. ಅದೇನು ರಭಸದ ಓಟ, ಅದೇನು ಕುಲುಕಾಟ, ಫ್ಯಾಂಟಾಸ್ಟಿಕ್!

ಮದನ: ಊರ್ವಿ, ಇಂದ್ರಲೋಕದ ಸುದ್ದಿ ಈಗೇಕೆ, ಭೂಲೋಕಕ್ಕೆ ಬರುವುದೇ ನಮಗೊಂದು ರೇರ್ ಛಾನ್ಸ್. ಪೂರ್ಣ ಪ್ರಯೋಜನ ಪಡೆಯುವುದೇ ಜಾಣರ ಲಕ್ಷಣ. ಅಲ್ಲಿನೋಡು ಆ ದೋಸೆ ಕ್ಯಾಂಪ್. ಅಲ್ಲಿರುವ ಚಿತ್ರ ವಿಚಿತ್ರ ದೋಸೆಗಳ ಕಲರ್ ಟ್ರಾನ್ಸ್‌ಪರೆನ್ಸಿಗಳನ್ನ ನೋಡಿದರೇ ಬಾಯಲ್ಲಿ ನೀರೂವಂತಿದೆ ಬಾ, ಅಲ್ಲಿ ಕೂತು ಒಂದೆರಡು ದೋಸೆಗಳ ರುಚಿ ನೋಡಿದ ನಂತರವೇ ಮುಂದಿನ ಮಾತು (ದೋಸೆ ಕ್ಯಾಂಪಿನ ಸದ್ದು ಗದ್ದಲ ಕಾವಲಿಯ ಮೇಲೆ ದೋಸೆ ಹುಯ್ದ ''ಚೊಂಯ್'' ಶಬ್ದ. ಇನ್ನಿತರ ಸದ್ದುಗಳು)

ಊ: ನನಗೆ ಒಂದು ಮಸಾಲೆ, ಒಂದು ಸೆಟ್ ದೋಸೆ, ಅಷ್ಟೇ ಸಾಕು. ಮಧ್ಯಾಹ್ನ ಆ ರೆಸ್ಟುರಾಂಟ್‌ನಲ್ಲಿ ಸ್ಪೆಷಲ್ ಮೀಲ್ಸ್ ತಿಂದು ಹೊಟ್ಟೆ ತುಂಬಿ ಹೋಗಿದೆ.

ಮದನ್: ಅಲ್ಲಿ ಕೊಟ್ಟ ಐಸ್‌ಕ್ರೀಮ್ ಎಷ್ಟು ರುಚಿಯಾಗಿತ್ತು ಅಲ್ಲ. ಅಂತೂ ಈ ಭೂಲೋಕದ ಜನ ಪ್ರತಿನಿತ್ಯ ನಮಗೆ ಸಾವಿರಾರು ಕಂಪ್ಲೇಂಟ್ ರವಾನಿಸಿದ್ರೂ, ತಿನ್ನೋದ್ರಲ್ಲಿ ಮಾತ್ರಾ ಏನೂ ಕಡ್ಮೆ ಮಾಡ್ಕೊಳ್ಳೋಲ್ಲ, ಅಲ್ವಾ.

ಊ: ನಾವೂ ತಕ್ಕಮಟ್ಟಿಗೆ ಅನುಭವಿಸುತ್ತಾ ಇದ್ದೀವಲ್ಲಾ ಈ ಭೂಕೈಲಾಸಾನಾ. ಬೆಳಗ್ಗೆಯಿಂದ ಆಟೋದಲ್ಲಿ ಊರೆಲ್ಲಾ ಸುತ್ತಿ ನೋಡಬೇಕಾದ್ದೆಲ್ಲಾ ನೋಡಿದ್ದಾಯ್ತು. ಈಗ ಈ ದೋಸೆ ಪ್ರಸಂಗ ಮುಗಿದ ಮೇಲೆ ಯಾವುದಾದರೂ ಒಳ್ಳೇ ಸಿನಿಮಾದಲ್ಲಿ ಕೂತು ಭೂಲೋಕದ ಅಪ್ಸರೆಯರಿಂದ ಕಲಿಯಬೇಕಾದ್ದನ್ನೆಲ್ಲಾ ಕಲಿಯೋದೊಂದು ಬಾಕಿ ಇದೆ. ಆಮೇಲೆ ಇಂದ್ರಲೋಕಕ್ಕೆ ಹಿಂತಿರುಗಿ ರಂಭೆ ತಿಲೋತ್ತಮೆಯರಿಗೆ ಇದನ್ನೆಲ್ಲಾ ಉಪ್ಪು, ಖಾರ ಹಾಕಿ ವಿವರಿಸಿ ಹೊಟ್ಟೆ ಉರಿಸದಿದ್ರೆ ನನ್ನ ಹೆಸರು ಊರ್ವಿನೇ ಅಲ್ಲ.

ಮ: ಊರ್ವಿ, ನೀನಿಂದು ಮುಖ್ಯವಾದ ವಿಷಯಾನ ಮರೆತಿರಬಹುದು ಅಂತ ಅನ್ನಿಸ್ತಾ ಇಲ್ವಾ?

ಊ: ಹಾಗೇನೂ ಅನ್ನಿಸ್ತಾ ಇಲ್ಲವಲ್ಲಾ. ಒಂದೆರಡು ದಿನಗಳಲ್ಲಿ ಇನ್ನೆಷ್ಟು ಎಂಜಾಯ್ ಮಾಡಕ್ಕಾಗುತ್ತೆ ನಾವು?

ಮ: ನಾವು ಈ ಭೂಲೋಕಕ್ಕೆ ಯಾಕೆ ಬಂದಿರಬಹುದು ನೆನಪಿಸ್ಕೋ ನೋಡೋಣ.

ಊ: ಓ ಮೈ ಗಾಡ್ ಅದ್ಯಾವ್ದೋ ಮದುವೆ ವ್ಯವಸ್ಥೆ ಮಾಡ್ಬೇಕಲ್ವೆನೋ ಮದನ್. ಯಾರಂತೆ ಆ ಹುಡುಗಿ? ನಮ್ಮೆಲ್ಲರ ತರಹ ತನ್ನ ಪ್ರಿಯಕರನ್ನ ತಾನೇ ಹುಡುಕಿಕೊಳ್ಳೋದು ಬಿಟ್ಟು ನಮಗೆಲ್ಲಾ ಯಾಕೆ ಬೇಡದ ತಲೆನೋವು ಅಂಟಿಸ್ತಾ ಇದಾಳೆ ಅವ್ಳು?

ಮ: ಅದನ್ನೆಲ್ಲಾ ನಾವು ಪ್ರಶ್ನಿಸೋಕ್ಕಾಗೋದಿಲ್ಲ ಡಿಯರ್. ವಿಧಿಯ ಆಜ್ಞೆಯನ್ನ ಶಿರಸಾ ಪಾಲಿಸೋದು ನಮ್ಮ ಕರ್ತವ್ಯ ಅಷ್ಟೇ. ಅದಿರ್ಲಿ, ಈಗ ಕೈಮೇಲಿರೋ ಕೆಲಸದ ಮೇಲೆ ಗಮನ ಹರಿಸೋಣ. ನೋಡು, ಈ ಚೀಟೀಲಿ ನಮ್ಮ ಹೀರೋಯಿನ್ ಅಹಲ್ಯೆ ಕೆಲಸ ಮಾಡ್ತಾ ಇರೋ ಆಸ್ಪತ್ರೆ, ಅವಳ ಮನೆ, ಎರಡೂ ವಿಳಾಸಗಳು ಇವೆ. ನೀನು ಮೆಲ್ಲಗೆ ಹೋಗಿ ಅವಳ ವಿಷಯ ಎಲ್ಲಾ ಕೂಲಂಕಷವಾಗಿ ತಿಳಿದುಕೊಂಡ ಬಾ. ಅಷ್ಟರಲ್ಲಿ ನಾನು ಅಹಲ್ಯೇನ ಪ್ರೀತಿಸ್ತಾ ಇದೀನಿ ಅಂತ ಭ್ರಮಿಸ್ತಾ ಇರೋ ಹುಡುಗ ಶ್ರೀರಾಮ್ ಬಗ್ಗೆ ವಿಚಾರಿಸಿಕೊಂಡು ಬರ್ತೇನೆ. ಸರಿಯಾಗಿ ಆರು ಘಂಟೆ ಹೊಡೆಯೋ ಹೊತ್ತಿಗೆ ನಾವಿಬ್ಬರೂ ಇಲ್ಲೇ ಭೇಟಿಯಾಗೋಣ. ಬಾಯ್ ಕ್ಯೂಟಿ!

ಊ: ಬಾಯ್ ಗುರೂ.

(ಹಲವು ಸೆಕೆಂಡುಗಳ ಕಾಲ ವಾದ್ಯ ಸಂಗೀತ - ಕ್ಲಾಕ್ ಟವರಿನಿಂದ ಆರು ಘಂಟೆ ಹೊಡೆದ ಶಬ್ದ. ದೋಸೆ ಕ್ಯಾಂಪ್‌ನ ಗಡಿಬಿಡಿಯ ಸದ್ದು)

ಊ: ಹಾಯ್ ಮದನ್, ಇಲ್ಲೇ ಬಾ. ಒಳ್ಳೇ ಘಮಘಮಾ ಅಂತ ವಾಸನೆ ಬರ್ತಾ ಇದೆ. ಒಂದೆರಡು ಈರುಳ್ಳಿ ಪಕೋಡ ಜೊತೆಗೆ ಸ್ಟ್ರಾಂಗ್ ಕಾಫಿ ಕುಡೀತಾ ಹಾಗೆ ನಮ್ಮ ಪ್ಲಾನುಗಳನ್ನೆಲ್ಲಾ ಫೈನಲೈಸ್ ಮಾಡಬಹುದು.

ಮ: ಸರಿ, ಅದ್ಯಾಕೆ ಭೂಲೋಕಕ್ಕೆ ಬಂದಾಗ್ಲಿಂದ ಯಾವಾಗ್ಲೂ ಹಾಗೆ ಬರಗೆಟ್ಟ ಹಾಗೆ ತಿಂತೀಯಾ ನೀನು?

ಊ: ಅವಕಾಶ ಸಿಕ್ಕಾಗ ತಿಂದು ಬಿಡಬೇಕು ಕ್ಯಾಪ್ಟನ್. ನಾಳೆಯಿಂದ ಇದ್ದೇ ಇರುತ್ತಲ್ಲಾ ಅದೇ ಅಮೃತ, ಅದೇ ಸೋಮರಸ, ಬೇರೇ ವೆರೈಟಿನೇ ಇಲ್ಲ ನಮ್ಮೂರಲ್ಲಿ. ಅದಿರ್ಲೀ, ಈಗ ಮಾಡಬೇಕಾಗಿರೋ ಕೆಲಸದ ಬಗ್ಗೆ ಮಾತು. ನನಗೊಂದು ಒಳ್ಳೇ ಐಡಿಯಾ ಹೊಳೆದಿದೆ.

ಮ: ಏನದು ನಿನ್ನ ಗ್ರ್ಯಾಂಡ್ ಪ್ಲಾನೂ? ಆ ಶ್ರೀರಾಮ್ ಹುಡುಗ ಬಹಳ ಒಳ್ಳೆಯೋನಿದ್ದ ಹಾಗೆ ಕಾಣುತ್ತೆ. ನಯ ನಾಜೂಕು ಎಲ್ಲಾ ಇದೆ. ಅವನಿಗಂತೂ ಅಹಲ್ಯೆನ ಕಂಡ್ರೆ ಪ್ರಾಣ. ಈಗ ಸಮಸ್ಯೆ ಇರೋದು ನಮ್ಮ ಹುಡುಗೀದೇ. ನನ್ನ ಬಾಲ್ಯ ಸ್ನೇಹಿತ ಆದ್ರೂ ಶ್ರೀರಾಮ್ ಅಂದ್ರೆ ತಿರಸ್ಕಾರ. ಅಹಲ್ಯೆ ಕೆಲಸ ಮಾಡ್ತಾ ಇರೋ ಆಸ್ಪತ್ರೆ, ಅವಳ ಮನೆ ಇರೋ ಜಾಗ ಎಲ್ಲಾ ನೋಡ್ಕೊಂಡು ಬಂದೆ ತಾನೇ.

ಊ: ಎಲ್ಲಾ ನೋಡಿಯಾಯ್ತು. ಇವತ್ತು ಸಂಜೆ ಅವರಿಬ್ಬರ ಭೇಟಿ ಆಗೋಹಾಗೆ ಮಾಡಿ, ಅವಳು ಅವನೊಂದಿಗೆ ಮಾತಾಡ್ತಾ ಇದ್ದಾಗ ನೀನು ಅವರಿಗೆ ಕಾಣದ ಹಾಗೆ ಬಾಗಿಲ ಹಿಂದೆ ಅವಿತುಕೊಂಡು ನಿನ್ನ ಹೂವಿನ ಬಾಣಾನ ಅವಳ ಮೇಲೆ ಪ್ರಯೋಗಿಸಿದ್ದೆ, ಅವಳಿಗೆ ಅವನ ಮೇಲೆ ಪ್ರೇಮ ಉಕ್ಕಿ ಹರಿದು... ಒಟ್ನಲ್ಲಿ ನಾವು ಬಂದ ಕೆಲಸ ಸಕ್ಸಸ್‌ಫುಲ್ ಆಗುತ್ತೆ.

ಮ: ಊರ್ವಿ, ಕಳೆದ ಬಾರಿ ನಾನು ನನ್ನ ಪುಷ್ಪಬಾಣ ಪ್ರಯೋಗಿಸಿದ್ದು ಮುಕ್ಕಣ್ಣನ ಮೇಲೆ ಆಗಲೇ ಅಷ್ಟು ಅನಾಹುತ ಆಯ್ತು. ಇವಳಿಗೆ ನಾನು ನೋಡಿದ ಹಾಗೆ ನಾಲ್ಕು ಕಣ್ಣುಗಳು. ಟೆಂಪರಮೆಂಟಲ್ ಹುಡುಗಿ ಬೇರೇ. ನನಗೆ ಏನು ಕಾದಿದೆಯೋ ಅಂತ ಹೆದರಿಕೆ ಆಗ್ತಾ ಇದೆ ಊರ್ವಿ.

ಊ: ಸ್ಟುಪಿಡ್. ಈ ಹುಲುಮಾನವರನ್ನ ಕಂಡರೆ ನಿನಗೆ ಹೆದರಿಕೇನೆ. ನಾಚಿಕೆಗೇಡು. ಇಲ್ಲಿ ನೋಡು. ನನ್ನ ಹಂಚಿಕೆನ ವಿವರವಾಗಿ ಹೇಳ್ತೇನೆ. ಸ್ವಲ್ಪ ಗಮನ ಇಟ್ಟು ಕೇಳಿಸ್ಕೋ. ಇವತ್ತು ಅಹಲ್ಯೆಗೆ ಸಂಜೆ ಡ್ಯೂಟಿ. ನಮ್ಮ ಪ್ಲಾನ್‌ನ ಜಾರಿಗೆ ತರೋಕ್ಕೆ ಬಹು ಪ್ರಶಸ್ತವಾದ ಸಮಯ. ಅವಳು ಔಟ್ ಪೇಷಂಟ್‌ನಲ್ಲಿದ್ದಾಗ ಶ್ರೀರಾಮ್ ಅವಳ ಆಸ್ಪತ್ರೆ ಮುಂದೆ ನಡೆದು ಹೋಗೋ ಹಾಗೆ ಮಾಡಿ, ಆರೂ ಐವತ್ತಕ್ಕೆ ಅವನಿಗೆ ಸಮ್ಮೋಹಿನಿ ಪ್ರಯೋಗಿಸಿ ಆಸ್ಪತ್ರೆ ಮುಂದೇನೇ ಎಡವಿ ಬಿದ್ದು ಜ್ಞಾನ ತಪ್ಪೋ ಹಾಗೆ ಮಾಡ್ತೇನೆ. ಸಹಜವಾಗಿಯೇ ಅವನನ್ನು ಓಪೀಡೀಗೆ ಸಾಗಿಸ್ತಾರೆ. ಅಹಲ್ಯೆನೇ ಅವನ ಟ್ರೀಟಿಂಗ್ ಡಾಕ್ಟರ್. ಅವಳು ಅವನನ್ನ ಟ್ರೀಟ್ ಮಾಡ್ತಾ ಇರೋವಾಗ, ಏಳು ಘಂಟೆಗೆ ಸರಿಯಾಗಿ ನನ್ನ ಸಮ್ಮೋಹಿನಿ ಕಳೆದು ಅವನಿಗೆ ಜ್ಞಾನ ಬರುತ್ತೆ. ಆ ಕ್ಷಣದಲ್ಲಿ ನೀನು ಬಾಗಿಲ ಹಿಂದಿನಿಂದ ನಿನ್ನ ಪುಷ್ಪಬಾಣಾನ ಅಹಲ್ಯೆ ಮೇಲೆ ಪ್ರಯೋಗಿಸಿದ್ರೆ ಮುಗೀತು. ಬಾಣ ಮುಂದಿನ ಕೆಲಸ ಮಾಡುತ್ತೆ.

ಮ: ಬಾಣಾನ ಯಾವಾಗ ಬಿಡಬೇಕು ಅಂತ ಹೇಗೆ ತಿಳಿಯುತ್ತೆ ನನಗೆ? ಬಾಗಿಲ ಹಿಂದೆ ಅವಿತಿರ್ತೀನಲ್ಲಾ.

ಊ: ಏಳು ಘಂಟೆಗೆ ಸರಿಯಾಗಿ ನಾನು ಓಪೀಡಿಗೆ ಫೋನ್ ಮಾಡ್ತೇನೆ. ಅದೇ ನಿನಗೆ ಸಿಗ್ನಲ್. ಏನೂ ಯೋಚನೆ ಮಾಡಬೇಡ. ಎಲ್ಲಾ ಗಡಿಯಾರದ ತರಹ ನಡೆದುಹೋಗುತ್ತೆ.

ಮ: ನನ್ನ ಗಡಿಯಾರ ನಿಂತೇ ಹೋಗಿರೋ ಹಾಗೆ ಕಾಣುತ್ತಲ್ಲೇ. ಇಲ್ಲ ಇನ್ನೂ ನಡೀತಾ ಇದೆ. ಆಯ್ತು ಈಗಾಗಲೇ ಆರೂವರೆ. ನಾನು ಈಗಲೇ ಹೋಗಿ ನನ್ನ ಬಂಕರ್‌ನಲ್ಲಿ ನಿಂತ್ಕೋತೀನಿ. ಮಿಕ್ಕೆಲ್ಲಾ ಕೆಲಸಗಳೂ ನಿನಗೇ ಬಿಟ್ಟಿದ್ದು. ಬಾಯ್ ಊರ್ವಿ.

ಊ: ಬಾಯ್ ಕ್ಯಾಪ್ಟನ್, I am feeling lucky today. ಇಂದು ನಮ್ಮ ಯಶಸ್ಸು ಶತಸ್ಸಿದ್ಧ. ಏಳು ಘಂಟೇಗೆ ಫೋನು ಟ್ರೀನ್ ಅಂದಾಗ ಬಾಣ ಪ್ರಯೋಗಿಸೋದು ಮರೀಬೇಡ. ಬಾಣ ಬಿಟ್ಟ ಮೇಲೆ ನೇರವಾಗಿ ಇಂದ್ರಲೋಕಕ್ಕೆ ಬಂದುಬಿಡು. ಅಲ್ಲಿ ನಿನಗಾಗಿ ಕಾಯ್ತಾ ಇರ್ತೇನೆ. ಬಾಯ್.

(ಹಲವು ಸೆಕೆಂಡುಗಳ ಕಾಲ ವಾದ್ಯ ಸಂಗೀತ)

(ಆಸ್ಪತ್ರೆಯ ಓಪೀಡೀ. ಆಸ್ಪತ್ರೆ ಎಂದು ಸೂಚಿಸಲು ಆಗಾಗ್ಗೆ ''ಡಾ|| ಶ್ರೀನಿವಾಸ Please contact Reception'' ಎಂಬ ಲೌಡ್ ಸ್ಪೀಕರ್ ದನಿ ಕೇಳಿ ಬರುತ್ತಿರುತ್ತದೆ. ಲಿಫ್ಟ್ ಬಾಗಿಲು ತೆರೆದ ಸದ್ದು, ಸ್ಟ್ರೆಚರ್ ಎಳೆದುಕೊಂಡು ಹೋಗುವ ಶಬ್ದ ಇವುಗಳನ್ನೂ ಸೂಕ್ತವಾಗಿ ಅಳವಡಿಸಿಕೊಳ್ಳಬಹುದು.)

ಅಹಲ್ಯೆ: ಅಬ್ಬ ಮಧ್ಯಾಹ್ನದಿಂದ ಒಂದೇ ಕೆಲಸ. ಸ್ವಲ್ಪಾನೂ ಬಿಡುವಿಲ್ಲ. ಮೇಟ್ರನ್ ಒಂದು ಐದು ನಿಮಿಷ ರೆಸ್ಟ್ ರೂಮಿಗೆ ಹೋಗಿಬರ್ತೇನೆ. ನನ್ನ ಜಾಗದಲ್ಲಿ ಇರುಕ್ಕಾಗುತ್ತಾ?

ಮೇಟ್ರನ್: (ಗೊಗ್ಗರು ದನಿಯಲ್ಲಿ) ಅದು ಹೇಗಾಗುತ್ತೆ ಡಾಕ್ಟರ್ ಅಹಲ್ಯೆ? ನಾನೇನು ನಿಮ್ಮ ತರಹಾ ಡಾಕ್ಟರ್ ಅಲ್ಲವಲ್ಲಾ. ನಿಮ್ಮ ಡ್ಯೂಟಿ ನೀವು ಮಾಡಿ. ನನ್ನ ಕೆಲಸ ನಾನು ನೋಡ್ತೇನೆ.

(ಹೊರಗಿನಿಂದ ''ದಾರಿ ಬಿಡಿ, ದಾರಿ ಬಿಡಿ, ಪೇಷಂಟ್‌ಗೆ ಜ್ಞಾನ ತಪ್ಪಿದೆ'' ಎಂಬ ಕೂಗು)

ಅಹಲ್ಯೆ: ಓ ಮೈ ಗಾಡ್ ಮೇಟ್ರನ್. ಇದು ನಮ್ಮ ಆಚೆ ಬೀದಿ ಶ್ರೀರಾಮ್. ಕಾಲಿನ ಹೆಬ್ಬೆರಳಿನಿಂದ ರಕ್ತ ಸುರೀತಿದೆ. ಷಾಕ್ ಆಗಿದೆ ಅಂತ ಕಾಣುತ್ತೆ. ಜ್ಞಾನ ತಪ್ಪಿದೆ. ಮೊದಲು ನಾನು ಈ ಗಾಯಕ್ಕೆ ಬ್ಯಾಂಡೇಜ್ ಕಟ್ಟಿ ಡ್ರೆಸ್ ಮಾಡ್ತೇನೆ. ಆಮೇಲೆ ಎಕ್ಸರೇಗೆ ಕಳಿಸೋಣ. ಮೇಟ್ರನ್, ಎಲ್ಲಿ ಸ್ವಲ್ಪ ಆ ಕಾಲನ್ನ ಓೀಗೆ ಹಿಡೀರಿ.

(ಫೋನ್ ''ಟ್ರೀನ್, ಟ್ರೀನ್'' ಗುಟ್ಟುತ್ತದೆ)

ಮೇಟ್ರನ್: ಹಾ, ನನ್ನ ಬೆನ್ನಿಗೆ ಏನೋ ಚುಚ್ಚಿತು ಡಾಕ್ಟರ್. ಅರೆ, ಇದೇನಿದು ಗುಲಾಬಿ. ಆಶ್ಚರ್ಯ. ನಾಚಿಕೆಯಿಂದ ನನ್ನ ಮುಖ ಕೆಂಪೇರುತ್ತಿದೆ. ಓಹ್ ಬಾಗಿಲ ಬದಿಯಲ್ಲಿರುವ ಆ ಸುಂದರ ತರುಣ. ಅವನೇ ಇದಕ್ಕೆ ಕಾರಣನಿರಬೇಕೆಂದು ನನ್ನ ಹೃದಯ ಸಾರಿ ಹೇಳುತ್ತಿದೆ. ಓ ನನ್ನ ಪ್ರಿಯಾ, ನಾನಿನ್ನು ಸದಾಕಾಲಕ್ಕೂ ನಿನ್ನವಳು. ಇನ್ನು ಒಂದು ಕ್ಷಣವೂ ನಿನ್ನನ್ನು ಬಿಟ್ಟಿರಲಾರೆ (ಅವನನ್ನಟ್ಟಿಸಿಕೊಂಡು ಓಡಿಹೋಗುವಳು - ಹೈ ಹೀಲ್ಡ್ ಷೂಗಳ ಓಡುವ ಶಬ್ದ ಕ್ರಮೇಣ ಕ್ಷೀಣಿಸುವುದು)

ದೃಶ್ಯ 4

(ಇಂದ್ರಲೋಕದಲ್ಲಿ ರತಿಯ ಮನೆ. ಇಂದ್ರ ಲೋಕವನ್ನು ಸೂಚಿಸುವ ಹಿನ್ನೆಲೆ ವಾದ್ಯಗೋಷ್ಠಿ)

ಮನ್ಮಥ: (ಏದುಸಿರುಬಿಡುತ್ತಾ) ರತೀ, ರತೀ, ಸರ್ವನಾಶವಾಯ್ತು. ನನಗಿನ್ನೇನು ಗತಿ?

ರತಿ: ಸಾವಧಾನ, ಸಾವಧಾನ ಆರ್ಯಪುತ್ರಾ....

ಮನ್ಮಥ: ಆರ್ಯಪುತ್ರಾ be damned. ದೇವಲೋಕದ ವ್ಯಾಕರಣಬದ್ಧ ಭಾಷೆಗೆ ಈಗ ಟೈಂ ಇಲ್ಲ ರತಿ. ವಿಧಿಯ ಕೆಲಸವನ್ನು ನಾನು ಮಾಡಲಿಲ್ಲ ಅಂತ ವಿಧಿಗೆ ತಿಳಿದರೆ ತಕ್ಷಣ ನನಗೆ ಪಾತಾಳ ಲೋಕ ಶತಸ್ಸಿದ್ಧ. ಅಲ್ಲದೇ ಭೂಲೋಕದ ಮಾರಿಯೊಬ್ಬಳು ನನ್ನನ್ನು ಕುರಿತು ಬೊಬ್ಬೆಯಿಡುತ್ತಿದ್ದಾಳೆ. ಅವಳ ಕೂಗು ವಿಧಿಗೆ ಕೇಳಿಸಿದರೂ ನನಗೆ ಅಪಾಯ ತಪ್ಪಿದ್ದಲ್ಲ. ನಾನೇನು ಮಾಡಲಿ!

ರತಿ: ನೀವು ವಿಧಿ ಕೊಟ್ಟ assignment ಮೇಲೆ ಭೂಲೋಕಕ್ಕೆ ಹೋಗಿದ್ದು ನನಗೆ ಆಗಲೇ ಗೊತ್ತಾಯ್ತು. ಯಾರ ಜೊತೆ ಹೋಗಿದ್ದಿರಿ ಅಂತಲೂ ತಿಳೀತು. ಅಲ್ರೀ, ಮದುವೆ ಮಾಡಿಸೋ ಅಂಥ ಶುಭಕಾರ್ಯಕ್ಕೆ ಆ ಮನೆಹಾಳೀನ ಕರೆದುಕೊಂಡು ಹೋದ್ರೆ ಇನ್ನೇನಾಗತ್ತೆ ಹೇಳಿ. ವಿಧಿ ನಿಮ್ಮನ್ನ ಕೇಳಿದಾಗಲೇ, ನಾವಿಬ್ರೂ ದಂಪತಿಗಳು ಹೋಗಿಬರ್ತೇವೆ ಅಂತ ಹೇಳಿ ನನ್ನ ಕರೆದುಕೊಂಡು ಹೋಗಿದ್ರೆ ಇಷ್ಟು ಹೊತ್ತಿಗಾಗಲೇ ನಿಮ್ಮ ಕೆಲಸ ಎಲ್ಲಾ ಮುಗಿದು ಜುಮ್ ಅಂತ ದೇವಭಾಷೆಲಿ ಮಾತಾಡಿಕೊಂಡು ಇರಬೋದಾಗಿತ್ತು. ನನ್ನ ಮಾತು ಯಾರು ಕೇಳ್ತಾರೆ? ಆ ಬಿನ್ನಾಣಗಿತ್ತಿ ಜೊತೆ ದೋಸೆ ತಿನ್ನೋ ಮಜಾ ನನ್ನ ಜೊತೆ ಬರುತ್ಯೇ?

ಮ: ಅದೆಲ್ಲಾ ನಿನಗೆ ಹ್ಯಾಗೇ ಗೊತ್ತಾಯ್ತೂ?

ರತಿ: ಅದೆಲ್ಲಾ ಆಮೇಲೆ. ಈಗ ನಿಮ್ಮನ್ನ ಬಚಾವು ಮಾಡೋ ದಾರಿ ನೋಡೋಣ. ಇಲ್ನೋಡಿ ಇಲ್ಲಿ. ಇನ್ನೊಂದು ಅರ್ಧ ಘಂಟೆ ಮನೆ ಬಿಟ್ಟು ಕದಲಬೇಡಿ. ನಾನು

ಭೂಲೋಕಕ್ಕೆ ಹೋಗಿ ಎಲ್ಲಾ ಸರಿಪಡಿಸಿ ಬರ್ತೀನಿ. ಆಮೇಲೆ ನಾವಿಬ್ಬರೂ ಒಟ್ಟಿಗೇ ವಿಧಿಯ ಆಸ್ಥಾನಕ್ಕೆ ಹೋಗೋಣ.

(ಹಲವು ಸೆಕೆಂಡುಗಳ ಕಾಲ ವಾದ್ಯ ಸಂಗೀತ)

(ಇಂದ್ರಲೋಕದಲ್ಲಿ ವಿಧಿಯ ಆಸ್ಥಾನ. ಅದಕ್ಕೆ ತಕ್ಕಂತಹ ಹಿನ್ನೆಲೆ ವಾದ್ಯಗೋಷ್ಠಿ)

ವಿಧಿಯ ಆಸ್ಥಾನದ ವಂದಿಮಾಗಧರು: ಬಿರುದಂತೆಂಬರ ಗಂಡ... ಶ್ರೀಮತ್ಸಕಲಗುಣಶೀಲ... ಸೌಂದರ್ಯಸಂಪನ್ನ... ಚಂಡಪ್ರಚಂಡ... ಶ್ರೀಶ್ರೀಶ್ರೀ ವಿಧಿ ಮಹಾರಾಜ... ಪರಾಕ್.

ವಿಧಿ: ಬನ್ನಿ, ಬನ್ನಿ, ಬಾ ಅನಂಗರಾಜ, ಬಾ ರತಿದೇವಿ. ಗುರುವಾರದಂದು ದೇವದಂಪತಿಗಳು ಬಂದಿರುವುದು ನನ್ನ ಆಸ್ಥಾನಕ್ಕೆ ಒಂದು ಹೊಸ ಶೋಭೆಯನ್ನು ತಂದಿರುವುದು. ನಿಮ್ಮ ಮುಖಕಮಲಗಳಲ್ಲಿನ ಮಂದಹಾಸವೇ ನಿಮ್ಮ ಕಾರ್ಯಸಿದ್ಧಿಯನ್ನು ಸಾರಿ ಹೇಳುತ್ತಿವೆ. ಆದರೂ ನಿಮ್ಮ ವಾಗ್ಝರಿಯನ್ನು ಕೇಳಲು ಉತ್ಸುಕನಾಗಿರುವೆನು.

ರತಿ: ಮಹಾನ್, ನಿಮ್ಮೊಂದಿಗೇನು ಮುಚ್ಚುಮರೆ. ನನ್ನ ಪ್ರಾಣಕಾಂತನು ಆ ಗೃಹಭಂಗಿನಿಯೊಂದಿಗೆ ತೆರಳಿದ ಕ್ಷಣವೇ ಅವರ ಯಶಸ್ಸಿನ ಬಗ್ಗೆ ನನಗೆ ಸಂಶಯವಿತ್ತು. ಭೂಲೋಕದ ಜನರ ನಡೆನುಡಿಗಳನ್ನು ಶ್ರದ್ಧೆಯಿಂದ ಅಭ್ಯಸಿಸಿ ಕಾರ್ಯ ಕೈಗೊಳ್ಳುವ ಬದಲು ಅವರೀರ್ವರೂ ಬಾಲಕ ಬಾಲಕಿಯರಂತೆ ''ದೋಸೆ ಕ್ಯಾಂಪ್, ಸ್ಪೆಷಲ್ ಮೀಲ್, ಈರುಳ್ಳಿ ಪಕೋಡ'' ಎಂಬೇ ಮುಂತಾಗಿ ಜಿಹ್ವಾಚಪಲ ಕಾರ್ಯಗಳಲ್ಲಿ ಮಗ್ನರಾದರು. ಕೈಗೊಂಡ ಕಾರ್ಯದಲ್ಲಿ ವಿಫಲರಾಗಿ ಶುನಕದಂತೆ ಲಾಂಗೂಲವನ್ನು ಊರುಗಳ ನಡುವೆ ಇರಿಸಿ, ನನ್ನ ಪ್ರಾಣಕಾಂತರು ನನ್ನ ಬಳಿ ಬಂದಾಗ ನಾನು ನಿಮ್ಮ ಆಶಯವನ್ನು ನಡೆಸಲು ಮುಂದಾಗಿ ಭೂಲೋಕಕ್ಕೆ ಪ್ರಯಾಣವನ್ನು ಕೈಗೊಂಡೆ.

ವಿ: ಭಾಪು, ಭಾಪು, ರತಿ, ಮುಂದೇನಾಯಿತು?

ರತಿ: ಭೂಲೋಕದ ವಿದ್ಯಮಾನಗಳನ್ನು ತಿಳಿಸಲು ಅಲ್ಲಿನ ಭಾಷೆಯನ್ನೇ ಬಳಸುವುದು ಅನಿವಾರ್ಯ ಮಹಾನ್, ನಾನು ಮನೋವೇಗದಿಂದ ನೇರವಾಗಿ ಚೆನ್ನೈನಲ್ಲಿರುವ ಯು.ಎಸ್. ಕಾನ್ಸುಲೇಟ್‌ಗೆ ಹೋಗಿ, ಅಲ್ಲಿ ಶ್ರೀರಾಮ್‌ಗೆ ಎಚ್ ಒನ್ ವೀಸಾ ಸಿಕ್ಕಿರುವುದನ್ನು ಖಚಿತಪಡಿಸಿಕೊಂಡು ಅಲ್ಲಿಂದ ಅಪಲ್ಸೆಯ ಬಳಿ ಹೋದೆ. ಅಪಲ್ಸ ಶ್ರೀರಾಮ್‌ಗೆ ಟ್ರೀಟ್ಮೆಂಟ್ ಕೊಟ್ಟು ಅವನನ್ನು ಮನೆಗೆ ಕಳಿಸಿ, ತನ್ನ ಡ್ಯೂಟಿ ಮುಗಿದಿದ್ದರಿಂದ ತಾನೂ

ಆಸ್ಪತ್ರೆಯಿಂದ ಹೊರಡುವ ಸನ್ನಾಹದಲ್ಲಿದ್ದಳು. ಅವಳಿಗೆ ನಾನು ಶ್ರೀರಾಮ್‌ಗೆ ಎಚ್ ಒನ್ ವೀಸಾ ಸಿಕ್ಕಿರುವುದನ್ನು ಹೇಳಿದ ತಕ್ಷಣ ಅಹಲ್ಯೆ ಶ್ರೀರಾಮನ ಮನೆಗೆ ಜಿಂಕೆಯಂತೆ ಹಾರಿ ಹೋದಳು.

ವಿ: ಬಹಳ ಇಂಟರೆಸ್ಟಿಂಗ್ ಆಗಿದೆ. ಆಮೇಲೆ?

ರತಿ: ನಾನು ತಕ್ಷಣ ಇಲ್ಲಿಗೆ ಹಿಂತಿರುಗಿದೆ. ಮುಂದೆ ನಡೆಯುತ್ತಿರುವುದನ್ನು ನಾನು ಭೂಲೋಕದಿಂದ ತಂದಿರುವ ಈ ವೆಬ್ ಕ್ಯಾಮೆರಾದಲ್ಲಿ ನಾವೆಲ್ಲರೂ ನೋಡಬಹುದು.

ರತಿ: ಇಗೋ, ಅದೇ ಶ್ರೀರಾಮನ ಮನೆ. ಡ್ರಾಯಿಂಗ್ ರೂಮಿನಲ್ಲಿ ಅವರೀರ್ವರೇ ಕುಳಿತು ಮಾತುಕತೆ ನಡೆಸಿದ್ದಾರೆ. ಆ ಸ್ಫುರದ್ರೂಪಿ ತರುಣಿಯೇ ಅಹಲ್ಯೆ.

ಅಹಲ್ಯೆ: ''ಶ್ರೀರಾಮ್ ನಾನೊಂದು ದೊಡ್ಡ ತಪ್ಪು ಮಾಡಿದ್ದೇನೆ. ನಿನ್ನ ನಿರ್ಮಲ ಪ್ರೇಮಕ್ಕೆ ನಾನು ಇಷ್ಟು ದಿನ ಕುರುಡಿಯಾಗಿದ್ದೆ. ಇಂದು ಸಂಜೆ ನನ್ನ ಕಣ್ಣುಗಳು ತೆರೆದವು. ನಿನ್ನ ಶುಶ್ರೂಷೆಯ ಸಮಯದಲ್ಲಿ ನಿನ್ನ ಕಾಲ ಹೆಬ್ಬೆರಳು ನನಗೆ ತಾಕಿದಾಗ ನನ್ನ ಪಾಲಿಗೆ ಅದು ಪುರಾಣದ ಶ್ರೀರಾಮ ಅಂಗುಷ್ಟವಾಯಿತು ಎಂದರೆ ನೀನು ನಗಬಹುದು. ಆದರೆ ಶ್ರೀರಾಮನ ಅಂಗುಷ್ಟದಿಂದ ಕಲ್ಲಾಗಿದ್ದ ಅಹಲ್ಯೆಗೆ ಜೀವ ಬಂದಂತೆ ಕಲ್ಲಾಗಿದ್ದ ಈ ಅಹಲ್ಯೆಯ ಹೃದಯಕ್ಕೆ ಪ್ರೇಮ ತುಂಬಿತು ನಿನ್ನ ಅಂಗುಷ್ಟ.''

ರತಿ: (ಕ್ಯಾಮೆರಾವನ್ನು ಆಫ್ ಮಾಡುತ್ತಾ) ಪ್ರೇಮಿಗಳೇ ಇನ್ನು ಮುಂದಿನ ಮಾತುಕತೆಗಳನ್ನು ಕೇಳಿಸಿಕೊಳ್ಳುವುದು ಸಭ್ಯರಿಗೆ ತರವಲ್ಲ.

ವಿಧಿ: ನೀನು ಬಹು ಜಾಣೆ ರತಿ. ಪುರಾಣದ ಸಾವಿತ್ರಿಯಂತೆ ಇಂದು ನೀನು ನಿನ್ನ ಪತಿಯನ್ನು ಉಳಿಸಿಕೊಂಡೆ. ನಾನು ಸುಪ್ರೀತನಾಗಿರುವೆನು. ವರವನ್ನು ಕೇಳು ಹೇ ಕೋಮಲಾಂಗಿ. ಬಹು ಸಂತಸದಿಂದ ನೀಡುವೆ.

ರತಿ: ಮಹಾನ್, ಅಹಲ್ಯೆ ಅಷ್ಟು ಹಾತೊರೆಯುತ್ತಿರುವ ಅಮೇರಿಕಾ ದೇಶವನ್ನು ನೋಡಲು ನನಗೆ ಆಸೆಯಾಗುತ್ತಿದೆ. ಅಲ್ಲಿ ಆರ್ಲಾಂಡೋ, ಲೆವಿನ್ಸ್ಕಿ, ಮುಂತಾದ ಅನೇಕ ಪ್ರೇಕ್ಷಣೀಯ ತಾಣಗಳಿವೆಯಂತೆ. ನಯಾಗರ ಜಲಪಾತವನ್ನು ನೋಡಲು ಎರಡು ಕಣ್ಣುಗಳು ಸಾಲದಂತೆ. ನಾನು ಒಂದು ವಾರ ಅಲ್ಲಿಗೆ ಹೋಗಿ ಬರಲು ಅನುಮತಿ ಕೋರುತ್ತೇನೆ ಮಹಾಸ್ವಾಮಿ. ನನಗೆ ಎಸ್ಕಾರ್ಟ್ ಆಗಿ ನಿಮ್ಮ ಕಿರಿಯ ಕಾರ್ಯದರ್ಶಿ ಚಿತ್ರರಥನನ್ನು ಕಳಿಸಿಕೊಡಿ ಮಹಾನ್.

ವಿಧಿ: ತಥಾಸ್ತು, ತಥಾಸ್ತು.

(ಕೃಪೆ: ಆಕಾಶವಾಣಿ)



ಒಂದೆರಡೇ ಸುಳ್ಳು

⊙ ಕುಮುದಾ ಪುರುಷೋತ್ತಮ್

ಪಾಪತ್ತೆ ಕಳೆದ ಹತ್ತು ನಿಮಿಷದಿಂದ ಫೋನ್ ಹಿಡಿದು ನಿಂತಿದ್ದರು. ಕೈನಲ್ಲಿ ಒಂದು ಕೆಂಪು ಡೈರಿ ಜೊತೆಗೊಂದು ಬಾಲ್‌ಪಾಯಿಂಟ್ ಪೆನ್ನು. ಕೇಳುತ್ತಾ ವಿವರಗಳನ್ನು ಗುರುತು ಮಾಡಿಕೊಳ್ಳುತ್ತಿದ್ದರು.

''ನಿಮಗೆ ಮಗಳು ಒಬ್ಳೇನಾ?... ಗಂಡು... ಅದೂ ಒಂದೇನಾ? ಸರಿ ಬಿಡಿ. ಆರ್ತಿಗೊಂದು ಕೀರ್ತಿಗೊಂದು ಆಯ್ತು. ಹೌದಮ್ಮ, ಈಗಿನ ಕಾಲದಲ್ಲಿ ವಿದ್ಯಾವಂತರಿಗೆಲ್ಲಾ ಅಷ್ಟೆ. ಹಿಂದಿನವರ ತರಹ ಎಂಟು ಗಂಡು ನಾಲ್ಕು ಹೆಣ್ಣು ಆರು ಹೆಣ್ಣು ಮೂರು ಗಂಡು ಅಂತಿಲ್ಲ. ಅದೆಲ್ಲಾ ಆಗಿನ್ಕಾಲಕ್ಕೇ ಆಯ್ತು. ಮಗಳ ವಯಸ್ಸು?... ಇಪ್ಪತ್ಮೂರಾ? ಮದುವೆಗೆ ಸರಿಯಾದ ವಯಸ್ಸು ಬಿಡಿ. ಹೆಚ್ಚೂ ಅಲ್ಲ ಕಡಿಮೆಯೂ ಇಲ್ಲ. ಏನೂ? ತೆಳ್ಳಗೆ... ಬೆಳ್ಳಗೆ ಫೈವ್ ಸಿಕ್ಸ್ ಅಂದ್ರಾ? ವಿದ್ಯಾರ್ಹತೆ...? ಬಿ.ಡಿ.ಎಸ್. ಮಾಡಿ ಡೆಂಟಿಸ್ಟಾ? ನಿಮ್ಮಮನೆ ಎಲ್ಲಿ ಬಸವನಗುಡಿನಾ? ವಿಳಾಸ? ಆಯ್ತು ಬರ್ಕೊಂಡೆ ಒಂದ್ನಿಮಿಷ ಲೈನ್‌ನಲ್ಲಿರಿ.'' ಇಷ್ಟು ಬರೆದುಕೊಂಡು ಕೆಂಪು ಡೈರಿ ಕೆಳಗಿಟ್ಟು ಹಸಿರು ಡೈರಿ ಕೈಗೆತ್ತಿಕೊಂಡು ಪೇಜ್ ತಿರುವಿದರು. ''ಹಲೋ.. ಇಲ್ಲಿ ನಿಮ್ಮ ಹುಡುಗಿಗೆ ಎಲ್ಲಾ ವಿಧದಲ್ಲೂ ಹೊಂದಿಕೆಯಾಗುವ ಒಂದೆರಡು ವರಗಳ ವಿವರ ಹೇಳ್ತೀನಿ. ಒಂದು ಬಸವೇಶ್ವರ ನಗರದಲ್ಲಿ ಮನೆ. ಹುಡುಗಂಗೆ ಇಪ್ಪತ್ತೇಳು ವರ್ಷ. ನಸುಗೆಂಪು ಬಣ್ಣ, ಐದು ಅಡಿ ಹತ್ತು ಅಂಗುಲ ಇಂಜಿನಿಯರು.. ಸ್ವಂತ ಕಾರ್ಖಾನೆ ಪೀಣ್ಯದಲ್ಲಿ ಫೋನ್ ನಂಬರ್ 3456789.

ಇನ್ನೊಂದು ಹನುಮಂತ ನಗರದ ವರ ಕಣ್ರೀ. ಮೂವತ್ತು ವರ್ಷ. ಆರು ಅಡಿ ಒಂದು ಅಂಗುಲ ಎತ್ತರ. ಅದಕ್ಕೆ ತಕ್ಕಂತಹ ಮೈಕಟ್ಟು ಗೋಧಿ ವರ್ಣ. ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ. ಎರಡು ಕೈಗಳಲ್ಲೂ ಬಾಚ್ಕೊಳ್ಳೋಷ್ಟು ವರಮಾನ. ಫೋನು ನಂ. 6890123. ಇವೆರಡರಲ್ಲಿ ಯಾವ್ದು ನಿಶ್ಚಯವಾದ್ರೂ ತಿಳಿಸಿ'' ಎಂದು ಫೋನ್ ಕೆಳಗಿಟ್ಟರು. ಸಂಭಾಷಣೆ ಕೇಳುತ್ತಿದ್ದ ಮಾವಯ್ಯ ತಮ್ಮ ಪಲ್ಲವಿ ಹಾಡಿದರು. ''ಈ ವ್ಯವಹಾರ ನಿನಗೆ ಬೇಕಾ? ಬೇರೆಯವ್ರ ಉಸಾಬರಿ ನಿನಗ್ಯಾಕೆ? ನಿನ್ನ ಪಾಡಿಗೆ ರಾಮಾ ಕೃಷ್ಣಾಂತ ಇರ್ಬಾರ್ದಾ?'' ಪಾಪತ್ತೆಗೆ ಸಿಟ್ಟು ಉಕ್ಕಿತು. ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಹುಡುಕಿ ಕೊಡೋದು ಇನ್ನೊಬ್ರ ಉಸಾಬರಿನೇ? ನಾಲ್ಕು ಜನಕ್ಕೆ ಮಾಡೋ ಸಹಾಯ ಅಂತ ನಾನು ಮಾಡುತ್ತಿರೋ ಸೇವೆ. ''ಇದೊಂದು ಥರದ ಸಮಾಜ

ಸೇವೆ. ತಿಳ್ಕೊಳ್ಳಿ. ಇಷ್ಟಕ್ಕು ನಾನಿದನ್ನ ಯಾವುದೇ ಲಾಭಕ್ಕಾಗಿ ಮಾಡ್ತಾ ಇಲ್ಲ. ಎಷ್ಟೋ ಹೆಣ್ಮಕ್ಳು ಮದ್ವೆ ಇಲ್ದೆ ಬೆಳೆದು ಬಲಿತು ಹೋಗ್ತಾ ಇದ್ದಾರೆ. ಏನೋ ನನ್ನ ಕೈಲಾದ ಸೇವೆ ಅಂತ ಮಾಡ್ತೀನಿ'' ಎಂದೂ ಧ್ವನಿ ಎತ್ತರಿಸುವ ಧೈರ್ಯ ಮಾಡದ ಮಾವಯ್ಯ ದೇವರ ಮೇಲೆ ಭಾರ ಹಾಕಿ ಖಾರವಾಗಿ ಹೇಳಿದರು. ''ಒಂದು ಸತ್ಯ ಹೇಳಿಬಿಡ್ತೀನಿ ಕೇಳು. ಇದು ಸೇವೆ ಅಂತ ಮಾಡ್ತಾ ಇಲ್ಲ. ಹೊತ್ತು ಕಳೆಯೋಕ್ಕೆ ಇದು ಒಂದು ತೆವಲು. ನಿನ್ನ 'ಸೇವೆ'ಯಿಂದ ಕಳೆದ ತಿಂಗಳು ಫೋನ್ ಬಿಲ್ಲು ಎಷ್ಟಾಯ್ತುಗೊತ್ತಾ?''

''ಈಗ ಗೊತ್ತಾಯ್ತು. ನಾನು ಈ ರೀತಿ ಪರೋಪಕಾರಿ ಕೆಲ್ಸ ಮಾಡಿದ್ರೆ ರಾಯರಿಗೆ ಯಾಕಿಷ್ಟು ಕೋಪ ಅಂತ. ಎಷ್ಟೋ ಮಹಾರಾಯ್ರುಗಳು ಛತ್ರ ಕಟ್ಸ್ತಾರೆ, ಅನಾಥಾಶ್ರಮ ನಡೆಸ್ತಾರೆ. ನೀವು ಎಂಥದ್ದು ಮಾಡ್ತಾ ಇಲ್ಲ. ಮದ್ವೆ ಮಾಡ್ಸಿದ ಪುಣ್ಯಾನಾದ್ರು ಬರ್ಲಿ ಬಿಡಿ. ಎಲ್ಲಾದಕ್ಕೂ ಬೆಲೆ ಕಟ್ಟೋಕ್ಕೆ ಹೋಗ್ಬೇಡಿ'' ಎಂದಿನಂತೆ ಅವತ್ತೂ ಮಾವಯ್ಯ ಮಾತಿನಲ್ಲಿ ಸೋತು ಬಾಯ್ಮುಚ್ಚಿಕೊಂಡರು.

ಇದಾದ ಸುಮಾರು ಹದಿನೈದು ದಿನಗಳಿಗೆ ಪಾಪತ್ತೆಗೆ ಮತ್ತೊಂದು ಫೋನ್ ಕರೆ ಬಂದಿತು. ಸೋಫಾ ಮೇಲೆ ಕಾಲು ಚಾಚಿ ಅರ್ಧಶಯನಾವಸ್ಥೆಯಲ್ಲಿ ಕಿವಿ ಕ್ಲೀನ್ ಮಾಡಿಕೊಳ್ಳುತ್ತಿದ್ದ ಮಾವಯ್ಯನ ಕಿವಿಗಳಿಗೆ ಬೇಡ ಬೇಡವೆಂದರೂ ಪಾಪತ್ತೆಯ ಉವಾಚಗಳು ಬೀಳುತ್ತಿತ್ತು.

''ಹಲೋ... ಯಾರಂದ್ರಿ? ಬಸವೇಶ್ವರ ನಗರದ ಹುಡುಗನ ಕಡೆಯವ್ರಾ? ಹುಡುಗಿಯ ಬಗ್ಗೆ ಹೆಚ್ಚಿನ ಮಾಹಿತಿಯಾ? ಓ... ಚೆನ್ನಾಗಿ ಗೊತ್ತು. ಅವ್ಳನ್ನ ಅಂಬೆಗಾಲ ಮಗುವಾದಾಗಿನಿಂದ ಎತ್ತಿ ಆಡಿಸಿದ್ದೀನಿ. ಲಕ್ಷಣವಾದ ಹುಡುಗಿ, ಕಣ್ಣು ಮೂಗು ಬಾಯಿ ಎಲ್ಲಾ ತಿದ್ದಿದ ಗೌರಿ. ನೀವೇ ನೋಡಿ ಬಂದೆ ಅಂದ್ರಲ್ಲಾ. ನಿಮ್ಮ ಮುಂದೆ ಮತ್ತೊಮ್ಮೆ ವರ್ಣಿಸೋದು ಶುದ್ಧ ಮೂರ್ಖತನ. ಏನು? ಗುಣವೇ? ಅಪರಂಜಿ ಕಣ್ರೀ ಅಪರಂಜಿ. ಬಹಳ ನಯ, ವಿನಯ, ಹಿರಿಯರಲ್ಲಿ ತುಂಬಾ ಗೌರವ. ನನ್ನನ್ನಂತೂ ರಸ್ತೆಯಲ್ಲಿ ಕಂಡ್ರೂ ಪಾದ ಧೂಳಿಯನ್ನು ತೆಗೆದು ಶಿರಸ್ಸಿನಲ್ಲಿ ಧರಿಸೋದು ಬಿಟ್ಟಿಲ್ಲ ಹುಚ್ಚು ಹುಡುಗಿ. ಹಾಡು ಹಸೆ ಎಲ್ಲದ್ರಲ್ಲೂ ಜಾಣೆ. ಏನು?... ಅಡುಗೆ ಬರುತ್ತಾ ಅಂತಂದ್ರಾ? ಅವ್ಳು ಸಾಕ್ಷಾತ್ ನಳ ಮಹಾರಾಜನ ಮೊಮ್ಮಗಳೇ ಕಣ್ರೀ. ಅವ್ಳು ನಿಮ್ಮನೆಗೆ ಸೊಸೆಯಾದ್ರೆ ನೀವು ಜೀವಮಾನ ಪೂರ್ತಿ ಅಡುಗೆ ಮನೆಗೆ ಕಾಲಿಡೋದೇ ಬೇಡ. ಡೆಂಟಿಸ್ಟು ಬೇರೆ. ಮನೇಲಿ ಯಾರಿಗೆ ಹಲ್ಲು ನೋವು ಬಂದ್ರೂ ಖರ್ಚಿಲ್ಲದೆ ಚಿಕಿತ್ಸೆಯ ಅನ್ಕೂಲ ಬೇರೆ. ಏನಂದ್ರಿ? ಕೊಡೋದು ಬಿಡೋದಾ? ಶ್ರೀಮಂತರು ಕಣ್ರೀ. ಸಾಕು ಸಾಕು ಅಂತ ನೀವು ಕೇಳ್ಕೋಬೇಕು. ಹಾಗೆತುಂಬಿ ಕಳಿಸ್ತಾರೆ. ಕಣ್ಮುಚ್ಚಿಕೊಂಡು ಈ ಮದ್ವೇಗೆ ಒಪ್ಪಿಗೆ ಕೊಡಿ.''

ಫೋನ್ ಕೆಳಗಿಟ್ಟ ಹತ್ತು ನಿಮಿಷಕ್ಕೆ ಬಸವನಗುಡಿಯ ಕನ್ಯೆ ಮನೆಯಿಂದ ಮತ್ತೊಂದು ಕರೆ ಬಂದಿತು. ಮಾವಯ್ಯ ಈ ವೇಳೆಗೆ ಕಿವಿ ಕ್ಲೀನ್ ಮಾಡುವ ಕಾಯಕ ಬಲಗಿವಿಗೆ ವರ್ಗಾಯಿಸಿದದರು. ''ಹಲೋ... ಹೌದು.. ಹುಡುಗನ ಮನೆಯವ್ರು ಈಗತಾನೆ ವಿಷಯ ತಿಳಿಸಿದರು. ಅವ್ರೇನೋ ನಿಮ್ಮ ಮಗಳು ಇಷ್ಟವಾಯ್ತು ಅನ್ನುವಂತೆ ಮಾತನಾಡಿದ್ರು. ನಿಮ್ಮ ಹುಡುಗಿ ಏನಂದ್ಲು?.. ಇನ್ನೂ ನಿರ್ಧಾರ ತೊಗೊಂಡಿಲ್ವಾ?... ಅವಳಿಗೆ ಕಣ್ಣು ಮುಚ್ಕೊಂಡು ಮಾಲೆ ಹಾಕಕ್ಕೆ ಹೇಳಿ. ಹುಡುಗ ಅಪ್ಪಟ ಚಿನ್ನ ಕಣ್ರೀ. ನನಗ್ಹೇಗೆ ಗೊತ್ತು ಅಂತೀರಾ?

..... ಅವನು ಮಗುವಾಗಿದ್ದಾಗ ದಿನ ಬಿಟ್ಟು ದಿನ ಹೋಗಿ ತಲೆಗೆ ನೀರು ಹೊಯ್ದು ಸಾಂಬ್ರಾಣಿ ಹೊಗೆ ಹಾಕಿದವ್ಳೇ ನಾನು. ಹುಡುಗ ತುಂಬಾ ಸಾಧು. ನಿಮ್ಮ ಮಗಳನ್ನು ಅರಗಿಣಿಯಂತೆ ನೋಡ್ಕೋತಾನೆ. ವಿದ್ಯಾ ವಾಚಸ್ಪತಿ. ಭಾರಿ ಉದ್ಯಮ ಇಟ್ಕೊಂಡಿದ್ದಾನೆ. ಕೈತುಂಬಾ ವರಮಾನ... ನಿಮ್ಮ ಮಗ್ಳಿಗೆ ಬೇಕಾದ್ರೆ ಕೈಯ್ಯಿಂದ ಹಾಕಿ ಡೆಂಟಲ್ ಕ್ಲಿನಿಕ್ ತೆಗೆಯೋದಕ್ಕೂ ಹಿಂದೆ ಮುಂದೆ ನೋಡೋದಿಲ್ಲ.... ಕೆಟ್ಟ ಅಭ್ಯಾಸಾನಾ? ಒಂದೇ ಒಂದಿದೆ. ಹೇಳಿಬಿಡ್ತೀನೆ. ಸಾಯಂಕಾಲದ ಹೊತ್ತು ನೀವು ಅವನನ್ನು ಶ್ರೀ ರಾಮಕೃಷ್ಣ ಆಶ್ರಮದ ಆವರಣದಲ್ಲೇ ಕಾಣೋದು. ಇದೊಂದೇ ಅಭ್ಯಾಸ ಅವನು ಮಾಡ್ಕೊಂಡಿರೋದು. ಇಂಥಾ ಅಳಿಯ ಸಿಗೋಕ್ಕೆ ನೀವು ಹಿಂದಿನ ಜನ್ಮದಲ್ಲಿ ಅದಿನ್ನೆಷ್ಟು ದಾನ ಧರ್ಮ ಮಾಡಿದ್ರೋ ಕಾಣೆ. ನಿರ್ಧಾರ ತೊಗೋಳ್ಳಕ್ಕೆ ನಿಧಾನ ಮಾಡ್ಬೇಡಿ. ಒಳ್ಳೆ ಜಾಗ ಕೈತಪ್ಪಿ ಹೋಗತ್ತೆ.''

ಫೋನು ಕೆಳಗಿಟ್ಟು ಮಾವಯ್ಯನ ಬಳಿ ಬಂದು ಕುಳಿತರು. ಮುಖ ಮಾಲು ಸಮೇತ ಸಿಕ್ಕ ಕಳ್ಳನಂತಾಗಿತ್ತು. ಇಂತಹ ಸ್ವರ್ಣ ಘಳಿಗೆಯ ಪೂರ್ಣ ಪ್ರಯೋಜನ ಮಾವಯ್ಯ ಬಿಡುವರೇ? ''ನೀನು ಇಲ್ಲದ್ದೆಲ್ಲಾ ಸೇರಿಸಿಕೊಂಡು ಸುಳ್ಳು ಯಾಕೆ ಹೇಳ್ತೀ? ನಿನಗೆ ಆ ಎರಡು ಪಾರ್ಟಿಯವರು ಗೊತ್ತೇ? ನಾವ್ಯಾರೋ ಅವರ್‍ಯಾರೊ. ನಿನ್ನ ಮಾತಿನಿಂದ ಮದುವೆ ನಡೆದು ನಾಳೆ ಹೆಚ್ಚು ಕಮ್ಮಿಯಾದ್ರೆ?''

''ನೀವ್ಯಾಕ್ರೀ ನನ್ನ ವ್ಯವಹಾರದಲ್ಲಿ ಮೂಗು ತೂರಿಸ್ತೀರ? ನಾನು ಸುಳ್ಳು ಹೇಳ್ದೆ ಹೌದು. ಮದ್ವೆ ಮಾಡ್ಸೋಕೆ ಸಾವಿರ ಸುಳ್ಳು ಹೇಳಬಹುದು ಅಂತ ಹಿರೇರು ಪರ್‌ಮಿಷನ್ ಕೊಟ್ಟಿದ್ದಾರೆ. ನಾನು ಕೇವಲ ಒಂದೆರಡು ಸುಳ್ಳು ಹೇಳ್ದೆ ಅಷ್ಟೆ. ಮದ್ವೆ ಅಂತ ಒಂದಾದ್ರೆ ತನಗೆ ತಾನೇ ಸರಿಹೊಗುತ್ತೆ. ನೀವು ನಿಮ್ಕೆಲ್ಸ ನೋಡ್ಕೊಳ್ಳಿ'' ಗಂಡನ ಬಾಯಿ ಮುಚ್ಚಿಸಿದರು.

ಒಂದು ತಿಂಗಳ ಬಳಿಕ ಮತ್ತೊಮ್ಮೆ ಫೋನ್ ಕರೆ ಪಾಪತ್ತೆಗೆ. ಅದನ್ನೆತ್ತಿ ಮಾತುಗಳನ್ನಾಲಿಸಿದ ಅವರ ಮುಖ ಗುಲಾಬಿಯಂತೆ ಅರಳಿತು. ಮಾವಯ್ಯನ ಪ್ರಕಾರ

ಆನ್‌ಲೈನ್ ಲಾಟರಿಯಲ್ಲಿ ಜ್ಯಾಕ್ ಪಾಟ್ ಗೆದ್ದ ಹರ್ಷ, ಹುಮ್ಮಸ್ಸು ಕಾಣುತ್ತಿತ್ತು. ಅತ್ತೆಗೆ ಹರ್ಷವಾದರೂ ಸರಿ ಚಿಂತೆಯಾದರೂ ಸರಿ ಮಾವಯ್ಯನಿಗೆ ಗ್ರಹಚಾರ ವಕ್ಕರಿಸುವುದು ಖಂಡಿತ. ''ಯಾವಾಗ್ಲೂ ಹಂಗಿಸುತ್ತಿದ್ರಲ್ಲಾ, ಇಲ್ನೋಡಿ. ನಾನು ಕೊಟ್ಟ ವಿವರಗಳು, ರೆಕಮೆಂಡೇಶನ್‌ಗಳಿಂದಾಗಿ ಆ ಡೆಂಟಿಸ್ಟ್ ಹುಡುಗಿಗೆ ಬಸವೇಶ್ವರ ನಗರದ ಹುಡುಗನಿಗೆ ಮದ್ವೆ ಗೊತ್ತಾಯ್ತಂತೆ. ಇನ್ನು ಎರಡೇ ದಿನಕ್ಕೆ ನಿಶ್ಚಿತಾರ್ಥ ಮಾಡ್ತಾರಂತೆ. ನಿಮ್ಮಿಂದ ತುಂಬಾ ಉಪ್ಕಾರ ಆಯ್ತಮ್ಮ. ಪತ್ರಿಕೆ ಪ್ರಿಂಟಾದ್ಮೇಲೆ ಕರೆಯೋಕ್ಕೆ ಖುದ್ದಾಗಿ ಬರ್ತೀವಿ. ನೀವು ಬಂದು ಆಶೀರ್ವಾದ ಮಾಡ್ಬೇಕು ಅಂತಂದ್ರು. ನನ್ನನ್ನಂತೂ ಬಾಯಿ ತುಂಬಾ ಹೊಗಳಿದ್ರು. ನಿಮ್ಮ ಮಾತು ಕೇಳ್ಕೊಂಡು ನನ್ನ ಪಾಡಿಗೆ ನಾನು ಇದ್ದಿದ್ರೆ ಈ ಮದ್ವೆ ನಡೀತಾನೇ ಇರ್ಲಿಲ್ಲ. ನನಗೆಷ್ಟು ಸಂತೋಷ, ಸಂತೃಪ್ತಿ ಸಿಕ್ಕಿದೆ ಗೊತ್ತಾ?'' ಹೀಗೆಂದು ಪತ್ನಿ ಮೋಡದ ಮೇಲೆಯೇ ತೇಲುತ್ತಾ ಹೋದಾಗ ಮಾವಯ್ಯನಿಗೆ ಮೊಟ್ಟಮೊದಲ ಬಾರಿಗೆ ತನ್ನ ಆಲೋಚನಾ ಎಳೆ ತಪ್ಪಿರಬಹುದೇ ಎಂಬ ಅನುಮಾನ ಬಲವಾಗಿ ಬಂದಿತು.

ಐದಾರು ದಿನಗಳ ಬಳಿಕ ಒಂದು ಸಂಜೆ ದೀಪ ಹಚ್ಚುವ ಸಮಯಕ್ಕೆ ಒಬ್ಬ ಧಡೂತಿ ಮಹಿಳೆ ತನ್ನ ಸೊಣಕಲು ಗಂಡನನ್ನು ಹಿಂಬಾಲವಾಗಿರಿಸಿಕೊಂಡು ಭೂಮಿ ಅದುರುವಂತೆ ನಡೆದು ಒಳಬಂದಳು. ''ಬನ್ನಿ ಬನ್ನಿ ಮದುವೆಗೆ ಆಹ್ವಾನಿಸೋಕ್ಕೆ ಬಂದಿದ್ದೀರಲ್ವೇ?'' ಅತ್ತೆ ಆತ್ಮೀಯತೆಯಿಂದ ಒಳ ಕರೆದರು.

''ಲಗ್ನ ಪತ್ರಿಕೇನಾ? ನಿಮ್ಮ ಮುಖಕ್ಕಿಷ್ಟು ಇಂತಹ ಮನೆಹಾಳು ಕೆಲ್ಸ ಯಾಕ್ರೀ ಮಾಡ್ತೀರಾ?''

''ಮನೆ ಹಾಳು ಕೆಲ್ಸಾನೇ? ನಾನೇನು ಮಾಡ್ದೆ?''

''ಆಹಾಹಾ... ನನ್ನ ಮಗಳಿಗೆ ಸೊಗಸಾದ ವರಾನ್ನ ಗಂಟು ಹಾಕೊಕ್ಕೆ ನೋಡಿದ್ರಿ ಅವಳ ಅದೃಷ್ಟ ಬದುಕಿಕೊಂಡ್ಳು.

''ಏನಾಯ್ತು? ನಿಶ್ಚಿತಾರ್ಥವು ಆಗಿರ್ಬೇಕಲ್ಲ''

''ಅದೂ ಆಯ್ತು. ಹದಿನೈದು ಸಾವ್ರ ಕೈಬಿಟ್ಟೂ ಹೋಯ್ತು. ನಿಶ್ಚಿತಾರ್ಥದ ದಿನ ನನ್ನ ಮೈದುನ, ಅದೇ ನಮ್ಮ ಯಜಮಾನ್ರ ಕಡೇ ತಮ್ಮ, ಇವ್ರಂತೆ ಮೊದ್ದಲ್ಲ. ಚಾಣಾಕ್ಷ. ಹುಡುಗನ ಹತ್ರ ಕೂತ್ಕೊಂಡು ನಿನ್ನ ಫ್ಯಾಕ್ಟರಿ ಎಲ್ಲಿದೆ? ಏನು ತಯಾರಿಸ್ತೀರಿ ಅಂತ ಕೇಳಿದ್ದಕ್ಕೆ ಬ್ಬೆ...ಬ್ಬೆ...ಬ್ಬೆ ಅಂದ್ನಂತೆ. ಜಬರಿಸಿ ಕೇಳಿದ್ದಕ್ಕೆ ಫ್ಯಾಕ್ಟರಿ ಇನ್ನು ಆರಂಭಿಸಿಲ್ಲ.ಮದ್ವೆ ಆದ್ಮೇಲೆ ಮಾವನ ಮನೆ ಸಹಕಾರದಿಂದ ಆರಂಭ ಮಾಡ್ತೀನಿ ಅಂದ್ನಂತೆ. ಮೈದುನನಿಗೆ ಅನುಮಾನ ಹೆಚ್ಚಾಯ್ತು. ನಿನ್ನ ಡಿಗ್ರಿ ಸರ್ಟಿಫಿಕೇಟು ಈಗ್ಲೆ ತೋರಿಸು ಅಂತ ಪಟ್ಟು ಹಿಡಿದ. ಹುಡುಗನ ಅಪ್ಪ ಅಡ್ಡ ಬಂದ್ರು. 'ಡಿಗ್ರಿವರ್ಗು ಕೋರ್ಸು ಓದಿದ್ದಾನೆ. ಪರೀಕ್ಷೇಲಿ

ಪಾಸಾಗ್ಲಿಲ್ಲ ಅಷ್ಟೆ ಅಂದ್ರು!' ನನ್ನ ಮಗ್ಳು ತಾನು ಒಂಟಿಯಾಗಿ ಇದ್ರು ಪರ್ವಾಗಿಲ್ಲ ಈ ಮದ್ವೆ ಬೇಡ ಅಂತಂದ್ಲು.''

ಪಾಪತ್ತೆಗೆ ನಿಜಕ್ಕೂ ಬೇಜಾರಾಯಿತು. ''ಛೆ....ಛೆ...ಶುದ್ಧ ಮೋಸ. ನನಗಿದೆಲ್ಲಾ ಮೊದ್ಲೇ ತಿಳೀಲಿಲ್ಲಮ್ಮ. ತಿಳಿದಿದ್ರೆ ಖಂಡಿತಾ ನಿಮಗೆ ಈ ಸಂಬಂಧ ಸೂಚಿಸುತ್ತಾ ಇರ್ಲಿಲ್ಲ.

''ಏನ್ರೀ ದೊಡ್ಡಾಗಿ ತಿಳೀಲಿಲ್ಲ ಅಂತೀರ? ಹುಡ್ಗ ಹುಟ್ಟಾಗ್ಲಿಂದ ಗೊತ್ತು. ಮಗೂಗೆ ನೀರು, ಸಾಂಬ್ರಾಣಿ ಹೊಗೆ ಅಂತೆಲ್ಲಾ ಬರುಡೆ ಬಿಟ್ರಿ? ಇನ್ಮೇಲಾದ್ರು ಇಂತಹ ಮೋಸದ ವ್ಯವಹಾರ ಬಿಡ್ಬಿಡಿ. ನಮ್ಮ ಹೆಣ್ಣು ಮಕ್ಕಳು ಬದುಕ್ಕೋತಾರೆ.'' ಆಕೆ ಇಷ್ಟೆಲ್ಲಾ ಅಷ್ಟೋತ್ತರ ಶತನಾಮ ಉದುರಿಸುತ್ತಿದ್ದರೆ ಮಾವಯ್ಯ ಪತ್ರಿಕೆ ಅಡ್ಡ ಹಿಡಿದು ತುಟಿ ಪಿಟಕ್ಕೆನ್ನದೆ ಕುಳಿತುಬಿಟ್ಟಿದ್ದಾರೆ! ಅತ್ತೆ ಅವರನ್ನು ಸಮಾಧಾನ ಪಡಿಸಿ ಸಾಗ ಹಾಕಿ ಮಾವಯ್ಯನನ್ನು ವಿಚಾರಿಸಲು ಬರುವಷ್ಟರಲ್ಲಿ ಮತ್ತೊಮ್ಮೆ ಬಾಗಿಲು ಬಡಿತ. ಈಗ ಒಳ ಬಂದದ್ದು ಧಡೂತಿ ಆಸಾಮಿ. ಈ ಬಾರಿ ಹಿಂಬಾಲಿಗೆ ಮಡಿಕೋಲಿಗೆ ಸೀರೆ ಸುತ್ತಿದಂತಿದ್ದ ಹೆಂಗಸಿನಿಂದ. ಪಾಲಿಶ್‌ನಿಂದ ಮಿಂಚುತ್ತಿದ್ದ ಕೃತಕ ದಂತ ಪಂಕ್ತಿಯಿಂದ ಆತ ಡೆಂಟಿಸ್ಟ್‌ನ ಖಾಯಂ ಪೇಷಂಟ್ ಎಂಬುದು ಸ್ವಯಂ ವೇದ್ಯವಾಯಿತು. ಆತ ಒಳ ಅಡಿ ಇಟ್ಟೊಡನೆ ಆಕ್ರಮಣ ಶುರುವಾಯಿತು. ''ನೀವು ಹೊಟ್ಟೆಗೇನ್ರೀ ತಿಂತೀರಿ? ಸುಳ್ಳು ಪಳ್ಳು ಸೇರ್ಸಿ ಮದುವೆ ಹೊಂದಿಸೋಕ್ಕೆ ನಾಚಿಕೆ ಆಗೊಲ್ಲ? ನಾಲ್ಕು ಜನರ ಮುಂದೆ ತಲೆ ತಗ್ಗಿಸುವಂತೆ ಆಯ್ತು.''

''ಅಲ್ಲಪ್ಪ ನೀವು ನಿಮ್ಮ ಹುಡುಗನ ವಿದ್ಯೆ... ಉದ್ಯೋಗದ ಬಗ್ಗೆ ಸುಳ್ಳು ಸುಳ್ಳೇ...'' ಪಾಪತ್ತೆಗೆ ಮಾತನಾಡಲು ಬಿಟ್ರೆ! ಆತನ ವರಟು ಧ್ವನಿಗೆ ಆ ಹೆಂಗಸು ತಾರಕ ಹಿಮ್ಮೇಳದ ಶೃತಿ ಒದಗಿಸಿದಳು. ''ನೀವು ನಮಗೇನ್ರೀ ಹೇಳಿದ್ದು? ಹುಡುಗಿ ಬಲು ಮೆದುಗಸ್ತೆ. ನಯ, ವಿನಯ ಹಿರಿಯರಲ್ಲಿ ಗೌರವ. ಅಂತ. ಆವತ್ತು ಆ ಕಾಳಿಕಾಂಬೆಯನ್ನು ನೊಡಬೇಕಿತ್ತು. ಕೈಯ್ಲಿ ಕತ್ತಿ ಬದ್ಲು ಇಕ್ಕಳ ಹಿಡ್ಕೊಂಡು ನನ್ನ ಮಗನ ಹಲ್ಲು ಕಿತ್ತು ಕೈಗೆ ಕೊಡ್ತೀನಿ ಅಂತ ಕೂತಿದ್ಲು. ನಾವೆಲ್ಲಾ ಸುತ್ತುವರೆದು ಕಾಪಾಡದಿದ್ರೆ ಅವನ್ಗೂ ಅವನ ಅಪ್ಪನ ಥರ ಕೃತಕ ದಂತಪಕ್ತಿ ಬಂದಿರೋದು. ಇದೇ ಕಡೆ ಇನ್ನೊಮ್ಮೆ ಇಂಥಾ ಸುಳ್ಳು ಪಳ್ಳುಹೇಳಿದ್ರೆ ಬಿದೀಲೀ ನಿಲ್ಸಿ ಕಪಾಳಮೋಕ್ಷ ಮಾಡ್ತೀವಿ'' ತಾವು ಕಲಿತ ಇನ್ನೂ ಎಷ್ಟೋ ಬೈಗಳ ಭಂಡಾರವನ್ನು ಉದುರಿಸಿ ಹೊರ ನಡೆದರು.

ಈಗ ಪಾಪತ್ತೆಯ ಲಕ್ಷ್ಯ ಮಾವನತ್ತ ತಿರುಗಿತು. ಅಡ್ಡವಿದ್ದ ಪೇಪರ್ ಕಿತ್ತು ಎಸೆದರು. ''ಈಗ ನೀವೇನೂ ಹೇಳೋದಕ್ಕೆ ಹೊರ್ಟದೀರ ಅಂತ ನಂಗೊತ್ತು. ಪ್ರಪಂಚದ ಎಲ್ಲಾ ಮದ್ವೇಗ್ಳೂ ಸುಳ್ಳಿನಿಂದಲೇ ಆರಂಭವಾಗೋದು. ಸತ್ಯವೆಲ್ಲಾ ಹೇಳಿದ್ರೆ ಯಾರು

ಮದ್ವೆಯಾಗ್ತಾರೆ? ನನ್ನದೇ ಉದಾಹರಣೆ ತೊಗೊಳ್ಳಿ. ನಿಮ್ಮ ದೊಡ್ಡಮ್ಮ ನಿಮ್ಮನ್ನು ಇಂದ್ರ ಚಂದ್ರ ದೇವೇಂದ್ರ ಅಂತ ಹೊಗಳಿದ್ದು ಕೇಳಿ ನಾನು ಮದ್ವೆಗೆ ಒಪ್ಕೊಂಡೆ. ಆಮೇಲೇ ಗೊತ್ತಾಗಿದ್ದು ಸಾಮಾನ್ಯರಲ್ಲಿ ಅತಿ ಸಾಮಾನ್ಯ ಅಂತ. ಹೇಗೋ ಹೊಂದಿಕೊಂಡು ನಾವು ಜೀವನ ನಡಸ್ತಾ ಇಲ್ವೇ? ಶುದ್ಧ ಅವಿವೇಕಿಗಳು. ಯಾರೋ ಹೇಳ್ಬಿಟ್ರು ಅಂತ ನಾನು ನನ್ನ ಸಮಾಜ ಸೇವೆ ಬಿಡೊಲ್ಲ. ನೀವೇನೇ ಹೇಳಿ. ನಾನು ಕೇರ್ ಮಾಡೊಲ್ಲ''

ಮತ್ತೆ ಫೋನ್ ಕಿರುಗುಟ್ಟಿತು. ಪಾಪತ್ತೆ ಧಾವಿಸಿದರು. ಕೇಳುತ್ತಾ ಕೇಳುತ್ತಾ ಕೆಂಪು ಡೈರಿ ಕೈಗೆತ್ತಿಕೊಂಡರು. ''ತಾಳಿ ಬರ್‍ಕೊತೀನಿ. ಮಗ್ಳು ಲೆಕ್ಚರರಾ? ಎಷ್ಟು ವಯಸ್ಸು?... ನಕ್ಷತ್ರ?... ಬರೆಯುತ್ತಾ ಹೋದರು.

ಮಾವಯ್ಯ ತಮ್ಮ ಪತ್ನಿ ಎಂಬ ಈ ಅದ್ಭುತವನ್ನು ಬೆರಗಿನಿಂದ ನಿಟ್ಟಿಸುತ್ತಲೇ ಇದ್ದರು.

★★★



ಶ್ರೀಮತಿ ಪದ್ಮಾವತಿ ದೇವಿಯವರ ಸೋಶಿಯಲ್ ಸರ್ವಿಸ್



⊙ ವಿಜಯ ಸಚ್ಚಿದಾನಂದ

ಆ ಬಡಾವಣೆಯ ಹೆಸರು 'ಕುಂಜಬನ'. ಅದು ಸರ್ಕಾರಿ ಕರ್ಮಚಾರಿಗಳಿಗೆ ಮೀಸಲಾದ ಬಡಾವಣೆ. ಅಲ್ಲಿ ಹಲವಾರು ಬಂಗ್ಲೆಗಳೂ, ಸಾಧಾರಣ ಮನೆಗಳೂ ಮತ್ತು ಚಿಕ್ಕ ಚಿಕ್ಕ ಕೊಳಗೇರಿಯ ಮನೆಗಳಂತಹ ಮನೆಗಳೂ ಇದ್ದವು. ಅವೆಲ್ಲದರಲ್ಲೂ ಸರ್ಕಾರಿ ಕರ್ಮಚಾರಿ ತಮ್ಮ ಅಂತಸ್ತಿಗೆ ತಕ್ಕಂತಹ ಮನೆಗಳಲ್ಲಿ ವಾಸಿಸುತ್ತಿದ್ದರು. ನೀವು 'ಕುಂಜಬನ' ಪ್ರವೇಶ ಮಾಡುತ್ತಿದ್ದಂತೆ ಬಲಕ್ಕೆ ತಿರುಗಿದರೆ ಕಾಣುತ್ತದಲ್ಲಾ ಅತಿ ದೊಡ್ಡ ಬಂಗ್ಲೆ - ಮುಂದೆ ಓರಣವಾದ ಸುಂದರಾದ ತೋಟ-ಗೇಟಿನ ಮುಂದೆ ಸಮವಸ್ತ್ರದ ಬಂದೂಕ ದಾರಿ ಪ್ಯಾದೆ - ಹೋದ ಬಂದವರನ್ನೆಲ್ಲಾ ಅನುಮಾನದ ದೃಷ್ಟಿಯಿಂದ ನೋಡುತ್ತಾ ಹಾಂ! ಆ ಬಂಗ್ಲೇನೆ ಹಿರಿಯರಲ್ಲಿ ಹಿರಿಯ ಅಧಿಕಾರಿ ಶ್ರೀಮಾನ್‌ಪ್ರಹ್ಲಾದ ರಾಯರದ್ದು. ಅವರ ಪತ್ನಿಯೇ ಶ್ರೀಮತಿ ಪದ್ಮಾವತಿ ದೇವಿಯವರು.

ಪದ್ಮಾವತಿ ದೇವಿಯವರಿಗೆ ಜೀವನದಲ್ಲಿದ್ದುದ್ದು ಒಂದೇ ಒಂದು ಕನಸು. ತನ್ನ ಸುಂದರ ವದನ ಯಾವುದಾದರೂ ಒಂದು ಇಂಟರ್ ನ್ಯಾಷನಲ್, ನ್ಯಾಷನಲ್ ಇಲ್ಲಾ! atleast ಒಂದು ಲೋಕಲ್ ಪೇಪರಿನಲ್ಲಿ ಬರಬೇಕಂತ! ಅದಕ್ಕೆ ಬಲವಾದ ಕಾರಣವೂ ಇತ್ತೂ ಅನ್ನಿ! ಆಕೆ ಕಾಲೇಜಿನಲ್ಲಿ ಓದುತ್ತಾ ಇದ್ದಾಗ ಬ್ಯೂಟಿ contest ಆಯ್ತಂತೆ, ಅದರಲ್ಲಿ ಭಾಗವಹಿಸಿ, ಗೆದ್ದು ಪ್ರಶಸ್ತಿ ಬೇರೆ ಗಳಿಸಿದ್ದರಂತೆ. ಅವರ ಆವಾಗಿನ 36-18-36ರ ಫಿಗರನ ಜಡ್ಜ್‌ಗಳು ಹಾಡಿ ಹೊಗಳಿದ್ದರಂತೆ. ಯಾವುದೋ ಪ್ರಸಿದ್ಧ ಸಿನೆಮಾ ನಟಿ ಇವರಿಗೆ ಟಿಯಾರಾ ಮತ್ತು ಸ್ಯಾಶ್ ಹಾಕ್ತಾ ಇವರ ಕಿವಿನಲ್ಲಿ "How I envy you!" ಅಂತ ಬೇರೆ ಅಂದು ಇವರನ್ನು ಬ್ಲಶ್ ಮಾಡ್ಸಿದ್ಲಂತೆ. ಆ ಫೋಟೋ ಅನೇಕ ಪತ್ರಿಕೆಗಳಲ್ಲಿ ಬಂದಿದ್ವಂತೆ. ಇಪ್ಪತ್ತು ವರ್ಷಗಳ ಬಳಿಕವೂ ಆ ನೆನಪು ಹಚ್ಚ ಹಸಿರಾಗಿದ್ದು she wanted to relive that glory once again. ಹಾಗೇ ಎರಡು ಮಕ್ಳ ತಾಯಾದ್ಮೇಲೂ - ಈಗ 42-38-42 ಫಿಗರ್ ಆದ್ಮೇಲೂ ಅದೇ ಹಳೇ ಭಂಗಿಯಲ್ಲಿ ಫೋಟೋದಲ್ಲಿ ಬರೋ ಆಸೆ. ಅದಕ್ಕೆ ಆಕೆ ಪಡ್ತಾಯಿದ್ದ ಭವಣೆ ಏನು ಸಾಮಾನ್ಯವೆ?

ಕೊನೆ ಪಕ್ಷ ತಿಂಗಳಿಗೆ ಒಂದರಂತೆ ಪಾರ್ಟಿ ಎಸೆಯೋರು. ಊರಿನ ಪ್ರಸಿದ್ಧ ವ್ಯಕ್ತಿಗಳನ್ನೆಲ್ಲಾ ಕರೆಯೋದು! ಸೊಗಸಾದ ರುಚಿ ರುಚಿಯಾದ ಅಡಿಗೆ ಮಾಡ್ಸೋದು! ಪಂಚತಾರಾ ಹೋಟಲುಗಳನ್ನು ಮೀರಿಸುವಂತೆ ಊಟದ ಮೇಜುಗಳನ್ನು

ಅಣಿಗೊಳಿಸುವುದು, ಒಳ್ಳೆ ಮಿಂಚು ಹೊಡೆದಂತೆ ಅಲಂಕರಿಸಿಕೊಳ್ಳುವುದು, ಮೇಲಾಗಿ ಪ್ರಸಿದ್ಧ ಫೋಟೋಗ್ರಾಫರ್‌ಗಳನ್ನೆಲ್ಲಾ invite ಮಾಡೋರು. ಬೇರೆ ಬೇರೆ ಫೋಸ್‌ಗಳಲ್ಲಿ ಫೋಟೋ ಬೇರೆ ತೆಗೆಸಿಕೊಳ್ಳೋರು. ಬಂದಿದ್ದ ಅತಿಥಿಗಳೆಲ್ಲಾ ರುಚಿ ರುಚಿಯಾದ ಭೋಜನ ಕಂಠತುಂಬ ತಿಂದು ಶ್ರೀಮತಿ ಪದ್ಮಾವತಿ ದೇವಿಯವರನ್ನ ಹಾಡಿ ಹೊಗಳಿ ಜೊತೆಗೆ ಹಿರಿಯ ಅಧಿಕಾರಿಯನ್ನೂ ಹೊಗಳಿ ಮುಂದಿನ ಪಾರ್ಟಿಯ ಕನಸು ಕಾಣುತ್ತಾ ಅಲ್ಲಿಂದ ಜಾಗ ಖಾಲಿ ಮಾಡೋರು. ಪಾಪ! ಪದ್ಮಾವತಿ ದೇವಿಯವರು ಮುಂದಿನ ಒಂದು ವಾರ ಬೇರೆ ಬೇರೆ ಪತ್ರಿಕೆಗಳಲ್ಲಿ ತಮ್ಮ ಪಾರ್ಟಿ ವರದಿ ಬಂದಿರಬಹುದೇನೋ ಅಂತ ಪೇಪರುಗಳನ್ನ ಓದಿದ್ದೂ ಓದಿದ್ದೇ! ಉಹೂ! ಪೇಪರಿನಲ್ಲಿ ಒಂದು ಲೈನೂ ಈ ವಿಷಯವಾಗಿ ಕಾಣ್ತಿರಲಿಲ್ಲ! ಕೋಪದಿಂದ ಪೇಪರನ್ನು ತುಂಡು ತುಂಡು ಮಾಡಿ ಕಿಟಕಿಯಿಂಚಾಚೆ ತೂರಿ ಬಿಡೋರು!

ದೇವಿಯೋರು ಎಂದೂ ಸಾಮಾನ್ಯ ಪ್ರಜೆಯಂತೆ ರಸ್ತೇನಲ್ಲಿ ಹೋದೋರೇ ಅಲ್ಲ! ಯಾವಾಗಲೂ tip top ಆಗಿ ಫುಲ್ ಗೆಟಪ್ (Full - get up) ನಲ್ಲೇ ಇರೋರು. ತಾನೇನು ಸಾಮಾನ್ಯ ಪ್ರಜೇನಾ! ಒಂದಾನೊಂದು ಕಾಲದ Miss.ವಿದ್ಯಾರಣ್ಯ ಕಾಲೇಜು! ಅದೃಷ್ಟ ಚೆನ್ನಾಗಿದ್ದಿದ್ರೆ ಈಗಿನ ಕಾಲದ ಮಿಸ್ ಇಂಡಿಯಾಗಳ ತರಹ ಒಳ್ಳೆ ಮಾಡಲ್ಲೋ ಅಥವಾ ಸಿನೆಮಾ ಸ್ಟಾರೋ ಆಗಬಹುದಾಗಿತ್ತು. ಅದೃಷ್ಟ ಖೋಟಾ ಆಗಿರೋದಕ್ಕೆ 'ಕುಂಜಬನದ' ಬಡಾವಣೇಲಿ ಹಿರಿಯ ಅಧಿಕಾರಿಯ ಪತ್ನಿಯಾಗಿ ಪ್ರಜಾ ಸಾಮಾನ್ಯರಂತೆ ವಾಸ ಮಾಡ್ತಾಯಿರೋದು ಅಂತ ಅವರ ಅನ್ನಿಸಿಕೆ. ತಾನೇನೋ ಸಾಮಾನ್ಯ ಪ್ರಜೆಯಂತೆ ಅಸ್ತವ್ಯಸ್ತವಾಗಿ ರಸ್ತೇಲಿ ಹೋಗ್ತಿರೋದು - ಯಾರಾದರೂ ತನ್ನ ಪೂರ್ವಾಪರ ಹಿಡಿದು ತಾನೂ ಒಂದಾನೊಂದು ಕಾಲದ ಮಿಸ್ ಬ್ಯೂಟಿ ಅಂತ ಪತ್ತೆ ಹಚ್ಚಿ ಕ್ಯಾಮರಾ ಕ್ಲಿಕ್ ಅನ್ನಿಸಿ ಬಿಡುವುದು. ತಾನೂ ಆ ಫೋಟೋದಲ್ಲಿ ಅಸ್ತವ್ಯಸ್ತವಾಗಿ ಕಾಣಿಸಿಕೊಂಡು ಬಿಟ್ರೆ ತನ್ನ ಬಿರುದು ಬಾವಲಿಗೆ ಎಂತಹ ಅವಮಾನ. ಆದ್ದರಿಂದ ಯಾವಾಗಲೂ model ಹಾಗೇ ಇರೋರು. ಬರೀ ಡ್ರೆಸ್ ಮಾತ್ರವಲ್ಲ! ಆಕೆಯ ಚಲನ ವಲನ, ನಿಲ್ಲೋದು, ಕೂರೋದೂ ಎಲ್ಲಾ ಮಾಡಲ್‌ಗಳ ತರಹಾನೇ!

ನಾನು ಹಿರಿಯ ಅಧಿಕಾರಿಯ ಪರ್ಸನಲ್ ಸೆಕ್ರೆಟರಿಯ ಪತ್ನಿ. ಹಿಂದಿನ ದಿನ ಸುಮಾರು ಸಾಯಂಕಾಲ 5 ಗಂಟೆಗೆ ಹಿರಿಯ ಅಧಿಕಾರಿಯ ಪತ್ನಿಯವರಿಂದ ನನಗೆ ಟೆಲಿಫೋನ್ ಕರೆಯೊಂದು ಬಂದಿತ್ತು. ಬೆಳಗ್ಗೆ ಸುಮಾರು 10 ಗಂಟೆಗೆ ಹೊತ್ತಿಗೆ ಅವರನ್ನು ಕಾಣಬೇಕೆಂದೂ, ಏನೋ ಗಹನ ವಿಷಯವೊಂದನ್ನು ಚರ್ಚಿಸಬೇಕೆಂದೂ ತಿಳಿಸಿ ಟೆಲಿಫೋನಿಸಿದ್ದರು. ಸ್ವಲ್ಪ ಬೇಗನೇ ಅರೆ ಬೆಂದ ಅಡಿಗೆಯನ್ನೇ ಗಂಡ ಮಕ್ಕಳಿಗೆ ಬಡಿಸಿ ಅವರನ್ನು ಆಫೀಸು ಸ್ಕೂಲುಗಳಿಗೆ ಸಾಗ್ಹಾಕಿ, ಸಿಂಕಿನಲ್ಲಿ ಬಿದ್ದು ಹೊರಳಾಡುತ್ತಿದ್ದ ಮುಸುರೆ ಪಾತ್ರೆಯನ್ನೂ, ಮನೆ ತುಂಬಾ ಹರಡಿದ್ದ ಕಸವನ್ನೂ ಲೆಕ್ಕಿಸದೆ ಪದ್ಮಾವತಿ ದೇವಿಯನ್ನು ಕಾಣಲು ಬಂದೆ. ಸೆಕ್ಯೂರಿಟಿಯವನು ಅಪಾದ ಮಸ್ತಕ ನನ್ನನ್ನೊಮ್ಮೆ ಹುಳುವನ್ನು

ನೋಡುವಂತೆ ನೋಡಿ ಕಣ್ಣನ್ನು ಆಕಡೆ ಹೊರಳಿಸಿದ. ಅದು O.K. ನೀನಿನ್ನು ಹೋಗಬಹುದು ಎನ್ನುವ ಅರ್ಥ. ಒಳಗಡೆ ಕಾಲಿಟ್ಟೊಡನೆ ನಾ ಕಂಡಿದ್ದೇನು? ಪದ್ಮಾವತಿ ದೇವಿಯರು ಟೆಲಿಫೋನ್ ಮುಂದೆ ಕುಳಿತಿದ್ದಾರೆ. ಕೈಯಲ್ಲೊಂದು ನೋಟ್ ಬುಕ್ಕು. ಕಣ್ಣುಗಳು ಎತ್ತಲೋ ನೋಡುತ್ತಿವೆ. ಚಿಂತೆಯಲ್ಲಿ ಮುಳುಗಿದ್ದಾರೆ. ಕಜ್ಜಲ ತುಂಬಿದ ಕಣ್ಣುಗಳಲ್ಲಿ 'ನಾಳೆ' ಎಂಬ ಆಶಾಭಾವ ಕಳೆದು ಹೋದಂತಿದೆ. ಆದರೆ ಪೂರ್ಣ ಸಜ್ಜುಗೊಳ್ಳುವುದನ್ನು ಮರೆತಿಲ್ಲ. ನಾನು ಒಳಗೆ ಹೋದ ತಕ್ಷಣ ''ಕೂತ್ಕೊ'' ಎಂಬ ಅರ್ಥ ಬರುವಂತ ಕಣ್ಣ ದೃಷ್ಟಿಯನ್ನು ಎದುರಿನ ಕುರ್ಚಿಯ ಮೇಲೆ ನೆಟ್ಟರು. ಮುದುರಿ ಕುಳಿತೆ.

''ನೋಡು! ನಾನಿನ್ಮೇಲೆ ಸೋಶಿಯಲ್ ಸರ್ವಿಸ್ ಮಾಡ್ಬೇಕೂಂತ ಮನಸ್ಸು ಮಾಡಿದೀನಿ. ಇನ್ನು ಹದಿನೈದು ದಿನಗಳಲ್ಲಿ ಜಿ.ಬಿ. ಹಾಸ್ಪಿಟಲ್ಲಿಗೆ ಭೇಟಿ ನೀಡೋಣ. ಎಲ್ಲಾ ಅರೇಂಜುಮೆಂಟು ನೀನೇ ನೋಡ್ಕೊಬೇಕು'' ಅಂತ ಹೇಳಿ ತಮ್ಮ ಪ್ಲಾನ್ ಎಲ್ಲಾ ವಿವರಿಸಿದರು. ''ಹುಷಾರ್'' ಒಂದು ಚೂರೂ ತಪ್ಪಾಗಬಾರದು! ಒಳ್ಳೊಳ್ಳೆ ಫೋಟೋಗ್ರಾಫರ್‌ಗಳಿಗೆಲ್ಲಾ ಹೇಳು. ಪ್ರೆಸ್ಸಿನವರಿಗೆಲ್ಲಾ ಹೇಳಿ ಕಳುಹಿಸು. ಬೇಕಾದರೆ ಆಫೀಸಿನಲ್ಲಿ ಇರುವವರ ಸಹಾಯ ತೆಗೆದುಕೋ! ಎಂದು ಅಪ್ಪಣೆ ಕೊಡಿಸಿದರು. ಅಷ್ಟರಲ್ಲಿ ಅವರ ಮನೆಯ ಕೆಲಸದ ಹುಡುಗಿ ಮಧುರ - ವಯಸ್ಸು ಸುಮಾರು 20 ಇರಬಹುದು - ಬಡಾವಣೆಯ ಮಾಲಿ (ತೋಟದಾಳು)ಯ ಮಗಳು ಕಾಫಿ ಮತ್ತು ಬಿಸ್ಕತ್ತಿನೊಂದಿಗೆ ಬಂದಳು. ಅದನ್ನು ಕುಡಿದು ಮನೆಕಡೆ ಕಾಲ್ತೆಗೆದೆ.

ಸರಿ! ಆ ನಿಮಿಷದಿಂದ ಶುರುವಾಯ್ತು ನನ್ನ duty ಅನ್ನಬಹುದು. ನಮ್ಮ ಮಿಕ್ಕ ಆಫೀಸರ್ ಪತ್ನಿಯರಿಗೆಲ್ಲಾ ಕರೆ ನೀಡಿದೆ. ವಿಮಲ, ಕಮಲ, ರಮಾ, ರಾಣಿ ಇತ್ಯಾದಿ ಎಲ್ಲರೂ ಹಾಜರಾದರು. ಸುಮಾರು 25 ಜನ ಸೇರಿದೆವು. ನಮ್ಮ ಮನೆಯಲ್ಲಿ ಮಿನಿ ಮೀಟಿಂಗುಗಳಾದುವು. ಹಲವು ಅಂತಹ ಮೀಟಿಂಗುಗಳ ತರುವಾಯ ಸರಿಯಾದ ಒಂದು ದಿನ ಗೊತ್ತುಪಡಿಸಿ ಹಿರಿಯ ಅಧಿಕಾರಿಣಿಯ ಒಪ್ಪಿಗೆ ಪಡೆದೆವು. ದೇವಿಯವರು ಸಂತೋಷದಿಂದಲೇ ನಾವು ಗೊತ್ತು ಪಡಿಸಿದ ದಿನಕ್ಕೆ ತಮ್ಮ ಪೂರ್ಣ ಒಪ್ಪಿಗೆ ಇತ್ತರು. ಫೋಟೋಗ್ರಾಫರ್‌ಗಳನ್ನು ಕರೆಯಲು ಮರೆಯಬಾರದೆಂದು ಮರು ಎಚ್ಚರಿಕೆ ನೀಡಿದರು.

ನಾವು ಮಾಡಿದ ಮೊದಲ ಕೆಲಸವೆಂದರೆ ಫೋಟೋಗ್ರಾಫರ್‌ಗೆ ಸುದ್ದಿ ತಿಳಿಸಿ ಕರೆ ನೀಡುವುದು - ನಂತರ ಹಲವಾರು ಪ್ರೆಸ್‌ನವರಿಗೆ ಕರೆ ನೀಡಿದೆವು - ಮೂರನೆಯದಾಗಿ ಜಿ.ಬಿ. ಆಸ್ಪತ್ರೆಯ ಅಧಿಕಾರಿಗಳಿಗೆ ಮೂರು ಔಷಧಿಗಳುಳ್ಳ ಕ್ರೇಟ್‌ಗಳನ್ನು ನಮಗೆ ಕಳುಹಿಸಬೇಕೆಂದೂ, ಅದನ್ನು ಹಿರಿಯ ಅಧಿಕಾರಿಣಿಯವರು ವೇದಿಕೆಯ ಮೇಲೆ ಬಂದಾಗ ಅವರ ಕೈಯಿಂದ ಗಣ್ಯ ವ್ಯಕ್ತಿಗಳ ಮುಂದೆ ಆಸ್ಪತ್ರೆಯ ಮುಖ್ಯ ಅಧಿಕಾರಿಗಳು ವಿಧಿವತ್ತಾಗಿ ಸ್ವೀಕರಿಸಬೇಕೆಂದೂ ಹೇಳಿದೆವು. ಅಲ್ಲದೆ ಹಿರಿಯ ಅಧಿಕಾರಿಣಿಯ ಅಂತಸ್ತಿಗೆ

ತಕ್ಕಂತೆ ವೇದಿಕೆ ನಿರ್ಮಿಸಬೇಕೆಂದೂ ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆಲ್ಲಾ ಆಹ್ವಾನ ನೀಡಬೇಕೆಂದ ಅಪ್ಪಣೆ ಮಾಡಿದೆವು. ಎಲ್ಲವನ್ನೂ ಚಾಚೂ ತಪ್ಪದೆ ನಿರ್ವಹಿಸುವ ಭಾರ ಪಿ.ಎ. ಪತ್ನಿಯಾದ ನನ್ನ ಮೇಲೆ ಇದ್ದದ್ದರಿಂದ ಬಹಳ ಎಚ್ಚರಿಕೆಯಿಂದ ಕೆಲಸ ನಿರ್ವಹಿಸುತ್ತಿದ್ದೆ.

D. Day ಹಿಂದಿನ ದಿನ ಮೀಟಿಂಗು ಪದ್ಮಾವತಿ ದೇವಿಯವರ ಮನೆಯಲ್ಲೇ ನಡೆಯಿತು. ಮಧುರ ಎಲ್ಲರಿಗೂ ತಿಂಡಿ ಕಾಫಿ ಒದಗಿಸುತ್ತಾ ಅಲ್ಲಿಂದಿಲ್ಲಿಗೆ ಏನೂ ಅರಿಯದ ಸಂಭ್ರಮದಿಂದ ಓಡಾಡುತ್ತಿದ್ದಳು. ಕಾಫಿ ತಿಂಡಿಯ ನಂತರ ನಮ್ಮನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಯ್ತು. ಪ್ರತಿ ಗುಂಪಿಗೂ ಒಂದು ಲೀಡರನ್ನು ನಮ್ಮಲ್ಲೇ ಆರಿಸಲಾಯ್ತು. 'ನಮಗೆ ಲೀಡರ್‌ಗಿರಿ ಬೇಕು' ಅಂತ ಯಾರೂ ಅಧಿಕಾರಿಣಿಯ ಮುಂದೆ ಗಲಾಟೆ ಮಾಡದಿದ್ದರೂ ಅವರ ಗೈರು ಹಾಜರಿಯಲ್ಲಿ ದನಿ ಏರಿಸಿದರು. ಪ್ರತಿದಿನ ಒಂದೊಂದು ಗುಂಪು ಆಸ್ಪತ್ರೆಗೆ ಹೋಗಿ ರೋಗಿಗಳ ಸೇವೆ, ಡಾಕ್ಟರುಗಳಿಗೆ ಸಹಾಯ ಮಾಡಬೇಕೆಂದೂ - ತಾವು ಸಹ ಆಗೊಮ್ಮೆ ಈಗೊಮ್ಮೆ ಬಂದು ಸಹಾಯ ಮಾಡುವುದಾಗಿ ಹೇಳಿದರು. ನಂತರ ಎಲ್ಲವೂ ಸುಸೂತ್ರವಾಗಿ ನಡೆಯುವಂತೆಯೂ ತಾವು ಫೋಟೋದಲ್ಲಿ ಒಳ್ಳೆ ಚೆಂದಾದ ಸಿನೆಮಾ ನಟಿಯ ತರಹ ಬೀಳಬೇಕೆಂದೂ ತಮ್ಮನ್ನು ತಾವೇ ಹಾರೈಸಿಕೊಂಡರು. ಅಲ್ಲಿಗೆ ಅಂದಿನ ಮೀಟಿಂಗು ಮುಕ್ತಾಯವಾಯಿತು.

ಕೊನೆಗೂ D.Day ಬಂದೇ ಬಿಟ್ಟಿತು. ಹಿರಿಯ ಅಧಿಕಾರಿಣಿ ಎಂತಹ ಸೀರೆ ಉಡುವರೆಂದು ಮಧುರಾಳನ್ನು ಕೇಳಿ ಪತ್ತೆ ಹಚ್ಚಿದೆವು. ಅವರು ತೆಳ್ಳಗಿನ - ತಮ್ಮ ಹಿಂದಿನ ಫಿಗರಾದ 36-18-36 ಎತ್ತಿ ತೋರಿಸುವಂತಹ ಶಿಫಾನ್ ಸೀರೆ ಬ್ರೈಟ್ ಕಲರ್‌ದು ಉಡುವರೆಂದು ತಿಳಿದು ನಾವೆಲ್ಲಾ ಸಾದಾ ಬಣ್ಣದ ದಪ್ಪ ಕಾಟನ್ ಸೀರೆಗಳನ್ನು ಸುತ್ತಿಕೊಂಡೆವು.

ಸುಮಾರು ಸಾಯಂಕಾಲ ನಾಲ್ಕರ ಸಮಯಕ್ಕೆ ಹಿರಿಯ ಅಧಿಕಾರಿಣಿಯ ಮನೆಯ ಮುಂದೆ ಆಫೀಸಿನ ಕಾರುಗಳು, ಜೀಪುಗಳು ಬಂದು ನಿಂತವು. (ಹಿರಿಯ ಅಧಿಕಾರಿಗಳ ಆದೇಶದಿಂದ) ದೇವಿಯವರು ಮುಂದೆ ಕಾರಿನಲ್ಲಿ ಹೋಗುವುದೆಂದೂ ಮತ್ತು ಮಿಕ್ಕ ಆಫೀಸರ ಪತ್ನಿಯರು ಹಿಂದೆ ಜೀಪಿನಲ್ಲಿ ಹೋಗುವುದೆಂದೂ ನಿರ್ಧಾರವಾಗಿತ್ತು. ಅಂತೆಯೇ ಎಲ್ಲರೂ ಜೀಪಾಸೀನರಾದೆವು. ನಾನು ಮಧುರಾ ಮತ್ತು ಔಷಧಿಯ ಕ್ರೇಟ್ - ಅವುಗಳನ್ನು ಎತ್ತಲು ಆಫೀಸ್ ಪ್ಯೂನೊಂದಿಗೆ ಹಿಂದಿನ ಜೀಪಿನಲ್ಲಿ ಕುಳಿತೆ. (ಪತಿಯರೆಲ್ಲಾ ಸಮಾರಂಭದ ಶುರುವಿನ ಹೊತ್ತಿಗೆ ಆಸ್ಪತ್ರೆಗೆ ಬರುವವರಾಗಿದ್ದರು) ರಾಜಬೀದಿಯಲ್ಲಿ ನಮ್ಮ ಮೆರವಣಿಗೆ ನಿಧಾನವಾಗಿ ಹೋಯಿತು. ಕೆಲವು ಸಾರ್ವಜನಿಕರು ಕಿಟಕಿಯಿಂದ ಇಣಕಿ ನೋಡಿದರೆ ಕೆಲವು ಮಹಿಳೆಯರು ಗೇಟಿನ ಬಳಿ ಬಂದು ನೋಡ

ಹತ್ತಿದರು. ಮಕ್ಕಳು 'ಹೋ' ಎಂದು ಕೂಗುತ್ತ ಕೆಲದೂರ ಹಿಂದೆ ಬಂದರು. ಕೆಲವು ಬೀದಿ ನಾಯಿಗಳು ಬೊಗಳುತ್ತಾ ಅಟ್ಟಿಸಿಕೊಂಡು ಬಂದವು.

ಜಿ.ಬಿ. ಆಸ್ಪತ್ರೆ ಗೇಟಿನ ಬಳಿ ಆಸ್ಪತ್ರೆಯ ಅಧಿಕಾರಿಗಳು ಮತ್ತು ಕೆಲವು ಹಿರಿಯ ಡಾಕ್ಟರ್‌ಗಳು ಸ್ವಾಗತ ಕೋರಿದರು. ನಾನು ಕೊನೆಯ ಜೀಪಿನಲ್ಲಿದ್ದರೂ ಛಂಗಂತ ನೆಗೆದು ಬೇಗ ಓಡಿ ಹೋಗಿ ಹಿರಿಯ ಅಧಿಕಾರಿಣಿಯ ಕಾರಿನ ಬಾಗಿಲು ತೆಗೆದೆ. ಕಾಂಪೌಂಡಿನಲ್ಲಿ ದೊಡ್ಡ ಶಾಮಿಯಾನ ಹಾಕಿದ್ದರು. ಸುಮಾರು 50 ಕುರ್ಚಿಗಳನ್ನು ಓರಣವಾಗಿ ಜೋಡಿಸಿದ್ದರು. ತಳಿರು ತೋರಣಗಳಿಂದ ಇಡೀ ಆಸ್ಪತ್ರೆಯೇ ಸಜ್ಜಾಗಿತ್ತೆನ್ನಬಹುದು. ಅಷ್ಟೊತ್ತಿಗೆ ಫೋಟೋ ಗ್ರಾಫರ್‌ಗಳು ಮತ್ತು ಪತ್ರಿಕೆಯವರೂ ಬಂದರು. ಅಧಿಕಾರಿಣಿಯ ಮುಖ ಸಂತೋಷದಿಂದ ಹಿಗ್ಗಿತು.

''ಡಾಕ್ಟರ್! ಈಗ ಆಸ್ಪತ್ರೆಯ ವಾರ್ಡ್‌ಗಳನ್ನು ನೋಡಬಹುದಲ್ಲವೇ!'' ಹಿರಿಯ ಅಧಿಕಾರಿಣಿಯ ಕೋರಿಕೆ. ಡಾಕ್ಟರು, ಅವರ ಹಿಂದೆ ಅಧಿಕಾರಿಣಿ ಮತ್ತು ಅವರ ಹಿಂದೆ ನಾವು 25 ಮಂದಿ ಕಿರಿಯ ಅಧಿಕಾರಿಯ ಪತ್ನಿಯರು. ಹೀಗೆ ವಾರ್ಡ್‌ಗಳನ್ನು ಸುತ್ತಲು ಹೊರಟೆವು. ದೇವಿಯವರ ಹೈ ಹೀಲ್ಡ್ ಶೂ 'ಟಕ ಟಕ' ಎಂದು ಕಾರಿಡಾರಿನಲ್ಲೆಲ್ಲಾ ಗಲಭೆ ಎಬ್ಬಿಸುತ್ತಿತ್ತು.

ಮೊದಲು ಸಿಕ್ಕಿದ್ದು ಮಕ್ಕಳ ವಾರ್ಡ್. ವಿಟಮಿನ್ 'ಎ' ಕೊರತೆಯಿಂದಾಗಿ ಕಣ್ಣಿನ ರೋಗಕ್ಕೆ ಶಿಕಾರಿಯಾಗಿದ್ದರು ಆ ಮಕ್ಕಳುಗಳು. ಡಾಕ್ಟರು ರೋಗದ ಲಕ್ಷಣಗಳನ್ನು ವಿವರಿಸತೊಡಗಿದೊಡನೆಯೇ ದೇವಿಯವರು ''Ladies! ಕಣ್ಣುಗಳನ್ನು ಭದ್ರವಾಗಿ ಮುಚ್ಚಿಕೊಳ್ಳಿ! ಮುಚ್ಚಿಕೊಂಡೇ ಈ ವಾರ್ಡ್‌ನಿಂದ ಹೊರಬನ್ನಿ. ಇದು ಒಂದು ತರಹದ ಸಾಂಕ್ರಾಮಿಕ ರೋಗ!'' ಎಂದು ತಮ್ಮ ಕಣ್ಣಿನ ಮುಂದೆ ಸುವಾಸನೆ ಭರಿತ ಕರ್ಚೀಫನ್ನು ಹಿಡಿದುಕೊಂಡು ಹೈ ಹೀಲ್ಸ್‌ನ್ನು ಟಕಟಕ ಶಬ್ದಗೊಳಿಸುತ್ತಾ ಹೊರಟೇ ಹೋದರು. ಮಂಚದ ಬಳಿಯಿದ್ದ ಮಕ್ಕಳ ತಾಯಂದಿರು ಕೈ ಮುಗಿದುಕೊಂಡು ಒಂದೆರಡು ಹೆಜ್ಜೆ ಮುಂದೆ ಬಂದವರು ಏನೂ ಅರ್ಥವಾಗದಂತೆ ಹಾಗೆಯೇ ಹಿಂದಕ್ಕೆ ಸರಿದು ತಮ್ಮ ಯಥಾಸ್ಥಾನದಲ್ಲಿ ನಿಂತರು.

ಮುಂದೆ ಸಿಕ್ಕಿದ್ದು ಬಾಣಂತಿಯರ ಕೋಣೆ. ಯಾರೋ ದೊಡ್ಡ ಮನುಷ್ಯರು ನಮ್ಮನ್ನು ನೋಡಲು ಬಂದಿದ್ದಾರೆ! ನಮ್ಮ ಮಗುವನ್ನು ಹೊಗಳಿ ಮುದ್ದಾಡಬಹುದು ಅಂತ ಆಸೆಯಿಂದ ನೋಡುತ್ತಿದ್ದ ತಾಯಿಯರಿಗೆಲ್ಲಾ ಕೇಳುವಂತೆ ''ಅಯ್ಯೋ! ಡಾಕ್ಟ್ರೆ, ನಮ್ಮಲ್ಲಿ ಮೊದಲೇ ಜನ ಜಾಸ್ತಿ. ಇನ್ನು ಈ ಮಕ್ಳು ಬೇರೆ! ಇವ್ರಿಗೇನೂ ಬೇರೆ ಕೆಲ್ಸಾನೇ ಇಲ್ವೇ! ಇವುಗಳನ್ನೆಲ್ಲಾ ಹೇಗೆ ದೊಡ್ಡದು ಮಾಡ್ತೀರೋ''! ಅಂತ ಅಂದು ತಮ್ಮ ಜೋಕಿಗೆ ತಾವೇ ಸಂತೋಷಗೊಂಡವರಂತೆ ''ಖಿಲ್'' ಎಂದು ನಕ್ಕು ಮುಂದೆ ನಡೆದು ಹೋದ್ರು. ತಾವೇನೋ ದೊಡ್ಡ ಕಾರ್ಯ ಸಾಧಿಸಿಬಿಟ್ಟಿರೋರ ತರಹ.

ಮುಂದೆ ಸಿಕ್ಕಿದ್ದು ಕಾಯಿಲೆಯಿಂದ ನರಳುತ್ತಿದ್ದ ವಯಸ್ಕರ ವಾರ್ಡ್. ಅದರ ಒಳಗಡೆ ಹೋಗುವ ಸಾಹಸಾನೂ ಮಾಡದೆ "oh doc! how I hate old people and I hate to grow old! ನೀವೆಲ್ಲಾ ಇಲ್ಲಿ ಸುಮ್ನೆ ಕೆಲಸಕ್ಕೆ ಬಾರದ job ಮಾಡೋ ಬದ್ಲು ವಯಸ್ಸಾಗೋದನ್ನ ತಡೆಯೋದು ಹೇಗೆ ಅನ್ನೋದರ ಬಗ್ಗೆ ರಿಸರ್ಚ್ ಆದ್ರೂ ಮಾಡಿ ಅಂತ ಬುದ್ಧಿವಾದ ಬೇರೆ ಹೇಳಿದ್ರು.

ಹಿರಿಯ ಡಾಕ್ಟ್ರ ಕೋಣೆಯಲ್ಲಿ ನಮಗೆಲ್ಲಾ ಟೀಗೆ ಏರ್ಪಾಡಾಗಿತ್ತು. ಸೊಗಸಾದ ಪಿಂಗಾಣಿ ಕಪ್ಪು ಸಾಸರುಗಳಲ್ಲಿ ಚಹಾ ಬಿಸ್ಕತ್ತು ಬಜ್ಜಿ, ಬೋಂಡ ಮಿಠಾಯಿಗಳ ಸರಬರಾಜಾಗಿತ್ತು. ಬೇಡ ಬೇಡಾಂತಾನೇ ಹೇಳಿ ಎಲ್ಲವನ್ನೂ ಕಬಳಿಸಿದೆವು. ನಂತರ ಶಾಮಿಯಾನಾಕ್ಕೆ ಬಂದೆವು ಅಷ್ಟು ಹೊತ್ತಿಗೆ ಆಫೀಸಿಗೆ ಮರಳಿದ್ದ ಕಾರು ಜೀಪುಗಳು ಗಂಡಂದಿರನ್ನು ಹೊತ್ತು ತಂದಿತ್ತು. ದೇವಿಯವರು ತಮ್ಮ ಪತಿಯನ್ನು ಕಂಡು ಹಿಗ್ಗಿದ್ದೂ ಹಿಗ್ಗಿದ್ದೇ!

ವೇದಿಕೆಯ ಮೇಲೆ ಹಿರಿಯ ಅಧಿಕಾರಿಣಿಯವರು ಕುಳಿತರು ಅವರೊಂದಿಗೆ ದೊಡ್ಡ ಡಾಕ್ಟರುಗಳು ಇಬ್ಬರು ಆಸೀನರಾದರು. ಸ್ವಾಗತ ಭಾಷಣ ಮತ್ತು ಹಾರಗಳೊಂದಿಗೆ ಪದ್ಮಾವತಿ ದೇವಿಯರನ್ನು ಹೊಗಳಿದ್ದಾಯಿತು. ನಂತರ ದೇವಿಯವರ ಭಾಷಣವಾಯಿತು.

''ಡಾಕ್ಟರುಗಳೇ! ನಾನು ಮೊದಲೇ ಹೇಳಿದಂತೆ ನೀವು ವಯಸ್ಸಾಗುವುದನ್ನು ತಡೆಯುವ ಬಗ್ಗೆ ರಿಸರ್ಚ್ ಮಾಡಲೇಬೇಕು. ಅದಕ್ಕೆ ಹಣ ಖರ್ಚಾಗುತ್ತದೆಂದು ಯೋಚಿಸಬೇಡಿ. ನಾನು ಶಿಫಾರಸು ಮಾಡಿ ಸರ್ಕಾರದಿಂದ ಹಣ ಸ್ಯಾಂಕ್ಷನ್ ಮಾಡಿಸುತ್ತೇನೆ. (ಇದನ್ನು ಕೇಳಿ ಹಿರಿಯ ಅಧಿಕಾರಿಗಳಾದ ಪ್ರಹ್ಲಾದರಾಯರು ಗಾಬರಿಯಿಂದ ತಮ್ಮ ಮುಖವನ್ನು ಕರ್ಚೀಫಿನಿಂದ ಉಜ್ಜಿಕೊಳ್ಳುವುದನ್ನು ಎಲ್ಲರೂ ನೋಡಬಹುದಾಗಿತ್ತು) ವೃದ್ಧಾಪ್ಯ ದಯಪಾಲಿಸಿದ್ದಕ್ಕಾಗಿ ಆ ಭಗವಂತನನ್ನು ನಾನು ಎಂದೂ ಕ್ಷಮಿಸಲಾರೆ!'' ಎಂದು ತಮ್ಮ ಇಳಿ ಬಿಟ್ಟಿದ್ದ ಉದ್ದನೆಯ ಕಪ್ಪು ಕೂದಲನ್ನು ಕೈಯಿಂದ ಸವರಿಕೊಂಡು ಎದುರು ನಿಂತಿದ್ದ ಫೋಟೋಗ್ರಾಫರ್ ಎಡೆಗೆ ಒಂದು ಕಿರುನಗೆ ಬೀರಿದರು.

''ನಾನು ನನ್ನ ಆಫೀಸಿನ ಕಿರಿಯ ಅಧಿಕಾರಿಗಳ ಪತ್ನಿಗಳನ್ನು ನಾಲ್ಕು ಬೇರೆ ಬೇರೆ ತಂಡಗಳಾಗಿ ವಿಭಾಗಿಸಿದ್ದೀನಿ. ನಾಳೆಯಿಂದ ಅವರೆಲ್ಲರೂ ಬಂದು ನಿಮಗೆ ಸಹಾಯವನ್ನು ಮಾಡುತ್ತಾರೆ. ನಾನೂ ಒಮ್ಮೊಮ್ಮೆ ಬಂದು ಸಹಾಯ ಮಾಡುತ್ತೇನೆ. ಜನ ಸೇವೆಯೇ ಜನಾರ್ಧನ ಸೇವೆ! ಇದರಿಂದ ಇನ್ನೂ ಹೆಚ್ಚು ಹೆಚ್ಚು ರೋಗಿಗಳನ್ನು ನೋಡಿ ನೀವು ಕೃತಾರ್ಥರಾಗಬಹುದು'' ಎಂದು ವೈದ್ಯರನ್ನು ಹುರಿದುಂಬಿಸಿದರು.

ಅಷ್ಟು ಹೊತ್ತಿಗೆ ಆಫೀಸ್ ಪ್ಯೂನು ಆ ಮೂರು ಕ್ರೇಟ್‌ಗಳನ್ನು ಜೀಪಿನಿಂದ ತೆಗೆದುಕೊಂಡು ಬಂದನು. ಅದನ್ನು ದೇವಿಯವರಿಗೆ ಎತ್ತಲು ಕಷ್ಟವಾದ್ದರಿಂದ ಮಧುರಾ

ಪ್ಲ್ಯಾನ ಕೈಯಿಂದ ತೆಗೆದುಕೊಂಡು ನಿಂತಳು. ಪದ್ಮಾವತಿ ದೇವಿಯವರು ಅದನ್ನು ಮುಟ್ಟುತ್ತಿದ್ದಂತೆ ಹಿರಿಯ ಡಾಕ್ಟರು ಕ್ರೇಟ್‌ಗಳನ್ನು ತೆಗೆದುಕೊಂಡರು. ಇದನ್ನು ಫೋಟೋಗ್ರಾಫರ್‌ಗಳು ಬೇರೆ ಬೇರೆ ಆ್ಯಂಗಲ್ಲುಗಳಲ್ಲಿ ಕ್ಲಿಕ್ಕಿಸಿದರು. ಅಲ್ಲಿಗೆ ಸಭೆ ಮುಗಿದಂತೆಯೇ! ಕುರ್ಚಿಯಲ್ಲಿ ಕುಳಿತಿದ್ದ off-duty ಸ್ಟಾಫ್‌ಗಳು, ಕೆಲವು ರೋಗಿಗಳು, ಕಿರಿಯ ಅಧಿಕಾರಿಗಳು, of course! ಹಿರಿಯ ಅಧಿಕಾರಿ ಮತ್ತು ನಾವು - ಜೋರಾಗಿ ಕರತಾಡನ ಮಾಡಿದೆವು. ಎಲ್ಲರೂ ನಮ್ಮನ್ನು ಗೇಟಿನ ತನಕ ಬಂದು ಬೀಳ್ಕೊಟ್ಟರು. ಹೋದ ಭಂಗಿಯಲ್ಲೇ - ಅಂದರೆ ಮೊದಲು ಪದ್ಮಾದೇವಿಯವರ ಕಾರು ನಂತರ ಕಿರಿಯ ಅಧಿಕಾರಿಗಳು ಪತ್ನಿಯರ ಜೀಪು (ಈಗ ಒಂದು ಸಣ್ಣ ಬದಲಾವಣೆಯಿತ್ತು. ಪತ್ನಿಯರ ಜೊತೆಯಲ್ಲಿ ಅವರವರ ಪತಿಯರೂ ಇದ್ದರು) ಹೀಗೆ ವಾಪಸ್ಸಾದೆವು.

ಎರಡು ದಿನಗಳ ಬಳಿಕ ಮೊದಲನೇ ಬ್ಯಾಚಿನ ಕಿರಿಯ ಅಧಿಕಾರಿಯ ಪತ್ನಿಯರ ಗುಂಪು ಆಸ್ಪತ್ರೆಗೆ ಸೋಶಿಯಲ್ ಸರ್ವಿಸ್ ಮಾಡುವ ಸಲುವಾಗಿ ಪೂರ್ಣ ಅಲಂಕಾರದೊಂದಿಗೆ ಹೊರಟರು (ಈ ದಿನ ಬಣ್ಣ ಬಣ್ಣದ ಚಿಟ್ಟೆಗಳನ್ನು ಮೀರಿಸುವ ಬಣ್ಣದ ಪೋಷಾಕಿನಲ್ಲಿದ್ದರು. ಏಕೆಂದರೆ ಅಂದು ಹಿರಿಯ ಅಧಿಕಾರಿಣಿಯ ಮುಂದೆ ಡಲ್ ಕಲರಿನ ಸೀರೆಗಳನ್ನು ಉಟ್ಟಿದ್ದರಲ್ಲ!) ಗುಂಪು ಆಸ್ಪತ್ರೆಯ ಗೇಟಿನ ಮುಂದೆ ಜೀಪಿನಿಂದ ಇಳಿಯುವುದಕ್ಕೂ, ಅಲ್ಲೇ ನಿಂತಿದ್ದ ವಾರ್ಡ್‌ಬಾಯ್ ಒಳಗಡೆ ಹೋಗಿ ಡಾಕ್ಟರಿಗೆ ಸುದ್ದಿ ಮುಟ್ಟಿಸುವುದಕ್ಕೂ ಸರಿ ಹೋಯಿತಂತೆ. ಒಡನೆಯೇ ಒಳಗಿನಿಂದ ಬಂದ ಡಾಕ್ಟರು ಗುಂಪನ್ನು ಕುರಿತು ''ತಾವುಗಳು ಇಲ್ಲಿಗೆ ಬರುವ ಕಷ್ಟ ತೆಗೆದುಕೊಳ್ಳಬೇಡಿ! ನಿಮ್ಮ ಸೋಶಿಯಲ್ ಸರ್ವಿಸ್ ಬೇರೆಲ್ಲಾದರೂ ಮಾಡಿದರೆ ಒಳಿತು. ತಾವಿಷ್ಟು ದೂರ ಬಂದಿದ್ದಕ್ಕೆ thanks!'' ಎಂದರಂತೆ. ಪಾಪ! ಪೆಚ್ಚು ಮೋರೆ ಹೊತ್ತು ಮಹಿಳೆಯರ ತಂಡ ವಾಪಸ್ಸಾಯಿತು.

ಕೆಲವು ದಿನಗಳ ನಂತರ ''ಸುದ್ದಿ ಸಂಗ್ರಹ'' ಎಂಬ ಶೀರ್ಷಿಕೆಯ ಕೆಳಗೆ ಹಿರಿಯ ಅಧಿಕಾರಿ ಶ್ರೀ ಪ್ರಹ್ಲಾದರಾಯರ ಧರ್ಮಪತ್ನಿ ಶ್ರೀಮತಿ ಪದ್ಮಾವತಿ ದೇವಿಯವರ ಜಿ.ಬಿ. ಆಸ್ಪತ್ರೆಗೆ ಭೇಟಿ ಎಂಬ write up local ಪೇಪರಿನಲ್ಲಿ ಪ್ರಕಟವಾಗಿತ್ತು. ಒಂದು ದೊಡ್ಡ ಫೋಟೋ ಬೇರೆ ಜೋರಾಗಿ ಬಂದಿತ್ತು. ಆ ಚಿತ್ರ ದೊಡ್ಡದಾಗಿ ಬಹಳ ಸುಂದರವಾಗಿತ್ತು. ಆದರೆ ದೇವಿಯವರದ್ದಲ್ಲ. ಆ ಫೋಟೋವಿನಲ್ಲಿ 32-16-32 ಫಿಗರಿನ ಮಾಲಿ ಮಗಳು ಮಧುರಾ ಮೆಡಿಸನ್ ಕ್ರೇಟ್ ಹಿಡಿದು ನಿಂತಿದ್ದಾಳೆ. ಎದುರಿಗೆ ವೈದ್ಯರು ಆ ಕ್ರೇಟಿಗಾಗಿ ಕೈ ಚಾಚುತ್ತಿದ್ದಾರೆ. ಸಿನಿಮಾ ನಟಿಯರನ್ನು ಮೀರಿಸುವ ಸುಂದರ ಭಂಗಿಯಲ್ಲಿ ಆ ಇಪ್ಪತ್ತರ ಸುಂದರ ಬಾಲೆಯನ್ನು ಫೋಟೋಗ್ರಾಫರ್ ಲೆನ್ಸುಗಳು ಸೆರೆ ಹಿಡಿದಿದ್ದುವು. ಪಾಪ! ಹಿರಿಯ ಅಧಿಕಾರಿಣಿಯ ಫೋಟೋ ಏನಾಯ್ತು ಅಂತಿರಾ! ಹೌದು! ಬಂದಿತ್ತು!

ಮೆಡಿಸನ್ ಕ್ರೇಟ್ ಹಿಡಿದ - ವಜ್ರದ ಬ್ರೇಸ್‌ಲೆಟ್ ಧರಿಸಿದ್ದ ಆ ಕೈಗಳು ಮಾತ್ರ ಬಂದಿದ್ದುವು. ಹಿರಿಯ ಅಧಿಕಾರಿಣಿ ಆ ಪೇಪರನ್ನು ತೆಗೆದು ಕೋಪದಿಂದ ಹರಿದು ತುಂಡು ತುಂಡು ಮಾಡ್ತಾಯಿದ್ರೆ, ಮಧುರಾ ಹೆದರ್ಕೊಂಡು ಅಡ್ಗೆಮನೆ ಬಾಗ್ಲು ಹಾಕ್ಕೊಂಡು ಒಳಗಡೆ ಬಚ್ಚಿಟ್ಕೊಂಡು ಕೂತ್ಕೊಂಡ್ಬಿಟ್ಟಿದ್ಲಂತೆ.

ವಿ.ಸೂ.: ಹಿಂದಿನಿಂದ ತಿಳಿದು ಬಂದಿದ್ದು

ಆ ಪೇಪರನ್ನ ಹರೀದೇನೇ ಆಲ್ಬಂ ಒಳಗೆ ಸೇರ್ಸಿ ಬಿಟ್ರಂತೆ. ಯಾಕೇಂದ್ರೆ, ಬೇರೆ ಊರಿಗೆ ಟ್ರಾನ್ಸ್‌ಫರ್ ಆಗಿ ಹಿರಿಯ ಅಧಿಕಾರಿ ಜೊತೆ ಹೋದ್ರೆ, ಆಗ ಅದನ್ನ ತಮ್ಮದೇ ಫೋಟೋ ಅಂತ ಎಲ್ಲರಿಗೆ ತೋರ್ಸ್ಕೊಂಡು ಹೊಗಳ್ಕೊಬಹುದೂಂತ.

ಅದು ನಿಜವೋ ಸುಳ್ಳೋ ಗೊತ್ತಿಲ್ಲಾನ್ನಿ!



ಕೊರವಂಜಿ ಪರಂಪರೆಯಲ್ಲಿ ಅಪರಂಜಿ



⊙ ಕೃಷ್ಣ ಸುಬ್ಬರಾವ್

ಆಕಸ್ಮಿಕಗಳು ಏನೆಲ್ಲಾ ಒಳ್ಳೆ ಕೆಲಸಗಳನ್ನು ಮಾಡಿಸುತ್ತದೆ ಎಂಬುದು ಅತ್ಯಂತ ಸೋಜಿಗದ ಸಂಗತಿ. ಹಾಸ್ಯ ಸಾಹಿತ್ಯ ವಿಪುಲವಾಗಿ ಬೆಳೆಯುವುದಕ್ಕೆ ಹಾಸ್ಯ ಚಟುವಟಿಕೆ ಇಷ್ಟೊಂದು ಹರಡಿರುವುದಕ್ಕೆ ಕೊರವಂಜಿಯನ್ನೇ ಹೊಣೆ ಮಾಡುವುದಕ್ಕೆ ಅನೇಕ ಕಾರಣಗಳಿವೆ. ಡಾ॥ ಶಿವರಾಮ್ ಸೆಂಟ್ರಲ್ ಕಾಲೇಜಿನ ಹಾಸ್ಟಲ್ ವಾರ್ಡನ್ ಆಗಿದ್ದು, ಅಲ್ಲಿ ನಾ. ಕಸ್ತೂರಿಯವರ ಮಗ ಇದ್ದದ್ದು ಒಂದು ಹಾಸ್ಯಾಂದೋಲನದ ಬೀಜ ಬಿತ್ತಿದ್ದು ಇತಿಹಾಸ. ಹಾಸ್ಯ ಮನೋವೃತ್ತಿಯಿದ್ದು ಒಬ್ಬರನೊಬ್ಬರು ಹೆಚ್ಚು ಭೇಟಿಯಾಗದೆ ''ಕೊರವಂಜಿ''ಯನ್ನು ಪ್ರಕಾಶಮಾನಕ್ಕೆ ತಂದಿದ್ದು ರಾಶಿ-ಕಸ್ತೂರಿಯವರ ತೀವ್ರ ಆಸಕ್ತಿ ತೋರಿಸುತ್ತದೆ. ಮೈಸೂರಿನಲ್ಲಿ ಕಸ್ತೂರಿ, ಬೆಂಗಳೂರಿನಲ್ಲಿ ರಾಶಿಯವರು. ಮಾಸ ಹಾಸ್ಯ ಪತ್ರಿಕೆಗೆ ಇದರಿಂದ ಯಾವುದಕ್ಕೂ ಧಕ್ಕೆಯಾಗಲಿಲ್ಲ. ಪ್ರಾರಂಭದಲ್ಲಿ ಟೀಥಿಂಗ್ ಸಮಸ್ಯೆಯನ್ನು ಬಹಳ ಸಲೀಸಾಗಿ ಸಂಬಾಳಿಸಿದರು. ಕಸ್ತೂರಿಯವರು ಎಂಟು ಹತ್ತು ಹೆಸರುಗಳಲ್ಲಿ ಬರೆದರು. ಪಾಟಾಳಿ, ರುದ್ರಮ್ಮ, ಖಾರಾಂತ, ಕಾಮತ್, ನಾ.ಕ. ಶ್ರೀಮತಿ ಕೇಸರಿ ಹೀಗೆ. ಡಾ॥ ಶಿವರಾಮ್ ಅವರು ಕುಮಾರ್, ಪ್ರಕಾಶ್ ಅಂತ ತಮ್ಮ ಮಕ್ಕಳ ಹೆಸರಿನಲ್ಲೆಲ್ಲ ಬರೆದರು. ಅನರ್ಥಕೋಶ, ಉರಿಗಾಳು, ಅತ್ಯಂತ ಜನಪ್ರಿಯ ಅಂಕಣಗಳಾದವು. ಮಾರುಕಟ್ಟೆಯಲ್ಲಿ ಕೊರವಂಜಿಯ ಬೇಡಿಕೆ ಬೆಳೆಯತೊಡಗಿತು. ಮನೆಗೆ ಪತ್ರಿಕೆ ಬರುತ್ತಿದ್ದಂತೆ ಅದನ್ನು ತಾವು ಮೊದಲು ಓದಬೇಕೆಂದು ಎಲ್ಲರ ಪೈಪೋಟಿ ನಡೆಯುತ್ತಿತ್ತು. ಕೆಲವೆ ಮನೆಗಳಲ್ಲಿ ಪುಟ ಹರಿದು ಬರುವ ಪದ್ಧತಿ ಇತ್ತು ಎಂದು ಹಳೆ ತಲೆಮಾರಿನವರು ಹೇಳಿದ್ದು ಖಂಡಿತ ಉತ್ಪ್ರೇಕ್ಷೆ ಮಾತಲ್ಲ ಎಂಬುದು ''ಕೊರವಂಜಿ'' ಜನಪ್ರಿಯತೆ ಸಾಬೀತುಪಡಿಸಿತ್ತು. ವಿಶ್ವವಿಖ್ಯಾತ ಆರ್.ಕೆ. ಲಕ್ಷ್ಮಣರ ಸೇರ್ಪಡೆ (ನಾ. ಕಸ್ತೂರಿಯವರ ಮೂಲಕ) ಕೊರವಂಜಿಯಲ್ಲಿ ರೇಖಾ ದೃಷ್ಟಾಂತಕ್ಕೆ ಒಂದು ವಿಶೇಷ ಮೆರಗು ಕೊಟ್ಟಿತ್ತು. ವ್ಯಂಗ್ಯ ಚಿತ್ರದಡಿಯಲ್ಲಿ ಬರೆದ ಮಾತುಗಳಂತೂ ಈಗಲೂ ಪ್ರಸ್ತುತ. ಎಷ್ಟೋ ವ್ಯಂಗ್ಯ ಚಿತ್ರಗಳಿಗೆ ಯಾವುದೇ ಅಕ್ಷರದ ಹಂಗು ಇಲ್ಲದೆ ಸೆಲ್ಫ್ ಸ್ಫೋಟಕರವಾಗುತ್ತಿದ್ದುದು ಸಾಮಾನ್ಯ. ಉದಾಹರಣೆಗೆ ಒಬ್ಬ ಡಾಕ್ಟರ್ ತನ್ನ ಪಲ್ಸ್ ತಾನೇ ನೋಡಿಕೊಳ್ಳುತ್ತಾ ವಾಚ್ ಮೇಲೆ ಸ್ಟೆತಾಸ್ಕೋಪ್ ಇಟ್ಟುಕೊಂಡಿರುವ ಚಿತ್ರ.

ಅನರ್ಥಕೋಶಕ್ಕೆ ಹೇಗೆ ಕೊರವಂಜಿ ಪುಟಗಳು ತೆರೆದು ನಿಂತಿತೊ ಹಾಗೆ ಅಣಕವಾಡುಗಳಿಗೆ ದಾರಿ ಮಾಡಿಕೊಟ್ಟಿತು. ಕಸ್ತೂರಿ ಹಾಕಿದ ಬುನಾದಿಯಲ್ಲಿ ಅನೇಕರು

ಬರೆಯಲು ಶುರು ಮಾಡಿದರು. ರಾಶಿಯವರಂತೂ ಕೆಣಕೋಣು ಬಾರಾ ಎಂಬ ಬೇಂದ್ರೆಯವರ ಪ್ರಸಿದ್ಧ ಹಾಡಿನ ಹೆಸರಿನಲ್ಲಿ ಅನೇಕ ಕೆಣಕುವಾಡುಗಳನ್ನು ಹೊರತಂದರು. ಮೂಲಪದ್ಯದ ಪಠ್ಯದ ಜೊತೆಗೆ ತಮ್ಮ ''ಕೆಣಕನ್ನು'' ಕೊಟ್ಟು ರಚನೆ ಹೇಗಿರಬೇಕೆಂಬುದಕ್ಕೆ ಒಂದು ಮಾರ್ಗದರ್ಶಿ ಪುಸ್ತಕ ಬರೆದರು. ಅನರ್ಥಕೋಶದ ಪ್ರಭಾವ ಆಗಿನ ಯುವ ಪೀಳಿಗೆಯ ಮೇಲೆ ಎಷ್ಟಾಯಿತೆಂದರೆ ಟೀಯಸ್ಸಾರ್ ರಾವ್ ಅನೇಕ ಪ್ರಯೋಗಗಳನ್ನು ಮಾಡಿದರು. ಉದಾ: ಬೇಕೂಪನ್-ಕೂಪನ್ ಇಲ್ಲದೆಯೇ ರೇಶನ್ ಡಿಪೋಗೆ ಹೋದವನು. ಬಿಸ್ರಾ (ಗುಡಿಬಂಡೆ ರಾಮಾಚಾರ್) ಅನೇಕ ಅಣಕು ಪದ್ಯಗಳನ್ನು ರಚಿಸಿದರು.

''ಕೊರವಂಜಿ'' ಹೆಜ್ಜೆ ಹಾಕುತ್ತಾ ಅನೇಕ ಪ್ರಯೋಗಶೀಲ ಲೇಖಕರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಳು. ಅ.ರಾ.ಸೇ., ಎಸ್.ಎನ್. ಶಿವಸ್ವಾಮಿ, ಹಾ.ರಾ., ದಾಶರಥಿ ದೀಕ್ಷಿತ್, ಎ.ಕೆ. ರಾಮಾನುಜಂ (ಅಕ್ರೂರ ಎಂಬ ಕಾವ್ಯನಾಮದಲ್ಲಿ) ಮುಂತಾದವರು ಪ್ರಮುಖರು. ಕವಿಗಳು ಮಾತ್ರ ತಮ್ಮ ಹೆಸರನ್ನು ಹೇಳುಕೊಳ್ಳಲು ಸಂಕೋಚಪಟ್ಟುಕೊಂಡೋ ಅಥವಾ ಹೆದರಿಯೋ ಕಾವ್ಯನಾಮ ಇಟ್ಟುಕೊಳ್ಳುತ್ತಿದ್ದರು. ''ಗದ್ಯನಾಮ'' ಅಂತಾ ಯಾಕೆ ಯಾರು ಕರೆಯುತ್ತಿರಲಿಲ್ಲ ಎಂಬುದು ನನಗಿನ್ನು ಸ್ಪಷ್ಟವಾಗಿಲ್ಲ. ಏಕೈಕ ಮಹಿಳಾ ಹಾಸ್ಯ ಸಾಹಿತಿ ಟಿ. ಸುನಂದಮ್ಮ ಕೊರವಂಜಿಯಲ್ಲಿ ಬೆಳೆದರು.

ಹೊಸಬರು ಬರೆಯುವುದರ ಜೊತೆಗೆ ಪ್ರಸಿದ್ಧಿಗೆ ಬಂದ ಶಿವರಾಮ ಕಾರಂತರು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಾಜರತ್ನಂ, ಶ್ರೀರಂಗ ಎಲ್ಲರೂ ಕೊರವಂಜಿಗೆ ತಮ್ಮ ಲೇಖನಗಳನ್ನು ಕಳುಹಿಸುತ್ತಿದ್ದರು. ನಾ. ಕಸ್ತೂರಿಯವರ ಪ್ರೇರಣೆಯಿಂದ, ಬಲವಂತದಿಂದ ಜಿ.ಎಸ್. ಶಿವರುದ್ರಪ್ಪನವರು ಕೂಡ ಹಾಸ್ಯ ಪದ್ಯಗಳನ್ನು ''ದಿಬ್ಬಯ್ಯ'' ಎಂಬ ಹೆಸರಿನಲ್ಲಿ ಬರೆಯುತ್ತಿದ್ದರು. ಧಾರವಾಹಿ ಕಾಲವಲ್ಲದ ಆ ಕಾಲದಲ್ಲೂ ದಾಶರಥಿ ದೀಕ್ಷಿತರ ಪಕೋಡಪ್ರಿಯ ದೇರಣ್ಣರ ಸಾಹಸಗಳು, ಶಿವಸ್ವಾಮಿಯವರ ''ಪುಂಗನೂರು ಪಾಪಯ್ಯನ'' ಅವತಾರಗಳು, ವುಡ್ ಹೌಸಿನ ಕನ್ನಡದ ರೂಪಾಂತರ ಕೇಫರ ಬರವಣಿಗೆಗಳು ಪುಂಖಾನುಪುಂಖವಾಗಿ ಓದುಗರನ್ನು ರಂಜಿಸತೊಡಗಿದವು.

ಇಪ್ಪತ್ತೈದು ವರ್ಷ ವಾನಪ್ರಸ್ಥಾಶ್ರಮಕ್ಕೆ ಹೋಗುವ ವಯಸ್ಸು ಖಂಡಿತ ಅಲ್ಲ. ಆದರೆ ದುರಾದೃಷ್ಟವಶಾತ್ ಕೊರವಂಜಿ ಕಾಡಿಗೆ ಹೋಗುವ ಸ್ಥಿತಿ ಬಂತು. ಲೇಖನಗಳ ಕೊರತೆ ಖಂಡಿತ ಇರಲಿಲ್ಲ. ಓದುಗರಂತೂ ಅಸಂಖ್ಯಾತರು. ಆದರೆ ಆರ್ಥಿಕ ಮುಗ್ಗಟ್ಟು. ಒಲ್ಲದ ಮನಸ್ಸಿನಿಂದ ರಾಶಿಯವರು ''ಕೊರವಂಜಿ''ಗೆ ಇತಿಶ್ರೀ ಹಾಡಿದರು. ಆದರೆ ರಾಶಿ ಬದುಕಿದ್ದಾಗಲೇ ''ಅಪರಂಜಿ'' ಜನನವಾಯಿತು. ಅ.ರಾ.ಸೇ. ಒತ್ತಾಸೆಗೆ ಒಪ್ಪಿಗೆ

ನೀಡಿದರು. ಆದರೆ ಕೊರವಂಜಿ ಹೆಸರಿಗೆ ಬದಲಿಗೆ ''ಅಪರಂಜಿ'' ಎಂದಿರಲಿ ಎಂದರು. ಕೊರವಂಜಿಯಿಂದ ಬೆಳೆದು ಬಂದ ಅ.ರಾ.ಸೇ, ಶಿವಸ್ವಾಮಿ, ಸುನಂದಮ್ಮ, ಹಾ.ರಾ. ಅಪರಂಜಿಯಲ್ಲೂ ಬರೆಯೋದಕ್ಕೆ ಪ್ರಾರಂಭಿಸಿದರು.

ವರುಣನ ಕೃಪೆ ಅನೇಕ ಒಳ್ಳೆ ಕೆಲಸಗಳನ್ನು ಮಾಡುತ್ತದೆ. ಹಾಗೆ ಒಂದು ದಿನ ನಾನು, ಗೆಳೆಯ ಗೋಪಾಲಕೃಷ್ಣ, ಶಿವಕುಮಾರ್ ಮನೆಯಲ್ಲಿ ಕುಳಿತಿದ್ದಾಗ ಧಾರಾಕಾರವಾದ ಮಳೆ ಬರುತ್ತಿತ್ತು. ಮಳೆ ನಿಲ್ಲುವ ಸೂಚನೆಗಳೂ ಇರಲಿಲ್ಲ ಮಾತು ಕೊರವಂಜಿ ಹಾಗೂ ಅಪರಂಜಿ ಬಗ್ಗೆ ಬಂತು. ಅಪರಂಜಿಗೆ ಹತ್ತು ವರ್ಷ ಎಂಬ ವಿಷಯ ತಿಳಿದಿದ್ದೆ ತಡ, ಒಂದು ಉತ್ಸವ ಮಾಡಬೇಕು. ಅದಕ್ಕೆ ಹಾಸ್ಯಬ್ರಹ್ಮ, ಕೈಗಾರಿಕಾ ಸಂಘದ ವೇದಿಕೆ ನೆರವೇರಿಸುವುದೆಂದು ತೀರ್ಮಾನವಾಯಿತು. ಹಾಗಾಗಿ 1994 ರಲ್ಲಿ ಭಾರತೀಯ ವಿದ್ಯಾ ಭವನದಲ್ಲಿ ಅದ್ದೂರಿಯ ''ಅಪರಂಜಿ ಉತ್ಸವ'' ರೂಪರೇಶೆ ಸಿದ್ಧವಾಯಿತು. ಬಹುಶಃ ಅಂದಿನ ಚರ್ಚೆ ಮುಂದಿನ ಹಾಸ್ಯೋತ್ಸವಕ್ಕೆ ನಾಂದಿಯಾಯಿತೇನೋ. ''ಅಪರಂಜಿ''ಗೆ ಆರ್ಥಿಕ ಶಿಸ್ತು ಹಾಗೂ ಬುನಾದಿ ಕೊಡಲು ಕೊರವಂಜಿ ಅಪರಂಜಿ ಟ್ರಸ್ಟ್ ಆಯಿತು. ಹಾಸ್ಯಬ್ರಹ್ಮ ಕೂಡ ಒಂದು ಟ್ರಸ್ಟ್ ಆಗಿ ಪರಿವರ್ತನೆಗೊಂಡು ಸದಭಿರುಚಿಯ ಹಾಸ್ಯದ ಹಡಗನ್ನು ನಡೆಸಲು ಎರಡು ಸಂಸ್ಥೆಗಳು ಮುಂದಾದವು.

ಕೊರವಂಜಿಯನ್ನು ಹೆಚ್ಚುಕಮ್ಮಿ ಓದಲು ನನಗೆ ಬಂದ ಸುಸಂದರ್ಭವೆಂದರೆ, ಕಸ್ತೂರಿಯವರ ಶತಮಾನೋತ್ಸವ ಸಮಯದಲ್ಲಿ ''ಕೊರವಂಜಿ-ಕಸ್ತೂರಿ'' ಸಂಕಲನಕ್ಕಾಗಿ ಲೇಖನಗಳನ್ನು ಆಯ್ಕೆ ಮಾಡುವುದು, ನಂತರದ ವರ್ಷದಲ್ಲಿ ಬೆಸ್ಟ್ ಆಫ್ ಕೊರವಂಜಿ, ದಾಶರಥಿ ದೀಕ್ಷಿತರ ಸಂಸ್ಮರಣೆ ಸಂದರ್ಭದಲ್ಲಿ ಕೊರವಂಜಿ ದಾಶರಥಿ ಲೇಖನಗಳನ್ನು ಓದುವ ಅವಕಾಶ, ಹೀಗೆ ಹಿಂದಿನ ಸಂಪುಟಗಳನ್ನು ಮತ್ತೆ ಮತ್ತೆ ಹಾಸ್ಯೋತ್ಸವ ತಯಾರಿಯಲ್ಲಿ ತಿರುವು ಹಾಕಿದಾಗ ಅನ್ನಿಸಿದ್ದು ಹಾಸ್ಯಕ್ಕೆ ಕೊರವಂಜಿ ಎಂತಹ ಅಡಿಪಾಯ ಹಾಕಿದ್ದು ಅನ್ನುವ ಅಂಶ. ಇತ್ತೀಚೆಗಷ್ಟೆ ಅಪರಂಜಿ 20ನೇ ಹುಟ್ಟುಹಬ್ಬ ಆಚರಿಸಿತು. ಆಗ ಅಪರಂಜಿ-ರಸರಂಜಿ ಎಂಬ ಪುಸ್ತಕ ಹೊರಬಂತು. ಕೊರವಂಜಿ - ಅಪರಂಜಿ ನಡುವೆ ಇರುವ ಸಾಮಾನ್ಯ ಗುಣಗಳು ಹಾಗೂ ವ್ಯತ್ಯಾಸಗಳನ್ನು ಕುರಿತು ಒಂದು ಲೇಖನ ಏಕೆ ನೀನು ಬರೆಯಬಾರದು ಎಂದು ಅಪರಂಜಿ ಶಿವು ನನಗೆ ಹೇಳಿದರು. ಅದು ಒಂದು ಸವಾಲು ಅನ್ನೋದಕ್ಕಿಂತ ಅವರು ನನ್ನ ಮೇಲೆ ಇಟ್ಟ ವಿಶ್ವಾಸಕ್ಕೆ ಒಂದು ಆಹ್ವಾನ ಅನ್ನಿಸಿತು. ತಕ್ಷಣ ಒಪ್ಪಿಕೊಂಡೆ. ಅಪರಂಜಿಯು ತನ್ನ ತಾಯಿಯ ಸೀರೆಯ ಅಂಚನ್ನು ಹಿಡಿದುಕೊಂಡೆ ತನ್ನದೇ ಆದ ರೂಪವನ್ನು ಪಡೆಯುತ್ತಾ ಹೋಯಿತು. ಎಂ.ಎಸ್.ಕೆ. ಪ್ರಭು, ಶೀನೂ, ಎಚ್. ಗೋಪಾಲಕೃಷ್ಣ ಮುಂತಾದವರು ಹೊಸ ಮಾದರಿಯ ಬರವಣಿಗೆ ಬರೆಯುತ್ತಾ ಬಂದರು. ಡಾ|| ಓಂಪ್ರಕಾಶ್ ರವರ ''ಕಿಡಿಗಳು'' ಆಕರ್ಷಕ ಅಂಕಣವಾಯಿತು. ಹಳೆಯ ಕೊರವಂಜಿ ಲೇಖನಗಳು

ಒಮ್ಮೊಮ್ಮೆ ಅಪರಂಜಿ ಪುಟದಲ್ಲಿ ಕಾಣಿಸತೊಡಗಿತು. ಸಂಪಾದಕರು ಓದುಗರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಪ್ರಾರಂಭಿಸಿದರು. ಆಗಾಗ್ಗೆ ಅಂದರೆ ಯಾವಾಗಾದರೂ ಸುದ್ದಿ ಅಂತ ಇರಲೇಬೇಕೆಂದಾಗ ಪ್ರಚಲಿತ ವಿದ್ಯಾಮಾನಗಳ ಬಗ್ಗೆ ನಾನು ಮತ್ತು ಬೇಲೂರು ರಾಮಮೂರ್ತಿ ಸುದ್ದಿ ಸ್ವಾರಸ್ಯವೆಂಬ ವಿಡಂಬನೆಗೂ ಕೈ ಹಾಕಬೇಕಾಯಿತು. ಅನೇಕ ಹೊಸ ವ್ಯಂಗ್ಯ ಚಿತ್ರಕಾರರು ಕೆಲವು ಅತ್ಯುತ್ತಮ ಚಿತ್ರಗಳನ್ನು ಬರೆಯುತ್ತಾ ಹೋದರು. ಇಂಟರ್‌ನೆಟ್‌ನಿಂದ ಅನೇಕ ವ್ಯಂಗ್ಯಚಿತ್ರಗಳು ಬಂತು. ಅದಕ್ಕೆ ಒಳ್ಳೆ ಶೀರ್ಷಿಕೆಗಳು ಬಂತು. ಇತ್ತೀಚಿನ ಲೇಖಕರ ''ಅಣಕುವಾಡುಗಳು'' ಹರಿದು ಬಂದವು. ಕೊರವಂಜಿಯಲ್ಲಿ ಇದ್ದ ಲೇಖಕಿಯರ ಕೊರತೆ ಅಪರಂಜಿಯಲ್ಲಿ ಮಾಯವಾಯಿತು. ಭುವನೇಶ್ವರಿ ಹೆಗಡೆ, ಕಮಲಾ ರಾಮಸ್ವಾಮಿ, ಲೀಲಾ ಮಿರ್ಲೆ, ಕುಮುದಾ ಪುರುಷೋತ್ತಮ್, ಶೋಭಾ ಪ್ರಮೋದ್, ಸತ್ಯವತಿ, ವಿಜಯ ಸಚ್ಚಿದಾನಂದ ಹೀಗೆ ಅನೇಕರು ಹಾಸ್ಯ ಲೇಖನದ ಹೊಳೆಯನ್ನು ಹರಿಸುತ್ತಿದ್ದಾರೆ.

''ಅಪರಂಜಿ''ಗೆ ಒಂದು ಜಬರದಸ್ತಾದ ಬಳಗವಿದೆ. ಒಮೇಗ ಲೇಸರ್ ಟೆಕ್‌ನ ರವಿ ಹಾಗೂ ಆಚಾರ್ ಮತ್ತು ಮುದ್ರಣದ ಜವಾಬ್ದಾರಿ ಹೊತ್ತ ವಿ.ಆರ್. ನಾಥ್, ಡಿ.ಟಿ.ಪಿ. ಮಾಡುವ ಶ್ರೀಮತಿ ವಸಂತ ಹೀಗೆ ಹತ್ತಾರು ಉತ್ಸಾಹಿ ತಜ್ಞರ ಬೆಂಬಲವಿದೆ. ಜಾಹಿರಾತುದಾರರು ಹಾಸ್ಯ ಸಾಹಿತ್ಯಕ್ಕೆ ತಮ್ಮದೇ ಆದ ಕಾಣಿಕೆ ಕೊಡುತ್ತಾ ಬಂದಿದ್ದಾರೆ. ಅಪರಂಜಿಯ ಅಂತರಂಗದ ಸೌಂದರ್ಯದಂತೆ ಬಹಿರಂಗದ (ಕವರ್ ಪೇಜ್) ಆಕರ್ಷಣೆಯೂ ಇದೆ. ಅದಕ್ಕೆ ಅತ್ಯುತ್ತಮ ಸಾಕ್ಷಿಯಾಗಿ ''ಅಪರಂಜಿ-ರಸರಂಜಿ'' ಹೊದಿಕೆ ನಿಂತಿದೆ. ಪೆಪ್ಪರ್‌ಮೆಂಟ್, ಚಾಕಲೇಟ್, ಜೆಮ್ಸ್ ಮಕ್ಕಳಿಂದ ಮುದುಕರವರೆಗೂ ಇಷ್ಟ. ಆದಷ್ಟು ಹೊತ್ತು ಚಪ್ಪರಿಸುವಂತ ವಸ್ತುಗಳವು. ಬರವಣಿಗೆಯಲ್ಲೂ ಅದು ಮುಖ್ಯ ಎಂಬ ಸಾಂಕೇತಿಕ ಅಂಶವಿದೆ.

ಅಪರಂಜಿಯಲ್ಲಿ ಪ್ರಯೋಗಕ್ಕೆ ಯಾವಾಗಲೂ ಸ್ಥಾನವಿದೆ. ಹೊಸ ಹೊಸ ಕಾಲಂಗಳು ಬರುತ್ತಿವೆ. ಇತ್ತೀಚೆಗೆ ಶ್ರೀನಿವಾಸ ವೈದ್ಯ ತಾವು ಮೆಚ್ಚಿದ ಲೇಖನ ಆಯ್ಕೆ ಮಾಡಿ ಮಾದರಿ ಲೇಖನಗಳನ್ನು ಮೆಲಕು ಹಾಕುತ್ತಿದ್ದಾರೆ. ಹಾಗೆ ರಾಶಿಯವರ ಬಗ್ಗೆ ಓಂಪ್ರಕಾಶ್ ಒಳ್ಳೆಯ ''ನಾಸ್ಟಲ್ಜಿಯ'' ಪ್ರಾರಂಭ ಮಾಡಿದ್ದಾರೆ. ''ಹಳೇ ಬೇರು - ಹೊಸ ಚಿಗುರು'' ಎಂಬುದು ಕ್ಲಿಷೆ ಇರಬಹುದು. ಆದರೆ ಕೆಲವು ಜೋಡಿ ಪದಗಳು ಬಳಕೆಯಿಂದ ಅರ್ಥ ಕಳೆದುಕೊಳ್ಳುವುದಿಲ್ಲ. ಅಪ್ಪ - ಅಮ್ಮ ಎಂದು ಕರೆಯುವುದರಲ್ಲಿ ಪ್ರತಿ ಬಾರಿಯೂ ಹೊಸ ಉತ್ಸಾಹ ಇರುತ್ತದೆ. ಹಾಗೆ ಅಮ್ಮ-ಮಗಳ ಸಂಬಂಧ. ಕೊರವಂಜಿ - ಅಪರಂಜಿ ಒಂದು ಅಂತಹ ಅವಿಭಾಜ್ಯ ಸಂಬಂಧ. ಇನ್ನಷ್ಟು ಹೊಸ ಆಯಾಮಗಳು ಬರಲಿ ಅಪರಂಜಿ ಮೂಲಕ. ಕೊರವಂಜಿಯನ್ನು ಕರೆಸಿಕೊಂಡಂತಹ ಕಾಡುಗಳೆಲ್ಲಾ ನಾಶವಾಗಲಿ! ''ಅಪರಂಜಿ'' ಬಹಳ ಕಾಲ ನಾಡಿನಲ್ಲೇ ಉಳಿಯಲಿ, ಬೆಳೆಯಲಿ ನಾಡು - ನುಡಿಯ ಏಳಿಗೆಗೆ ದುಡಿಯಲು ಹೆಚ್ಚು ಶಕ್ತಿಯುತವಾಗಲಿ.



“.... ದರೋಡೆ!”

⊙ ನೀರಗುಂದ ಕೇಶವಮೂರ್ತಿ ರಾವ್

“ಬೆಳಗ್ಗೆ ಎಂದಿನಂತೆ ವಾಕಿಂಗ್ ಮುಗಿಸಿ ಮನೆಯನ್ನು ತಲುಪಿದಾಗ ‘ಬಾಗೂರು ಸಂಜೆ’ ದೈನಿಕ ದಿನಪತ್ರಿಕೆ ಗಾಳಿಗೆ ಹಾರಿ ಹೋಗದೇ ಮುಂಬಾಗಿಲಿನಲ್ಲೇ ಬಿದ್ದಿತ್ತು!

ಪತ್ರಿಕೆಯನ್ನು ಎತ್ತಿಕೊಂಡು ಕಣ್ಣಾಡಿಸಿದಾಗ “... ರಾಯರ ಮನೆಯಲ್ಲಿ ನಗ ನಾಣ್ಯಗಳ ದರೋಡೆ” ಎಂಬ ಸುದ್ದಿ ಮುಖಪುಟದಲ್ಲಿ ದಪ್ಪಕ್ಷರಗಳಿಂದ ಅಚ್ಚಾಗಿತ್ತು. ಈ ಸುದ್ದಿ ಪೂರ್ತಿ ಓದುವ ಮುನ್ನವೇ ನನ್ನ ಮನಸ್ಸು ಗೊಂದಲಕ್ಕೊಳಗಾಯ್ತು. “ಅಲ್ಲ, ಬಾಗೂರ್ನಲ್ಲಿ ರಂಗರಾಯ (ಶಾಸನದ), ಸಿಂಗರಾಯ (ಸಾಹಿತಿ) ಮತ್ತು ಬಾಜೀರಾಯ (ಬುರುಡೆ) ಈ ರಾಯರುಗಳಲ್ಲಿ ಯಾವ ರಾಯನ ಮನೆಯಲ್ಲಿ ದರೋಡೆಯಾಗಿರಬಹುದು?” ಎಂದು ಎಷ್ಟು ಊಹಿಸಿದರೂ ಪ್ರಯೋಜನವಾಗಲಿಲ್ಲ. ಬಿಸಿ ಬಿಸಿ ಕಾಫಿ ಕುಡಿದು ಮತ್ತೊಮ್ಮೆ ಪತ್ರಿಕೆ ತಿರುಗಿ ಹಾಕಿದೆ. ಎಲ್ಲ ಮಾಮುಲಿ ಸುದ್ದಿಗಳೇ! ಬಹಳಷ್ಟು ದರೋಡೆ, ಖೂನಿ, ಆತ್ಮಹತ್ಯೆ ಇಂತಹ ಪ್ರಕರಣಗಳಿಗೆ ಸಂಬಂಧಿಸಿದವುಗಳೇ ಜಾಸ್ತಿ.

ಮಧ್ಯಾನ್ನವಾದರೂ ರಾಯರ ಮನೆಯ ದರೋಡೆ ವಿಷಯ ತಿಳಿದು ಬರಲಿಲ್ಲ. ಫೋನಾಯಿಸೋಣವೆಂದರೆ ಎಲ್ಲರೂ ಮೈಮೇಲೆ ಬೀಳುವ ಮಹರಾಯರೆ! “ನಿನಗೇಕಯ್ಯ ನಮ್ಮನೇಲಿ ದರೋಡೆ ಆದ್ರೆ, ನಿಂಗೆ ಖುಷಿನಾ ಅಂದ್ಬಿಟ್ರೆ” ಹೇಗೂ ಸಂಜೆ ಹೊತ್ಗೆ ಗೊತ್ತಾಗುತ್ತೆ ಅಂದ್ಕೊಂಡು ಮಾಮೂಲು ದಿನಚರಿಗೆ ತೊಡಗಿದೆ.

ಮಧ್ಯಾಹ್ನ ಊಟ - ನಿದ್ದೆ ಮುಗಿಸಿ, ಕಾಫಿ ಕುಡಿದು ಸಂಜೆ ಗರುಡಗಂಬದ ಕಟ್ಟೆಗೆ ಹರಟೆ ಹೊಡೆಯಲು ಬಂದಾಗ ಎಂದಿನಂತೆ ಪತ್ತೇದಾರ ಪರಮ ಶಿವ ಚಕ್ಕಲು ಮಕ್ಕಲು ಹಾಕಿ ಕುಳಿತಿದ್ದ. ನಾನೂ ಸಹ ಕಟ್ಟೆ ಮೇಲೆ ಕುಂಡೀ ಊರಿದ್ದೇ ತಡ ಪತ್ತೇದಾರ ಪರಮಶಿವ “ರಾಯರ ಮನೆ ದರೋಡೆ ಸುದ್ದಿ ಓದಿರ್ಬಹುದು. ಆದ್ರೆ ಊರಿನ ಜನಕ್ಕೆ ಯಾರೂಂತ ಸರಿಯಾಗಿ ತಿಳಿದೇ ಇಲ್ಲ. ಈ ಪೇಪರ್ನೋರೆ ಹೀಗೆ ಪೂರ್ತಿ ಮಾಹಿತಿ ಕೊಡದೆ ರೋಚಕವಾಗಿ ಬರೆದು ಓದುಗರನ್ನ ಕೆರಳ್ಸ್ತಾರೆ” ಅಂದ.

“ಇರೋ ಮೂರ್ಜನ ರಾಯ್ರಲ್ಲಿ ದರೋಡೆ ಆದ ರಾಯ್ರ ಮನೆ ಯಾವ್ದೂಂತ ಇನ್ನೂ ನನಗೆ ಗೊತ್ತಾಗಿಲ್ಲ” ಅಂದೆ.

ಆಗ ಸ.ಸ. ''ನಾನು ಸುಮ್ನೆ ಇಲ್ಲ ಸ್ವಾಮಿ. ಬೆಳಗ್ನಿಂದ ನನ್ನ ತುಬ್ಬುಗಾರಿಕೆ ನಡೆಸಿ ಸಾಕಷ್ಟು ವಿಷಯ ತಿಳಕಂಡ್ ಬಂದಿದ್ದೀನಿ'' ಎಂದು ಅದನ್ನು ಕೊರೆಯಲು ಸುರುಮಾಡಿದ.

ಪತ್ತೆದಾರ ಪರಮಶಿವನ ಸಾಹಸ!

'ಬಾಗೂರಿನ ಸಂಜೆ' ದೈನಿಕ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ತಿಳಿದೊಡನೆ ಪರಮಶಿವ ದೂರವಾಣಿಯ ಮೂಲಕ ಮೂವರು ರಾಯರನ್ನು ಸಂಪರ್ಕಿಸೋಣವೆಂದು ಮೊದಲಿಗೆ ಶಾಸನದ ಶ್ರೀರಂಗರಾಯರನ್ನು ದೂರವಾಣಿಯಲ್ಲಿ ಮಾತನಾಡಿಸಿದನಂತೆ. ಶಾ.ಶ್ರೀ. ರಾಯರಿಂದ ಬಂದ ಸಾಂತ್ವನದ ಉತ್ತರ. ''ಅಲ್ಲೋ, ಶಿವಣ್ಣ ನಮ್ಮನೀಲೇನೂ ಕಳವಿಲ್ಲವಪ್ಪ. ತುಡುಗ್ ಮಾಡ್ಲಿಕ್ಕೆ ಬಂದ್ರು ಅವ್ನಿಗೆ ಇಲ್ಲಿ ಏನ್ ಸಿಕ್ಕೈತೆ? ಮಡಕೆ ಚೂರು, ಬಳಪದ ಕಲ್ಲು, ಮನೀಮುಂದೆ ಇರೋ ಶಾಸನದ ಕಲ್ಲು. ಇಂಥವೇ ನನ್ನ ಆಸ್ತಿ. ಅಡ ಇಡಹಂಗಿಲ್ಲ. ಕಡಕೊಡೋ ಹಂಗಿಲ್ಲ....'' ಅಂದ್ರು. ನಂತರ ಬಿ3ಗೆ (ಬಾಗೂರಿನ ಬುರುಡೆ ಬಾಜೀರಾಯ) ಫೋನ್ ಮಾಡಿ ದರೋಡೆ ಬಗ್ಗೆ ಕೇಳುವ ಮೊದಲೇ ''ಹೌದು, ನಾನೇ. ಬಾ.ಬು.ಬಾ., ಯಾವ ಕಳ್ನನ್ಮಂಗೆ ಅಷ್ಟು ಧೈರ್ಯ ಇದೆ ಈ ಬಾಗುರ್ನಲ್ಲಿ? ನನ್ಮನೆಗೆ ಕನ್ನ ಹಾಕಿ ದರೋಡೆ ಮಾಡೋ ತಾಖತ್ತು ಯಾರ್ಗೂ ಇಲ್ಲ. ಅಕಸ್ಮಾತ್ ಆಯ್ತೂಂತ ಇಟ್ಕಳಿ. ಇದ್ರಲ್ಲಿ ತಲೆ ತೂರ್ಸೊ ಹಕ್ಕು ನಿಮ್ಗೇನಿದೆ? ಒಂದ್ವೇಳೆ ಇದ್ರೂ...'' ಮಾತು ಮುಕ್ತಾಯವಾಗುವ ಸೂಚನೆ ಕಂಡು ಬರಲಿಲ್ಲ. ಸುಮ್ನಿರಲಾರ್ದೆ ಇರುವೆ ಬಿಟ್ಕಂಡ ಹಾಗೆ ಆಯ್ತೂಂತ ಪತ್ತೇದಾರ ಪರಮಶಿವ ತಾನೇ ಮುಂದಾಗಿ ಫೋನ್ ತುಂಡರಿಸಿದನಂತೆ!

ದರೋಡೆ ನಡೆದಿರುವುದು ಸಾಹಿತಿ ಸಿಂಗರಾಯರ ಮನೆಯಲ್ಲೇ ಎಂದು ಪತ್ತೇದಾರರಿಗೆ ಈಗ ಖಚಿತವಾಯ್ತು!

ಸಾಹಿತಿ ಸಿಂಗರಾಯರ ಮನೆಗೆ ದೂರವಾಣಿ ಕರೆ ಮಾಡಿದಾಗ ಸ್ವಯಂ ಸಿಂಗರಾಯರೇ ರಿಸೀವರ್ ತೆಗೆದುಕೊಂಡರು. ''ಸಾರ್, ಸುದ್ದಿ ಓದಿ ಮನಸ್ಸಿಗೆ ತುಂಬಾ ಬೇಜಾರಾಯ್ತು'' ಎಂದಾಗ ಸಾಹಿತಿಗಳು ಶಾಂತ ಚಿತ್ತರಾಗಿ ''ಪರಮಶಿವಣ್ಣ, ಯಾಕಪ್ಪ ಬೇಜಾರಾಗಿದ್ದಿ. ನನಗೆ ಏನೂ ಆಗಿಲ್ಲ. ಪೇಪರ್ ಸುದ್ದಿ! ಏನೋ ಬರೆದಿದ್ದಾರೆ. ಅದು ಏನೋ ಆಗಿದೆ! ಪುರುಸೊತ್ತು ಇದ್ರೆ ಈ ಕಡೆ ಬನ್ನಿ. ಇದರ ಬಗ್ಗೆ ಮಾತಾಡೋಣ'' ಎಂದ್ರು.

ಪತ್ತೆದಾರ ಪರಮಶಿವ ಸಾಹಿತಿ ಸಿಂಗರಾಯರಿದ್ದ ಬಾಗೂರಿನ ಹೊರ ವಲಯದ ತೋಪಿನ ಮನೆಗೆ ಇಗ್ಗಾಲಿನಲ್ಲೇ ನಡೆದು ಮುಖಾಮುಖಿ ಭೇಟಿಯಾದ!

ಸಾಹಿತಿ ಸಿಂಗರಾಯರು ಪತ್ತೇದಾರರನ್ನು ಸ್ವಾಗತಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ, ಉಷ್ಣೋದಕದಿಂದ ಸತ್ಕರಿಸಿದರು. ಅದು ಇದು ಇಪ್ಪತ್ತೆಂಟು ಮಾತುಗಳ ನಡುವೆ ರಾಯರ

ಮನೆಯ ''... ದರೋಡೆ''ಯ ಮುಖ್ಯ ವಿಷಯ ಪ್ರಸ್ತಾಪಕ್ಕೆ ಬಂತು. ''ಓಹೋ ಆ ವಿಚಾರನಾ!'' ಸಾಹಿತಿಗಳು ನಿರ್ಲಕ್ಷದಿಂದ ''ನಿಜವಾಗಿ ನಡೆದಿರೋದನ್ನು ಹೇಳ್ತೀನೆ ಕೇಳಿ'' ಎಂದರು.

ಸಾಹಿತಿ ಸಿಂಗರಾಯರ ಉವಾಚ:

ನೋಡಿ ಬಾಗೂರ್ನಲ್ಲಾಗೋ ಕಳ್ತನ, ದರೋಡೆ ಇವೆಲ್ಲಾ ಸರ್ವೆ ಸಾಮಾನ್ಯ. ಒಂದ್ಕಾಲಕ್ಕೆ ನಮ್ಮೂರ ನಾಡಿಗರ ತೋಟ್ದಲ್ಲಿ ರಾತ್ರಿ ತೆಂಗಿನಕಾಯಿ ಕಳ್ತನ ಆದ್ರೆ, ಬೆಳಗ್ಗೆ ಮಾಮೂಲಿ ವ್ಯಕ್ತಿ(?) ನಾಡಿಗರ ಮನೆ ಮುಂದೆ ಬಂದು ''ನಾಡಿಗ್ರೆ ನಿಮ್ತೋಟ್ದಾಗೆ ಕಾಯಿ ಕಳ್ವಾದ್ವಂತೆ. ಯಾವ್ನನ್ಮಗ ತುಡುಗು ಮಾಡ್ವನೊ ಒಂದ್ಕಿತ ನಮಗೆ ಸಿಕ್ಲಿ, ಕಾಲ್ಮುರ್ದು ಕೈಗೆ ಕೊಡ್ಲಿಲ್ಲಾಂದ್ರೆ, ನಾ ಅಪ್ಪುಟ್ಟದೋನಲ್ಲ ಎಂದು ಹೇಳ್ತಿದ್ರೂ, ಸಹ ನಗೆಗಾರ ನಾಡಿಗರಿಗೆ ಈ ಆಸಾಮಿನೇ ಕಾಯ್ಗಳ್ಳಾಂತ ಗೊತ್ತಿದ್ರು ಸಹ ಏನೂ ಮಾಡೋ ಹಂಗಿರಲಿಲ್ಲ. ಪೋಲೀಸ್ ಕಂಪ್ಲೇಂಟ್ ಕೊಡಾಣಾಂದ್ರೆ, ಪಕ್ಕದ್ಮನೆ ದಫೇದಾರರ ಮನೆಯಲ್ಲಿ ನಾಡಿಗರಿಗೆ ಸೊಗಸಾದ ಕಾಯಿ ಚಟ್ನಿ ದೋಸೆ ಉಪಹಾರ! ಚಟ್ನಿ ಬಾಯಿಗ್ಟಟ್ರೆ ತಮ್ಮ ತೆಂಗಿನ ತೋಟದ ಕಾಯ್ದೆ ರುಚಿ! ಹೊಸ್ದಾಗಿ ಬಂದ ದಫೇದಾರ್ರಿಗೆ ನಮ್ಮೂರ್ನಲ್ಲಿ ತೆಂಗಿನ ತೋಟ ಎಲ್ಬರ್ಬೇಕು? ನಾಡಿಗರು ಬಾಯ್ಚಪ್ಪರಿಸಿದಾಗ, ದಫೇದಾರ್ರು ''ಆದೇ ನಮ್ಮ ಪ್ಯಾದೆ ಪಾಪಣ್ಣ ತೆಂಗಿನ ಕಾಯಿ ಕೊಟ್ಟಿದ್ದ ಅದರದ್ದೆ ಚಟ್ನಿ!'' ಎಂದ್ರು. ಸಿಂಗರಾಯರು ನಮ್ಮೂರಿನ 'ಕಳ್ಳ-ಪೊಲೀಸ್' ಆಟದ ಕತೆಯನ್ನು ಪತ್ತೇದಾರರಿಗೆ ಹೇಳಿದರು. ಈ ಸಂಗತಿಗಳೆಲ್ಲ ಪತ್ತೇದಾರರು ಬಲ್ಲವರು. ಆದರೆ ಅವರ ನೂರೆಂಟು ಸಾಹಸಗಳ ಮಧ್ಯೆ ಊರಿನ ಸಮಸ್ಯೆಗಳಿಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ!

ಸಾ.ಸಿಂ. ರಾಯರು ''ನೋಡಿ ನಮ್ಮನೆ ದರೋಡೆ ಸಂಗ್ತಿ ಆಮೇಲೆ ಹೇಳ್ತಿನಿ. ಇನ್ನೊಂದು ಸ್ವಾರಸ್ಯಪ್ರಸಂಗ ಕೇಳಿ. ಸಾವ್ಕಾರ ಸಿದ್ಧಪ್ಪನ ಮನೆ ನೋಡಿದ್ದೀರಲ್ಲ ನೀವು. ಮಿನಿ ವಿದಾನಸೌಧ! ಆದ್ರೆ ಹತ್ತೊಂಬತ್ನೂರ... ರಲ್ಲಿ ತಡಿಕೆ ಮನೇಲಿದ್ದೋನು. ಒಂದ್ರಾತ್ರಿ ದರೋಡೆ ಗುಂಪು ಬಂದು ಅವ್ನ ಮನೇಲಿ ದರೋಡೆ ಮಾಡ್ಹೋದ್ರೂಂತ ಊರ್ನಲ್ಲಿ ಸುದ್ದಿ! ಅವ್ನ ಹತ್ರ ಏನಿತ್ತೋ ದರೋಡೆ ಮಾಡಲಿಕ್ಕೆ. ಊರ್ನೋರೆಲ್ಲಾ ''ಸನ್ಯಾಸಿ ಹತ್ರ ಪುಡಗೋಸಿ ಕಿತ್ಕಂಡಂಗಾತು'' ಅಂತಾ ಮಾತಾಡಿದ್ರು. ಆಮೇಲಿನ ಕತೆಯೇ ಬೇರೆ! ಸಿದ್ಧಪ್ಪನ ತಡ್ಕೆ ಮನೆ ಹೆಂಡೆ ಮನೆ ಮಾಡ್ದ. ಹಂಚಿನ ಮನೆ ಮಾಡ್ದ. ತಾರಸಿ ಮನೆ... ತೋಟ, ಗದ್ದೆ.... ಮಿನಿ ವಿಧಾನಸೌಧ! ದರೋಡೆ ಗುಂಪು ತಾವು ಕದ್ದ ನಗನಾಣ್ಯ ಎಲ್ಲ ಸಿದ್ಧಪ್ಪನ ತಡಿಕೆಲಿ ಬಿಟ್ಹೋಗಿದ್ರಂತೆ! ಇದು ಸಾವ್ಕಾರ ಸಿದ್ದಪ್ಪನ ಕಥೆ, ಇಂಥ ದಟ್ಟ ದಾರಿದ್ರ ಕಂಡಾಗ ಸಂಸ್ಕೃತ ಸೂಕ್ತ ನೆನಪಿಗೆ ಬರುತ್ತದೆ -

''ಆ ಅರಿವೆಯನು ನೀಡು, ಇಲ್ಲದಿರೆ ಕಂದನನು

ಕರೆದುಕೋ ನಿನ್ನ ತೊಡೆಗೆ''

''ಬರಿಯ ನೆಲ ಇತ್ತಕಡೆ; ನಾಥ, ಹೊಟ್ಟಿನ ರಾಶಿ

ಇಹುದಲ್ಲಿ ನಿನ್ನ ಕೆಳಗೆ''

- ಇರುಳಿನಲಿ ದಂಪತಿಗಳಿಂತು ಮಾತಾಡುತಿರೆ,

ಒಳಗೆ ನುಗ್ಗಿದ ಕಳ್ಳನು

ಇನ್ನೆಲ್ಲೂ ದೊರೆತ ದಟ್ಟವನವರ ಮೇಲೆಸೆದು

ಅಳುತ ಹೊರಗಡೆ ನಡೆದನು (ಬಿಡಿ ಮುತ್ತು: ತೀ.ನಂ.ಶ್ರೀ)

ವಾಸಃ ಬಂಡಮಿದಂ ಪ್ರಯಚ್ಛಯದಿವಾ ಸ್ವಾಂಕೇಗ್ರಹಾಣಾರ್ಭಕಂ ರಿಕ್ತ ಭೂತಲ ಮತ್ರ ನಾಥಭವತಃ ಪೃಷ್ಠೇ ಪಲಾಲೋಚ್ಛಯಃ।

ದಂಪತ್ಯೋರಿತಿ ಜಲ್ಪತಂ ನಿಶಿಯದಾ ಚೌರಃ ಪ್ರವಿಷ್ಟಸ್ತದಾ ಲಬ್ಧಂಕರ್ಪಟ ಮನ್ಯತಸ್ತದು ಪರಿಕ್ಷಿಪ್ತ್ವಾದುದನ್ ನಿರ್ಗತಃ।

ಈ ಸುಭಾಷಿತ ನಮ್ಮಂತಹವರಿಗೂ ಅನ್ವಯಿಸುತ್ತದೆ. ಪತ್ತೇದಾರ ಪರಮ ಶಿವನ ಕಣ್ಣು ಗೋಡೆಯ ಮೇಲಿದ್ದ ಗಡಿಯಾರದತ್ತ ಹಾಯ್ದಾಗ, ಸಿಂಗರಾಯರು ನಮ್ಮನೆ... ದರೋಡೆ ಸುದ್ದಿನೂ ಇದೇ ತರಹ. ಆದರೆ ಪತ್ರಿಕೆಯಲ್ಲಿ ''ರಾಯರ ಮನೆಯಲ್ಲಿ ನಗನಾಣ್ಯಗಳ ದರೋಡೆ'' ಎಂದು ಹೆಡ್‌ಲೈನ್ ನ್ಯೂಸ್ ಅಚ್ಚಾಗಿದೆ! ಮುದ್ರಾರಾಕ್ಷಸನ ಹಾವಳಿಯಿಂದ ಎಂತಹ ಪ್ರಮಾದ, ಸ್ವಾರಸ್ಯ ವುಂಟಾಗುತ್ತದೆಂದು ಬಲ್ಲಿರಾ? ನನ್ನ ಸಂಗತಿ ನಿಮಗೆಲ್ಲೊತ್ತಿದ್ದೆ. 4-5 ವರ್ಷಗಳ ಹಿಂದೆ ಕಷ್ಟಪಟ್ಟು ನನ್ನ ಹಾಸ್ಯ ಲೇಖನಗಳ ಸಂಗ್ರಹ ''ನಗೆನಾಣ್ಯ'' ಸ್ವಂತ ಖರ್ಚಿನಲ್ಲಿ ಪ್ರಕಟಿಸಿದ್ದೆ. ಹಾಗೂ - ಹೀಗೂ ಕಾಂಪ್ಲಿಮೆಂಟ್ರಿ ಪ್ರತಿಕೊಟ್ರೂ, ಅಲ್ಲೊಂದು ಇಲ್ಲೊಂದು ಮಾರಾಟವಾದ್ರೂ, ಬಹಳಷ್ಟು ಪ್ರತಿಗಳನ್ನು ಮನೆಯ ಸಜ್ಜೆಯಲ್ಲಿ ಬಾಕ್ಸ್‌ನಲ್ಲಿ ಅಚ್ಚುಕಟ್ಟಾಗಿ ಜೋಡಿಸಿದ್ದೆ. ಕಳೆದ ವಾರ ನೆಂಟರ ಮನೆಯ ಮದುವೆಗಾಗಿ ಬೆಂಗ್ಳೂರ್ಗೆ ಹೋಗಿ ಬರುವ ಹೊತ್ತಿಗೆ ''ರಾಯರ ಮನೆಯಲ್ಲಿ ನಗನಾಣ್ಯ ದರೋಡೆ'' ಸುದ್ದಿ ಬಾಗೂರ್ನ ಸಂಜೆ ಪತ್ರಿಕೆ ಬಿತ್ತರಿಸಿತ್ತು! ಆದರೆ ಅಚ್ಚಿನ ತಪ್ಪಿನಿಂದಾಗಿ ''ನಗೆ ನಾಣ್ಯ (ಪುಸ್ತಕಗಳ) ದರೋಡೆ''ಗೆ ಬದಲಾಗಿ ಮಾಮೂಲಿಯಾಗಿ ''ನಗನಾಣ್ಯ ದರೋಡೆ'' ಎಂದು ಅಚ್ಚಾಗಿದೆ! ಅಂತೂ ನನ್ನ 'ನಗೆ-ನಾಣ್ಯ'ದ ಸುದ್ದಿ ಪ್ರಸಾರ ವಾಯ್ತಲ್ಲ ಎಂದು ಹಸನ್ಮುಖರಾಗಿ ಪತ್ತೇದಾರರನ್ನು ಬೀಳ್ಕೊಟ್ಟರು.

ಪತ್ತೆದಾರ ಪರಮಶಿವ ಸಾಹಿತಿ ಸಿಂಗರಾಯರು ಹೇಳಿದ ''ನಗೆನಾಣ್ಯ ದರೋಡೆಯ'' ಕತೆಯನ್ನು ಗರುಡಗಂಬದ ಕಟ್ಟೆಯ ಮೇಲೆ ಕುಳಿತ ನಮಗೆಲ್ಲಾ ಹೇಳಿ ಮುಗಿಸುವ ಹೊತ್ತಿಗೆ ''ರವಿ ಮುಳುಗಿದನು ಪೂರ್ವಾದಿಯಲಿ.''

★★★

ವೈ.ಎನ್.ಕೆ. - ಒಬ್ಬ ಸಮರ್ಥ PUNಗಾರ



⊙ ಬೇಲೂರು ರಾಮಮೂರ್ತಿ

ಕನ್ನಡ ಭಾಷೆ ಬಳಕೆಯ ದೃಷ್ಟಿಯಿಂದ ಎಷ್ಟು ಸಮೃದ್ಧ ಎಂದರೆ ಅದು ಬಳಸುವದನ್ನವಲಂಬಿಸಿರುತ್ತದೆ. ಒಂದು ಹೊಸ ಶೈಲಿಯ ಬರವಣಿಗೆಯನ್ನು ಕಂಡಾಗ ಅರೇ ಇದನ್ನು ನಾವೇಕೆ ಅಳವಡಿಸಿಕೊಳ್ಳಲಿಲ್ಲ ಎಂಬ ಚಿಂತನೆ ಬರುತ್ತದೆ. ಅನೇಕ ಬರಹಗಾರರನ್ನು ಇಂಥಾ ಚಿಂತನಗೆ ಹಚ್ಚಿದ್ದು ವೈ.ಎನ್.ಕೆ. ಅವರ ಬರಹಗಳು. ವೈ.ಎನ್.ಕೆ. ಬರೆದದ್ದು ಅಲ್ಪ. ಬರೆಸಿದ್ದು ಅಪಾರ. ಅವರೊಂದಿಗೆ ದಿನಗಳನ್ನು ಕಳೆದವರಿಗೂ ಗೊತ್ತು ವೈ.ಎನ್.ಕೆ. ಭಾಷೆಯನ್ನು ಹೇಗೆ ಬಳಸುತ್ತಾರೆಂದು ಒಂದು ವೈಶಿಷ್ಟ್ಯತೆ ಎಂದರೆ ಸದಾ ಜಾಗ್ರತವಾಗಿರುತ್ತಿದ್ದ ಹಾಸ್ಯಪ್ರಜ್ಞೆ ಹಾಗೂ PUNಗಾರಿಕೆ. ಅದಕ್ಕೆ ಒಂದು ಸಮರ್ಥ ಉದಾಹರಣೆ ಅಂದರೆ ಅವರ wonder series ಪುಸ್ತಕಗಳು. ಅವರೇ ಹೇಳುವಂತೆ wonder seriesನ ಏಳು ಪುಸ್ತಕಗಳು ಹೊರಬಂದ ಮೇಲೆ ಅವುಗಳನ್ನು seven wonders ಅಂತ ಕರೆಯಬಹುದು. ಅಂತ ಎ.ಕೆ. ರಾಮಾನುಜನ್ ಹೇಳಿದ್ದರಂತೆ

ತಾವು ಕಂಡು, ಕೇಳಿ, ಓದಿ ಸಂತೋಷಪಟ್ಟಿದ್ದ ವಿಷಯಗಳನ್ನು ತಮ್ಮದೇ ಆದ ಹಾಸ್ಯದ ಛಾಪಿನಿಂದ ನೋಡುವ ವೈ.ಎನ್.ಕೆ. ಮನಕ್ಕೆ ಮುದ ನೀಡುವಂತೆ ಉಣ ಬಡಿಸುವ ಲಹರಿಯನ್ನು ಅನುಸರಿಸಿದವರು. ನಿರರ್ಗಳವಾಗಿ ಸಾಗುವ ಪರಿಭಾಷೆ ಹಠಾತ್ತನೆ ಹಾಸ್ಯದ ವೃತ್ತವನ್ನು ಹಾದು ಮುಂದುವರೆಯುವಾಗ ಒಂದು ವಿಶಿಷ್ಟ ಅನುಭವ ದೊರೆಯುತ್ತದೆ.

ಪನ್ ಈಸ್ ದಿ ಲೋಯೆಸ್ಟ್ ಫಾರ್ಮ್ ಆಫ್ ವಿಟ್ ಎಂಬ ಹೇಳಿಕೆಗೆ ಮತ್ತೊಂದು ಪ್ರತ್ಯುತ್ತರ ಕೊಟ್ಟವನು. ವಿನೋದ ನಟ ಗ್ರೂಚೋ ಮಾರ್ಕ್ಸ್ ಅವನು ಹೇಳಿದ್ದು Bun is the lowest form of wheat ಅಂತ ಬ್ರೆಡ್ಡು ಬನ್ನು ಗೋಧಿಯ ಅತಿ ಕೀಳು ರೂಪ. ಪನ್ ಮಾಡುವ ಪನ್‌ಡಿತರನ್ನು ಕಂಡರೆ ತಾವೂ ಹಾಗೆ ಮಾಡಲಾರದ ಪಾಮರರ ಅಸಹನೆ ಸಹಜವೇ ಅನ್ನುತ್ತಾರೆ ವೈ.ಎನ್.ಕೆ.

ಪನ್ ಪ್ರಕಾರದ ಗ್ರೂಚೋನ ಇನ್ನೊಂದು ಹೇಳಿಕೆಯನ್ನು ವೈ.ಎನ್.ಕೆ. ನೆನಪಿಸುತ್ತಾರೆ I was going on a holiday & she was the last resort (ನಾನು ಮನೋರಂಜನೆಗೆಂದು ರಜಾವೇಳೆ ಹೋಗುತ್ತಿದ್ದೆ. ಅವಳೇ ನನಗುಳಿದಿದ್ದ ಕಡೆಯ ವಿಶ್ರಾಂತಿ ಧಾಮ. ರಿಸಾರ್ಟ್ ಅಂದರೆ ವಿಶ್ರಾಂತಿ ಧಾಮದ ಜೊತೆಗೆ ಅವನಿಗುಳಿದಿದ್ದ ಕಟ್ಟಕಡೆಯ ದಾರಿ ಎಂಬ ಅರ್ಥವೂ ಬರುತ್ತದೆ ಅನ್ನುತ್ತಾರೆ. ಸಭೆಯಲ್ಲಿ ನಿದ್ರೆ

ಹೋಗುವವರ ಬಗ್ಗೆ ವೈ.ಎನ್.ಕೆ. ಹೀಗೆ ಹೇಳುತ್ತಾರೆ. ಪ್ರತಿ ವ್ಯಕ್ತಿಗೂ ಜೀವನದಲ್ಲಿ ಇಷ್ಟು ತಿನ್ನಬಹುದು, ಇಷ್ಟು ಕೊರೆಯಬಹುದು ಎಂಬ ಮಿತಿ ಇರುವಂತೆ ಇಷ್ಟು ಭಾಷಣ ಕೇಳಬಹುದು. ಇಷ್ಟು ಸಂಗೀತ ಕೇಳಬಹುದು ಇಷ್ಟು ನಾಟಕ ನೋಡಬಹುದು ಅಂತ ಕೋಟಾ ಇರುತ್ತದಂತೆ. ಆ ಮಿತಿ ಮೀರಿದ ಮೇಲೆ ಶರೀರ ರಕ್ಷಣಾ ವ್ಯವಸ್ಥೆ ಸ್ವಯಂ ಜಾಗ್ರತವಾಗಿ ದೇಹವನ್ನು ಕಾಪಾಡುತ್ತದಂತೆ, ಅಂದರೆ ನಿದ್ರೆ ತರಿಸುತ್ತದಂತೆ.

ಒಬ್ಬ ಸಮರ್ಥ ಹಾಸ್ಯ ಮನೋಭಾವ ಇರುವಾತನೇ ಸಮಾಜವನ್ನು ಭಿನ್ನ ಭಿನ್ನ ಕಿಟಕಿಗಳಿಂದ ಕಾಣಬಲ್ಲ ಅನ್ನುವುದನ್ನು ವೈ.ಎನ್.ಕೆ. ಬರಹ ಪ್ರತಿಪಾದಿಸುತ್ತದೆ. ಒಂದು ಗಂಭೀರ ವಿಷಯದ ಅಂಚಿಗೆ ಚುರುಕಾದ ಹಾಸ್ಯದ ಮೊನೆ ತಾಕಿಸುವುದು ಅವರ ಸ್ವಭಾವ. ಅದಕ್ಕೊಂದು ಉದಾಹರಣೆ ಎಂದರೆ; ಗಣ್ಯರನ್ನು ಸನ್ಮಾನಿಸುವಾಗ ಹೂವಿನ ಹಾರ ಹಾಕುವುದು ವಾಡಿಕೆ ಆದರೆ ಹೂವಿಗಿಂತ ತರಕಾರಿ ಮುಖ್ಯ ಅಂದು ತರಕಾರಿ ಅಂಗಡಿಯವನು ತರಕಾರಿ ಹಾರವನ್ನು ಹಾಕಿ ಅದು ಹಾರವೂ ಹೌದು ಆಹಾರವು ಹೌದು ಉಪಾಹಾರವೂ ಹೌದು. ಎಂದು ಸಮರ್ಥಿಸುತ್ತಿದ್ದರಂತೆ, ಅಲ್ಲ ಇದು ಹೀಗೇ ಬೆಳೆದರೆ ಚಪ್ಪಲಿ ಅಂಗಡಿಯವನು ಗಣ್ಯರನ್ನು ಸನ್ಮಾನಿಸಬೇಕಾದರೆ ಯಾವ ಹಾರ ಹಾಕಬೇಕು ಅಂತ ಪ್ರಶ್ನಿಸುತ್ತಾರೆ. ಯಾಕೆಂದ್ರೆ ಆಗ ಮಂತ್ರಿಯೊಬ್ಬರು ಈಜು ಕೊಳ ಉದ್ಘಾಟನೆ ಮಾಡಲು ಬಟ್ಟೆ ಬಿಚ್ಚಿ ಕೊಳಕ್ಕೆ ಧುಮುಕಿದರಂತೆ ಹಾಗಾದರೆ ಅಂಥವರನ್ನು ಗೋರಿ, ಕ್ರಿಮೆಟೋರಿಯಂ ಉದ್ಘಾಟಿಸಲು ಕರೆದರೆ ಏನು ಮಾಡಿಯಾರು ಅನ್ನೋದು ವೈ.ಎನ್.ಕೆ. ದೃಷ್ಟಿ.

ಅಪರೂಪದ ವಿಷಯಗಳನ್ನು ಹೆಕ್ಕಿ ಅದನ್ನು ತಮ್ಮ wonder ಅಂಕಣದಲ್ಲಿ ದಾಖಲಿಸುತ್ತಿದ್ದರು ವೈ.ಎನ್.ಕೆ. ಈ ಲೇಖನಗಳನ್ನು ಓದಿದಾಗ ವೇದ್ಯವಾಗುವ ವಿಷಯಗಳೆಂದರೆ ವೈ.ಎನ್.ಕೆ. ಅವರ ಓದು, ನೆನಪು ಮತ್ತು ಅವುಗಳನ್ನು ದಾಖಲಿಸುವ ವಿಶೇಷ ಶೈಲಿ.

ಭವಿಷ್ಯದ ಬಗೆಗೆ ಬರೆಯುತ್ತ ಅವರೆನ್ನುತ್ತಾರೆ. ನಾಗರೀಕತೆಯ ಜ್ಞಾನದ ಹೊದಿಕೆಯಿಂದ ದೂರವಿರುವ ಪ್ರಾಣಿಗಳು. ಅದರಲ್ಲೂ ನಾಯಿ, ಬೆಕ್ಕುಗಳು ಮುಂದಾಗುವ ಸೂಚನೆಯನ್ನು ಗುರುತಿಸುತ್ತದಂತೆ, ಮನೆಯ ಮಾಲೀಕರಿಗೆ ರೋಗವಾದರೆ ಅವರ ಸಾವಿನ ಮುನ್ಸೂಚನೆ ಮನೆಯ ನಾಯಿಗೆ ಗೊತ್ತಾಗುತ್ತದೆಂದು ಅನೇಕರ ಅನುಭವ. ಸ್ವಿಟ್ಜರ್ಲೆಂಡಿನಲ್ಲಿ ಒಂದು ತಿಂಗಳು 16 ರಿಂದ ಪ್ರಾಣಿಗಳನ್ನು ಬೇಟೆಯಾಡಲು ಅನುಮತಿ ಇದೆ. ಆದರೆ ಆ ತಿಂಗಳ 15ರಂದೇ ಪ್ರಾಣಿಗಳು ಅಭಯಾರಣ್ಯಕ್ಕೆ ಬಂದು ಸೇರುತ್ತವಂತೆ. ಬೇಟೆಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿರಲು ಪತ್ರಿಕೆ ಓದದ, ರೇಡಿಯೋ ಕೇಳದ, ಟೀವಿ ನೋಡದ ಈ ಪ್ರಾಣಿಗಳಿಗೆ ಇದು ಹೇಗೆ ಗೊತ್ತಾಗುತ್ತೆ ಎಂಬುದು ಅಲ್ಲಿನವರಿಗೆ ಸೋಜಿಗ.

ಕುಂಬಾರನಿಗೆ ಒಂದು ವರುಷ ದೊಣ್ಣೆಗೆ ಒಂದು ನಿಮಿಷ ಅನ್ನುವ ಗಾದೆಯನ್ನು ಸಾಹಿತ್ಯ ವಿಮರ್ಶೆಯ ಪರಿಧಿಯಲ್ಲಿ ವೈ.ಎನ್ಕೆ. ಹೀಗೆ ತಿರುಚುತ್ತಾರೆ. ಕಂಬಾರರಿಗೆ ಒಂದು ವರುಷ ನಾಡಿಗರಿಗೆ ಒಂದು ನಿಮಿಷ ಅಂತ. ಒಬ್ಬರು ಪುಸ್ತಕವನ್ನು ಹೊಗಳುತ್ತ, ಈ ಪುಸ್ತಕ ತುಂಬಾ ಚೆನ್ನಾಗಿದೆ. ಇದನ್ನು ನಿನಗೆ ಯಾರು ಬರೆದುಕೊಟ್ಟರು ಅಂತ ಕೇಳಿದರಂತೆ. ಅದಕ್ಕೆ ಪ್ರತಿ ಉತ್ತರ ನಿನಗಿಷ್ಟವಾಯಿತಲ್ಲ ಸಂತೋಷ ಆದರೆ ಈ ಪುಸ್ತಕವನ್ನು ನಿನಗೆ ಯಾರು ಓದಿ ಹೇಳಿದರು ಅಂತ.

ಆಜೀವ ಚಂದಾ ಅನ್ನುವ ಮಾತು ಬಂದಾಗ ತಮ್ಮ ವಿಚಾರಧಾರೆಯನ್ನು ಹೀಗೆ ಹರಿಯಬಿಡುತ್ತಾರೆ. ಆಜೀವ ಎಂದರೆ ಚಂದಾದಾರನ ಜೀವ ಇರುವವರೆಗೋ, ಗ್ರಂಥಮಾಲೆಯ ಜೀವ ಇರುವವರೆಗೋ, ಪತ್ರಿಕೆಯ ಜೀವ ಇರುವವರೆಗೋ ಅಂತ.

ವಿದ್ಯಾಭ್ಯಾಸ ಬೇರೆ, ಶಾಲಾ ಶಿಕ್ಷಣ ಬೇರೆ. ಅಕ್ಷರ ಅರಿಯದ ಹಳ್ಳಿಯ ಅನುಭವಿ ವೃದ್ಧ ನಗರವಾಸಿಗಿಂತ ವಿದ್ಯಾವಂತನಾಗಿರಬಹುದು. ಶಾಲಾ ಪಾಠ ಬೇರೆ. ವಿದ್ಯೆ ಕಲಿಯುವುದು ಬೇರೆ ಎನ್ನುವುದಕ್ಕೆ ಮಾರ್ಕ್ ಟ್ವೈನ್ ಹೇಳಿದ ಮಾತನ್ನು ವೈ.ಎನ್.ಕೆ. ಉದಾಹರಿಸುತ್ತಾರೆ. I have never let my schooling interfere with any education.

ಅಂದಿನಂದಿನ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಕೂಡಾ ವೈ.ಎನ್.ಕೆ. ತಮ್ಮದೇ ಚೂಪಾದ ಮಾತುಗಳಿಂದ ಚುಚ್ಚುತ್ತಿದ್ದರು. 1977 ರಷ್ಟು ಹಿಂದೆಯೇ ಬ್ರಿಟನ್, ರಷ್ಯ, ಪಶ್ಚಿಮ ಜರ್ಮನಿ ಮತ್ತು ಪೂರ್ವ ಯೂರೋಪ್ ಮುಂತಾದ ಕೆಲವು ರಾಷ್ಟ್ರಗಳಿಗೆ ಭೇಟಿ ಕೊಟ್ಟಿದ್ದ ಅವರು ಅಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡವರು

ಹಸಿದ ಬಡವರು ತಿನ್ನಲು ಬ್ರೆಡ್ ಇಲ್ಲ ಅಂದರೆ ಬ್ರೆಡ್ ಇಲ್ಲದಿದ್ದರೆ ಕೇಕ್ ತಿನ್ನಿ ಎಂದು ಹೇಳಿದ ಫ್ರೆಂಚ್ ರಾಣಿ ಮೇರಿ ಅಂತ್ವಾನೆತ್ ಅವರ ಹೇಳಿಕೆಯನ್ನು ನೆನಪಿಸುತ್ತ ವೈ.ಎನ್.ಕೆ. ಇಲ್ಲಿಯೂ ನಮ್ಮ ನಾಯಕರು ರೋಟಿ ಇಲ್ಲದಿದ್ದರೆ ಚಿರೋಟಿ ತಿನ್ನಿ ಎಂದು ಹೇಳಿರಬಹುದು ಅನ್ನುತ್ತಾರೆ. ಹಿಂದೆ ಎಲ್ಲೆಲ್ಲೂ ರಾಷ್ಟ್ರೀಕರಣದ ಬಳ್ಳಿ ಹಬ್ಬಿ ದಾಂಧಲೆ ಎಬ್ಬಿಸುತ್ತಿದ್ದಾಗ ಎಲ್ಲವೂ ತಮಗೆ ತಮ್ಮ ಹಿಡಿತದಲ್ಲೇ ಇರಬೇಕೆಂಬ ಸರ್ಕಾರದ ನೀತಿಯನ್ನು ಟೀಕಿಸುತ್ತಾ ಇದು ರಾಷ್ಟ್ರೀಕರಣ ಅಲ್ಲ, ಧೃತರಾಷ್ಟ್ರೀಕರಣ ಅಂದರು ವೈ.ಎನ್.ಕೆ.

ಕಛೇರಿಗಳಲ್ಲಿ ಲಂಚ ಎಂದಿನಿಂದಲೋ ನಡೆದು ಬಂದ ಪದ್ಧತಿ ಹೋಟೆಲುಗಳಲ್ಲಿ Tips ಕೊಡುವ ಹಾಗೆ ಎಲ್ಲ ಕಡೆಯೂ ಕೊಡುವಂತಾದರೆ ಲಂಚ ಎನ್ನುವ ಪದವೇ ಮಾಯವಾಗಬಹುದು ಅನ್ನುತ್ತಾರೆ TIP ಎಂದರೆ To insure promptness - ಚುರುಕಾಗಿ ಕೆಲಸ ಮಾಡುವಂತೆ ಪ್ರಚೋದಿಸಲು ಕೊಡುವ ಹಣ ಎಂದು ವಿವರಿಸುತ್ತಾರೆ.

ಹಾಗೆ ಕೊಡದಿದ್ದರೆ ಅವರು ನಿಮ್ಮನ್ನು from toe to tips ನೋಡುತ್ತಾರಂತೆ (ಕಾಲಿನ ಬೆರಳಿನಿಂದ ತಲೆ ಮೇಲಿನವರೆಗೂ) ಹೀಗೆ ಲಂಚ,-- ಭ್ರಷ್ಟಾಚಾರಗಳು ರೂಪಾಂತರಗೊಂಡು ಹೊಸ ಹೊಸ ಹೆಸರುಗಳಿಂದ, ಕ್ಯಾಪಿಟೇಷನ್ ಫೀ, ಕಿಕ್‌ಬ್ಯಾಕ್, ಅಂತೆಲ್ಲ ಆಗಿದೆ. ಡೊನೇಷನ್ ಇಲ್ಲದ ನೇಷನ್ ಎಲ್ಲಿದೆ ಎಂದು ಕೇಳುತ್ತಾರೆ. ಜೂಜಿನ ಬಗೆಗೆ ಬರೆಯುತ್ತಾ ವೈ.ಎನ್.ಕೆ. ಹೇಳುತ್ತಾರೆ ಧರ್ಮರಾಜ ಜೂಜೇ ಆಡದಿರುತ್ತಿದ್ದಾರೆ ಮಹಾಭಾರತವೇ ಸಂಭವಿಸುತ್ತಿರಲಿಲ್ಲ ಎಂದು ಹೇಳಿ, ಹಿಂದೂ ಸಮಾಜದಲ್ಲಿ ಸದ್ಗೃಹಸ್ಥ ಕಲಿಯಬೇಕಾದ ಅನೇಕ ಕಲೆಗಳಲ್ಲಿ ದಕ್ಷತೆಯಿಂದ ಜೂಜಾಡುವುದೂ ಒಂದು ಎಂದು ಉದ್ಗರಿಸುತ್ತಾರೆ.

ಭಾಷೆಯ ಬಗೆಗೆ ಅವರು ತೋರುತ್ತಿದ್ದ ಕಳಕಳಿ ಅಪಾರ ಕನ್ನಡಿ ಮುಂದೆ ನಿಂತಾಗ ನಾವು ಕನ್ನಡಿ... ಫ ಎಂದು ಹೇಳುತ್ತಿದ್ದರು ಕಾರವಾರದ ಕಡಲಿನ ತೀರದಲ್ಲಿ ಕುಳಿತು ಠಾಕೂರರು ಕವಿತೆ ಬರೆದಿದ್ದರು ಎಂದು ಅಲ್ಲಿಯ ಜನ ನೆನಪು ಮಾಡಿಕೊಳ್ಳುವುದರಿಂದ ಠಾಕೂರರನ್ನು ಕನ್ನಡಿಗರು ಎಂದು ಕರೆಯಬಹುದೇ ಅಂತ ಕೇಳುತ್ತಾರೆ.

ಬರ್ನಾರ್ಡ್‌ಷಾಗೂ ತಮಗೂ ಹೆಚ್ಚು ವ್ಯತ್ಯಾಸವಿಲ್ಲ ಎಂದು ಕೈಲಾಸಂ ಹೇಳುತ್ತಿದ್ದರು ಷಾ 'ಐರಿಸ್' (ಐರ್ಲೆಂಡಿನವರು) ತಾವು 'ಐಯರಿಷ್' (ಐಯರ್) ಎಂದು ಕೇಳಿ ತಮಗೂ ಕಾಳಿದಾಸನಿಗೂ ಇರುವ ವ್ಯತ್ಯಾಸವೆಂದರೆ - These is a damned difference of a "d' between KAILAS & KALIDAS ಹೀಗಿರುವಾಗ ಬರ್ನಾರ್ಡ್‌ಷಾ ಭಾರತೀಯ ಎಂದು ಹೇಳಲು ಯಾರೂ ಮುಂದೆ ಬಂದಿಲ್ಲ. ಭಾರತದಲ್ಲಿ ಅನೇಕ 'ಷಾ' ಗಳಿರುವುದರಿಂದ ಇತ್ತೀಚೆಗೆ ಬರ್ನಾರ್ಡ್ ಷಾ ಬರೆದ ಮ್ಯಾನ್ ಅಂಡ್ ಸೂಪರ್ ಮ್ಯಾನ್ ನಾಟಕದಲ್ಲಿ ನಾಸಿರುದ್ದೀನ್ ಷಾ ಅಭಿನಯಿಸಿದ್ದರಿಂದ ನಾಸಿರುದ್ದೀನ್ ಷಾ ನಂತರ ಬರ್ನಾರ್ಡ್ ಷಾ ನನ್ನು ಭಾರತೀಯ ಅನ್ನುವುದಕ್ಕೇನೂ ಅಡ್ಡಿಯಿಲ್ಲ ಅನ್ನುತ್ತಾರೆ.


ಒಂದು ಲೇಖನದಿಂದ ಒಬ್ಬ ವ್ಯಕ್ತಿಯ ಯೋಗ್ಯತೆಯನ್ನೆಲ್ಲ ಹೇಳುತ್ತೀನಿ ಎಂದರೆ ಅದೊಂದು ಮೂರ್ಖತನದ ಕೆಲಸವಾದೀತು. ಆದರೆ ವೈ.ಎನ್.ಕೆ.ಯಂಥ ಜ್ಞಾನದ ಸಮುದ್ರದಿಂದ ಒಂದು ಉದ್ಧರಣೆ ನೀರನ್ನಷ್ಟೆ ತೆಗೆದು ನಿಮಗೆ ಅರ್ಪಿಸುತ್ತಿದ್ದೇನೆ.

ವೈ.ಎನ್.ಕೆ. ಜನಪ್ರಿಯರಾದದ್ದು ಹೇಗೆ ಅಂತ ಚಿಂತಿಸುವಾಗ ನೆನಪಿಗೆ ಬರೋದು; ಒಬ್ಬ ವ್ಯಕ್ತಿ ಸಮಾಜದಲ್ಲಿ ಜನರ ಮನದಲ್ಲಿ ಹೆಚ್ಚಿನ ಕಾಲ ಉಳಿಯುತ್ತಾರೆ ಅಂದರೆ ಅದು ಕೇವಲ ಅವರು ಮಾಡುವ ಕಾಯಕದಿಂದಲ್ಲ; ಅವರ ಹೃದಯವಂತಿಕೆಯಿಂದ. ಇತರರಿಗಾಗಿ ಸದಾ ಮಿಡಿದವರು ವೈ.ಎನ್.ಕೆ. ಅವರ ಶಿಷ್ಯವೃಂದ (ಎಂದರೆ ತಪ್ಪಾಗಲಾರದು) ಅಪಾರ. ಹೆಚ್ಚೂ ಕಡಿಮೆ ಟೀ ಎಸ್ಸಾರ್ ಅವರಂತೆಯೇ ವೈ.ಎನ್.ಕೆ. ಸಹೋದ್ಯೋಗಿಗಳಲ್ಲಿ, ಸ್ನೇಹಿತರಲ್ಲಿ ಪ್ರೀತಿಯನ್ನು ಹಂಚಿದವರು. ದುಡ್ಡಿಗೆ ಬರಗಾಲವಾದರೆ ಮಾತಿಗೆ ಬರಗಾಲವೇ ಎಂಬಂತೆ ಎಲ್ಲರೊಂದಿಗೂ ಹಾಸ್ಯಭರಿತವಾಗಿ

ಮಾತಾಡುವರು. ಆದರೆ ತಮ್ಮ ಪ್ರತಿ ಕ್ಷಣದ ಮಾತಿನಲ್ಲೂ ಅವರು 'ಪನ್'ಗಾರಿಕೆಯನ್ನು ಬಿಡುತ್ತಿರಲಿಲ್ಲ.

ಮೊದಲೇ ಹೇಳಿದಂತೆ ಈ ಲೇಖನ ವೈ.ಎನ್.ಕೆ. ಅವರು ಒಂದು ಝಲಕ್. ಅವರನ್ನು ಪೂರ್ಣ ಅರಿಯಬೇಕೆಂದರೆ ಅವನ wonder series ಪುಸ್ತಕಗಳನ್ನು, ಹೈಡ್ ಪಾರ್ಕ್, ಪದ್ಯ ಇಷ್ಟ ಲೈಟಾದರೆ ಹೇಗೆ ಸ್ವಾಮಿ ಮುಂತಾದುವುಗಳನ್ನೋದಿದರೆ ವೈ.ಎನ್.ಕೆ. ನಮಗೆ ಸಂಪೂರ್ಣ ತೆರೆದುಕೊಳ್ಳುತ್ತಾರೆ.

ವೈ.ಎನ್.ಕೆ.ಯನ್ನು ನೆನಪಿಸಿಕೊಳ್ಳುವ ಸುದಿನ ಹಾಸ್ಯೋತ್ಸವ ಅನೇಕ ಹಾಸ್ಯೋತ್ಸವಗಳಿಗೆ ವೈ.ಎನ್.ಕೆ. ಬಂದಿದ್ದರು ಈ ಬಾರಿಯೂ ಬರುತ್ತಾರೆ ಅವರು ಹಾಸ್ಯೋತ್ಸವವನ್ನು ನೋಡಿ, ಅಭಿಮಾನಿಗಳನ್ನು ನೋಡಿ ಆನಂದಪಟ್ಟು ಹೋಗುತ್ತಾರೆ. ಆದರೆ ಒಂದೇ ಕೊರತೆ ನಾವು ಅವರನ್ನು ನೋಡಲಾಗುವುದಿಲ್ಲ. ಏನು ಮಾಡುವುದು. ಲಭ್ಯವಿದ್ದಷ್ಟೇ ತಾನೇ. ಸ್ನೇಹ, ಜೊತೆಗಾರಿಕೆ.



ಶುಭಾಶಯಗಳೊಡನೆ

ಎಸ್.ಆರ್. ರಾಮಚಂದ್ರನ್

ಮತ್ತು

ಎಸ್.ಎ. ರಾಮು



ಧ್ರುವ ತಾರೆ ಟೀಎಸ್ಸಾರ್

⊙ ಬೇಲೂರು ರಾಮಮೂರ್ತಿ

ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಒಂದು ಪ್ರಶಸ್ತಿ ಸ್ಥಾಪಿತವಾಗುತ್ತೆ ಅಂದ್ರೆ ಆ ವ್ಯಕ್ತಿ ಆ ರಂಗಕ್ಕೆ ಸಲ್ಲಿಸಿರುವ ಸೇವೆ ದ್ಯೋತಕವಾಗುತ್ತೆ. ಪತ್ರಿಕಾ ರಂಗದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದವರಿಗೆ ಟೀಎಸ್ಸಾರ್ ಪ್ರಶಸ್ತಿ ಲಭಿಸುತ್ತದೆ. ಈ ಟೀಎಸ್ಸಾರ್ ಕನ್ನಡ ಪತ್ರಿಕಾ ರಂಗಕ್ಕೆ ಸಲ್ಲಿಸಿದ ಸೇವೆ ಗಮನೀಯ. ದಿವಂಗತ ಖಾದ್ರಿ ಶಾಮಣ್ಣನವರು ಹೇಳುವ ಹಾಗೆ ರಾಮಚಂದ್ರರಾಯರು ಸಹೋದ್ಯೋಗಿಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟು ಸಾಮರ್ಥ್ಯವನ್ನು ಬೆಳೆಸಿದರು. ಹಾಗೆ ನೋಡಿದರೆ ಟೀಎಸ್ಸಾರ್ ಪ್ರಥಮವಾಗಿ ಸೇರಿದ್ದು Deccan Hearld ಪತ್ರಿಕೆಯ ಸಂಪಾದಕರಾಗಿ ನಂತರ ಪ್ರಜಾವಾಣಿಗೆ ಸಂಪಾದಕರಾದರು. ಒಬ್ಬ ವ್ಯಕ್ತಿಯನ್ನು ಯಾರಾದರೂ ಮೆಚ್ಚಲು ಏನು ಕಾರಣ ಅಂದರೆ ಅವರ ಸೌಜನ್ಯತೆ, ಸಜ್ಜನಿಕೆ ಅಂತ ಒಂದೋ ಎರಡೋ ಗುಣಗಳಿಂದ ಗುರುತಿಸಬಹುದು. ಆದರೆ ಟೀ ಎಸ್ಸಾರ್ ವಿಷಯದಲ್ಲಿ ಒಂದು ದೊಡ್ಡ ಪಟ್ಟಿಯನ್ನು ಮಾಡಬಹುದು. ಅವರ ಸಹಜ ನಡವಳಿಕೆಗಳಲ್ಲಿ ನಾವು ಅನೇಕ ಇಂತಹ ಗುಣಗಳನ್ನು ಗುರುತಿಸಬಹುದು.

15-10-1948 ರಲ್ಲಿ ಪ್ರಜಾವಾಣಿಯ ಪ್ರಾರಂಭದಿಂದ ಅದರ ಸಂಪಾದಕತ್ವವನ್ನು ವಹಿಸಿಕೊಂಡ ಟೀ ಎಸ್ಸಾರ್ ತಮ್ಮ ಕೊನೆಯ ಉಸಿರಿರುವವರೆಗೆ ಅದನ್ನು ನಿಭಾಯಿಸಿದರು (11-4-1977) ಪತ್ರಿಕೆಯೊಂದು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಸಂಪಾದಕೀಯ ಬಳಗದ ಸಹೋದ್ಯೋಗಿಗಳನ್ನು ವಿಶ್ವಾಸದಿಂದ ನಡೆಸಿಕೊಂಡು ಅವರಿಂದ ಒಳ್ಳೆಯ ಕೆಲಸ ತೆಗೆದುಕೊಳ್ಳುವುದು ಸಮರ್ಥ ಸಂಪಾದಕರ ಕರ್ತವ್ಯ. ಟೀ ಎಸ್ಸಾರ್ ತಮ್ಮ ಸಹೋದ್ಯೋಗಿಗಳ ಕೆಲಸದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು ತಪ್ಪು ನಡೆದಾಗ ಅದನ್ನು ಸರಿಪಡಿಸುವುದು, ಒಳ್ಳೆಯ ಕೆಲಸ ಮಾಡಿದಾಗ ಪ್ರಶಂಸಿಸುವುದು ಅವರ ಸ್ವಭಾವ. ಇದರ ಫಲವೋ ಎಂಬಂತೆ ಪ್ರಜಾವಾಣಿ ಪತ್ರಿಕೆ ಹಲವು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸುವುದು ಸಾಧ್ಯವಾಯಿತು. ಹಲವು ಹತ್ತು ಪ್ರತಿಭೆಗಳು ಹೊರಬರಲು ಸಾಧ್ಯವಾದದ್ದು ಟೀ ಎಸ್ಸಾರ್ ಅವರಿಂದ ಯಾರಲ್ಲಿಯೇ ಆದರೂ ಸರಿ 'ಪ್ರತಿಭೆ ಇದೆ' ಎಂದರಿವಾದರೆ ಸಾಕು ಆ ಪ್ರತಿಭೆ ಮುಂದುವರೆಯಲು ಸಾಕಷ್ಟು ಸಹಕಾರ ನೀಡುವ ವಿಶಾಲ ಮನೋಭಾವ ಅವರಲ್ಲಿತ್ತು.

ಅವರೊಂದಿಗೆ ಕೆಲಸ ಮಾಡಿದ ಅನೇಕ ಪತ್ರಿಕಾಕರ್ತರು ಇದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಪತ್ರಿಕೆಯ ಬರಹದಿಂದ ಓಡಿದು ಪತ್ರಿಕೆಯನ್ನು ಸಿದ್ಧ ಮಾಡುವ ಪ್ರತಿಯೊಂದು ಹಂತದ ಕಾರ್ಯಗಳಲ್ಲೂ ಅನ್ವೇಷಣೆಗಾಗಿ ಯೋಚಿಸುತ್ತಿದ್ದರು ಸೂಕ್ತ ಸಲಹೆಗಳನ್ನು ಸ್ವಾಗತಿಸುತ್ತಿದ್ದರು.

ಬೆಂಗಳೂರಿನ ಬಸವನಗುಡಿಯ ಸರ್ವೇಯರ್ ರಸ್ತೆಯಲ್ಲಿ ಅವರ ಮನೆ. ಟೀ ಎಸ್ಸಾರ್ ಅವರನ್ನು ಕರೆದುಕೊಂಡು ಹೋಗಲು ಪ್ರತಿ ದಿನವೂ ವಾಹನ ಬರುತ್ತಿತ್ತು. ಒಂದೊಂದು ದಿನ ಹೊರಡುವುದು ತಡವಾದಾಗ ಅಥವಾ ಬಸ್ ಸಿಕ್ಕದಿದ್ದಾಗ ಟೀಎಸ್ಸಾರ್ ಸಹೋದ್ಯೋಗಿಗಳು ಅವರ ಮನೆಗೆ ಬಂದು ಬಿಡುತ್ತಿದ್ದರು. ಟೀಎಸ್ಸಾರ್ ಅವರನ್ನು ಸಂತೋಷದಿಂದ ಮಾತಾಡಿಸಿ ಕಾಫಿ ಕೊಟ್ಟು ಅವರನ್ನು ತಮ್ಮ ವಾಹನದಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಇದನ್ನು ಒಬ್ಬರು ಉಪ ಸಂಪಾದಕರು ರೂಢಿ ಮಾಡಿಕೊಂಡರು. ಆದರೆ ಅವರು ಟೀಎಸ್ಸಾರ್ ಅವರ ಜೊತೆ ಕಛೇರಿಗೆ ಬರುವುದರಲ್ಲಿ ಪಾಳಿ ಆರಂಭವಾಗಿರುತ್ತಿತ್ತು. ಒಂದು ದಿನ ಹೀಗೆ ಉಪ ಸಂಪಾದಕರನ್ನು ಕರೆದುಕೊಂಡು ಬಂದರು. ಸ್ವಲ್ಪ ಸಮಯದ ನಂತರ ಅವರನ್ನು ಬರಹೇಳಿ ಇವತ್ತು ನೀವು ಕಛೇರಿಗೆ ಯಾಕೆ ಲೇಟು ಅಂತ ಕೇಳಿದಾಗ ಉಪ ಸಂಪಾದಕರು ತಬ್ಬಿಬ್ಬು. ತಾವೇ ವಾಹನದಲ್ಲಿ ತಮ್ಮ ಸಹೋದ್ಯೋಗಿಯನ್ನು ಕರೆದುಕೊಂಡು ಬಂದಿದ್ದರೂ ಸಹೋದ್ಯೋಗಿಯಲ್ಲಿ ಕರ್ತವ್ಯ ಪ್ರಜ್ಞೆಯನ್ನು ಮೂಡಿಸಲು ಅವರು ಅನುಸರಿಸಿದ ವಿನೋದ ವಿಧಾನವಿದು.

ಇದರ ಜೊತೆಗೆ ಸಹೋದ್ಯೋಗಿಗಳಲ್ಲಿ ಯಾವಾಗಲೂ ಅವರಿಗೆ ಅನುಕಂಪ ಇರುತ್ತಿತ್ತು. ಅವರ ಮೊದಲ ಕೆಲಸವೆಂದರೆ ಸಹೋದ್ಯೋಗಿಗಳ ಯೋಗಕ್ಷೇಮ ಕೈತುಂಬಾ ಎಂಬ ಮಾತಿರಲಿ ಬೆರಳು ತುಂಬಾ ಕೂಡಾ ಸಂಪಾದನೆ ಇಲ್ಲದಿದ್ದ ಕಾಲದಲ್ಲಿ ಯಾರಿಗೆ ಏನೇ ಸಮಸ್ಯೆ ಬಂದರೂ ಟೀ ಎಸ್ಸಾರ್ ಅವರ ಬಳಿಗೆ ಓಡುತ್ತಿದ್ದರು.

ಟೀಎಸ್ಸಾರ್‌ಗೆ ಪ್ರತೀ ದಿನ ಮನೆಯಿಂದ ಊಟ ಬರುತ್ತಿತ್ತು. ಆದರೆ ಎಂದೂ ಒಬ್ಬರೇ ಊಟ ಮಾಡಿದವರಲ್ಲ. ಹತ್ತಿರ ಇದ್ದವರನ್ನೆಲ್ಲಾ ಸೇರಿಸಿಕೊಂಡು ಜೋಕ್ ಮಾಡುತ್ತಾ ಊಟ ಮುಗಿಸುತ್ತಿದ್ದರು. ಅವರಿಗೆ ಬರುತ್ತಿದ್ದ ಕ್ಯಾರಿಯರ್‌ನಲ್ಲಿ ಸುಮಾರು ಮೂರು ಜನರಿಗೆ ಆಗುವಷ್ಟು ಊಟ ಇರುತ್ತಿತ್ತು. ಕೆಲವರಿಗೆ ಈ ಮನುಷ್ಯನಿಗೆ ಇಷ್ಟು ಗಾತ್ರದ ಕ್ಯಾರಿಯರ್ ಏಕೆ ಅಂತ ಅಚ್ಚರಿ ಆಗುತ್ತಿತ್ತು. ಆದರೆ ಟೀ ಎಸ್ಸಾರ್ ಊಟದ ಸಮಯಕ್ಕೆ ತಮ್ಮ ಕೋಣೆಯಿಂದ ಹೊರಬಂದು ಕಣ್ಣಿಗೆ ಕಂಡವರನ್ನು ಬನ್ನಿ ಊಟ ಮಾಡೋಣ ಅಂದು ಕರೆಯುತ್ತಿದ್ದರು.

ಇದೆಲ್ಲ ಹೃದಯವಂತಿಕೆಯ ಟೀ ಎಸ್ಸಾರ್ ಆದರೆ. ಅವರ ಮಾತಿನ ಚಟಾಕಿ, ಹಾಸ್ಯ ಮನೋಭಾವ, punಡಿತ ಗುಣ ಇವು ಯಾರನ್ನಾದರೂ ಬೆರಗು ಗೊಳಿಸುವಂಥದು. ಒಮ್ಮೆ ಕಛೇರಿಗೆ ಬೆಕ್ಕು ಬಂದುಬಿಟ್ಟಿತ್ತು ಯಾಕೆ ಪತ್ರಿಕಾಲಯಕ್ಕೆ ಬೆಕ್ಕು ಬಂತು ಅಂತ

ತಮ್ಮನ್ನು ಕೇಳಿಕೊಂಡು ತಕ್ಷಣ ಅಲ್ಲಿದ್ದ ವೈ.ಎನ್.ಕೆ. ಅವರನ್ನು ನೋಡಿ perhaps at YNKs back and call ಅಂದು pun ಮಾಡಿದ್ದರು.

ಪ್ರವಾಹದಿಂದುಂಟಾದ ಬರಗಾಲ ಪೀಡಿತರ ನಿಧಿಗಾಗಿ ಅಂದು ಪ್ರಸಿದ್ಧ ನಟಿ ಕಲ್ಪನಾ ಟೀಎಸ್ಸಾರ್ ಕಛೇರಿಗೆ ನುಗ್ಗಿ ಅವರಿಂದ ವಂತಿಕೆ ಸ್ವೀಕರಿಸಿ ಹೊರಬಂದು ಇತರರನ್ನು ಕಾಣಿಕೆಗಾಗಿ ಸೆರಗು ಹಿಡಿದರು. ಆಗ ಟೀಎಸ್ಸಾರ್ ಪಾಪ ಹೆಣ್ಣು ಮಗಳು ಸೆರಗೊಡ್ಡಿ ಬೇಡುತ್ತಿದ್ದಾಳೆ ಕೈಲಾದಷ್ಟು ಕೊಡಿ ಅಂದು ಹಾಸ್ಯಮಯವಾಗಿ ಹೇಳಿದರೂ ಅಲ್ಲಿ ಹೃದಯವಂತಿಕೆ ಮಿಡಿಯುತ್ತಿತ್ತು.

ಟೀಎಸ್ಸಾರ್ ಹಣದ ವಿಚಾರದಲ್ಲಿ ತುಂಬಾ ಧಾರಾಳ ತೋರುತ್ತಿದ್ದರು ಆದರೆ ಅನೇಕರು ಅವರನ್ನು ಹಣಕ್ಕಾಗಿ ಪೀಡಿಸುತ್ತಿದ್ದರು. ಒಮ್ಮೆ ಪಡೆದದ್ದನ್ನು ಹಿಂದಕ್ಕೆ ಕೊಡುತ್ತಲೇ ಇರಲಿಲ್ಲ. ಆದರೂ ಯಾರಿಗೂ 'ಇಲ್ಲ' ಅನ್ನದೇ ಹಣ ಕೊಟ್ಟು ಅದು Non-refundable ಅಲ್ಲ ಸಾಲ ಅಂತ ಹೇಳುತ್ತಿದ್ದರು. ಟೀ ಎಸ್ಸಾರ್ ಬಹಳ ವಿನೋದ ಪ್ರಿಯರು. ಒಮ್ಮೆ ಅವರು ತರಿಸಿದ ಈರುಳ್ಳಿ ವಡೆ ಬಹಳ ಗರಿಗರಿಯಾಗಿತ್ತು. ಯಾಕ್ಸರ್ ನಾವು ಮನೇಲಿ ಮಾಡಿದರೆ ಹೀಗೆ ಬರಲ್ಲ ಅಂತ ಕೇಳಿದರೆ ಟೀ ಎಸ್ಸಾರ್ ''ಯಾಕೆ ಬರಲ್ಲ. ಒಂದೊಂದು ಒಬ್ಬೆಗೂ ಇಂಕ್ ಫಿಲ್ಲರ್‌ನಿಂದ ಒಂದೊಂದು ತೊಟ್ಟು ಸೀಮೆ ಎಣ್ಣೆ ಬಿಟ್ಟು ನೋಡು'' ಅಂದು ನಕ್ಕರು.

ಒಮ್ಮೆ ಅವರ ಊರಿಂದ ಹುಡುಗನೊಬ್ಬ ಬಂದಿಳಿದ. ಅವನಿಗೆ ಹೇಗೋ ಕುದುರೆ ರೇಸಿನ ಮೇಲೆ ವ್ಯಾಮೋಹ ಹುಟ್ಟಿತು. ರಾಯರು ಅವರಿಗೆ ಪಾಸ್ ತರಿಸಿಕೊಟ್ಟರು. ಎರಡು ರೇಸ್ ನೋಡಿದ ಮೇಲೆ ಹಣ ಇದ್ದರೆ ನಾವೂ ದುಡ್ಡು ಮಾಡಬಹುದು ಅನಿಸಿತು ಅವನಿಗೆ. ಅದಕ್ಕೂ ಒಂದು ಪಾಸ್ ತರಿಸಿಕೊಟ್ಟರು. ನಂತರ ಛಾಯಾಚಿತ್ರಗ್ರಾಹಕ ಟಿ.ಎಲ್. ರಾಮಸ್ವಾಮಿಯವರ ಬೈನಾಕ್ಯುಲರ್ ಮೇಲೆ ಕಣ್ಣು ಬಿದ್ದು ಬೈನಾಕ್ಯುಲರ್ ಇದ್ರೆ ಚೆನ್ನದ ಕುದುರೆ ಹಿಡಿಯಬಹುದು ಅನಿಸಿತು ಆಗ ಟೀಎಸ್ಸಾರ್ ರಾಮಸ್ವಾಮಿಗೆ ನೀನು ಒಂದು ನಾಲ್ಕು ದಿನ ಈ ಕಡೆ ಬರಬೇಡ. ಈಗ ಬೈನಾಕ್ಯುಲರ್ ಕೇಳ್ತಿದಾನೆ. ನಾಳೆ ಕುದುರೆಯನ್ನು ಕೇಳಬಹುದು ಅಂದು ಅವನನ್ನು ಉಪಾಯವಾಗಿ ಸಾಗಹಾಕಿದರು.

ಒಮ್ಮೆ ಪತ್ರಿಕಾ ಕರ್ತರೆಲ್ಲ ಸೇರಿ ಪ್ರೆಸ್‌ಕ್ಲಬ್ ಸ್ಥಾಪಿಸಬೇಕು ಅಂದುಕೊಂಡಾಗ ಟೀ ಎಸ್ಸಾರ್ ಕೊಡುಗೆ ಅಪಾರ. ಒಂದೇ ತಿಂಗಳಿನಲ್ಲಿ ಜಾಗ ಕೊಡಿಸಿದರು. ಕ್ರೀಡಾ ಸಾಮಗ್ರಿ ಕೊಡಿಸಿದರು. ಎಲ್ಲರಿಗೂ ಅಚ್ಚರಿ ಆಗುವಂತೆ ಪ್ರೆಸ್‌ಕ್ಲಬ್ ಬೇಗನೇ ಕಾರ್ಯಾರಂಭ ಮಾಡಿತು. ಹಾಗೇ ಟೀ ಎಸ್ಸಾರ್ ಅವರೇ ಪ್ರೆಸ್‌ಕ್ಲಬ್‌ನ ಪ್ರಥಮ ಅಧ್ಯಕ್ಷರೂ ಆದರು.

ತಮ್ಮ ಪತ್ರಿಕೆಯಲ್ಲಿ ಬರುವ ವರದಿ ಆದಷ್ಟೂ ಚುರುಕಾಗಿರಬೇಕು ವಿಷಯ ಪ್ರಧಾನವಾಗಿರಬೇಕು ಅಂತ ಟೀ ಎಸ್ಸಾರ್ ಬಯಕೆ ಅವರು ತಮ್ಮ ಹಾಸ್ಯದ ದೃಷ್ಟಿಯಿಂದ

ನೋಡುವ ರಾಜಕೀಯ ವಿಡಂಬನೆಯ ಅಂಕಣ ಛೂಬಾಣ ಬಹಳ ಜನಪ್ರಿಯವಾಗಿತ್ತು. ಅಂಕಣ ಬರಹಕ್ಕೆ ಒಂದು ಮುಕುಟ ಪ್ರಾಯವಾಗಿದೆ ಛೂಬಾಣ. ಕೆಲವೊಂದು ಉದಾಹರಣೆ ಎಂದರೆ;

ಆಧುನಿಕ ಕವಿಗಳು ದೊಡ್ಡ ದೊಡ್ಡ ಯೋಜನೆಗಳಿಂದ ಪ್ರಸ್ತುತ ವೈಭವಗಳ ಮೇಲೆ ಕವನ ಬರೆದರೆ ಸಾವಿರಾರು ರೂಪಾಯಿ ಬಹುಮಾನ ಪಡೆಯಬಹುದು ಅನ್ನುವ ಸೂಚನೆಯೊಂದಿಗೆ ಅವರು ಬರೆದ ಕವನ:

ಚಟಚಟನೆ ಬಾರಯ್ಯ; ಘಟಪ್ರಭ ನೋಡಯ್ಯ
ಮನತುಂಬ ಹಾಡಯ್ಯ; ಬಹುಮಾನ ಬೇಡಯ್ಯ
ಭವತು ಭವ್ಯವಿದಯ್ಯ

ಕಾಂಗ್ರೆಸ್ ಜಗಳ ಇಂದಿನಿಂದಲ್ಲ; ಅದಕೊಂದೈತೆ ಇತಿಹಾಸ
ಬಾಯಿಬಿಟ್ಟು ವದರುತಲಿದ್ರೆ, ಹೇಳುತ್ತಾರೆ ಅಪಹಾಸ
ಜನ ಹೇಳುತ್ತಾರೆ ಅಪಹಾಸ.
ಅರಸು ನೋಡು ಪೈಲ್‌ವಾನ; ಪಾಟೀಲ್‌ನೋಡು ಪೈಲ್‌ವಾನ್
ಹಿರಿ ಪೈಲ್‌ವಾನ್ ಮರಿ ಪೈಲ್‌ವಾನ್
ಕುಸ್ತಿ ಪೈಲ್ವಾನ್ ನೋಡಿ ಕೈ ತಟ್ಟಿದವನೇ ಐಲ್‌ವಾನ್

ಮಾನವನಾಗಿ ಹುಟ್ಟಿದ ಮ್ಯಾಲೇನ್ ಕಂಡಿ
ಬೆಳಗಿನಿಂದ ಸಂಜೆವರ್ಗೆ ಕಾಂಗ್ರೆಸ್‌ಗುಂಡಿ
ಮ್ಯಾಲಿಂದ ಮೇಲೆ ಬಂದವ ನೋಡು ಲಂಚದ್ ಬಂಡಿ
ಸಾಯೋದ್ರೊಳ್ಗ ಹೋಗಿ ನೋಡು ಬಿರುಕಿನ ಗುಂಡೀ
ಬಿರುಕಿನ್ ಗುಂಡೀ

ಪ್ರಾಯಶಃ ಕನ್ನಡವನ್ನು ಅದರಲ್ಲೂ ಆಡು ಭಾಷೆಯ ಕನ್ನಡವನ್ನು ಮನರಂಜನೆಯ ಜೊತೆಗೆ ಚಾಟಿ ಏಟು ಕೊಡುವ ಸತ್ವಶಾಲಿಯನ್ನಾಗಿಸಿ ಛೂಬಾಣದ ಮೂಲಕ ಶ್ರೀ ಸಾಮಾನ್ಯರಿಗೆ ತಲುಪಿಸಿದ್ದು, ಕನ್ನಡ ಪತ್ರಿಕಾ ಕ್ಷೇತ್ರಕ್ಕೆ ರಾಯರ ಅದ್ವಿತೀಯ ಕೊಡುಗೆ. ಬಹುಮುಖಿ ಟೀಎಸ್ಸಾರ್ ಬಗೆಗೆ ಅವರ ಸಹೋದ್ಯೋಗಿಗಳು ಹೇಳುವ ಮಾತು ನಿಜಕ್ಕೂ ಪ್ರಶಂಸನೀಯ.

ಶ್ರೀಮಾನ್ ಘ ಉವಾಚ
ಟೀಎಸ್ಸಾರ್ ಅಂದ್ರೆ
ತಿಳಿಸಾರ್
ಹೌದು ಟಿ.ಎಸ್. ರಾಮಚಂದ್ರರಾಯರು
ಪಾಕ ಪ್ರವೀಣರು
ಅವರ ವಿಶೇಷ ಅಡಿಗೆ
ತಿಳಿಸಾರ್

ಸ್ನೇಹಜೀವಿ ಸಂಘಜೀವಿ
ಖಂಡಿತವಾದಿ
ಹಾಸ್ಯ ಬೆರೆತ ಮಾತು
ಪರಿಣಾಮ ಮಾತ್ರ
ಚಾಟಿ ಏಟು
ಇವೆಲ್ಲವೂ ಆಗ ಪ್ರಜಾವಾಣಿ
ಛೂಬಾಣದಲ್ಲಿ
ನಿತ್ಯ ದರ್ಶನ

ಪ್ರಜಾವಾಣಿ ಬಳಗಕ್ಕೆ
ಅವರೊಬ್ಬರು ಶ್ರೇಷ್ಠ ಕ್ಯಾಪ್ಟನ್ ಆಗಿದ್ದರು
ಅಂತಹ ನೇತಾರಾ ಆ ಬಳಗಕ್ಕೆ
ಪುನಃ ಸಿಕ್ಕುವುದು ದುರ್ಲಭ

ಟೀ ಎಸ್ಸಾರ್ ಅವರನ್ನು ದೊಡ್ಡ ಪತ್ರಿಕೆಯ ಸಂಪಾದಕರೆನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ಸಹೃದಯ, ಮಾನವೀಯ ಗುಣಗಳಿಂದ ಕೂಡಿದ ಸಭ್ಯ ವ್ಯಕ್ತಿ ಎಂದು ನೆನಪಿನಲ್ಲಿ ಇಟ್ಟುಕೊಂಡಿದ್ದಾರೆ.

ಯುವ ಪತ್ರಿಕೋದ್ಯಮಿಗಳಿಗೆ ಪ್ರಾತಃ ಸ್ಮರಣೆಯರಲ್ಲಿ ಒಬ್ಬರು ಎಂಬಂತಿದ್ದ ಟೀ ಎಸ್ಸಾರ್ ಅವರ ಹೃದಯವಂತಿಕೆ. ಮಾನವೀಯ ಗುಣಗಳು ಅನೇಕ. ಅವರ ಹೆಸರಿನಲ್ಲಿ ಸರ್ಕಾರ ಒಂದು ಪ್ರಶಸ್ತಿಯನ್ನು ಸ್ಥಾಪಿಸಿರುವುದು ಅವರಿಗೆ ಸಂದ ಒಂದು ಪುರಸ್ಕಾರ.

ಮನುಜರ, ಮನ-ಮರ್ಮಗಳ, ಮಮತೆ-ಮುನಿಸುಗಳ, ಮುಸುಕು-ಮಂದಗಳ ಹಾಗೂ ಮೇಲ್ಮೈ-ಮಹಿಮೆಗಳನ್ನು ಅಳೆಯುವುದರಲ್ಲಿ ಸಮರ್ಥವಾಗಿದ್ದರು ಟೀಸ್ಸಾರ್ ಜನತೆಗಾಗಿ ಜನತೆಯ ಪರವಾಗಿ ಇಂಚು ಪಟ್ಟಿ ಹಿಡಿದವರು ವಿರಾಮವಿಲ್ಲದೆ ಅಳೆಯುತ್ತಾ ಹೋದರು. ಅಳೆಯುತ್ತಲೇ ಅಗಲಿದರು.

ಗ್ರಂಥಋಣ - ಪತ್ರಿಕಾ ಲೋದ ಧೀಮಂತರು

ರಾ.ಶಿ. ಅವರ ಜೊತೆ....



ಓಂ ಪ್ರಕಾಶ್

ರಾ.ಶಿ. ಅವರಿಗೆ ಸಂಸ್ಕೃತ ಕಲೀಬೇಕು ಅಂತ ಆಸೆ ಆಯಿತು. ನಂ ಮನೆ ಹತ್ತಿರಾನೇ ಶ್ರೀರಂಗರ ಮನೆ. ಅವರ ಬಳಿ ಹೋಗಿ, ನನಗೆ ಸ್ವಲ್ಪ sanskrit ಹೇಳಿಕೊಡಿ ಅಂದರು. ಶ್ರೀರಂಗರು ನಗುತ್ತಾ, ಅದು ನನಗೆ ಗೊತ್ತಿಲ್ಲ, ಸಂಸ್ಕೃತ ಬೇಕಾದರೆ ಬಾ! ಅಂದರು. ಬೆಳಗ್ಗೆ ಐದು ಗಂಟೆಗೆ ಬರಬೇಕು, ಮೂರು ತಿಂಗಳು ಒಂದು ಗಂಟೆ ದಿನಾ ಪಾಠ! ಅಂದರು. ಶ್ರೀರಂಗರು ಮೂರು ತಿಂಗಳಾದ ಮೇಲೆ, ''ಪರವಾಗಿಲ್ಲ ಕಣೋ, ನೀನು ಇಷ್ಟು ಶ್ರದ್ಧೆಯಿಂದ ಬರ್ತೀಯ ಅಂತ ನಾನು ಯೋಚಿಸಿರಲಿಲ್ಲ' ಅಂದರು. ಹಾಗೂ ಸೇರಿಸಿದರು. 'ಅಲ್ಲ ಶಿವರಾಂ, ನಾನು ಒಂದು ಗಂಟೆ ಸಿಗರೇಟ್ ಸೇದದೇ ನಿಷ್ಠೆಯಿಂದ ಇದ್ದಿದ್ದೇ, ಅದೂ ಬೆಳಿಗ್ಗೆ, ಮಹದಾಶ್ಚರ್ಯ ಕಣೋ!''

★★★

ಅಪರಂಜಿ ಶುರುವಾದ ಕಾಲ. ನಾವೆಲ್ಲ ಚಂದಾದಾರರೆಂಬ ಬಲಿಪಶುಗಳನ್ನು ಬೇಟೆ ಆಡುತ್ತಿದ್ದೆವು. ಒಬ್ಬರು ಧನಿಕರನ್ನು ಕೇಳಿದೆ. ಅವರು ಕೊರವಂಜೀ Level ಇದ್ರೆ ಮಾತ್ರ subscribe ಮಾಡ್ತೀನಿ ಅಂದರು. ಅಪ್ಪನಿಗೆ ಹೇಳಿದೆ. ಅವರು ನಕ್ಕು, 'ಅವನು ಕೊರವಂಜೀನೂ ಓದಿಲ್ಲ, ಇದನ್ನೂ ಓದುಲ್ಲ! ಇವೆಲ್ಲಾ ಒಂದು ತರಹ status symbol ಕೆಲವರಿಗೆ!' ಅಂದರು. ಆದರೆ. ಅಪರಂಜೀನ ಆತ ಓದಿ, ರಾ.ಶಿ.ಯವರ ಮಾತನ್ನ over rule ಮಾಡಿದ! ಆಗಾಗ್ಗೆ ಚೆನ್ನಾಗಿದೆ ಅಂತ ಬೆನ್ನು ತಟ್ಟುತ್ತಾನೆ!!


★★★


ಕೈಲಾಸಂ ನಮ್ಮ ಮನೆಯಲ್ಲಿ ಆಗಾಗ ಇರುತ್ತಿದ್ದರು. ನಾನು ಆಗ ಅವರ ಹತ್ತಿರ ಹೋಗಿ, Huntley plamer ಬಿಸ್ಕತ್ತು ಕೇಳಿ ತಿಂದು ಆನಂದಪರವಶನಾಗುತ್ತಿದ್ದೆ. ಕೈಲಾಸಂ ಇರುತ್ತಿದ್ದ ರೂಮಿನ ಬಾಗಿಲು ತಟ್ಟಿ, 'ಕೈಲಾಚಂ! ಬಾಗಿಲ್ ತೆಗೀ' ಅಂದ ಪೀಡಿಸುತ್ತಿದ್ದೆ. ಕೈ ನಿಧನರಾದ ನಂತರ, ಮರುದಿನ ನಾನು ಬಾಗಿಲು ತಟ್ಟುತ್ತಿದ್ದದ್ದು ನೋಡಿ ರಾ.ಶಿ. ದುಃಖದಿಂದ ಪಾಪ, ಮರುಗಿದರಂತೆ.

★★★

ಆಗತಾನೇ ಡೆಲ್ಲಿಯಿಂದ, ಎಂ.ಡಿ. ಮಾಡಿ ಬಂದಿದ್ದೆ. "good doctor' ಅಂತ ಅನ್ನಿಸಿಕೊಳ್ಳುಕ್ಕೆ ಏನು ಗುಣಗಳಿರಬೇಕು? ಅಂತ ರಾ.ಶಿ.ನ ಕೇಳಿದೆ. ನಸುನಕ್ಕರು. 'ನಂಗೂ ಗೊತ್ತಿಲ್ಲ ಕಣೋ, ಆದರೆ ಮೂರು ವಿಷಯ ಮುಖ್ಯ ಅಂತ ಅನ್ನಿಸುತ್ತೆ. ರೋಗಿಗಳ ಬಗ್ಗೆ ಅನುಕಂಪ, ಅಪಾರ ವೈಜ್ಞಾನಿಕ ಕುತೂಹಲ ಹಾಗೂ ತನ್ನ ಕಾರ್ಯ ಸಮಾಜಕ್ಕೆ ತೀರಿಸುವ ಋಣ ಅಂತ ತಿಳುವಳಿಕೆ!'' ಆಗ ನನಗೆ ಅರ್ಥವಾಗಲಿಲ್ಲ. ಈಗ ಮಸಕು ಮಸಕಾಗಿ ಅರ್ಥ ಆಗ್ತಾ ಇದೆ!!

★★★





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ

- ಎಚ್.ಕೆ. ರಾಮಚಂದ್ರಮೂರ್ತಿ

ಚಾರ್ಲ್ಸ್ ಡಿಕನ್ಸ್‌ನ 'ದಿ ಪಿಕ್‌ವಿಕ್ ಪೇಪರ್ಸ್' - ಜಗತ್ತಿನ ಹಾಸ್ಯ ಸಾಹಿತ್ಯದ ಅತ್ಯುನ್ನತ ಶಿಖರಗಳಲ್ಲೊಂದು. ಡಾಸ್ಟಯವ್‌ಸ್ಕಿ (Dostoyevsky) ಹೇಳುವಂತೆ 'ಅದೊಂದು ಅನಾದೃಶ, ಅಪರಿಮಿತ ಮಹತ್ವದ ಕೃತಿ. ಮನುಷ್ಯ ವರ್ಗದ ಬಗ್ಗೆ ಪ್ರೀತಿ ಹುಟ್ಟುವಂತೆ ಮಾಡಿ ನಮ್ಮನ್ನು ಚಿರಕಾಲ ಸಂತೋಷಪಡಿಸುವಂಥ' ಕಾದಂಬರಿ ಮುಗ್ಧನೂ ಪ್ರಾಮಾಣಿಕನೂ, ಸೌಜನ್ಯ ಶೌಶೀಲ್ಯಗಳುಳ್ಳವನೂ ಆದ ವ್ಯಕ್ತಿ ಪಿಕ್‌ವಿಕ್; ಆದರೆ ಅವನು ತನ್ನ ಬೋಳಾಯಿತನದಿಂದ, ಮಾನವಾಂತಃಕರಣದಿಂದ ಪ್ರೇರಿತವಾದ ಕುತೂಹಲದಿಂದ ಅನಗತ್ಯವಾದ ಇಕ್ಕಟ್ಟುಗಳಲ್ಲಿ, ಫಜೀತಿಗಳಲ್ಲಿ, ಪೇಚುಗಳಲ್ಲಿ ಸಿಕ್ಕಿ ಒದ್ದಾಡುತ್ತಾನೆ - 'ಅಯ್ಯೋ ಪಾಪ!' ಎನ್ನುತ್ತಲೇ ನಾವು ಪಕ್ಕೆ ನೋಯುವಷ್ಟು ನಕ್ಕು ಹೊರಳಾಡುವಂತಾಗುತ್ತದೆ. ಡಿಕನ್ಸ್ ಬೇಕೆಂದೇ ಉದಾತ್ತಾಭಾಸದ (mock-heroic) ಭಾಷೆಯನ್ನು ಬಳಸುತ್ತಾನೆ. ಕೆಲಸಕ್ಕೆ ಬಾರದ, ಕ್ಷುಲ್ಲಕ ವಸ್ತು-ವಿಚಾರ, ವ್ಯಕ್ತಿಗಳನ್ನು ಘನ ಗಂಭೀರ ಭಾಷೆಯಲ್ಲಿ ವರ್ಣಿಸುತ್ತ ನಗೆ ಮಿಂಚಿಸುವುದು ಡಿಕನ್ಸ್ ಹಾಸ್ಯದ ಮಹತ್ವ.

ನಿಶ್ಶಕ್ತಿಯ ಬಡಕಲು ಕುದುರೆಯನ್ನು ಗಾಡಿಯಿಂದ ಬಿಚ್ಚಿದರೆ ಬಿದ್ದು ಹೋಗುತ್ತದೆ - ಆದ್ದರಿಂದ ಅದನ್ನು ಸದಾ ಗಾಡಿಗೆ ಕಟ್ಟಿರುವುದು; ಎರಡು ಚಕ್ರಗಳು ಹಿಂದುಗಡೆ ಅಟ್ಟಿಸಿಕೊಂಡು ಬರುವುದರಿಂದ, ನರಪೇತಲ ಕುದುರೆ ತಾನೂ ಸಹ ಮುಂದಕ್ಕೆ ಓಡಲೇ ಬೇಕಾಗಿರುವ ಅನಿವಾರ್ಯ ಸ್ಥಿತಿ; ಕೇವಲ 'ವೈಜ್ಞಾನಿಕ' ಕುತೂಹಲದಿಂದ ಕುದುರೆ ಮತ್ತು ಬಡಪಾಯಿ ಚಾಲಕನ ಬಗ್ಗೆ ವಿವರಗಳನ್ನು ತನ್ನ ನೋಟು ಪುಸ್ತಕದಲ್ಲಿ ಗುರುತು ಹಚ್ಚಿಕೊಂಡು ಸಂಶಯಪೀಡಿತ ಗಾಡಿಯವನಿಂದ ಏಟು ತಿನ್ನುವ ಪಿಕ್‌ವಿಕ್ ಮತ್ತು ಗೆಳೆಯರ ಕರುಣಾಜನಕ ಸ್ಥಿತಿ - ಇವು ಒಂದೊಂದೂ ಹಾಸ್ಯದ ಬುಗ್ಗೆಗಳಾಗಿ ಪರಿಣಮಿಸುತ್ತವೆ.

ಈ ಡಿಕನ್ಸ್ ಕಾದಂಬರಿ 'ಮಹಾನಾಯಕ'ನ 'ರಥಯಾತ್ರೆ'ಯ ಪ್ರಸಂಗ ನಿಮ್ಮನ್ನು ನಿಜವಾಗಿ ರಂಜಿಸೀತು.



ಪಿಕ್‌ವಿಕ್ ಮಹಾಶಯನ ರಥಯಾತ್ರೆ

ಮೂಲ: ಚಾರ್ಲ್ಸ್ ಡಿಕನ್ಸ್ ⊙ ಕನ್ನಡಕ್ಕೆ: ಎಚ್.ಕೆ. ರಾಮಚಂದ್ರಮೂರ್ತಿ

ಎಲ್ಲ ಕೆಲಸಗಳ ಕಾಲನಿಷ್ಠ ಸೇವಕನಾದ ಸೂರ್ಯ ಆಗತಾನೇ ಉದಿಸಿ ಸಾವಿರದ ಎಂಟುನೂರ ಇಪ್ಪತ್ತೇಳನೆಯ ಇಸವಿ ಮೇ ಹದಿಮೂರನೆಯ ದಿನದ ಬೆಳಗಿಗೆ ಬೆಳಕನ್ನು ನೀಡಲು ಪ್ರಾರಂಭಿಸಿದ ಕ್ಷಣದಲ್ಲೇ ಮಾನ್ಯ ಸ್ಯಾಮ್ಯುಯಲ್ ಪಿಕ್‌ವಿಕ್, ಮತ್ತೊಬ್ಬ ಸೂರ್ಯನೋ ಎಂಬಂತೆ ನಿದ್ದೆಯನ್ನು ಒದ್ದು ಎದ್ದರು; ಎದ್ದು ಕೊಠಡಿಯ ಕಿಟಕಿಯನ್ನು ತೆರೆದು ಕೆಳಗೆ ಹರಡಿದ್ದ ಜಗತ್ತನ್ನು ನಿಟ್ಟಿಸಿ ನೋಡಿದರು. ಮಾನ್ಯ ಪಿಕ್‌ವಿಕ್ ಅವರು ತಮ್ಮ ದೇಹವನ್ನು ಬಟ್ಟೆಯೊಳಕ್ಕೂ, ಬಟ್ಟೆಗಳನ್ನು ತಮ್ಮ ಚರ್ಮದ ಪೆಟ್ಟಿಗೆಗೂ ತುರುಕಲು ತೊಡಗಿದರು. ತಮ್ಮ ಉಡುಗೆ ತೊಡುಗೆಗಳ ವಿಷಯದಲ್ಲಿ ಮಹಾಪುರುಷರು ಅತಿ ಎಚ್ಚರಿಕೆಯನ್ನು ವಹಿಸುವುದು ವಿರಳ. ಮುಖಕ್ಷೌರ, ವಸ್ತ್ರಧಾರಣೆ, ಕಾಫೀ ಸೇವನೆ ಮುಂತಾದ ಕ್ರಿಯೆಗಳು ಬೇಗನೆ ನಡೆದುವು. ಮತ್ತೊಂದು ಗಂಟೆಯಲ್ಲಿ ಮಾನ್ಯ ಪಿಕ್‌ವಿಕ್ ಅವರು ಕೈಯಲ್ಲಿ ಪೆಟ್ಟಿಗೆ, ಮೇಲಂಗಿಯಲ್ಲಿ ಟೆಲಿಸ್ಕೋಪು, ವೇಸ್ಟ್ ಕೋಟಿನಲ್ಲಿ ನೋಟು ಪುಸ್ತಕ ಇವುಗಳ ಸಮೇತ, ಗುರುತು ಹಾಕಿಕೊಳ್ಳಲು ಅರ್ಹವೆನಿಸುವ ಯಾವುದೇ ಶೋಧನೆಯನ್ನೂ ಸ್ವಾಗತಿಸಲು ಸಿದ್ಧರಾಗಿ ಸೇಂಟ್ ಮಾರ್ಟಿನ್ ಲೆ ಗ್ರಾಂಡ್ ಕೋಚ್ ಗಾಡಿ ಚೌಕಕ್ಕೆ ಆಗಮಿಸಿದರು.

''ಗಾಡಿ!'' ಎಂದು ಕೂಗು ಹಾಕಿದರು ಮಾನ್ಯ ಪಿಕ್‌ವಿಕ್.

''ಬಂದೆ ಸ್ವಾಮಿ!'' ಎಂಬ ಕೂಗು ಚಿಮ್ಮಿ ಬಂತು. ಗೋಣೀ ಚೀಲದ ಕೋಟು, ಅದರಿಂದಲೇ ಮಾಡಿದ ಧೂಳು ಪಾವಡು (ಏಪ್ರಿಲ್), ಕೊರಳ ಸುತ್ತ ಹಿತ್ತಾಳೆ ಬಿಲ್ಲೆ ಮತ್ತು ಅಂಕೆ - ಇವುಗಳನ್ನು ಧರಿಸಿದ, ಮಾನವ ಜನಾಂಗದ ಅತ್ಯಂತ ವಿಚಿತ್ರ ಮಾದರಿಯ ಒಂದು ವ್ಯಕ್ತಿಯೇ ಆ ಕೂಗಿನ ಮೂಲವಾಗಿತ್ತು. ಅಪೂರ್ವ ವಸ್ತುಗಳ

★ಪಿ.ವಿ.ಎಂ.ಪಿ.ಸಿ. ಪಿಕ್‌ವಿಕ್ ಕ್ಲಬ್ಬಿನ ನಿರಂತರ ಉಪಾಧ್ಯಕ್ಷ ಸದಸ್ಯ - ಸಂ

ಜಿ.ಸಿ.ಎಂ.ಪಿ.ಸಿ. - ಪಿಕ್‌ವಿಕ್ ಕ್ಲಬ್ಬಿನ ಸಾಮಾನ್ಯ ಅಧ್ಯಕ್ಷ ಸದಸ್ಯ - ಸಂ

ಸಂಗ್ರಹದಲ್ಲಿ ಪಟ್ಟಿ ಮಾಡಿದ ಒಂದು ವಸ್ತುವಿನಂತೆ ಆತ ಕಾಣುತ್ತಿದ್ದ. ಕುದುರೆಗಳಿಗೆ ನೀರು ಕೊಡುವ ವ್ಯಕ್ತಿ ಅವನು. ''ಬಂದೆ ಸ್ವಾಮಿ, ಇದೇ ಮೊದಲನೆ ಗಾಡಿ!'' ಎಂದು ಹೇಳಿ ಮೊದಲನೆ ಗಾಡಿಯನ್ನು ಸಾರ್ವಜನಿಕ ಗಾಡೀ ಖಾನೆಯಿಂದ ಹೊರಕ್ಕೆ ತಂದ. ಅದುವರೆಗೆ ಆತ ತನ್ನ ಮೊದಲನೆಯ ಪೈಪನ್ನು ಸೇದುತ್ತಿದ್ದ. ಮಾನ್ಯ ಪಿಕ್‌ವಿಕ್ ಅವರನ್ನೂ ಅವರ ಪೆಟ್ಟಿಗೆಯನ್ನೂ ಗಾಡಿಯೊಳಗೆ ಎಸೆಯಲಾಯಿತು.

''ಗೋಲ್ಡನ್ ಕ್ರಾಸಿಗೆ'' ಎಂದರು ಪಿಕ್‌ವಿಕ್.

''ಎಲ್ಲಾ ನಾಲ್ಕಾಣೆ ಬಾಬ್ತು'' ಎಂದು ಬೇಜಾರಿನಿಂದ ಕಿರಿಚಿದ ಚಾಲಕ, ಗಾಡಿ ಹೊರಡುತ್ತಿದ್ದಂತೆ. ಅವನು ಹಾಗೆ ಕಿರಿಚಿದ್ದು ತನ್ನ ಗೆಳೆಯ ನೀರು ಕುಡಿಸುವವನ ತಿಳುವಳಿಕೆಗಾಗಿ.

''ಕುದುರೆಯ ವಯಸ್ಸು ಎಷ್ಟಯ್ಯ?'' ವಿಚಾರಿಸಿದರು ಪಿಕ್‌ವಿಕ್ ಮಹಾಶಯರು, ಬಾಡಿಗೆ ಕೊಡುವುದಕ್ಕೆಂದು ಇಟ್ಟುಕೊಂಡಿದ್ದ ಷಿಲಿಂಗಿನಿಂದ ಮೂಗನ್ನು ತುರಿಸಿಕೊಳ್ಳುತ್ತಾ.

''ನಲ್ವತ್ತೆರಡು'' ಓರೆ ದೃಷ್ಟಿ ಬೀರಿದ ಚಾಲಕನ ಉತ್ತರ.

''ಏನು?'' ಉದ್ಗರಿಸಿದ ಮಾನ್ಯ ಪಿಕ್‌ವಿಕ್, ತಮ್ಮ ಟಿಪ್ಪಣಿ ಪುಸ್ತಕವನ್ನು ಕೈಗೆ ತೆಗೆದುಕೊಳ್ಳುತ್ತಾ, ಚಾಲಕ ತನ್ನ ಹಿಂದಿನ ಹೇಳಿಕೆಯನ್ನು ಪುಷ್ಟೀಕರಿಸಿದ. ಮಾನ್ಯ ಪಿಕ್‌ವಿಕ್, ಅವನ ಮುಖವನ್ನು ದುರುಗುಟ್ಟಿ ನೋಡಿದರು. ಆದರೆ ಅವನ ಮುಖ ಲಕ್ಷಣ ಅಚಲವಾಗಿತ್ತು. ಆದದರಿಂದ ಇವರು ಆ ಸಂಗತಿಯನ್ನು ತಕ್ಷಣ ಗುರುತು ಹಾಕಿಕೊಂಡರು.

ಆ ವಿಷಯದಲ್ಲಿ ಇನ್ನೂ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಕೇಳಿದರು ಪಿಕ್‌ವಿಕ್: ''ಒಂದು ಸಲಕ್ಕೆ ಎಷ್ಟು ಹೊತ್ತು ಕುದುರೆಯನ್ನು ಗಾಡಿಗೆ ಕಟ್ಟಿರುತ್ತೀಯೆ?''

''ಎರಡು ಮೂರು ವಾರ!''

''ವಾರ!'' ಎಂದರು, ಆಶ್ಚರ್ಯಚಕಿತರಾಗಿ ಮಾನ್ಯ ಪಿಕ್‌ವಿಕ್. ದಿಢೀರನೆ ನೋಟು ಪುಸ್ತಕ ಹೊರಕ್ಕೆ ಬಂತು.

ಶಾಂತವಾಗಿ ಚಾಲಕ ಹೇಳಿದ: ''ಮನೆಯಲ್ಲಿರುವಾಗ ಅದು ಪ್ರತ್ಯೇಕವಾದ ಕೋಣೆಯಲ್ಲಿರುತ್ತದೆ. ಆದರೆ, ಅದಕ್ಕೆ ಬಹಳ ನಿಶ್ಯಕ್ತಿ. ಆದ್ದರಿಂದ ಅದನ್ನು ಮನೆಗೆ ಕರೆದುಕೊಂಡೇ ಹೋಗುವುದಿಲ್ಲ.''

''ನಿಶ್ಯಕ್ತಿ!'' ಮತ್ತೆ ಇದ್ಗರಿಸಿದರು, ಗೊಂದಲಕ್ಕೆ ಬಿದ್ದ ಮಾನ್ಯ ಪಿಕ್‌ವಿಕ್.

''ಗಾಡಿಯಿಂದ ಬಿಚ್ಚಿದ ಕೂಡಲೇ ಅದು ಕೆಳಕ್ಕೆ ಬಿದ್ದು ಬಿಡುತ್ತದೆ-'' ಗಾಡಿಯವ ಮುಂದುವರಿಸಿದ, ''ಬಿದ್ದು ಬಿಡದೆ ಇರಲಿ ಎಂದೇ ಗಾಡಿಗೆ ಅದನ್ನು ಬಹಳ ಬಿಗಿಯಾಗಿ

ಕಟ್ಟುತ್ತೇವೆ, ತಟಕ್ಕನೆ ನಿಲ್ಲಿಸುತ್ತೇವೆ. ಭರ್ಜರಿಯಾದ ಎರಡು ದೊಡ್ಡ ಚಕ್ರಗಳಿವೆ. ಕುದುರೆ ಓಡುವಾಗ ಅದರ ಹಿಂದೆಯೇ ಅವು ಹೋಗಲೇಬೇಕು. ಆದ್ದರಿಂದ ಕುದುರೆಯೂ ಓಡಲೇಬೇಕು. ಬೇರೆ ದಾರಿಯೇ ಇಲ್ಲ.''

ಪಿಕ್‌ವಿಕ್ ಮಹಾಶಯರು ಈ ಹೇಳಿಕೆಯ ಪ್ರತಿಯೊಂದು ಪದವನ್ನೂ ತಮ್ಮ ನೋಟು ಪುಸ್ತಕದಲ್ಲಿ ಬರೆದುಕೊಂಡರು. ಎಂಥ ಕಷ್ಟದ ಸಂದರ್ಭಗಳಲ್ಲಿಯೂ ಕುದುರೆಗಳು ಹೇಗೆ ಜಗ್ಗುವುದಿಲ್ಲ ಎಂಬುದಕ್ಕೆ ವಿಶಿಷ್ಟ ನಿದರ್ಶನವಾಗಿ ಇದನ್ನು ನಮ್ಮ ಸಂಘಕ್ಕೆ ವರದಿ ಮಾಡಬೇಕೆಂಬುದೇ ಮಹಾಶಯರ ಉದ್ದೇಶ. ಇನ್ನೂ ಬರವಣಿಗೆ ಮುಗಿದೇ ಇಲ್ಲ, ಗೋಲ್ಡನ್ ಕ್ರಾಸ್ ಬಂದೇ ಬಿಟ್ಟಿತು. ಚಾಲಕ ಕೆಳಕ್ಕೆ ನೆಗೆದ, ಮಾನ್ಯ ಪಿಕ್‌ವಿಕ್ ಅವರೂ ಹೊರಕ್ಕೆ ಬಂದರು. ಮಾನ್ಯರಾದ ಟಪ್‌ಮನ್, ಸ್ನಾಡ್‌ಗ್ರಾಸ್ ಮತ್ತು ವಿಂಕಲ್ ತಮ್ಮ ಸುಪ್ರಸಿದ್ಧ ನಾಯಕನ ಆಗಮನಕ್ಕಾಗಿ ಕಾತರದಿಂದ ಕಾಯುತ್ತಿದ್ದವರು ಇವರನ್ನು ಸ್ವಾಗತಿಸಲು ಮುತ್ತಿಕೊಂಡರು.

''ಇದೋ, ಬಾಡಿಗೆ'' ಎಂದರು ಮಾನ್ಯ ಪಿಕ್‌ವಿಕ್, ಷಿಲಿಂಗನ್ನು ಚಾಲಕನ ಕಡೆಗೆ ಚಾಚುತ್ತಾ.

ವಿಚಿತ್ರ ವ್ಯಕ್ತಿಯಾದ ಆ ಚಾಲಕ ಹಣವನ್ನು ನೆಲಗಟ್ಟಿನ ಮೇಲೆ ರೊಯ್ಯನೆ ಎಸೆದು ಮಾನ್ಯ ಪಿಕ್‌ವಿಕ್ ಅವರೊಂದಿಗೆ ಆ ಹಣಕ್ಕೋಸ್ಕರ ಜಗಳ ಕಾಯುವ ಸಂತೋಷವನ್ನು ತನಗೆ ಒದಗಿಸಿ ಕೊಡಬೇಕೆಂದು ಅಲಂಕಾರಿಕ ಭಾಷೆಯಲ್ಲಿ ಕೇಳಿಕೊಂಡಾಗ ಆ ವಿದ್ವಾಂಸರಿಗೆ ಆದ ಆಶ್ಚರ್ಯವನ್ನು ಹೇಗೆ ತಾನೆ ವರ್ಣಿಸುವುದು?

''ನಿನಗೆಲ್ಲೋ ಹುಚ್ಚು'' ಎಂದರು ಸ್ನಾಡ್‌ಗ್ರಾಸ್.

''ಅಥವಾ ಕುಡಿದಿರಬೇಕು'' ಎಂದರು ವಿಂಕಲ್.

''ಅಥವಾ ಎರಡೂ'' ಎಂದರು ಮಾನ್ಯ ಟಪ್‌ಮನ್.

ತನ್ನಷ್ಟಕ್ಕೆ ತಾನೇ ಮುಷ್ಟಿಯನ್ನು ಆಡಿಸುತ್ತಾ ಚಾಲಕ ಕರೆದ: ''ಬನ್ನಿ! ನಾಲ್ಕೂ ಜನರೂ ಬನ್ನಿ!''

''ಹೋ ಹೋ! ಇಲ್ಲೇನೋ ತಮಾಷೆ ಶುರು!'' ಎಂದು ಕೂಗಿದರು ಐದಾರು ಜನ ಬಾಡಿಗೆ ಗಾಡಿಯವರು. ತುಂಬಾ ಹುಮ್ಮಸ್ಸಿನಿಂದ ಅವರನ್ನು ಸುತ್ತುಗಟ್ಟಿ ಕಿರಿಚಿದರು: ''ಶುರು ಮಾಡಯ್ಯ!''

''ಏನು ವಿಷಯ?'' ಎಂದು ಕರಿಯ ಕ್ಯಾಲಿಕೋ ತೋಳಿನ ಒಬ್ಬ ಕೇಳಿದ.

''ವಿಷಯ!'' ಚಾಲಕ ಉತ್ತರಿಸಿದ, ''ನನ್ನ ನಂಬರ್ ಇವನಿಗೇಕೆ ಬೇಕಿತ್ತು?''

''ನಿನ್ನ ನಂಬರ್ ಕಟ್ಟಿಕೊಂಡು ನನಗೇನಯ್ಯ?'' ಎಂದರು ಆಶ್ಚರ್ಯ ಚಕಿತರಾದ ಮಾನ್ಯ ಪಿಕ್‌ವಿಕ್.

''ಹಾಗಾದರೆ ಅದನ್ನು ಬರೆದುಕೊಂಡದ್ದು ಏಕೆ?''

ಕೋಪದಿಂದ ಮಾನ್ಯ ಪಿಕೌಕ್ ಹೇಳಿದರು: ''ನಾನೇನೂ ನಿನ್ನ ನಂಬರ್ ಬರೆದುಕೊಳ್ಳಲಿಲ್ಲ.''

''ಇದನ್ನು ಯಾರಾದರೂ ನಂಬುತ್ತೀರಾ?'' ಚಾಲಕ ಗುಂಪಿಗೆ ಮೊರೆಯಿಟ್ಟ, ''ಒಬ್ಬನ ಗಾಡಿಯಲ್ಲಿ ಪತ್ತೆದಾರ ಕುಳಿತುಕೊಳ್ಳುತ್ತಾನೆ. ಅವನ ನಂಬರನ್ನು ಮಾತ್ರವಲ್ಲ, ಅವನು ಹೇಳಿದ ಪ್ರತಿಯೊಂದು ಮಾತನ್ನೂ ಬರೆದುಕೊಳ್ಳುತ್ತಾನೆ! ಯಾರಾದರೂ ನಂಬುತ್ತೀರಾ?'' (ಮಾನ್ಯ ಪಿಕ್‌ವಿಕ್‌ಗೆ ತಕ್ಷಣ ಬೆಳಕು ಕಂಡಿತು - ಇದೆಲ್ಲಾ ಅವರ ನೋಟು ಪುಸ್ತಕದಿಂದ)

''ಬರೆದು ಕೊಂಡನೊ?'' - ಕೇಳಿದ ಇನ್ನೊಬ್ಬ ಚಾಲಕ.

''ಹ್ದು ಖಂಡಿತ! ಅಷ್ಟೇ ಅಲ್ಲ, ನಾನು ಮೇಲೆ ಬೀಳುವಂತೆ ನನ್ನನ್ನು ಕೆರಳಿಸಿದ್ದೂ ಅಲ್ಲದೆ ಮೂರು ಜನ ಸಾಕ್ಷಿಗಳನ್ನೂ ಸಿದ್ಧಪಡಿಸಿದ್ದಾನೆ. ಆಗಲಿ, ತಿನ್ನುತ್ತಾನೆ! ನನಗೆ ಆರು ತಿಂಗಳು ಸಜಾ ಆಗುತ್ತೆ. ಅಷ್ಟೆತಾನೆ, ಬನ್ನಿ!'' ಎಂದವನೇ ತನ್ನ ಹ್ಯಾಟನ್ನು ನೆಲದ ಮೇಲೆ ಬಲವಾಗಿ ಒಗೆದ, ತನ್ನ ಸ್ವಂತ ಆಸ್ತಿ ಹಾಳಾದರೂ ಸ್ವಲ್ಪವೂ ಗಮನಿಸದೆ. ಆಮೇಲೆ ಆತ ಮಾನ್ಯ ಪಿಕ್‌ವಿಕ್ ಅವರ ಕನ್ನಡಕಗಳು ಹಾರಿ ಹೋಗುವಂತೆ ಮಾಡಿದ; ಮಾನ್ಯ ಪಿಕ್‌ವಿಕ್ ಅವರ ಮೂಗಿನ ಮೇಲೆ, ಆದರ ಹಿಂದೆಯೇ ಅವರ ಎದೆಯ ಮೇಲೆ, ಮೂರನೆಯದು ಸ್ನಾಡ್‌ಗ್ರ್ಯಾಸ್ ಅವರ ಕಣ್ಣಿನ ಮೇಲೆ, ನಾಲ್ಕನೆಯದು ವೈವಿಧ್ಯಕ್ಕೋ ಎಂಬಂತೆ ಟಪ್‌ಮನ್ ಅವರ ವೇಸ್ಟ್ ಕೋಟಿನ ಮೇಲೆ ಒಂದಾದ ಮೇಲೊಂದು ಗುದ್ದುಗಳನ್ನು ಪೇರಿಸಿದ. ಆಮೇಲೆ ರಸ್ತೆಗೆ ಕುಣಿಯುತ್ತಾ ನುಗ್ಗಿದ, ಮತ್ತೆ ನೆಲಗಟ್ಟಿಗೆ ಹಿಂದಕ್ಕೆ ಬಂದು ಹಂಗಾಮಿಯಾಗಿ ಮಾನ್ಯ ವಿಂಕಲ್ ಅವರ ದೇಹದೊಳಕ್ಕೆ ಸೇರಿಕೊಂಡಿದ್ದ ಉಸಿರನ್ನು ಹೊರ ಹಾಕಿದ. ಇಷ್ಟೆಲ್ಲಾ ನಡೆದದ್ದು ಕೇವಲ ಐದಾರು ಸೆಕೆಂಡುಗಳಲ್ಲಿ.

''ಎಲ್ಲಯ್ಯ, ಆ ಪೋಲೀಸಿನವನು?'' ಸ್ನಾಡ್‌ಗ್ರ್ಯಾಸ್ ಕೇಳಿದರು.

''ಅವರನ್ನೆಲ್ಲ ನಲ್ಲಿ ಕೆಳಗೆ ನಿಲ್ಲಿಸಿ'' ಎಂದು ಸೂಚಿಸಿದ ಒಬ್ಬ ಬಿಸಿ ಕಡುಬು ಮಾರುವವನು.

''ಇದರ ಫಲವನ್ನು ನೀನು ಅನುಭವಿಸುತ್ತೀಯೆ'' ಮಾನ್ಯ ಪಿಕ್‌ವಿಕ್ ಏದುಸಿರು ಬಿಡುತ್ತಾ ಹೇಳಿದರು.

ಗುಂಪು ಕಿರಿಚಿತು ''ಗೂಢಚಾರರು!''

''ಬನ್ನಿರೋ'' ಎಂದು ಕೂಗಿದ, ಒಂದು ಕ್ಷಣವೂ ಬಿಡುವಿಲ್ಲದೆ ಮುಷ್ಟಿಯನ್ನು ತಿರುಗಿಸುತ್ತಲೇ ಇದ್ದ ಚಾಲಕ.

ಇದುವರೆಗೂ ನಿಷ್ಕ್ರಿಯ ಪ್ರೇಕ್ಷಕರಾಗಿದ್ದ ಆ ಗುಂಪು, ಪಿಕ್‌ವಿಕರು ಗೂಢಚಾರರು ಎಂಬ ಸುದ್ದಿ ಹರಡುತ್ತಲೇ, ಕಡಬು ಮಾರುವವನ ಸೂಚನೆಯನ್ನು ಕಾರ್ಯರೂಪಕ್ಕೆ ತರುವುದರ ಔಚಿತ್ಯವನ್ನು ಗಮನೀಯ ಉತ್ಸಾಹದಿಂದ ಪ್ರಚಾರ ಮಾಡಲು ತೊಡಗಿತು. ಆ ಕ್ಷಣಕ್ಕೆ ಹೊಸಬನೊಬ್ಬ ಮಧ್ಯೆ ಪ್ರವೇಶಿಸಿ ಆ ಜಗಳವನ್ನು ಅನಿರೀಕ್ಷಿತವಾಗಿ ಮುಗಿಸದಿದ್ದರೆ ಅವರ ಮೇಲೆ ಇನ್ನೂ ಯಾವ ತೆರನಾದ ಹಲ್ಲೆಗಳು ನಡೆಯುತ್ತಿದ್ದುವೋ ಹೇಳುವುದು ಕಷ್ಟ.

ದಿಢೀರನೆ ಗಾಡಿ ಮಾಳದಿಂದ ಬಂದ ಆ ಹಸುರು ಕೋಟಿನ ಎತ್ತರದ ತೆಳ್ಳನೆಯ ಯುವಕ ಕೇಳಿದ ''ಏನಿದು, ಹುಡುಗಾಟ?''

''ಗೂಢಚಾರರು!'' ಮತ್ತೆ ಗುಂಪು ಕೂಗಿತು.

''ನಾವಲ್ಲ'' ಎಂದು ಗುಡುಗಿದರು ಮಾನ್ಯ ಪಿಕ್‌ವಿಕ್, ಯಾವನೇ ನಿಷ್ಪಕ್ಷಪಾತ ಕೇಳುಗನಿಗೂ ನಂಬಿಕೆಯನ್ನು ಹುಟ್ಟಿಸುವ ದನಿಯಲ್ಲಿ. ''ಅಲ್ಲವ್ವೋ, ಅಲ್ಲವ್ವೋ?'' ಎಂದು ಪಿಕ್‌ವಿಕ್ ಅವರ ಕಡೆಗೆ ಮುಂದುವರಿಯುತ್ತ ಯುವಕ ಕೇಳಿದ.

ಆಗ ವಿದ್ವಾಂಸರಾದ ಪಿಕ್‌ವಿಕ್ ಮಹಾಶಯರು ಕೆಲವೇ ಅವಸರದ ಮಾತುಗಳಲ್ಲಿ ಸಂದರ್ಭದ ವಾಸ್ತವ ಸ್ಥಿತಿಯನ್ನು ವಿವರಿಸಿದರು.


''ಹಾಗಾದರೆ ಬನ್ನಿ'' ಎಂದು ಆ ಹಸುರು ಕೋಟಿನವ ಪಿಕ್‌ವಿಕ್ ಮಹಾಶಯರನ್ನು ಪ್ರಯಾಸದಿಂದ ಎಳೆದು ಒಯ್ಯುತ್ತಾ, ಉದ್ದಕ್ಕೂ ಮಾತನಾಡುತ್ತಲೇ ಹೋದ. ''ನೋಡಯ್ಯ, 924, ನಿನ್ನ ಬಾಡಿಗೆ ತೊಗೊ. ನಡಿ ಇಲ್ಲಿಂದ-ಗೌರವಸ್ಥರು, ಬಲ್ಲೆ ನಾನು ಚೆನ್ನಾಗಿ ಬಲ್ಲೆ - ನಿನ್ನಾಟ ಏನೂ ನಡೆಯುವುದಿಲ್ಲ - ಹೀಗೆ ಸ್ವಾಮಿ, ಹೀಗೆ ದಯಮಾಡಿಸಿ - ನಿಮ್ಮ ಮಿತ್ರರೆಲ್ಲಿ? - ಎಲ್ಲ ಅಚಾತುರ್ಯದಿಂದ! - ಚಿಂತಿಸಬೇಡಿ - ಆಕಸ್ಮಿಕಗಳು ನಡೆಯುತ್ತವೆ - ಒಳ್ಳೆ ವ್ಯವಸ್ಥಿತ ಸಂಸಾರಗಳು - ಧೈರ್ಯದಿಂದಿರಿ - ಸ್ವಲ್ಪ ಅದೃಷ್ಟಹೀನ ಅಷ್ಟೆ - ಸರಿಯಾಗಿ ಬುದ್ಧಿ ಹೇಳಬೇಕು - ಮೂರ್ಖರು!'' ಹೀಗೆಯೇ ಮುರುಕು ವಾಕ್ಯಗಳ ದೀರ್ಘವಾದ ಸರಪಣಿಯನ್ನು ಬೆಳೆಸುತ್ತಾ, ನಿರರ್ಗಳವಾಗಿ ಮಾತಾಡುತ್ತಾ, ಆ ಅಪರಿಚಿತ ಯುವಕ ಪ್ರಯಾಣಿಕರು ಕಾಯುವ ಕೋಣೆಯತ್ತ ನಡೆದ. ಮಾನ್ಯ ಪಿಕ್‌ವಿಕ್ ಅವರು ಅವರ ಶಿಷ್ಯರೂ ಅವನನ್ನು ಹಿಂಬಾಲಿಸಿದರು.

''ಮಾಣಿ!'' ಅಪರಿಚಿತ, ಗಟ್ಟಿಯಾಗಿ ಬಲವನ್ನೆಲ್ಲ ಪ್ರಯೋಗಿಸಿ ಗಂಟೆ ಬಾರಿಸಿದ. ''ಗ್ಲಾಸುಗಳನ್ನು ತಾ! ಬ್ರಾಂದಿ-ನೀರು-ಬಿಸಿಯಾಗಿರಲಿ, ಸ್ಟ್ರಾಂಗಾಗಿರಲಿ, ಸಿಹಿಯಾಗಿರಲಿ, ಬೇಕಾದಷ್ಟಿರಲಿ-ಕಣ್ಣು ಜಜ್ಜಿತೆ ಸ್ವಾಮಿ? ಹಸಿ ದನದ ಮಾಂಸದ ಚೂರು-ಈ ಮಹಾಶಯರ ಕಣ್ಣಿಗೆ ಬಹಳ ಒಳ್ಳೆಯದು - ಮೂಗು ಗಾಯಕ್ಕೆ ಹಸಿ ದನದ ಮಾಂಸದ ಸಮಾನ ಯಾವುದೂ ಇಲ್ಲ; ತಣ್ಣಗೆ ಕೊರೆಯುವ ಬೀದಿ ದೀಪದ ಕಂಬ ಕೂಡ ಬಹಳ

ಒಳ್ಳೆಯದು. ಆದರೆ ಅದು ಬಹಳ ಅನಾನುಕೂಲ. ರಸ್ತೆಯಲ್ಲಿ ಅರ್ಧಗಂಟೆ ಕಣ್ಣನ್ನು ದೀಪದ ಕಂಬಕ್ಕೆ ಹಚ್ಚಿನಿಲ್ಲೋದು ಎಷ್ಟು ವಿಚಿತ್ರ ನೋಡಿ! - ಹಾ! ಹಾ! ಒಳ್ಳೆಯದು! ಹಾ ಹಾ!'' ಉಸಿರಿಗೂ ನಿಲ್ಲಿಸದೆ ಅಪರಿಚಿತ ಒಂದೇ ಗುಟುಕಿಗೆ ಹಬೆಯಾಡುತ್ತಿದ್ದ ಬ್ರಾಂದಿ-ನೀರುಗಳ ಅರ್ಧ ಪೈಂಟನ್ನು ಗೊಟಕ್ಕನೆ ಕುಡಿದು, ಅಸಾಧಾರಣವಾದದ್ದು ಏನೂ ನಡೆಯಲಿಲ್ಲ ಎನ್ನುವಂತೆ ಕುರ್ಚಿಯಲ್ಲಿ ಕುಸಿದ.

ತಮ್ಮ ಮೂವರು ಸಂಗಾತಿಗಳು ಈ ಹೊಸ ಪರಿಚಯಸ್ಥನಿಗೆ ವಂದನೆಗಳನ್ನು ಎಡೆಬಿಡದೆ ಸಮರ್ಪಿಸುತ್ತಿದ್ದಾಗ ಮಾನ್ಯ ಪಿಕ್‌ವಿಕ್ ಮಹಾಶಯರಿಗೆ ಆತನ ಉಡುಪು ಮತ್ತು ಚಹರೆಗಳನ್ನು ಪರೀಕ್ಷಿಸಲು ವಿರಾಮ ದೊರಕಿತು.

ಅವನು ಸುಮಾರು ಮಧ್ಯ ಎತ್ತರದವನು, ಆದರೆ ಅವನ ದೇಹ ತೆಳುವಾಗಿದ್ದುದರಿಂದ. ಕಾಲುಗಳು ನೀಳವಾಗಿದ್ದದ್ದರಿಂದ ಅವನು ಇದ್ದದ್ದಕ್ಕಿಂತ ಹೆಚ್ಚು ಎತ್ತರವಾಗಿ ಕಾಣಿಸುತ್ತಿದ್ದ. ಅವನ ಮುಖ ತೆಳು ಮತ್ತು ಮೂಳೆ ಮೂಳೆ, ಆದರೆ ಒಂದು ರೀತಿಯ ವರ್ಣಿಸಲಾಗದ ಉಲ್ಲಾಸಕರ ಉದ್ಧಟತನದ ಮತ್ತು ಸಂಪೂರ್ಣ ಸ್ವಸ್ಥ ಚಿತ್ತತೆ ಅವನ ತುಂಬ ತುಂಬಿತ್ತು. (ಅದೃಷ್ಟವಶಾತ್ ಮತ್ತೆ ತಾವು ಹಿಂದಕ್ಕೆ ಪಡೆದುಕೊಂಡಿದ್ದ) ಕನ್ನಡಕದ ಮೂಲಕ ಪಿಕ್‌ವಿಕ್ ಮಹಾಶಯರು ದೃಷ್ಟಿಸಿ ನೋಡಿದ ವ್ಯಕ್ತಿ ಹಾಗಿದ್ದನು. ತಮ್ಮ ಮಿತ್ರರು ವಂದನೆಗಳನ್ನು ಅರ್ಪಿಸಿ ಆಯಾಸಗೊಂಡ ನಂತರ ಪಿಕ್‌ವಿಕ್ ಮಹಾಶಯರು ಆರಿಸಿದ ಶಬ್ದಗಳಲ್ಲಿ ಆತನಿಗೆ ಅತ್ಯಂತ ಹೃದಯಸ್ಪರ್ಶಿಯಾದ ಮಾತುಗಳಿಂದ ಅವನ ಇತ್ತೀಚಿನ ಸಹಾಯಕ್ಕಾಗಿ ವಂದನೆಗಳನ್ನು ಸಲ್ಲಿಸಿದರು.



ಮಾತಾಡೋದನ್ನ ಕಲಿತದ್ದಾಯಿತಲ್ಲಾ, ಇನ್ನು ಒಂದು ಕೋರ್ಟ್‌ನ ಯಾಕೆ ಸೃಷ್ಟಿಸಬಾರ್ದೂ ಅಂತೀನಿ



ಆಪರೇಷನ್ -ವೃಷಭಾವತಿ!

⊙ ಹಾ.ರಾ.

ಮಹಾನಗರದ ಜಲಮಂಡಳಿ ಬೋರ್ಡಿಗೆ ಸರ್ಕಾರ ಮಂಜೂರು ಮಾಡಿದ್ದ ಮೂರು ಕೋಟಿ ರೂಪಾಯಿಗಳ ಚರಂಡಿ ಪ್ರಾಜೆಕ್ಟಿನಲ್ಲಿ ಅವ್ಯವಹಾರ ನಡೆದಿದೆ ಎಂದು ಸರ್ಕಾರಕ್ಕೆ ದೂರು ಹೋಗುವುದಕ್ಕೆ ಮುನ್ನವೇ ನುಂಗಿ ಬೀರು ಕುಡಿದಿದ್ದನ್ನೆಲ್ಲ ಸರಿದೂಗಿಸಿ ಲೆಕ್ಕದ ಪುಸ್ತಕಗಳಲ್ಲಿ "Checked and found correct" ಎಂದು ಹಣಕಾಸಿನ ಅಧಿಕಾರಿಯಾದ ರಾಮಭಟ್ಟನೇ ಬರೆದು ನಿರ್ಭಯವಾಗಿ ರುಜು ಮಾಡಿದ್ದ. ಗುಮಾನೆ ಬರದ ಹಾಗೆ ಫೈಲುಗಳನ್ನು ಅಳಿಸಿ-ಬೆಳಸಿ ಕೆಲಸದ 'ಕಂಪ್ಲೀಷನ್ ರಿಪೋರ್ಟ್'ಗಳನ್ನು ತಯಾರಿಸಿದವನು ಸೆಕ್ಷನ್ ಸೂಪರ್‌ಡೆಂಟ್ ಲಕ್ಷ್ಮಣದಾಸ. ಸಿಲಿಕಾನ್ ಸಿಟಿಯ ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಮಿನ INFO ಪ್ರಕಾರ ಕೆಲಸಕ್ಕೆ ಟೆಂಡರೂ ಇಲ್ಲ, ಕಂಟ್ರಾಕ್ಟೂ ಇಲ್ಲ. ಫೈಲು ಪ್ರಕಾರ ಲಕ್ಷಾಂತರ ರೂಪಾಯಿಗಳ ಕೆಲಸ ಮುಗಿದು ಹೋಗಿದೆ! ಎಲ್ಲಿ ನೋಡಿದರೂ ಬಿಲ್ಲು, ಹಣಪಾವ್ತಿ ವೋಚರುಗಳು! ಮುಖ್ಯ ಇಂಜಿನಿಯರ್ ಸಾಹೇಬ್ರು ಇನ್‌ಸ್ಪೆಕ್ಷನ್ನಿಗೆ ಬಂದಾಗ ನೀಲಿ ಪೆನ್ಸಲ್‌ನಲ್ಲಿ ಸ್ಕೆಚ್ ಹಾಕಿ ತೋರಿಸಿದರು ಅಷ್ಟೆ! ಸರ್ವೇಯರ್‌ಗಳು ಟೇಪ್ ಹಿಡಿದುಕೊಂಡು ಬೀದಿಗಳನ್ನು ಅಳೆದಿದ್ದೂ ಅಳೆದಿದ್ದೆ! ಅಧ್ಯಕ್ಷರು ಒಳಚರಂಡಿ ಉದ್ಘಾಟನೆಗೆ ರಹಸ್ಯವಾಗಿ ಭಾಷಣ ಬರೆಸಿಕೊಂಡು ಸಿದ್ಧವಾಗಿ ಕೂತುಬಿಟ್ಟಿದ್ದರು ಕತ್ತರಿ ಹಿಡಿದುಕೊಂಡು! ಅಲ್ಲೊಂದು ಇಲ್ಲೊಂದು ನಿರ್ಮಾಣವಾಗಿದ್ದ ಮ್ಯಾನ್‌ಹೋಲ್‌ಗಳಲ್ಲಿ ಕಸಕಡ್ಡಿ ತುಂಬಿಕೊಂಡು ಬೀದಿಯಲ್ಲಿ ಗಬ್ ವಾಸನೆ ಹೊಡೆಯಲು ಶುರುವಾಯಿತು. ಮೀಡಿಯ ಮೂಗು ಚುರುಕಾಯಿತು. ಸ್ಯೂಯೇಜ್ ಸ್ಕ್ಯಾಮ್' ಅಂತ ರಂಗುರಂಗಿನ ಕಥೆಗಳನ್ನು ಬರೆದು ಜನಗಳನ್ನು ಖುಷಿಪಡಿಸಿದರು! ಇಷ್ಟೆಲ್ಲ ಆದಮೇಲೆ ಒಳಚರಂಡಿ ಫೈಲುಗಳು ಬೀರಿದ ದುರ್ನಾಥ ಲೋಕಾಯುಕ್ತರ ಮೂಗಿಗೆ ಬಡಿಯದೆ ಇದ್ದೀತೆ! ಅವರು ಸುಮ್ಮನೆ ಕೂರುತ್ತಾರೆಯೆ? ರಹಸ್ಯ ತನಿಖೆ ಆರಂಭವಾಯಿತು. ರಾಮ ಲಕ್ಷ್ಮಣರು ಜೋಲು ಮುಖ ಹಾಕಿದರು! ಜೈಲು - ರೈಲು ತಪ್ಪಿಸಿಕೊಳ್ಳೋಕೆ ಅವರು ಹೂಡಿದ ಸಂಚಿ ''ಆಪರೇಷನ್ ವೃಷಭಾವತಿ''!

ಅವತ್ತು ಶ್ರಾವಣ ಶನಿವಾರ. ಮಧ್ಯರಾತ್ರಿ. ಲಕ್ಷ್ಮಣದಾಸ ಹಠಾತ್ತನೆ ಹಾಸಿಗೆ ಮೇಲೆ ಎದ್ದು ಕೂತುಕೊಂಡು ಕುಂಕಮಕಲಿಸಿ ಹಣೆ ಮೇಲೆ ಪಟ್ಟೆ ನಾಮ ಬಳಿದು NDTVಯವರು ಹೇಳೋ ಹಾಗೆ 24x7 ಎಂದ! ಅಲ್ಲೇ ಮಲಗಿದ್ದ ಲಿಂಗೋಜಿ

ನಿದ್ದೆಗಣ್ಣಲ್ಲಿದ್ದು ಕಣ್ಣುಜ್ಜಿಕೊಳ್ಳುತ್ತ 168 ಎಂದ ಥಟ್ಟನೇ 'ಗುಣಾಕಾರ ಮಾಡು ಅಂತ ನಿನಗೆ ಯಾರು ಹೇಳಿದರು. ಅದು ಪತ್ತೆದಾರಿ ಚಿಹ್ನೆ, ನನ್ನ ರುದ್ರಾಕ್ಷಿ ಸರದ ಗಂಟು ತಾ' ಎಂದ ಲಕ್ಷ್ಮಣದಾಸ. 'ವಾರಾಂತ್ಯವೂ ದಿನವಿಡಿ 24 ಗಂಟೆ ರಾಮ ನಾಮ ಸ್ಮರಣೆ ಮಾಡು, ಕೋಟಿ ರಾಮನಾಮ ಬರೆದು ಯಜ್ಞ ಮಾಡು' ಅಂತ ನನಗೆ ಅಂತರಾತ್ಮನ ಪ್ರೇರಣೆಯಾಗಿದೆ ಎನ್ನುತ್ತ 'ಆಂಜನೇಯ ರಾಮನ ಭಂಟ - ತಿರುಪತಿ ಎಂಬುದು ವೈಕುಂಠ ಎಂದು ಚಪ್ಪಾಳೆ ತಟ್ಟುತ್ತಾ ಭಜನೆ ಪ್ರಾರಂಭಿಸಿಯೇಬಿಟ್ಟ! ಹೆಂಡತಿ ಊರ್ಮಿಳಾಬಾಯಿ ಗಾಬರಿಯಿಂದ ಎದ್ದು ನಿಂಬೆ ಹಣ್ಣಿನ ಪಾನಕ ಮಾಡಿ ಸಾಸರ್‌ನಲ್ಲಿ ಹಾಕಿ ಕುಡಿಸಿದಳು, ಸಾರ್ಸ್ ಹೊಕ್ಕಿದ್ದರೆ ಸಾಸರೊಳಕ್ಕೆ ಉಗಿಯಲಿ ಅಂತ! ಒಂದು ವಾರ ನಡೆಯಿತು ಭಜನೆ. ಅತ್ತೆಗೆ ಎರಡು ವಾರಗಳಿಂದಲೂ ಏನೋ ಅನುಮಾನ ಕಾಡುತ್ತಿತ್ತು. ನಡುರಾತ್ರಿಯವರೆಗೆ ಟೀವಿ ನೋಡೋ ಚಟ ಆಕೆಗೆ. ತ್ರಿಶೂಲ, ಕಾವಿ ನಿಲುವಂಗಿ, ಕೇಸರಿಬಣ್ಣದ ಶಲ್ಯ, 10 ಡಜನ್ ಲೇಖಿಕ್ ನೋಟ್ ಬುಕ್ಕುಗಳನ್ನು ಮಗ ತಂದು ಮಂಚದ ಕೆಳಗೆ ಒಂದು ರಾತ್ರಿ ಸೇರಿಸಿದ್ದನ್ನು ಆಕೆ ಕಂಡಿದ್ದಳು. ಬೆಳಿಗ್ಗೆ ಭಜನೆ, ರಾತ್ರಿ ರಾಮ ನಾಮದ ಕಾಪಿ ಕೈಂಕರ್ಯ ಸೀರಿಯಲ್ ನೋಡಿದ ಹಾಗೆ ಆಯ್ತು - ಮಗನ ನಡವಳಿಕೆ ಬಗ್ಗೆ ಅನುಮಾನ ಬಂತು. ರಾತ್ರಿ ಮೊಮ್ಮಗ ಲಿಂಗೋಜಿಯನ್ನು ಹತ್ತಿರ ಕೂರಿಸಿಕೊಂಡು ತಲೆ ನೇವರಿಸುತ್ತ "ಬೈರಪ್ಪನವರನ್ನು ಹ್ಯಾಗಾರ ಮಾಡಿ ಮನೆಗೆ ಕರೆದುಕೊಂಡು ಬಾರೋ ಲಿಂಗು, ಗೃಹಭಂಗದ ಎರಡನೆ ಭಾಗಕ್ಕೆ ನಮ್ಮನೇಲಿ ಪ್ಲಾಟಿದೆ ಅಂತ ಹೇಳು. ಹಾಗೇ ಕಾಸರವಳ್ಳಿಯವರ ಅಡ್ರೆಸ್ಸನ್ನೂ ತಿಳಿದುಕೊಂಡು ಬಾ" ಎಂದಳು. ಲಿಂಗೋಜಿಗೆ ಆಗತಾನೆ ಪ್ರಪಂಚ ವ್ಯವಹಾರ ಜ್ಞಾನ ಬರುತ್ತಿತ್ತು. PUC ಮುಗಿಸಿ CET ಅಂತ ಓಡಾಡಿ. B.D.A. ಸೈಟಿಗೆ ಅರ್ಜಿಹಾಕಿದ್ದ!

ಲಕ್ಷ್ಮಣ ದಾಸನಿಗೆ ಬುದ್ಧಿ ಮಂಕಾದ ಹಾಗೆಲ್ಲ ಗಡ್ಡ ಬಲಿಯುತ್ತ ಬಂತು! ಅವನ ಬಾಳಿನಲ್ಲಿ ನಡೆದಿದ್ದು ಒಂದು ಪವಾಡ. ಪರಮಾತ್ಮನ ಪ್ರೇರಣೆ ಅಂತ ಹೇಳಿದರೂ ಲಕ್ಷ್ಮಣದಾಸ ಬೆಪ್ಪನಲ್ಲ. ವೈರಾಗ್ಯವೋ, ಬೈರಾಗ್ಯವೋ, ಬೂಟಾಟಿಕೆಯೇ - ಭೂತ ಚೇಷ್ಟೆಯೋ ಊರ್ಮಿಳಾ ಬಾಯಿಗೆ ಮೊದ ಮೊದಲು ಗೊತ್ತೇ ಆಗಲಿಲ್ಲ. ಶಾಸ್ತ್ರ ಕೇಳಿ ಅಂತ ಅಕ್ಕ ಪಕ್ಕದ ಮನೆಯವರು ಸಲಹೆ ಕೊಟ್ಟರೂ ಆ ನಾರಿಮಣಿ, ಗಂಡನ ಗಡ್ಡ ತೋರಿಸಿ ಮುಖ ಅವಲಕ್ಷಣ ಅಂತ ಅನ್ನಿಸಿ ಕೊಳ್ಳೋದ್ಯಾಕೆ, ರಾಮನಾಮ ಬರ್‍ಕೊಂಡು ಶಾಂತವಾಗಿದೆಯಲ್ಲ ಭೂತ. ಕೋಟಿ ರಾಮನಾಮ ಬರದು ಅಯೋಧ್ಯೆಗೆ ಹೋಗಿ ಯಜ್ಞ ಮಾಡಿದರೆ ಅದರಲ್ಲಿ ಪುಣ್ಯ ಅರ್ಧ ತನಗೂ ಇದ್ದೇ ಇದೆ ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡು, ಗಂಡನ ಅಯೋಧ್ಯಾ ಪ್ರಯಾಣದ ಕನಸನ್ನು ಕಾಣುತ್ತ ಇಳಿಜಾರು ಮಣೆ ಮೇಲೆ ನೋಟು ಬುಕ್ಕು, ಪೆನ್ನು ಇಟ್ಟು ದುಃಖಿತಪ್ತಳಾಗುತ್ತಿದ್ದಳು ಊರ್ಮಿಳಾಬಾಯಿ, ಅಶೋಕವನದಲ್ಲಿ ರಾಮನ ಬರುವಿಕೆಯನ್ನು ಕಾಯುತ್ತ ಕೂತಿದ್ದ

ಸೀತಕ್ಕನನ್ನು ನೆನಸಿಕೊಂಡು! ಒಂದು ದಿನ ಲಕ್ಷ್ಮಣದಾಸ ಶ್ಯಾವಿಗೆ ಉಪ್ಪಿಟ್ಟು ತಿಂದು ಕಾಫಿ ಕುಡಿಯುತ್ತ ಗಡ್ಡದ ಮೇಲೆ ನಾಲಿಗೆ ಆಡಿಸಿದ್ದನ್ನು ಕಂಡಳು! ಈ ಅಭ್ಯಾಸ ಬಲದಿಂದಲಾದರೂ ಯಜಮಾನರು ಗಡ್ಡವನ್ನು ಧ್ವಂಸಮಾಡಿ ನುಂಗುತ್ತಾರೇನೋ ಅಂತ ಟಿಫನ್ನಿಗೆ ಆಕೆ ಶ್ಯಾವಿಗೆ ಉಪ್ಪಿಟ್ಟನ್ನೇ ಪ್ರತಿನಿತ್ಯವೂ ಮಾಡಲು ಪ್ರಾರಂಭಿಸಿದಳು. PUCಯಲ್ಲಿ ಮೈಕ್ರೋ ಬಯಾಲಜಿ ಓದಿದ್ದ ಲಿಂಗೋಜಿ ಇದರಲ್ಲಿ ಏನೋ ರಹಸ್ಯವಿದೆ ಎಂದರಿತು ಪತ್ತೇದಾರಿ ಕೆಲಸಕ್ಕೆ ಪ್ರಾರಂಭಿಸಿದ!

ಲೋಕಾಯುಕ್ತರ ಧಾಳಿ ಗಾಳಿ ಬಲವಾಗಿ ಬೀಸಲು ಪ್ರಾರಂಭವಾಯಿತು. ಈ ಕುತ್ತದಿಂದ ಪಾರಾಗಲು ಅವರು ಶ್ರೀ ರಾಂಪುರದ ಅರಳಿ ಕಟ್ಟೆಯ ಮೇಲೆ ಕೂತು ಒಂದು ನೀಚ ಕೆಲಸ ಮಾಡಲು ಇಬ್ಬರೂ ಒಪ್ಪಂದ ಮಾಡಿಕೊಂಡರು. ಭಾನುವಾರ ಪೆಂಡಿಂಗ್ ಕೆಲಸ ಮುಗಿಸುವ ಸಬೂಬು ಆಫೀಸಿಗೆ ಹೋದವರು ಜೈ ಹನುಮಾನ್ ಮಂತ್ರವನ್ನು ಜಪಿಸುತ್ತ ಮೂರು ಕೋಟಿ ಒಳ ಚರಂಡಿ ಪ್ರಾಜೆಕ್ಟಿನ ಕಡತಗಳನ್ನು ಲೆಡ್ಜರ್ ಸಮೇತ ಸೇರಿಸಿ ಮೂಟೆ ಕಟ್ಟಿ ಒಂದು ಆಟೋದಲ್ಲಿ ಲಕ್ಷ್ಮಣದಾಸನ ಮನೆಗೆ ಸಾಗಿಸಿದರು! ಲೆಕ್ಕಗಳನ್ನು ಆಡಿಟ್ ಮಾಡಲು ಸಾಹೇಬರು ಆಜ್ಞೆ ಮಾಡಿದ್ದಾರೆಂದು ಹೇಳಿ ಮನೆಯಲ್ಲಿ ಹ್ಯಾಗೋ ಬಚಾವಾದರು!

ತಿಂಗಳುಗಳು ಕಳೆದಂತೆಲ್ಲ ಲಕ್ಷ್ಮಣದಾಸನು ಬಿಲ್ ಲ್ಯಾಡನ್ ಕೂಟದ ಸದಸ್ಯನಂತೆ ಕಂಗೊಳಿಸಿದನು! ಅವನು ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಫೈಲುಗಳ ಮೂಟೆಯನ್ನು ತಲೆದಿಂಬು ಮಾಡಿಕೊಂಡು ಮಲಗಿದ್ದರಿಂದ ಅವನಿಗೆ ಕತ್ತುನೋವು ಕಾಣಿಸಿಕೊಂಡಿತು. ಬಾಬಾಬುಡನ್ ಗಿರಿಯಿಂದ ತಾಯಿತ ತರಿಸಿ ಕುತ್ತಿಗೆಗೆ ಕಟ್ಟಿದರೆ ಕತ್ತು ನೆಟ್ಟಗೆ ನಿಲ್ಲುತ್ತೆ ಅಂತ ಯಾರೋ ಹೇಳಿದರು. ಆದರೆ ಗಡ್ಡದ ಪುಲ್ಲಿಂಗ್‌ಪವರ್ ಅಧೋಮುಖವಾಗಿದ್ದುದರಿಂದ ಯಂತ್ರ ಕೆಲಸ ಮಾಡಲಿಲ್ಲ ಎಂದು ಗೊತ್ತಾಯ್ತು. ಇದೇನು ಹಾಳುಮೂಟೆ ಚುಂಚನಗಿರಿ ಬೆಟ್ಟದ ಹಾಗೆ ಚೂಪಾಗಿದೆ, ಇದನ್ನು ಯಾರಾದರೂ ತಲೆದಿಂಬಾಗಿಟ್ಟುಕೊಳ್ಳುತ್ತಾರೆಯೆ, ಎಂದು ಬುದ್ಧಿವಾದ ಹೇಳಿ ರಾಮನು ಬರೆದಿದ್ದ ಪುಸ್ತಕವನ್ನು ತಲೆಮೇಲಿಟ್ಟುಕೊಳ್ಳಬೇಕೇ ಹೊರತು, ತಲೆ ಕೆಳಗೆ ಹಾಕಿಕೊಳ್ಳಬಾರದು. ಅದರಿಂದ ಅನಾಹುತ ಆದರೂ ಆಗಬಹುದು ಎಂದು ಗೃಹಭಂಗವನ್ನು ಕಣ್ಣಾರೆ ಕಾಣುತ್ತಿದ್ದ ತಾಯಿ ಆಕ್ಷೇಪಣೆ ಮಾಡಿ 'ಬೇಕಾದರೆ ಮುಖ ಕೆಳಗೆ ಮಾಡಿಕೊಂಡು ಅಂಗಾತ ಮಲಗಿಕೋ' ಎಂದು ಸಲಹೆ ಕೊಟ್ಟರು! ಲಕ್ಷ್ಮಣ ದಾಸ ಎರಡು ದಿನ ಹಾಗೇ ಮಾಡಿದ. ಭರತನಾಟ್ಯ ಆಡುವಂತೆ ಕುತ್ತಿಗೆ ಹಾಗೊಮ್ಮೆ ಹೀಗೊಮ್ಮೆ ತೂಗಾಡಲು ಪ್ರಾರಂಭಿಸಿತು. ರಾಮಭಟ್ಟ ಹಠಾತ್ತನೆ ಕಾಣಿಸಿಕೊಂಡು 'ಏನು ಕೇಳಿದರೂ ತಲೆ ಅಲ್ಲಾಡಿಸ್ತೀಯಲ್ಲ. ತಿಂದು ಅರಗಿಸಿಕೊಳ್ಳೋ ತಾಕತ್ ಇದ್ದರೆ ಬಾಯ್ ಹಾಕಬೇಕು' ಎಂದು ಖಾರವಾಗಿ ನುಡಿದ. 'ನಾನೆಲ್ಲಿ ಬಾಯಿ ಹಾಕಿದೆ, ನೀನೇ ಅಲ್ಲವೆ ಬಾಯಿಗೆ

ಹಾಕಿದ್ದು' ಎಂದು ಲಕ್ಷ್ಮಣದಾಸ ಹೇಳಿದ್ದು ಹೆಂಡತಿ ಕಿವಿಗೆ ಬಿತ್ತು. ಯಜಮಾನರು ಆಫೀಸಿಗೆ ಹೋಗದೆ 'ಸಿಕ್‌ಲೀವ್' ಹಾಕಿ ಗಡ್ಡ ಬೆಳೆಸಿಕೊಂಡು ರಾಮನಾಮ ಬರೆದಿದ್ದು ಯಾವುದೋ ನೀಚ ಕೆಲಸ ಮಾಡಿದರ ಪರಿಣಾಮ ಎಂದು ಆಕೆಗೆ ಜ್ಞಾನೋದಯವಾಯಿತು! ಕೆಲಸ ಹೋದರೆ ಹೋಗಲಿ, ಗಂಡನಿಗೆ ಜೈಲಾದರೆ ಏನುಗತಿ ಎಂದು ಪರಿತಪಿಸಿದಳು. ಅವಳ ದುಃಖವನ್ನು ಅರ್ಥಮಾಡಿಕೊಳ್ಳುವವರು ಯಾರು? ಮಹಾ ಕಾವ್ಯವನ್ನು ಬರೆದ ವಾಲ್ಮೀಕಿಯೇ ಊರ್ಮಿಳೆಯ ಬಗ್ಗೆ ಅನಾದರ ತೋರಿಸಿಬಿಟ್ಟನಲ್ಲವೆ!

ಊರ್ಮಿಳಾಬಾಯಿ ಮುನಿದು ಮಾರಿಯಾಗಿ "24 ಗಂಟೆಗಳೊಳಗೆ ಎರಡು ಮೂಟೆಗಳನ್ನೂ ಮನೆಯಿಂದಾಚೆಗೆ ಸಾಗಿಸದೆ ಹೋದರೆ ತಾನೇ ಲೋಕಾಯುಕ್ತರನ್ನು ಭೇಟಿ ಮಾಡಿ ಎಲ್ಲ ಹೇಳಿಬಿಡುತ್ತೇನೆ" ಎಂದು ಬೆದರಿಕೆ ಹಾಕಿದಳು ಸಮಾಜ ಕಲ್ಯಾಣ ಖಾತೆಯ ಸಚಿವೆಯಂತೆ! ರಾಮಭಟ್ಟ ತತ್ತರಿಸಿಹೋದ. ಮುಂದೇನು ಎಂದು ಕಂಗಾಲಾಗಿದ್ದಾಗ ಶುಭ ಸೂಚನೆಯೋ ಎನ್ನುವಂತೆ ಮನೆಯ ಉತ್ತರ ದಿಕ್ಕಿನಲ್ಲಿ ಒಂದು ಪ್ರಕಾಶಮಾನವಾದ ಬೆಳಕು ದೂರದಲ್ಲಿ ಕಾಣಿಸಿತು - ಮಕರ ಜ್ಯೋತಿಯಂತೆ - ಹುಣ್ಣಿಮೆ ಚಂದ್ರನ ಹೊಂಬೆಳಕಿನ ಕಿರಣಗಳ ರಾಶಿಯಂತೆ! ಆದರೆ ಅದು ಬೇರೆ. ಹರಿಯಾಣದಿಂದ ಸರಕು ತಂದಿದ್ದ ಜೈ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪನಿಯ ಬೃಹತ್ ಲಾರಿ ಹೆಡ್ ಲೈಟುಗಳಿಗೆ ಹಾಕಿದ್ದ ಹ್ಯಾಲೋಜಿನ್ ಬಲ್ಬುಗಳು ದೂಡಿದ ಬೆಳಕಿನ ಪಥ ಅದು. ರಾಮಭಟ್ಟನ ತಲೆ ಮಿಂಚಿನ ವೇಗದಲ್ಲಿ ಕೆಲಸ ಮಾಡಿತು. ಲಾರಿ ಚಾಲಕ ಪಂಜಾಬಿನ ಸರ್ದಾರ್‌ಜಿ ಬೂಟಾಸಿಂಗ್ ಟೀ ಕುಡಿಯುತ್ತ ಊರಿಗೆ ಹಿಂದಿರುಗುವ ಸನ್ನಾಹದಲ್ಲಿದ್ದ. ರಾಮಭಟ್ಟ ಸರ್ದಾರ್‌ಜೀಗೆ 'ರಾಂ ರಾಂ' ಹೇಳುತ್ತ ತನಗೆ ಬಂದಿರುವ ಕಷ್ಟವನ್ನು ಹೇಳಿಕೊಂಡು ಸಹಾಯವನ್ನು ಕೋರಿದ. ಅಷ್ಟು ಹೊತ್ತಿಗೆ ಲಕ್ಷ್ಮಣದಾಸ ಕೇಸರಿ ಬಣ್ಣದ ನಿಲುವಂಗಿ ತೊಟ್ಟು ತ್ರಿಶೂಲ ಧರಿಸಿ ಗಡ್ಡ ನೀವುತ್ತ ಬಂದು, ಸರ್ದಾರ್‌ಜೀಗೆ, ಹರಕು ಮುರುಕು ಹಿಂದಿಯಲ್ಲಿ ಕೈಸಾ ಹೈ ಹಮಾರ ದೋಸ್ತ್ ಬಾದಲ್ ಅಮೃತಸರ್‌ಮೇ' ಎಂದು ಕೇಳುತ್ತ ಪ್ರಶ್ನೋತ್ತರ ಮಾಲೆಗೆ ಚಿನ್ನದ ಮುಲಾಮು ಹಚ್ಚಿದ 'ಗೋಲ್ಡನ್ ಟೆಂಪಲ್' ನಾನು ನೋಡಿದ್ದೇನೆ ಎನ್ನುವ ಅರ್ಥದಲ್ಲಿ. ಸರ್ದಾರ್‌ಜಿ ಫಾಟಿ! ಬಬ್ಬರ್ ಖಳಸ ಗುಂಪಿಗೆ ಸೇರಿದವನಿರಬೇಕು. "ತುಮ್ ಕರ್ನಾಟಕ ವಾಲ ಬಹುತ್ ಬೇ ಕೂಫ್ ಹೈ" ಎಂದು ಹೀಯಾಳಿಸಿದ. "ಕ್ಯಾ ಬೋಲ್ತಿ ತುಮ್, ಹಮಾರ ದೇಶ್ ಕ ಡಿಫೆನ್ಸ್ ಮಿನಿಸ್ಟರ್ ಕರ್ನಾಟಕ್‌ವಾಲಾ ಹೈ" ಎಂದ ರಾಮಬಟ್ಟ. 'ಅಚ್ಚ' ಅಚ್ಚ!' ಎನ್ನುತ್ತ ಸರ್ದಾರ್‌ಜಿ "ಕ್ಯಾರೆ ಭಟ್ಟ, ತುಮಾರ ಸ್ಟೇಟ್ ಮೇ ಪೀನೇಕಿ ಪಾನಿ ನಹಿ ಮಿಲ್ತೆ, ಪಾನಿ ಕಿದರ್‌ಗಯ?" ಎಂದು ಪ್ರಶ್ನೆ ಹಾಕಿದ. "ಕ್ಯಾ ಬಾತ್ ಹೈ ಸರ್ದಾರ್‌ಜೀ. ಕೆ.ಆರ್.ಎಸ್. ಖಾಲಿ ಹೋಗಯ. ಸಬ್ಸೆ ಪಾನಿ ಜಯಲಲಿತ ಪೀಕೆ, ಉಸ್ಕನಾರಿ ಅಗಸ್ತ್ಯ ಮುನೀಕ ಬೇಟಿ, ತುಂ ಕು

ಮಾಲುಮ್‌ನಹಿ'' ಎಂದು ಲಕ್ಷ್ಮಣದಾಸ ಹೇಳುತ್ತಿದ್ದ ಹಾಗೆ ಎಲ್ಲರೂ ನಗುವಿನ ಅಲೆಯಲ್ಲಿ ತೇಲಿದರು. ಅಣ್ಣ ತಮ್ಮ ಎರಡು ಮೂಟೆಗಳನ್ನೂ ಲಾರಿಗೆ ಹಾಕಿ ಪ್ರಯಾಣಕ್ಕೆ ಸಿದ್ಧರಾದರು. ಊರ್ಮಿಳಾ ಬಾಯಿ ಸುಖ ಪ್ರಯಾಣ ಕೋರಿದಳು. ಸರ್ದಾರ್‌ಜಿಗೆ ರಾಮರಸ ಎಂದರೆ ಇಷ್ಟ. ವಿಸ್ಕಿ ಬಾಟಲ್ಲನ್ನು ಪಕ್ಕದಲ್ಲೇ ಇಟ್ಟುಕೊಂಡ.

ಸುಮಾರು ಮಧ್ಯರಾತ್ರಿ 12 ಗಂಟೆ ಬೆಂಗಳೂರನ್ನು ಬಿಟ್ಟ ಲಾರಿ ಕೆಂಗೇರಿಯನ್ನು ತಲುಪಿರಲಿಲ್ಲ. ಮಧ್ಯದಲ್ಲೇ ದೊಡ್ಡ ಅನಾಹುತ ನಡೆದು ಹೋಯಿತು! ಮುಂದಿನ ಚಕ್ರ ಪಂಚರ್ ಆಗಿ ಲಾರಿ ಬ್ಯಾಲೆನ್ಸ್ ತಪ್ಪಿ ಕೆಳಕ್ಕಿಳಿದಂತಾಯಿತು! ಸರ್ದಾರ್‌ಜಿ ಲಾರಿ ನಿಲ್ಲಿಸಿ ಸ್ಟೆಪ್ನಿ ತೆಗೆಯಲು ಹವಣಿಸಿದ. ಜೀಪಿನಲ್ಲಿ ಸಾಗುತ್ತಿದ್ದ ಒಂದು ಪೋಲೀಸ್ ತಂಡ ದೂರದಿಂದಲೇ ಬ್ಯಾಟರಿ ಬೆಳಕು ಬಿಟ್ಟ ಲಾರಿ ಹತ್ತಿರ ಬಂದು ಸರ್ದಾರ್‌ಜಿಯಿಂದ ಮಾಮೂಲ್ ವಸೂಲ್ ಮಾಡಿಕೊಂಡು ಹೊರಟು ಹೋದರು. ಪೋಲೀಸರ ಕಾಟ ದಾರಿಯುದ್ದಕ್ಕೂ ತಪ್ಪಿದ್ದಲ್ಲ ಎಂದರಿವಾಗಿ ಅಪಾಯದ ಮುನ್ಸೂಚನೆ ಸಿಕ್ಕಿತು. ಮೆಲ್ಲಗೆ ಒಂದು ಮೂಟೆಯನ್ನು ಲಕ್ಷ್ಮಣದಾಸ ಕೆಳಕ್ಕಿಳಿಸಿದ. ಅವನಿಗೆ ಮತ್ತೇರಿತ್ತು. ಮಳೆ ಬೀಳುತ್ತಿದ್ದುದರಿಂದ ವೃಷಭಾವತಿ ಸ್ಯೂಯೆಜ್ ನೀರಿನಿಂದ ತುಂಬಿ ತುಳುಕುತ್ತ ಹರಿಯುತ್ತಿತ್ತು. ಕಸದ ಕಡ್ಡಿ ರಾಶಿ. ಕೊಳತ ದುರ್ಗಂಧ. ಗಬ್ ವಾಸನೆ. ರಾಮಬಟ್ಟನಿಗೆ ಏನೋ ಸ್ಫೂರ್ತಿ ಬಂದಂತಾಯಿತು! ಇಳಿಸಿದ ಮೂಟೆಯನ್ನು ಅವನು ಅನಾಮತ್ ಎತ್ತಿ ರೊಯ್ಯನೆ ವೃಷಭಾವತಿಗೆ ಎತ್ತಿ ಬಿಸಾಡಿದ! ಗುಳು ಗುಳು ಶಬ್ಧ ಮಾಡುತ್ತಾ ಮೂಟೆ ಮುಳುಗಿ ಅದೃಶ್ಯವಾಯಿತು. ಜೈ ಮಾರುತಿ ಎಂದು ಕೂಗಿದ ಲಕ್ಷ್ಮಣದಾಸ! ಗಂಡಾಂತರದಿಂದ ಪಾರಾದ ಸಂತೋಷಕ್ಕೆ ಗುಂಡಾತುರರಾಗಿ ಸರ್ದಾಜಿ ಬ್ಯಾಗಿನ ಕೈ ಹಾಕಿದರು ಬಾಟ್ಲು ಗ್ಲಾಸುಗಳಿಗೆ!

ಲಾರಿ ಅಯೋಧ್ಯೆಯನ್ನು ಮೂರನೆಯ ರಾತ್ರಿ ಮುಟ್ಟಿತು. ದಾರಿಯಲ್ಲಿ ಎರಡು ಮೂರು ಕಡೆಗೆ ಚೆಕ್ಕಿಂಗ್ ಆದಾಗಲೂ ಕರ್ಣಾಟಕ ಆದ್ಮಿಹೈ ಧರ್ಮ ಕಾರ್ಯಾದೆಸೆ ಇದರ್ ಆಗೆಯ ಎಂದು ಸರ್ದಾರ್‌ಜಿ ಸರ್ಟಿಫಿಕೇಟ್ ಕೊಟ್ಟು ಕಾಪಾಡಿದ್ದ! ರಾಮಜನ್ಮಭೂಮಿ ನ್ಯಾಸದ ಕಛೇರಿ ಬಳಿ ರಾತ್ರಿ ಲಾರಿ ನಿಂತ ತಕ್ಷಣ ಲಕ್ಷ್ಮಣದಾಸ ತನ್ನ ಯಜ್ಞದ ವಿಚಾರವನ್ನು ವಿವರಿಸಿ ಕೋಟಿ ರಾಮ ನಾಮ ಬರೆದಿದ್ದ ಪುಸ್ತಕಗಳ ಮೂಟೆ ತಂದಿರುವೆನೆಂದು ಕಾರ್ಯದರ್ಶಿಗಳಿಗೆ ಅದನ್ನು ಅವರ ಕಛೇರಿಯಲ್ಲಿಟ್ಟು ಪ್ರಸಾದವನ್ನು ಸ್ವೀಕರಿಸಿದ ಮೇಲೆ ಲಕ್ಷ್ಮಣದಾಸ, ಪಾಪ ಪರಿಹಾರವಾಯಿತೆಂದು ಹಿಗ್ಗಿದ, ಪಾಪ! ಲಾರಿ ಆ ಕ್ಷಣ ಲಕ್ನೋ ನಗರದ ಹೆದ್ದಾರಿಗೆ ಹೊರಟು ಹೋಯಿತು.

ರಾಮಭಕ್ತರು ನಡು ನಿಶೆಯಲ್ಲಿ ಅಯೋಧ್ಯೆಯ ಬೀದಿಗಳಲ್ಲಿ ಭಕ್ತಿಪರವಶರಾಗಿ ತಿರುಗಾಡಲು ಪ್ರಾರಂಭಿಸಿದರು. ಎಲ್ಲಾ ಕಡೆ ಪೋಲೀಸ್ ಪಹರೆ. ಬಿಗಿ ಬಂದೋಬಸ್ತು.

ಪ್ಯಾರ ಮಿಲಿಟರಿ ಶಿಪಾಯಿಗಳ ಗಸ್ತು. ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ಯಾರೂ ಕಾಲಿಡುವಂತಿಲ್ಲ. ಯಾರೋ ಒಬ್ಬ ಕಾಶ್ಮೀರ ಕಣಿವೆಯ ಗಡಿಕಾಯುವ ಸೈನಿಕನು ಅಲ್ಲಿ ಡ್ಯೂಟಿ ಮಾಡುತ್ತಿದ್ದ. ಲಕ್ಷ್ಮಣದಾಸನ ಗಡ್ಡ ನೋಡಿ ಲಷ್ಕರಿತೊಯ್‌ಬಾ ಸಂಘಟನೆಗೆ ಸೇರಿದ ಉಗ್ರಗಾಮಿಯೆಂದು ಗುರ್ತಿಸಿ "ಪಕಡ್ರೆ... ಪಕಡ್ರೆ" ಎಂದು ಕಿರಿಚಿಕೊಂಡ. ಅಂಥ ಗಡ್ಡದ ಆಸಾಮಿಗಳು ಇನ್ನೂ 8,10 ಜನ ಅಲ್ಲಿ ಇದ್ದುದರಿಂದ ಸದ್ದಾಮ್ ಹುಸೇನ್‌ನನ್ನು ಹಿಡಿಯಲು ಹೋಗಿ ವಿಫಲರಾದ ಅಮೇರಿಕದ ಸೇನಾನಿಗಳಂತೆ ಕಾವಲು ಕಾಯುತ್ತಿದ್ದ ಸಶಸ್ತ್ರ ಗುಪ್ತ ದಳದವರು ಸುಸ್ತಾಗಿ ಬಿದ್ದುಕೊಂಡರು. ಲಕ್ಷ್ಮಣದಾಸ ಸರಿಯಾದ ಸಮಯವೆಂದು ಬಗೆದು ಸರಿಯೂ ನದಿಯ ದಡದ ಕಡೆಗೆ ಓಡಿದ. ರಾಮಭಟ್ಟ ಉಸಿರು ಹಿಡಿದುಕೊಂಡು ಅವನನ್ನು ಹಿಂಬಾಲಿಸಿದ. ಅಲ್‌ಖಾಯಿದ ಜಾಲಕ್ಕೆ ಸೇರಿದ ಭಯೋತ್ಪಾದಕನೊಬ್ಬ ಸ್ಫೋಟಕ ವಸ್ತುಗಳಿದ್ದ ಬಟ್ಟೆಯ ಮೂಟೆಯೊಂದನ್ನು ರಾಮಜನ್ಮಭೂಮಿ ಸೈಟಿನಲ್ಲಿ ಹಾಕಿ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದಾನೆಂದೂ, ಅವನನ್ನು ಹುಡುಕುವ ತರುದೂದಿನಲ್ಲಿ ಸಶಸ್ತ್ರ ಸೈನಿಕರು ಅನುಮಾನಾಸ್ಪದವಾಗಿ ಕಾಣುವ ವ್ಯಕ್ತಿಗಳನ್ನು ಹಿಡಿದು ನಿಲ್ಲಿಸಿ ಪ್ರಶ್ನಿಸುತ್ತಿದ್ದಾರೆಂದೂ ಲಕ್ನೋ ರೇಡಿಯೋದಲ್ಲಿ ಸುದ್ದಿ ಪ್ರಸಾರ ವಾಗುತ್ತಿತ್ತು. ಸಮಯ ಸ್ಫೂರ್ತಿ ಎಂದರೆ ರಾಮಭಟ್ಟನದು. ಸರಿಯೂ ನದಿಯ ದಡದ ಮೇಲೆ 'ಶೇವಿಂಗ್ ಸೆಲೂನ್, ಪ್ರೊಪ್ರೈಟರ್; ಮುಂಡನ ಮಿಶ್ರ' ಎಂದು ಬರೆದಿದ್ದ ಬೋರ್ಡು ಒಂದು ಟೆಂಟ್ ಗುಡಾರಕ್ಕೆ ತೂಗು ಹಾಕಿದ್ದಿದು ಅವನಿಗೆ ಕಾಣಿಸಿತು. ಲಕ್ಷ್ಮಣದಾಸನನ್ನು ದರದರನೆ ಎಳೆದುಕೊಂಡು ಹೋಗಿ ಸೆಲೂನ್ ಒಳಕ್ಕೆ ಅನಾಮತ್ ತಳ್ಳಿದ. ಸರಿಯೂ ನದಿಯಲ್ಲಿ ಮುಳುಗು ಹಾಕಿ ತಲೆ ಎತ್ತಿದಾಗ ದಂಡೆಯ ಮೇಲಿದ್ದ ಮಿಲಿಟರಿ ಸಮವಸ್ತ್ರಧಾರಿಗಳು ಅವನನ್ನು ಗುರ್ತಿಸಲಿಲ್ಲ. ಲಕ್ಷ್ಮಣದಾಸನು ಸಜ್ಜನನಂತೆ ಶೋಭಿಸಿದರೂ ಸರಿಯೂ ನದಿಯನ್ನು ಅಪವಿತ್ರಗೊಳಿಸಿದ್ದ! ಅಂದೇ ಸಂತ ರಾಮಚಂದ್ರ ದಾಸರಿಗೆ ಹೃದಯಾಘಾತವಾಗಿದ್ದು! ಕೇಸರಿ ಬಣ್ಣದ ಪೋಷಾಕುಗಳನ್ನು ಧರಿಸಿ ಹಿಂಡು ಹಿಂಡಾಗಿ ಬರುತ್ತಿದ್ದ ಜನಗಳ ಗುಂಪಿನಲ್ಲಿ ಸೇರಿಕೊಂಡು ಫೈಸಾಬಾದ್ ರೈಲ್ವೆ ಸ್ಟೇಷನ್ ತಲುಪಿ ರೈಲಿನಲ್ಲಿ ಕೂತರು ರಾಮನಾಮ ಭಜಿಸುತ್ತ!

★★★

ಊರ್ಮಿಳಾಬಾಯಿ ಗಂಡನ ಕಾಲು ತೊಳೆದು ಮಣಿಕ್ಕೈಗೆ ಕಟ್ಟಿದ್ದ ಕಂಬಳಿದಾರ ಬಿಚ್ಚಿ ದೀಕ್ಷೆ ಕಳೆದು ಯಜಮಾನರು ಜೀವ ಸಹಿತ ಮನೆ ತಲುಪಿದ ಸಂತೋಷಕ್ಕೆ ಪಾಯಸದ ಅಡಿಗೆ ಮಾಡಿ ಬಡಿಸಿದಳು. ತಾಯಿ ಮಗನನ್ನು ಸಂತೈಸಿದಳು. ಲಕ್ಷ್ಮಣದಾಸ ಅಯೋಧ್ಯೆ ಯಾತ್ರೆಯ ಅನುಭವಗಳನ್ನು ಹೇಳುತ್ತಿದ್ದಂತೆಯೇ ಬೀದಿ ಬಾಗಿಲು ತಟ್ಟಿದ ಶಬ್ದ ಕೇಳಿಸಿತು.

ಊರ್ಮಿಳಾಬಾಯಿ ಬಾಗಿಲು ತೆರದಳು. ನಾಲ್ಕು ಜನ ಸಶಸ್ತ್ರ ಸೆಕ್ಯೂರಿಟಿ ದಳದವರು ಹರಿಯಾಣದ ಲಾರಿ ಡ್ರೈವರ್ ಸರ್ದಾರ್‌ಜಿಯನ್ನು ನಿಲ್ಲಿಸಿಕೊಂಡು ಕಾಯುತ್ತಿದ್ದರು. ಲಕ್ಷ್ಮಣದಾಸನನ್ನೂ ರಾಮಬಟ್ಟನನ್ನೂ ಗುರ್ತಿಸುವಂತೆ ಸರ್ದಾರ್‌ಜಿಗೆ ಅಪ್ಪಣೆ ಮಾಡಿದರು. ರಾಮಜನ್ಮಭೂಮಿ ನ್ಯಾಸದ ಕಾರ್ಯದರ್ಶಿ ಸುಫರ್ದಿಗೆ ಬಂದ ಪುಸ್ತಕ ಮೂಟೆಯನ್ನು ಸೀಲ್ ಮಾಡಿ ಫೈಸಾಬಾದ್ ಮೇಜಿಸ್ಟ್ರೇಟ್ ಆದೇಶದಂತೆ ತಾವು ಈಗಗಲೇ ಮಹಾ ನಗರದ ಜಲಮಂಡಳಿ ಕಛೇರಿಗೆ ತಿಳಿಸಿ ಕರ್ನಾಟಕದ ಲೋಕಾಯುಕ್ತರ ವಶಕ್ಕೆ ಕೊಟ್ಟಿರುತ್ತೇವೆಂದೂ ತಿಳಿಸಿದರು! ಲಕ್ಷ್ಮಣದಾಸನಿಗ ತಲೆ ಗಿರ್ರನೆ ತಿರುಗಿ ಕೈಕಾಲು ತಣ್ಣಗಾಯಿತು. ರಾಮಭಟ್ಟನ ಅಚಾತುರ್ಯದಿಂದಲೇ ಹೀಗಾಗಿದ್ದು ಎಂದು ಖಚಿತವಾಯಿತು. ಕೋಟಿ ರಾಮನಾಮ ಬರೆದಿದ್ದ ಲೇಖಿಕ್ ಪುಸ್ತಕಗಳ ಮೂಟೆಯನ್ನು ವೃಷಭವತಿಗೆ ಎಸೆದು, ಒಳಚರಂಡಿ ಪ್ರಾಜಕ್ಟಿನ ಫೈಲುಗಳು ಲೆಕ್ಕದ ಪುಸ್ತಕಗಳೂ ಇದ್ದ ಮೂಟೆಗಳನ್ನು ರಾಮಜನ್ಮಭೂಮಿ ಯಾಗಶಾಲೆಗೆ ಸೇರಿಸಿ ಘೋರ ತಪ್ಪನ್ನು ಮಾಡಿಬಿಟ್ಟಿದ್ದರು. ರಾಮಭಟ್ಟ ಆ ವೇಳೆಗಾಗಲೇ ತಲೆ ಮರೆಸಿಕೊಂಡು ಓಡಿಹೋಗಿದ್ದ. ಮುಂದಿನ ಕಥೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂಬ ವಿಷಯವನ್ನು ಸ್ಪಷ್ಟಪಡಿಸಿ ಇಷ್ಟು ಮಾತ್ರ ಬರೆದು ಮುಗಿಸುತ್ತೇವೆ:

ಶ್ರೀ ರಾಮನ ಪಾದಸ್ಪರ್ಶದಿಂದ ಅಹಲ್ಯೆಗೆ ಶಾಪ ವಿಮೋಚನೆಯಾದಂತೆ, ಕೋಟಿ ರಾಮನಾಮ ಬರೆದ ಸಾಕಾರ ಗೊಳಿಸಿದ ಸರಸ್ವತಿ ಅಂಶ ಸ್ಪರ್ಶ ಮಾತ್ರದಿಂದ ಶಾಪಗ್ರಸ್ಥ ವೃಷಭಾವತಿಗೆ ಶಾಪವಿಮೋಚನೆಯಾಯಿತು ಎಂದರೆ ಈಗ ನೀವು ನಂಬಲೇಬೇಕು - ಸ್ಯೂಯೇಜ್ ನೀರನ್ನು ಪರಿಷ್ಕರಿಸಿ ಶುದ್ಧ ಮಾಡಿ ತಿಳಿ ನೀರಾಗಿಸುವ ವೃಷಭಾವತಿ ರೀ ಸೈಕ್ಲಿಂಗ್ ಪ್ಲಾಂಟಿಗೆ ನಾಡಿನ ಮುಖ್ಯಮಂತ್ರಿ ಮೊನ್ನೆ ತಾನೆ ಚಾಲನೆ ಕೊಟ್ಟರಲ್ಲವೆ? ಅಹಲ್ಯಾಯೋಗ ವೃಷಭಾವತಿಗೂ ಬರಲಿಲ್ಲವೆ?

ಲಂಚ ಖುಷವತ್ತು ಭ್ರಷ್ಟಾಚಾರಗಳಿಂದ ಪಾಪಪೂರಿತವಾಗಿದ್ದ ಮಹಾನಗರದ ಒಳಚರಂಡಿ ಮಂಡಳಿಯ ರೆಕಾರ್ಡುಗಳು ಶ್ರೀ ರಾಮಚಂದ್ರನ ಚರಣ ಸನ್ನಿಧಿಯ ಪ್ರಭಾವದಿಂದಲ್ಲವೆ ಮತ್ತೆ ಅದೇ ಕಛೇರಿಗೆ ಹೋಗಿ ಸತ್ಯಶೋಧನೆಗೆ ಲೋಕಾಯುಕ್ತರ ಕೈ ಸೇರಿದ್ದು!


D.V.G. ಯವರ ಕಗ್ಗ ಕಣ್ತೆರೆಸಿತು -

''ಶ್ರೀ ವಿಷ್ಣು ವಿಶ್ವಾದಿ ಮೂಲ ಮಾಯಾಲೋಲ।
ದೇವ ಸರ್ವೇಶ ಪರಬೊಮ್ಮನೆಂದು ಜನಂ॥
ಆವುದನು ಕಾಣದೊಡ ಮಳ್ತಿಯಿಂ ನಂಬಿ ಹುದೊ॥

ಆ ವಿಚಿತ್ರಕೆ ನಮಿಸೊ - ಮಂಕುತಿಮ್ಮ॥

ಪದ್ಯ ಪ್ರತಿಧ್ವನಿಸಿತು ಮನದಲ್ಲಿ!....

ವೃಷಭಾವತಿ ಪ್ರಕರಣ ವಾಲ್ಮೀಕಿ ರಾಮಾಯಣದಲ್ಲಾಗಲೀ, ಕುವೆಂಪು ರಾಮಾಯಣ ದರ್ಶನದಲ್ಲಾಗಲಿ, ವೀರಪ್ಪ ಮೊಯ್ಲಿ ಅವರ ರಾಮಾಯಣ ಮಹಾನ್ವೇಷಣಂ ಕಾವ್ಯದಲ್ಲಾಗಲೀ ಎಲ್ಲೂ ಉಲ್ಲೇಖವಾಗಿಲ್ಲ. ಮುಂದಿನ ಪೀಳಿಗೆಯ ಕವಿ ಪುಂಗವರು ಈ ಪ್ರಕರಣವನ್ನು ತಮ್ಮ ಕಾವ್ಯದಲ್ಲಿ ಸೇರಿಸುತ್ತಾರೆಂಬ ನಂಬಿಕೆ ನನಗಿದೆ!





ಗುಡುಗು - ಮಳೆ

ಎಚ್. ಡುಂಡಿರಾಜ್

ಸಾಕ್ರಟೀಸ್ ಗೊತ್ತು ನಿಮಗೆ
ಮಹಾ ತತ್ವಜ್ಞಾನಿ
ಅವನ ಮಡದಿ ಜಗಳಗಂಟಿ
ಪತಿ ಪೀಡಕ ಪ್ರಾಣಿ

ಒಂದು ದಿನ ಎಂದಿನಂತೆ
ಶುರುವಾಯಿತು ಪಿರಿ ಪಿರಿ
ಮಂದ್ರದಿಂದ ಒಮ್ಮೆಲೆ
ತಾರಕಕ್ಕೆ ಏರಿ

ಕೇರಿಗೆಲ್ಲ ಕೇಳುವಂತೆ
ಬೈದಳು ಪತಿಯನ್ನು
ಕೆಣಕಿದಳು ತಿವಿದು ತಿವಿದು
ಮಾತಿನ ಅಲಗನ್ನು


ಸಾಕ್ರಟೀಸ್ ಸುಮ್ಮನಿದ್ದ
ಆತ ಬುದ್ಧಿವಂತ
ಹೊರಗೆ ಬಂದು ರಸ್ತೆಯನ್ನು
ನೋಡುತ್ತ ಕುಳಿತ

ಪತಿಯ ಮೌನ ಕಂಡು ಸತಿಯ
ಪಿತ್ತ ನೆತ್ತಿಗೇರಿ
ಗುಡುಗಿದಳು: ''ಊರಿಗುಪ-
ಕಾರಿ ಮನೆಗೆ ಮಾರಿ''

ಬೈಯುತ್ತ ತಂದಳಾಕೆ
ಒಂದು ಕೊಡ ನೀರು
ಪತಿಯ ಮೇಲೆ ಸುರಿದಳು
ಸಾರ್ವಜನಿಕರೆದುರು

ನೋಡಿದವರು ದಂಗಾದರು
ಎಲ್ಲರಿಗೂ ಕಳವಳ
ಸಾಕ್ರಟೀಸ್ ಸ್ವಲ್ಪವೂ
ಸಿಟ್ಟುಗೊಳ್ಳಲಿಲ್ಲ

ಎದ್ದು ನಿಂತು ನಕ್ಕುಬಿಟ್ಟ
ಅಂದ ''ಭಲೆ! ಭಲೆ
ಇಷ್ಟು ಹೊತ್ತು ಗುಡುಗುತ್ತಿತ್ತು
ಈಗ ಬಂತು ಮಳೆ''



Down Hole Hammers
&
Button Bits



Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR